ಮಂಗಳೂರು ಬುಧವಾರ, 8 ಏಪ್ರಿಲ್ 2026 ಸಂಪುಟ 48, ಸಂಚಿಕೆ 20, ಪುಟಗಳು 12+6 hosadigantha.com ₹5
ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ವಲಸೆ ಕಾರ್ಮಿಕರಿಗೆ ಎಲ್‌ಪಿಜಿ ಹಂಚಿಕೆ ದ್ವಿಗುಣ

ಪುಟ ೨



ಬಹಿರಂಗ ಪ್ರಚಾರ ಅಂತ್ಯ | ತಂತ್ರಗಾರಿಕೆಯಲ್ಲಿ ನಾಯಕರು ಮಗ್ನ

ಇಂದು ಮನೆ ಪ್ರಚಾರ, ಬರೀ ಲೆಕ್ಕಾಚಾರ


ಬೆಂಗಳೂರು: ಉಪ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ತೆರೆ ಬಿದ್ದಿದ್ದು, ಇಷ್ಟು ದಿನ ಅಬ್ಬರ ಪ್ರಚಾರದ ಮೂಲಕ ಮತದಾರರನ್ನು ಸೆಳೆಯಲು ಯತ್ನಸಿದ ನಾಯಕರೆಲ್ಲ ಕ್ಷೇತ್ರ ತೊರೆದಿದ್ದು, ಕೊನೆಯ ಯತ್ನವಾಗಿ ಮನೆ ಮನೆ ಪ್ರಚಾರದಲ್ಲಿ ತೊಡಗಲಿದ್ದಾರೆ.



ಮತದಾನ ಕೊನೆಗೊಳ್ಳುವ 48 ತಾಸಿನ ಮೊದಲು ಮತಕ್ಷೇತ್ರದವರಲ್ಲದೇ ಇರುವವರೆಲ್ಲರೂ ಕ್ಷೇತ್ರ ತೊರೆಯಬೇಕಾಗಿದೆ. ಇನ್ನೇನಿದ್ದರೂ ಮನೆ-ಮನೆ ಪ್ರಚಾರಕ್ಕೆ ಮಾತ್ರ ಅವಕಾಶ ಇರುವುದರಿಂದ ಮತದಾರರ ಮನವೊಲಿಕೆಗೆ ಕೊನೆ ಕಸರತ್ತು ನಡೆಯಲಿದೆ. ಉಭಯ ಪಕ್ಷಗಳ ಸ್ಥಳೀಯ ನಾಯಕರು ಇದಕ್ಕಾಗಿ ತಂತ್ರ ರೂಪಿಸಿದ್ದಾರೆ.

ಇಷ್ಟು ದಿನ ರಾಜ್ಯಮಟ್ಟದ ನಾಯಕರಿಂದ ತುಂಬಿದ್ದ ಎರಡು ಕ್ಷೇತ್ರಗಳು ರಂಗೇರಿದ್ದವು. ಪುಟ ೪


ದಾವಣಗೆರೆಯಲ್ಲಿ ಕಾಂಗ್ರೆಸ್ ಪ್ರಚಾರ


ಬಾಗಲಕೋಟೆಯಲ್ಲಿ ಬಿಜೆಪಿ ಮತಬೇಟೆ

ಖಾರ್ಗ್ ದ್ವೀಪದ 50 ಕಡೆ ದಾಳಿ | ನಾಗರಿಕತೆ ಅಳಿಸುವೆ: ಟ್ರಂಪ್

ಇರಾನ್‌ನಲ್ಲಿ ಆತಂಕ

ವಾಷಿಂಗ್ಟನ್: ರಾತ್ರಿ ಬೆಳಗಾಗುವುದರೊಳಗೆ ನಾಗರಿಕತೆಯೊಂದು ಸಂಪೂರ್ಣ ಅಳಿಸಿಹೋಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧ ಹೊಸ ಬೆದರಿಕೆಯೊಡ್ಡಿದ್ದಾರೆ. ಕದನ ವಿರಾಮ ಒಪ್ಪಂದ ಮಾಡಿಕೊಳ್ಳಲು ತಾವು ಇರಾನ್‌ಗೆ ನೀಡಿದ್ದ ಅಂತಿಮ ಗಡುವು ಮುಗಿಯುವುದಕ್ಕೆ ಗಂಟೆಗಳ ಮುನ್ನ ಟ್ರಂಪ್ ಇರಾನ್‌ನ ಆಡಳಿತಕ್ಕೆ ಹೊಸ ಬೆದರಿಕೆ ಹಾಕಿದ್ದಾರೆ.



ಮಂಗಳವಾರ ರಾತ್ರಿ ಒಂದು ನಾಗರಿಕತೆಯೇ ಅಳಿಸಿ ಹೋಗುತ್ತೆ. ಮತ್ತದನ್ನು ಪುನಃ ಕರೆತರಲು ಸಾಧ್ಯವಿಲ್ಲ. ಈ ರೀತಿ ಆಗುವುದು ನನಗೂ ಇಷ್ಟವಿಲ್ಲ. ಆದರೆ ಆಗುವುದು ಬಹುತೇಕ ನಿಶ್ಚಿತ ಎಂದು ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ನಾವೀಗ ಇರಾನ್‌ನಲ್ಲಿ ಸಂಪೂರ್ಣ ಆಡಳಿತ ಬದಲಾವಣೆ ಕಂಡಿದ್ದೇವೆ. ಈಗ ವ್ಯತ್ಯಸ್ತ, ಬುದ್ಧಿವಂತ ಮತ್ತು ಕಡಿಮೆ ಮೂಲಭೂತವಾದಿ ಮನಸ್ಸುಗಳಿವೆ. ಇದರಿಂದ ಬಹುಶಃ ಏನಾದರೂ ಕ್ರಾಂತಿಕಾರಿ ಬದಲಾವಣೆ ಸಾಧ್ಯವಿದೆ. ಪುಟ ೪







ಇರಾನಿಯನ್ನರು ನಾವು ಒಪ್ಪಿಕೊಳ್ಳುವಂತಹ ಕದನವಿರಾಮ ಪ್ರಸ್ತಾವ ಮಾಡುವವರೆಗೆ ಅಥವಾ ಪ್ರಸ್ತಾವ ಮಾಡದಿದ್ದರೂ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿಯಲ್ಲದೆ ಅಣ್ವಸ್ತ್ರ ಪ್ರಯೋಗ ನಡೆಸುವುದಿಲ್ಲ. ನಮ್ಮ ಸೇನಾ ಕಾರ್ಯತಂತ್ರ ಬದಲಾಗಿಲ್ಲ. ಕೆಲವು ಸೇನಾ ನೆಲೆಗಳ ಮೇಲೆ ದಾಳಿ ನಡೆಸಲಿದ್ದೇವೆ.

■ ಜೆಡಿ ವ್ಯಾನ್ಸ್, ಅಮೆರಿಕದ ಉಪಾಧ್ಯಕ್ಷ

ಶಬರಿಮಲೆಯಲ್ಲಿ ಮಹಿಳೆಯರಿಗೆ ಪ್ರವೇಶ ನಿರಾಕರಣೆ

ಧಾರ್ಮಿಕ ಆಚರಣೆ ಹಿನ್ನೆಲೆ: ಕೇಂದ್ರ

ಹೊಸದಿಲ್ಲಿ: ಶಬರಿಮಲೆ ದೇವಸ್ಥಾನದಲ್ಲಿ ಮಹಿಳೆಯರಿಗೆ ಪ್ರವೇಶ ನಿರಾಕರಿಸಿರುವುದು ಅಶುದ್ಧತೆ ಅಥವಾ ಕೀಳರಿಮೆಯಿಂದಲ್ಲ, ಬದಲಿಗೆ ಧಾರ್ಮಿಕ ಆಚರಣೆ ಹಾಗೂ ನಂಬಿಕೆಯಿಂದಾಗಿ. ನಮ್ಮ ಸಂಸ್ಕೃತಿ ಮಹಿಳೆಯರಿಗೆ ಸಮಾನತೆ ನೀಡಿದ್ದು ಅವರನ್ನು ಸದಾ ಉನ್ನತ ಸ್ಥಾನದಲ್ಲಿಟ್ಟು ಗೌರವಿಸುತ್ತದೆ. ಇದನ್ನು ಲಿಂಗ ತಾರತಮ್ಯ ಅಥವಾ 'ಪಿತೃ ಪ್ರಧಾನ' ಎಂಬ ಪಾಶ್ಚಾತ್ಯ ನೆಲೆಯಲ್ಲಿ ನೋಡಬಾರದೆಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನ್ನು ಕೋರಿದೆ. ಕೇರಳದ ಪ್ರಸಿದ್ಧ ಶಬರಿಮಲೆ ದೇವಸ್ಥಾನಕ್ಕೆ ಎಲ್ಲಾ ವಯಸ್ಸಿನ ಮಹಿಳೆಯರಿಗೆ ಪ್ರವೇಶವನ್ನು ಅನುಮತಿಸುವ ತನ್ನ 2018 ರ ತೀರ್ಪಿನ ವಿರುದ್ಧ ಸಲ್ಲಿಸಲಾದ ಪರಿಶೀಲನಾ ಅರ್ಜಿಗಳನ್ನು ಸುಪ್ರೀಂಕೋರ್ಟ್ ವಿಚಾರಣೆಗೆ ಎತ್ತಿಕೊಳ್ಳುವ ಹಿನ್ನೆಲೆ ಕೇಂದ್ರ ಸರ್ಕಾರವು, ಈ ಪದ್ಧತಿ ಲಿಂಗ ತಾರತಮ್ಯದ ಅಂಶಗಳ ಆಧಾರಿತವಾದುದಲ್ಲ. ಪುಟ ೪



7 ಪ್ರಶ್ನೆಗಳನ್ನೆತ್ತಿದ ನ್ಯಾಯಪೀಠ

ಕೇರಳದ ಶಬರಿಮಲೆ ದೇವಸ್ಥಾನಕ್ಕೆ ಎಲ್ಲಾ ವಯೋಮಾನದ ಮಹಿಳೆಯರಿಗೆ ಪ್ರವೇಶ ನೀಡಿದ ತೀರ್ಪಿನ ಪುನರ್ ಪರಿಶೀಲನಾ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ 9 ನ್ಯಾಯಮೂರ್ತಿಗಳ ಸಂವಿಧಾನ ಪೀಠವು ವಿಚಾರಣೆ ಆರಂಭಿಸಿದೆ. ಸಂವಿಧಾನದ ಅನುಚ್ಛೇದ 25 ಮತ್ತು 26ರ ಅಡಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ, ಮಿತಿ, ವ್ಯಕ್ತಿ ಹಕ್ಕುಗಳು. ಪುಟ ೪

ಟ್ರಂಪ್ ಅಂತಿಮ ಗಡುವು | ಇರಾನ್ ಅಧ್ಯಕ್ಷ ಪೆಝೆಶ್ಕಿಯನ್ ಘೋಷಣೆ

1.4 ಕೋಟಿ ಇರಾನಿಯರು ರಾಷ್ಟ್ರಕ್ಕಾಗಿ ಪ್ರಾಣತ್ಯಾಗಕ್ಕೆ ಸಿದ್ಧ

ಟೆಹ್ರಾನ್: ಇರಾನ್‌ನ 1.4 ಕೋಟಿ ಪ್ರಜೆಗಳು ರಾಷ್ಟ್ರಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧರಿದ್ದಾರೆ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಝೆಶ್ಕಿಯನ್ ಮಂಗಳವಾರ ಘೋಷಿಸಿದ್ದಾರೆ. ತನ್ಮೂಲಕ ಇರಾನ್–ಅಮೆರಿಕ ನಡುವಣ ಉದ್ವಿಗ್ನತೆ ಮತ್ತಷ್ಟು ತಾರಕಕ್ಕೇರುವ ಲಕ್ಷಣಗಳು ನಿಚ್ಚಳವಾಗಿದೆ. ನಿರ್ಣಾಯಕ ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸದಿದ್ದಲ್ಲಿ ದಾಳಿ ನಡೆಸುವುದಾಗಿ ಎಚ್ಚರಿಸಿ, ಅಮೆರಿಕ ಅಧ್ಯಕ್ಷ ಟ್ರಂಪ್ ವಿಧಿಸಿರುವ ಅಂತಿಮ ಗಡುವು ಮುಕ್ತಾಯಕ್ಕೆ ಕೆಲ ತಾಸು ಮುನ್ನ, ಇರಾನ್ ಅಧ್ಯಕ್ಷ ಪೆಝೆಶ್ಕಿಯನ್ ಈ ರೀತಿ ಘೋಷಣೆ ಮಾಡಿದ್ದಾರೆ.

ತಾನೂ ಪ್ರಾಣತ್ಯಾಗಕ್ಕೆ ಸಿದ್ಧ: ಸುಮಾರು 1.4 ಕೋಟಿ ಇರಾನಿ ಪ್ರಜೆಗಳು ದೇಶದ ಸಮರ ಯತ್ನಗಳಿಗೆ ಕೈಜೋಡಿಸಲು ಸ್ವಯಂಪ್ರೇರಣೆಯಿಂದ ಮುಂದೆ ಬಂದಿದ್ದಾರೆ. ಈ ಸಂಖ್ಯೆ ಇರಾನ್‌ನ ಒಟ್ಟು ಜನಸಂಖ್ಯೆಯ ನಿರ್ಣಾಯಕ ಭಾಗವಾಗಿದೆ. ಮುಂದುವರೆದಿರುವ ಯುದ್ಧ ಸಂದರ್ಭವೂ ಏಕತೆ ಎತ್ತಿಹಿಡಿವ ಇರಾನ್ ಸರಕಾರದ ಪ್ರಯತ್ನಗಳನ್ನು 1.4 ಕೋಟಿ ಜನರ ಬೆಂಬಲ ಸಾಕ್ಷೀಕರಿಸಿದೆ. ಜನರೊಂದಿಗೆ ತಾನು ಕೂಡ ಇರಾನ್‌ಗಾಗಿ ಪ್ರಾಣತ್ಯಾಗಕ್ಕೆ ಸಿದ್ಧನಿರುವುದಾಗಿ ಅಧ್ಯಕ್ಷ ಪೆಝೆಶ್ಕಿಯನ್ ಜಾಲತಾಣದಲ್ಲಿ ಶೇರ್ ಮಾಡಿರುವ ಸಂದೇಶದಲ್ಲಿ ಘೋಷಿಸಿದ್ದಾರೆ.



ಅಧಿಕಾರಿಗಳ ಉತ್ತೇಜನ: ಇರಾನ್ ರಕ್ಷಣೆಗಾಗಿ ಹೋರಾಡಲು ಸ್ವಯಂಪ್ರೇರಣೆಯಿಂದ ಮುಂದೆ ಬರುವಂತೆ ಮತ್ತು ಟೆಕ್ಸ್ಟ್ ಮೆಸೇಜ್‌ಗಳು ಹಾಗೂ ರಾಷ್ಟ್ರೀಯ ಮಾಧ್ಯಮ ಅಭಿಯಾನಗಳ ಮುಖೇನ ಸ್ವಯಂಸೇವಕರೆಂದು ನೊಂದಾಯಿಸುವಂತೆ ಅಧಿಕಾರಿಗಳು ಜನರನ್ನು ಉತ್ತೇಜಿಸುತ್ತಿದ್ದಾರೆ. ಪರಿಣಾಮ, ಸಂಘರ್ಷಗಳ ಆರಂಭದ ವಾರಗಳಿಗಿಂತ ಅತ್ಯಧಿಕ ಸಂಖ್ಯೆಯಲ್ಲಿ ಇರಾನ್ ಪ್ರಜೆಗಳು ರಾಷ್ಟ್ರರಕ್ಷಣೆಗಾಗಿ ಪ್ರಾಣತ್ಯಾಗದ ಸಂಕಲ್ಪ ತೊಟ್ಟಿದ್ದಾರೆಂದು ಸರಕಾರಿ ಮೂಲಗಳು ತಿಳಿಸಿವೆ. 90 ಮಿಲಿಯನ್ ಜನಸಂಖ್ಯೆ ಹೊಂದಿರುವ ಇರಾನ್ ಈಚಿನ ವರ್ಷಗಳಲ್ಲಿ ಸಾರ್ವಜನಿಕ ಪ್ರತಿಭಟನೆಗಳು, ರಾಜಕೀಯ ಗೊಂದಲ–ಉದ್ವಿಗ್ನತೆಗಳಂತಹ ಆಂತರಿಕ ಸಮಸ್ಯೆಗಳಿಂದ ತತ್ತರಿಸಿತ್ತು. ವಿದೇಶೀ ಮಿಲಿಟರಿ ಕಾರ್ಯಾಚರಣೆಗಳ ಸ್ಥೈರ್ಯಗುಂದಿಸುವ ಯತ್ನವಾಗಿ ,ಬಲಿಷ್ಠ ಜನಬೆಂಬಲವನ್ನು ಇರಾನ್ ಪ್ರದರ್ಶಿಸುತ್ತಿದೆ ಎಂಬುದು ರಾಜಕೀಯ ವಿಶ್ಲೇಷಕರ ಲೆಕ್ಕಾಚಾರ.

ಶತ್ರುಗಳಿಗೆ ಸಂದೇಶ ರವಾನಿಸಲು ಹೇಳಿಕೆ: ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಬೇಕೆಂದು ಅಧ್ಯಕ್ಷ ಟ್ರಂಪ್ ಒತ್ತಡ ಹೇರಿರುವ ಕಾರಣ, ಇರಾನ್ ಅಧ್ಯಕ್ಷರು ಪ್ರಸ್ತುತ ದೇಶದ ಪ್ರಜೆಗಳ ಬೆಂಬಲದ ಹೇಳಿಕೆ ನೀಡಿದ್ದಾರೆ. ಜಲಸಂಧಿಯನ್ನು ಮತ್ತೆ ತೆರೆಯದಿದ್ದಲ್ಲಿ ಇರಾನ್‌ನ ಸೇತುವೆಗಳು, ವಿದ್ಯುತ್ ಸ್ಥಾವರಗಳು, ಪ್ರಮುಖ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಬೆದರಿಸಿದ್ದು, ಇದು ವಲಯದಲ್ಲಿ ಸಂಘರ್ಷವನ್ನು ಮತ್ತಷ್ಟು ತೀವ್ರಗೊಳಿಸುವ ಭೀತಿ ಹುಟ್ಟು ಹಾಕಿದೆ. ರಾಷ್ಟ್ರೀಯ ನೈತಿಕ ಸ್ಥೈರ್ಯವನ್ನು ಬಲಪಡಿಸಿಕೊಂಡು ಶತ್ರುಗಳಿಗೆ ಪ್ರತಿರೋಧ ಒಡ್ಡಲಾಗುವುದೆಂಬ ಸಂದೇಶ ರವಾನಿಸುವುದಕ್ಕಾಗಿ , ಇರಾನ್ ಅಧ್ಯಕ್ಷರು ಪ್ರಸ್ತುತ ಹೇಳಿಕೆ ನೀಡಿದ್ದಾರೆಂದು ರಾಜಕೀಯ ವೀಕ್ಷಕರು ಹೇಳುತ್ತಾರೆ.

ಸಾವಿನ ಸಂಖ್ಯೆ

ಯುದ್ಧ ಆರಂಭವಾದಾಗಿನಿಂದ ಇರಾನ್‌ನಲ್ಲಿ 1,900 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ ಸಾವಿನ ಸಂಖ್ಯೆ 1,400 ದಾಟಿದ್ದು, ಹತ್ತು ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಈ ಸಂಘರ್ಷದಲ್ಲಿ 13 ಅಮೆರಿಕನ್ ಸೇವಾ ಸದಸ್ಯರು, 11 ಇಸ್ರೇಲಿ ಸೈನಿಕರು ಮತ್ತು ಇಸ್ರೇಲ್ ಹಾಗೂ ವೆಸ್ಟ್ ಬ್ಯಾಂಕ್‌ನಾದ್ಯಂತ ಹಲವಾರು ಜನರು ಸಾವನ್ನಪ್ಪಿದ್ದಾರೆ. ಮಂಗಳವಾರ ಅಲ್ಬೋರ್ಜ್ ಪ್ರಾಂತ್ಯದಲ್ಲಿ ನಡೆದ ವಾಯುದಾಳಿಯಲ್ಲಿ 18 ಜನರು ಮೃತಪಟ್ಟಿದ್ದು, 24 ಮಂದಿ ಗಾಯಗೊಂಡಿದ್ದಾರೆ.

ಹೆಚ್ಚಿದ ಪ್ರಾದೇಶಿಕ ಸಂಘರ್ಷ

ಮಂಗಳವಾರ ಇರಾನ್‌ನ ಕಿಶ್ ದ್ವೀಪದ ದಕ್ಷಿಣದಲ್ಲಿರುವ ಅಂತರಾಷ್ಟ್ರೀಯ ಜಲಪ್ರದೇಶದಲ್ಲಿ ಸರಕು ಸಾಗಣೆ ಹಡಗೊಂದಕ್ಕೆ ಕ್ಷಿಪಣಿ ಡಿಕ್ಕಿ ಹೊಡೆದಿದೆ. ಇಸ್ತಾನ್‌ಬುಲ್‌ನಲ್ಲಿರುವ ಇಸ್ರೇಲ್ ರಾಯಭಾರ ಕಚೇರಿಯ ಹೊರಗೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ದಾಳಿಕೋರರು ಸಾವನ್ನಪ್ಪಿದ್ದಾರೆ ಮತ್ತು ಒಬ್ಬ ಪೊಲೀಸ್ ಅಧಿಕಾರಿ ಗಾಯಗೊಂಡಿದ್ದಾರೆ. ಗುತ್ತಿಗೆದಾರರೊಬ್ಬರು ಮೃತಪಟ್ಟ ನಂತರ, ವಿಶ್ವ ಆರೋಗ್ಯ ಸಂಸ್ಥೆ, ರಫಾ ಕ್ರಾಸಿಂಗ್ ಮೂಲಕ ಗಾಜಾದ ವೈದ್ಯಕೀಯ ಸ್ಥಳಾಂತರಿಸುವಿಕೆಯನ್ನು ಸ್ಥಗಿತಗೊಳಿಸಿದೆ.

ಸಂಪನ್ಮೂಲಗಳ ಕೊರತೆ ತೀವ್ರ

ಇಂಧನ ಕೊರತೆಯಿಂದಾಗಿ ಉತ್ತರ ಇಟಲಿಯ ನಾಲ್ಕು ವಿಮಾನ ನಿಲ್ದಾಣಗಳು ಏಪ್ರಿಲ್ 9 ರವರೆಗೆ ಜೆಟ್ ಇಂಧನ ಪೂರೈಕೆಯನ್ನು ನಿರ್ಬಂಧಿಸಿವೆ. ಫ್ರಾನ್ಸ್ ನಲ್ಲಿ ಸುಮಾರು ಶೇ.18 ರಷ್ಟು ಸೇವಾ ಕೇಂದ್ರಗಳಲ್ಲಿ ಇಂಧನ ಕೊರತೆ ವರದಿಯಾಗಿದ್ದು, ಸರ್ಕಾರ 900 ಮರುಪೂರೈಕೆ ಟ್ರಕ್‌ಗಳನ್ನು ರವಾನಿಸಿದೆ. ಟೆಹ್ರಾನ್‌ನಲ್ಲಿ ಇಂಟರ್ನೆಟ್ ಸಂಪರ್ಕ ಕಡಿತಗೊಂಡಿದ್ದು, ಗಡುವು ಸಮೀಪಿಸುತ್ತಿದ್ದಂತೆ ನಿವಾಸಿಗಳು ವಿದ್ಯುತ್ ಕಡಿತದ ಆತಂಕದಲ್ಲಿದ್ದಾರೆ.

ಪ್ರಜ್ಞಾಹೀನ ಸ್ಥಿತಿಯಲ್ಲಿ ಮೊಜ್ತಬಾ ಖಮೇನಿ?

ಖೋಮ್: ಇರಾನ್‌ನ ಸುಪ್ರೀಂ ಲೀಡರ್ ಮೊಜ್ತಬಾ ಖಮೇನಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ಖೋಮ್‌ನಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಮೆರಿಕ ಮತ್ತು ಇಸ್ರೇಲ್ ಗುಪ್ತಚರ ಮಾಹಿತಿ ಆಧಾರಿತ ರಾಜತಾಂತ್ರಿಕ ಹೇಳಿಕೆ ತಿಳಿಸಿದೆ. ಖಮೇನಿ ಸ್ಥಿತಿ ಗಂಭೀರವಾಗಿದ್ದು, ಆಡಳಿತದ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವರು ಅಸಮರ್ಥರಾಗಿದ್ದಾರೆ. ಅವರು ಇನ್ನೂ ಅಧಿಕಾರದಲ್ಲಿದ್ದಾರೆ ಎಂದು ಇರಾನ್ ಅಧಿಕಾರಿಗಳು ಪ್ರತಿಪಾದಿಸುತ್ತಿದ್ದರೂ, ಯುದ್ಧ ಆರಂಭವಾದ ನಂತರ ಅವರ ಯಾವುದೇ ಅಧಿಕೃತ ವಿಡಿಯೋ ಅಥವಾ ಆಡಿಯೋ ಹೊರಬಂದಿಲ್ಲ. ಸರ್ಕಾರಿ ದೂರದರ್ಶನ ಕೇವಲ ಲಿಖಿತ ಹೇಳಿಕೆಗಳು ಮತ್ತು ಎಐ ಮೂಲಕ ಸಿದ್ಧಪಡಿಸಿದ ದೃಶ್ಯಾವಳಿಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಫೆ.28 ರಂದು ನಡೆದ ವಾಯುದಾಳಿಯಲ್ಲಿ ಗಾಯಗೊಂಡಿರುವ ಆತ ಕೋಮಾ ಸ್ಥಿತಿಯಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ.

ಐಆರ್‌ಜಿಸಿ ಪಾತ್ರ ಇನ್ನೂ ಅಸ್ಪಷ್ಟ: ಖಮೇನಿ ಅನಾರೋಗ್ಯದ ವರದಿಗಳು, ದೇಶದ ನಿಯಂತ್ರಣದಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪಾತ್ರದ ಬಗ್ಗೆ ಪ್ರಶ್ನೆಗಳನ್ನು ಎತ್ತಿವೆ. ತಾವು ಸುಪ್ರೀಂ ಲೀಡರ್ ಬದಲಿಗೆ ಇರಾನ್‌ನ ಇತರ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಅಂತ್ಯಕ್ರಿಯೆಗೆ ಸಿದ್ಧತೆ?: ಮಾಜಿ ನಾಯಕ ಅಲಿ ಖಮೇನಿ ಅಂತ್ಯಕ್ರಿಯೆಗಾಗಿ ಖೋಮ್‌ನಲ್ಲಿ ಸಿದ್ಧತೆಗಳು ನಡೆಯುತ್ತಿವೆ, ಎಂದು ಗುಪ್ತಚರ ಮೂಲಗಳು ಸೂಚಿಸಿವೆ. ಅಂತ್ಯಕ್ರಿಯೆಯಲ್ಲಿನ ವಿಳಂಬ, ಶಿಯಾ ಪಂಗಡದ ಸಾಂಪ್ರದಾಯಿಕ 40 ದಿನಗಳ ಶೋಕದ ಅವಧಿಯನ್ನು ಮೀರಿದೆ.

ಮಾಹಿತಿ ಸೋರಿಕೆ: ಮಾಧ್ಯಮಗಳ ವಿರುದ್ಧ ಟ್ರಂಪ್ ಕ್ರಮ ಎಚ್ಚರಿಕೆ

ವಾಷಿಂಗ್ಟನ್: ಇರಾನ್‌ನಲ್ಲಿ ನಡೆದ ಎಫ್–15 ಯುದ್ಧ ವಿಮಾನದ ಸಿಬ್ಬಂದಿಯ ರಹಸ್ಯ ರಕ್ಷಣಾ ಕಾರ್ಯಾಚರಣೆಯ ವಿವರಗಳನ್ನು ಸೋರಿಕೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಘೋಷಿಸಿದ್ದಾರೆ. ಒಬ್ಬ ಸಿಬ್ಬಂದಿಯನ್ನು ರಕ್ಷಿಸಿದ ನಂತರ ಎರಡನೇ ವ್ಯಕ್ತಿ ನಾಪತ್ತೆಯಾಗಿರುವ ಸುದ್ದಿಯನ್ನು ಮಾಧ್ಯಮಗಳು ಬಹಿರಂಗಪಡಿಸಿದ್ದರಿಂದ ಇರಾನ್ ಪಡೆಗಳು ಎಚ್ಚೆತ್ತುಕೊಂಡವು, ಎಂದು ಟ್ರಂಪ್ ತಿಳಿಸಿದ್ದಾರೆ. ಈ ವರದಿಯ ನಂತರವಷ್ಟೇ ಇರಾನ್ ಸರ್ಕಾರ ನಾಪತ್ತೆಯಾದ ಪೈಲಟ್ ಅನ್ನು ಸೆರೆಹಿಡಿದವರಿಗೆ ಭಾರಿ ಬಹುಮಾನ ಘೋಷಿಸಿತು. ಇದರಿಂದ ರಕ್ಷಣಾ ಕಾರ್ಯಾಚರಣೆಗೆ ಅಡಚಣೆಯಾಯಿತು, ಎಂದು ಅವರು ಹೇಳಿದ್ದಾರೆ.

ಮಾಧ್ಯಮಗಳಿಗೆ ಎಚ್ಚರಿಕೆ: ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಮಾಹಿತಿ ಸೋರಿಕೆ ಮಾಡಿದ ಮೂಲವನ್ನು ಬಹಿರಂಗಪಡಿಸದಿದ್ದರೆ ಮಾಧ್ಯಮ ಸಂಸ್ಥೆಗಳ ಪ್ರತಿನಿಧಿಗಳನ್ನು ಜೈಲಿಗಟ್ಟುವುದಾಗಿ ಅಧ್ಯಕ್ಷರು ಎಚ್ಚರಿಸಿದ್ದಾರೆ. ಶುಕ್ರವಾರ ಪತನಗೊಂಡ ವಿಮಾನದಲ್ಲಿದ್ದ ಇಬ್ಬರು ಸಿಬ್ಬಂದಿ ಗಾಯಗೊಂಡಿದ್ದು, ಸದ್ಯ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ. ನೌಕಾಪಡೆಯ ಸೀಲ್ ಟೀಮ್–6 ಇರಾನ್‌ನ ಒಳಗಿನ ಪ್ರದೇಶಗಳಲ್ಲಿ ಈ ಕಾರ್ಯಾಚರಣೆ ನಡೆಸಿತ್ತು.



ಇರಾನಿಯನ್ನರ ಕೈಗೆ ಬಂದೂಕು ಹಿಡಿಸುವಲ್ಲಿ ವಿಫಲರಾದ ಟ್ರಂಪ್

ವಾಷಿಂಗ್ಟನ್: ಇರಾನ್ ಪ್ರತಿಭಟನಾಕಾರರ ಕೈಗೆ ಬಂದೂಕು ನೀಡಿ ಖಮೇನಿ ಇಸ್ಲಾಮಿಕ್ ಆಡಳಿತವನ್ನು ಕೊನೆಗೊಳಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಣೆದಿದ್ದ ತಂತ್ರ ಕೆಲಸಕ್ಕೆ ಬರಲಿಲ್ಲ. ಯಾಕೆಂದರೆ ಟ್ರಂಪ್ ಕಳುಹಿಸಿದ್ದ ಬಂದೂಕುಗಳು ಪ್ರತಿಭಟನಾಕಾರರಿಗೆ ತಲುಪಿರಲಿಲ್ಲ. ಹೌದು, ಹೀಗೆಂದು ಸ್ವತಃ ಅಧ್ಯಕ್ಷ ಟ್ರಂಪ್ ಅವರೇ ಬಹಿರಂಗಗೊಳಿಸಿದ್ದಾರೆ.

ಅಮೆರಿಕದ ಗುಪ್ತಚರ ಸಂಸ್ಥೆ (ಸಿಐಎ) ದಶಕಗಳಿಂದ ಅನುಸರಿಸುವ ಯುದ್ಧ ತಂತ್ರವನ್ನೇ ಟ್ರಂಪ್ ಬಳಸಿದ್ದಾರೆ. ಆದರೆ ಇರಾನಿಯನ್ನರು ಟ್ರಂಪ್ ಅವರನ್ನೇ ಬಕ್ರಾ ಮಾಡಿದ್ದಾರೆ. ಆದರೆ ಟ್ರಂಪ್ ಮೋಸ ಹೋದರೆ? ಅಥವಾ ಯಾರಿಂದ ಮೋಸ ಹೋದರು ಎಂಬ ಮಾಹಿತಿಯನ್ನು ಅಧ್ಯಕ್ಷರು ಬಹಿರಂಗಗೊಳಿಸಿಲ್ಲ. ಇರಾನ್‌ನಲ್ಲಿ ಆಡಳಿತ ವಿರೋಧಿ ಪ್ರತಿಭಟನೆ ಸಂದರ್ಭ ಪ್ರತಿಭಟನಾಕಾರರಿಗೆ ಕುರ್ದಿಶ್‌ಗಳ ಮೂಲಕ ಟ್ರಂಪ್ ಬಂದೂಕುಗಳನ್ನು ಕಳುಹಿಸಿದ್ದು, ಇರಾನ್‌ನೊಳಗೆ ಶಸ್ತ್ರಾಸ್ತ್ರಗಳನ್ನು ಕಳುಹಿಸಿದ್ದಾರೆ. ಬಂದೂಕುಗಳು ಪ್ರತಿಭಟನಾಕಾರರಿಗೆ ತಲುಪದಂತೆ ಇರಾನ್ ಮಧ್ಯವರ್ತಿಗಳು ನೋಡಿಕೊಂಡಿದ್ದಾರೆ. ಟ್ರಂಪ್ ಕಳುಹಿಸಿದ ಶಸ್ತ್ರಾಸ್ತ್ರಗಳು ಇರಾನ್ ಮಧ್ಯವರ್ತಿಗಳಲ್ಲೇ ಉಳಿದುಕೊಂಡಿವೆ.

ವೈಫಲ್ಯ ಒಪ್ಪಿಕೊಂಡ ಟ್ರಂಪ್: ಶ್ವೇತ ಭವನದ ಈಸ್ಟರ್ ಸಂಭ್ರಮಾಚರಣೆ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅಧ್ಯಕ್ಷ ಟ್ರಂಪ್, ನಾವು ಬಂದೂಕುಗಳನ್ನು ಕಳುಹಿಸಿದ್ದೆವು. ಈ ದರೋಡೆಕೋರರ (ಇರಾನ್ ಆಡಳಿತ) ವಿರುದ್ಧ ಹೋರಾಡಲು ಇರಾನ್ ಜನತೆಗೆ ಸಹಾಯ ಮಾಡಿದ್ದೆವು. ಆದರೆ ಏನಾಯಿತು? ಸುಂದರವಾದ ಬಂದೂಕುಗಳೆಂದು ಮಧ್ಯವರ್ತಿಗಳು ತಮ್ಮಲ್ಲೇ ಇಟ್ಟುಕೊಂಡಿದ್ದಾರೆ. ಇದಕ್ಕೆ ಅವರು ಬೆಲೆ ಕಟ್ಟಬೇಕಾಗುತ್ತದೆ ಎಂದು ಟ್ರಂಪ್ ಎಚ್ಚರಿಸಿದ್ದಾರೆ.

ನ್ಯಾಟೋ ಒಕ್ಕೂಟದಲ್ಲಿ ಬಿರುಕು

ವಾಷಿಂಗ್ಟನ್: ಇರಾನ್ ವಿರುದ್ಧದ ಯುದ್ಧ ನ್ಯಾಟೋ (ಎನ್‌ಎಟಿಒ) ಒಕ್ಕೂಟದ ಮೇಲೆ ಶಾಶ್ವತ ಪರಿಣಾಮ ಬೀರಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅಷ್ಟೇ ಅಲ್ಲದೆ, ಕಷ್ಟಕಾಲದಲ್ಲಿ ವಾಷಿಂಗ್ಟನ್‌ಗೆ ಸಹಾಯ ಮಾಡಲು ವಿಫಲವಾದ ನ್ಯಾಟೋ ಮತ್ತು ಅಮೆರಿಕದ ಇತರ ಪಾಲುದಾರ ರಾಷ್ಟ್ರಗಳ ವಿರುದ್ಧ ಅವರು ವಾಗ್ದಾಳಿ ನಡೆಸಿದ್ದಾರೆ.

ಸೋಮವಾರ ಶ್ವೇತಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಂಪ್, ಇರಾನ್ ಯುದ್ಧದ ಸಮಯದಲ್ಲಿ ಅಮೆರಿಕಕ್ಕೆ ಸಹಾಯ ಮಾಡದಿರಲು ನ್ಯಾಟೋ ಸದಸ್ಯ ರಾಷ್ಟ್ರಗಳು ಸರ್ವಪ್ರಯತ್ನ ನಡೆಸಿದವು ಎಂದು ಆರೋಪಿಸಿದರು. ಏಷ್ಯಾದಲ್ಲಿ ಅಮೆರಿಕದ ಮಿಲಿಟರಿ ಉಪಸ್ಥಿತಿ ಮತ್ತು ಆ ದೇಶಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರೂ, ಜಪಾನ್, ಆಸ್ಟ್ರೇಲಿಯಾ ಮತ್ತು ದಕ್ಷಿಣ ಕೊರಿಯಾ ಸಹಾಯಕ್ಕೆ ಬರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಗ್ರೀನ್‌ಲ್ಯಾಂಡ್ ಅನ್ನು ಸ್ವಾಧೀನಪಡಿಸಿಕೊಳ್ಳುವ ತಮ್ಮ ಪ್ರಸ್ತಾವನೆಯನ್ನು ನ್ಯಾಟೋ ತಿರಸ್ಕರಿಸಿದ ಸಮಯದಲ್ಲೇ ಭಿನ್ನಾಭಿಪ್ರಾಯ ಆರಂಭವಾಗಿತ್ತು, ಎಂದ ಟ್ರಂಪ್, ನ್ಯಾಟೋ ಒಂದು ಪೇಪರ್ ಟೈಗರ್ ಎಂದು ಟೀಕಿಸಿದರು. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನ್ಯಾಟೋಗೆ ಹೆದರುವುದಿಲ್ಲ ಎಂದರು.

ಅಮೆರಿಕ ಯುದ್ಧವನ್ನು ಗೆದ್ದ ನಂತರ ಈಗ ನ್ಯಾಟೋ ಸದಸ್ಯ ರಾಷ್ಟ್ರಗಳು ತಮ್ಮನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿವೆ ಎಂದು ಟ್ರಂಪ್ ಲೇವಡಿ ಮಾಡಿದರು. ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಬುಧವಾರ ವಾಷಿಂಗ್ಟನ್‌ಗೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ಈ ಹೇಳಿಗೆ ಗಮನ ಸೆಳೆದಿದೆ. ಉತ್ತರ ಕೊರಿಯಾದ ನಾಯಕ ಕಿಮ್ ಜೊಂಗ್ ಉನ್ ಅವರೊಂದಿಗೆ ಉತ್ತಮ ಸಂಬಂಧವಿದೆ, ಎಂದು ತಿಳಿಸಿದರು.

ಕಿರುಸುದ್ದಿ

ಅಲ್ ಫಲಾ:₹39 ಕೋಟಿ ಠೇವಣಿಗಳ ಮುಟ್ಟುಗೋಲು

ಹೊಸದಿಲ್ಲಿ: ಅಲ್ ಫಲಾ ಗ್ರೂಪ್ ಅಧ್ಯಕ್ಷ ಜವದ್ ಅಹ್ಮದ್ ಸಿದ್ದಿಖಿ ಮತ್ತೀತನ ಚಾರಿಟೇಬಲ್ ಟ್ರಸ್ಟ್ ವಿರುದ್ಧದ ಅಕ್ರಮ ಹಣ ವರ್ಗಾವಣೆ ಪ್ರಕರಣದ ಭಾಗವಾಗಿ, ಫರೀದಾಬಾದ್‌ನ ದೌಜ್ ಗ್ರಾಮದಲ್ಲಿರುವ ಈತನ ಕೃಷಿ ಭೂಮಿ, ಹಲವು ಬ್ಯಾಂಕ್‌ಗಳಲ್ಲಿದ್ದ ಸಿದ್ಧಿಖಿ ಮತ್ತು ಈತನ ಟ್ರಸ್ಟ್‌ನ ನಿರಖು ಠೇವಣಿ ಸಹಿತ ಸುಮಾರು 39ಕೋಟಿ ರೂ. ಠೇವಣಿಗಳ ಸಹಿತ 39.45 ಕೋಟಿ ಮೊತ್ತದ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಬಾಂಬ್ ದಾಳಿ: 2 ಸಾವು,

ಇಂಫಾಲ್: ಮಣಿಪುರದ ಬಿಷ್ಣುಪುರ ಜಿಲ್ಲೆಯಲ್ಲಿ ಮಂಗಳವಾರ ಶಂಕಿತ ಉಗ್ರರು ಮನೆಯೊಂದರ ಮೇಲೆ ನಡೆಸಿದ ಬಾಂಬ್ ದಾಳಿಯಲ್ಲಿ ಇಬ್ಬರು ಮಕ್ಕಳು ಬಲಿಯಾಗಿದ್ದು, ಹಲವರು ಗಾಯಗೊಂಡಿದ್ದಾರೆ. ದಾಳಿ ಖಂಡಿಸಿ ಭಾರೀ ಪ್ರತಿಭಟನೆ ನಡೆದಿದೆ. ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಶಂಕಿತರು ಮನೆಯ ಮೇಲೆ ಬಾಂಬ್ ಎಸೆದಿದ್ದು, ತಾಯಿಗೆ ಗಾಯವಾಗಿದೆ. ಮಕ್ಕಳ ಸಾವಿನಿಂದ ಭಾವೋದ್ರಿಕ್ತರಾದ ಜನರು ಪ್ರತಿಭಟನೆ ವೇಳೆ ಸಿಆರ್‌ಪಿಎಫ್ ಶಿಬಿರದೊಳಗೆ ನುಗ್ಗುವ ಪ್ರಯತ್ನ ಮಾಡಿದ್ದು, ಸೇನಾ ವಾಹನಗಳನ್ನು ಸುಟ್ಟಿದ್ದಾರೆ.

ಎಲ್‌ಇಟಿ ಘಟಕದ ಪಾಕ್ ಉಗ್ರರು ಸೇರಿ ಐವರ ಸೆರೆ

ಶ್ರೀನಗರ: ಅಂತಾರಾಜ್ಯ ಲಷ್ಕರ್–ಎ–ತೊಯ್ಬಾ (ಎಲ್‌ಇಟಿ) ಘಟಕವನ್ನು ಶ್ರೀನಗರದ ಪೊಲೀಸರು ಪ್ರಮುಖ ಭೇದಿಸಿ , 16 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಪಾಕಿಸ್ತಾನಿ ಭಯೋತ್ಪಾದಕ ಅಬ್ದುಲ್ಲಾ ಅಲಿಯಾಸ್ ಅಬು ಹುರೇರಾ ಸೇರಿದಂತೆ ಐವರನ್ನು ಬಂಧಿಸಿದ್ದಾರೆ. ಉಗ್ರ ಚಟುವಟಿಕೆಗಳ ಮಾಸ್ಟರ್ ಮೈಂಡ್ ಹುರೇರ, ಶ್ರೀನಗರದ ಸಮೀಪ ಹರ್ವಾನ್‌ನಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುತ್ತಿದ್ದ. ಇದೇ ಪ್ರಕರಣದಲ್ಲಿ ಎರಡನೇ ಪಾಕಿಸ್ತಾನಿ ಭಯೋತ್ಪಾದಕ



ಉಸ್ಮಾನ್ ಅಲಿಯಾಸ್ ಖುಬೈಬ್‌ನನ್ನು ಸೋಮವಾರ ಬಂಧಿಸಲಾಗಿದೆ. ಕಾರ್ಯಾಚರಣೆಯಲ್ಲಿ, 2011ರಿಂದ ಹರ್ವಾನ್‌ನಲ್ಲಿ ಪಾಕ್ ಹಣಕಾಸು ನೆರವು ಪಡೆದು ಸಕ್ರಿಯವಾಗಿ ಉಗ್ರ ಚಟುವಟಿಕೆ ನಡೆಸುತ್ತಿದ್ದ ಎಲ್‌ಇಟಿ ಜಾಲವನ್ನು ಭೇದಿಸಿದ್ದೇವೆಂದು ಪೊಲೀಸ್ ಮೂಲಗಳು ತಿಳಿಸಿವೆ. ದಶಕಗಳ ಹಿಂದೆ ಜಮ್ಮು ಕಾಶ್ಮೀರದೊಳಗೆ ಅಕ್ರಮವಾಗಿ ನುಸುಳಿದ್ದ ಹುರೇರ, ಗಸ್ಸು, ವಾನಿಹೊಮ, ಚಾಟರ್‌ಹಮ ಮತ್ತು ಡೆನಿಹಮ ಇತ್ಯಾದಿ ಗ್ರಾಮಗಳಲ್ಲಿ ತಲೆಮರೆಸಿಕೊಂಡು ಉಗ್ರ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದ. ಬಂಧಿತ ಐವರಲ್ಲಿ ಶ್ರೀನಗರದ ಮೂವರು ನಿವಾಸಿಗಳು ಸೇರಿದ್ದಾರೆ ಎಂದು ಹೇಳಿದರು. ಭಯೋತ್ಪಾದಕರಿಗೆ ಆಶ್ರಯ ಮತ್ತು ಆಹಾರ ಸೇರಿದಂತೆ ಲಾಜಿಸ್ಟಿಕಲ್ ಬೆಂಬಲವನ್ನು ಒದಗಿಸಿದ ಆರೋಪದ ಮೇಲೆ ಮೊಹಮ್ಮದ್ ನಕೀಬ್ ಭಟ್, ಆದಿಲ್ ರಶೀದ್ ಭಟ್ ಮತ್ತು ಗುಲಾಮ್ ಮೊಹಮ್ಮದ್ ಮಿರ್ ಅಲಿಯಾಸ್ ಮಾಮಾರನ್ನು ಬಂಧಿಸಲಾಗಿದೆ.

ವಲಸೆ ಕಾರ್ಮಿಕರಿಗೆ ಎಲ್‌ಪಿಜಿ ಹಂಚಿಕೆ ಪ್ರಮಾಣ ದ್ವಿಗುಣ

ಹೊಸದಿಲ್ಲಿ: ಇರಾನ್ ಯುದ್ಧದ ಹಿನ್ನೆಲೆಯಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯದ ನಡುವೆ, ವಲಸೆ ಕಾರ್ಮಿಕರಿಗೆ ನೆರವಾಗಲು ರಾಜ್ಯಗಳಿಗೆ ನೀಡಲಾಗುವ 5 ಕೆಜಿ ತೂಕದ ಎಲ್‌ಪಿಜಿ ಸಿಲಿಂಡರ್‌ಗಳ ದೈನಂದಿನ ಹಂಚಿಕೆಯನ್ನು ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ವಿತರಣಾ ಕಾರ್ಯತಂತ್ರ; 'ಚೋಟು' ಎಂದು ಕರೆಯಲ್ಪಡುವ ಈ 5 ಕೆಜಿಯ ಮುಕ್ತ ವ್ಯಾಪಾರ ಎಲ್‌ಪಿಜಿ ಸಿಲಿಂಡರ್‌ಗಳ



ಹೆಚ್ಚುವರಿ ಪೂರೈಕೆಯನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೀಡಲಾಗುವುದು. ಈ ವರ್ಷದ ಮಾರ್ಚ್ 2–3 ರ ಅವಧಿಯಲ್ಲಿ ದಾಖಲಾದ ಸರಾಸರಿ ದೈನಂದಿನ ಪೂರೈಕೆಯ ಆಧಾರದ ಮೇಲೆ ಈ ಹೆಚ್ಚುವರಿ ಹಂಚಿಕೆಯನ್ನು ಲೆಕ್ಕಹಾಕಲಾಗುತ್ತದೆ. ಇದು ಮಾರ್ಚ್ 21 ರಂದು ನಿಗದಿಪಡಿಸಲಾಗಿದ್ದ ಶೇ.20 ರಷ್ಟು ಮಿತಿಗಿಂತ ಹೆಚ್ಚುವರಿಯಾಗಿರಲಿದೆ.

ಸೌಲಭ್ಯ ಮತ್ತು ಬಳಕೆ ;ಖಾಯಂ ವಿಳಾಸದ ಪುರಾವೆ ಇಲ್ಲದ ನಗರ ಮತ್ತು ಅರೆ–ನಗರ ಪ್ರದೇಶಗಳ ವಲಸೆ ಕಾರ್ಮಿಕರಿಗಾಗಿ ಈ ಸಿಲಿಂಡರ್‌ಗಳನ್ನು ವಿತರಿಸಲಾಗುತ್ತದೆ. ತೈಲ ಮಾರುಕಟ್ಟೆ ಕಂಪನಿಗಳು ಈ ಪೂರೈಕೆಯನ್ನು ಸುಗಮಗೊಳಿಸಲಿದ್ದು, ದುರ್ಬಲ ವರ್ಗದವರಿಗೆ ಅಡುಗೆ ಇಂಧನ ಲಭ್ಯವಾಗುವಂತೆ ನೋಡಿಕೊಳ್ಳಲಿವೆ. ಈ ಸಿಲಿಂಡರ್‌ಗಳನ್ನು ಖರೀದಿಸಲು ಕೇವಲ ಗುರುತಿನ ಚೀಟಿ ಸಾಕು ಮತ್ತು ಇವುಗಳಲ್ಲಿ 'ಬೈಬ್ಯಾಕ್' (ಮರಳಿ ಮಾರಾಟ ಮಾಡುವ) ಸೌಲಭ್ಯವೂ ಇದೆ. ಇದರಿಂದಾಗಿ ಕಾರ್ಮಿಕರು ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಅನಿಲ ಖರೀದಿಸುವುದು ತಪ್ಪಲಿದೆ.

ಕಲ್ಪಾಕಂನಲ್ಲಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ ತಯಾರಿ

ಚೆನ್ನೈ: ಕಲ್ಪಾಕ್ಕಂನಲ್ಲಿ ದೇಶೀಯವಾಗಿ ನಿರ್ಮಾಣ ಮಾಡಲಾಗಿರುವ ಫಾಸ್ಟ್ ಬ್ರೀಡರ್ ರಿಯಾಕ್ಟರ್ ನಿರ್ಣಾಯಕ ಹಂತ ತಲುಪಿದೆ. ಈ ಮೂಲಕ ಭಾರತ ಪರಮಾಣು ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿ ಯಶಸ್ಸು ಸಾಧಿಸುವತ್ತ ಹೆಜ್ಜೆ ಇಟ್ಟಿದೆ.

ಇನ್ನೊಂದು ಹಂತ ದಾಟಿಬಿಟ್ಟರೆ ಭಾರತಕ್ಕೆ ಮುಂದಿನ ನೂರಾರು ವರ್ಷ ಕಾಲ ವಿದ್ಯುತ್ ಸಮಸ್ಯೆ ಇಲ್ಲದಂತಾಗಬಹುದು. ಕಲ್ಪಾಕಂನಲ್ಲಿರುವ ಭಾರತದ 500 ಮೆಗಾವ್ಯಾಟ್ ಮಾದರಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ (ಪಿಎಫ್‌ಬಿಆರ್) ಕಾರ್ಯಾರಂಭ ಮಾಡಿದೆ. ಇದು ದೇಶದ ನಾಗರಿಕ ಪರಮಾಣು ಕಾರ್ಯಕ್ರಮದ ಎರಡನೇ ಹಂತವನ್ನು ಮುನ್ನಡೆಸುವಲ್ಲಿ ನಿರ್ಣಾಯಕ ಹೆಜ್ಜೆ ಎಂದು ಪ್ರಧಾನಿ ಮೋದಿ ಕರೆದಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಅವರು, ಕಲ್ಪಾಕಂನಲ್ಲಿರುವ ಸ್ಥಳೀಯವಾಗಿ ವಿನ್ಯಾಸಗೊಳಿಸಲಾದ ಮತ್ತು ನಿರ್ಮಿಸಲಾದ ಮೂಲಮಾದರಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ ನಿರ್ಣಾಯಕ ಹಂತವನ್ನು ತಲುಪಿದೆ ಎಂದು ಬರೆದಿದ್ದಾರೆ. ಈ ಮುಂದುವರಿದ ರಿಯಾಕ್ಟರ್, ತಾನು ಬಳಸುವುದಕ್ಕಿಂತ ಹೆಚ್ಚಿನ ಇಂಧನವನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ, ಇದು ನಮ್ಮ ವೈಜ್ಞಾನಿಕ ಸಾಮರ್ಥ್ಯದ ಆಳ ಮತ್ತು ನಮ್ಮ ಎಂಜಿನಿಯರಿಂಗ್ ಉದ್ಯಮದ ಬಲವನ್ನು ಪ್ರತಿಬಿಂಬಿಸುತ್ತದೆ ಎಂದರು. ಈ ಮುಂದುವರಿದ ರಿಯಾಕ್ಟರ್ ಬಳಸುವುದಕ್ಕಿಂತ ಹೆಚ್ಚಿನ ಇಂಧನ ಉತ್ಪಾದಿಸುವ ಸಾಮರ್ಥ್ಯ ಹೊಂದಿದ್ದು, ಭಾರತೀಯ ವೈಜ್ಞಾನಿಕ ಸಾಮರ್ಥ್ಯದ ಆಳ ಮತ್ತು ದೇಶದ ಎಂಜಿನಿಯರಿಂಗ್ ಉದ್ಯಮದ ಬಲವನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಿ ಮೋದಿ ಆಶಯ ವ್ಯಕ್ತಪಡಿಸಿದ್ದಾರೆ.

ಕೇರಳದ ದೇವಾಲಯ, ಆನೆಗಳ ಕಲ್ಯಾಣಕ್ಕಾಗಿ ₹18 ಕೋಟಿ ದೇಣಿಗೆ

ಮುಂಬೈ: ರಿಲಯನ್ಸ್ ಇಂಡಸ್ಟ್ರೀಸ್ ಕಾರ್ಯನಿರ್ವಾಹಕ ನಿರ್ದೇಶಕ ಅನಂತ್ ಅಂಬಾನಿ ಅವರು ಕೇರಳದ ಎರಡು ಪ್ರಮುಖ ಧಾರ್ಮಿಕ ತಾಣಗಳಾದ ರಾಜರಾಜೇಶ್ವರಂ ದೇವಾಲಯ ಮತ್ತು ಗುರುವಾಯೂರ್ ದೇವಾಲಯಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ದೇವಾಲಯ ಸಂರಕ್ಷಣೆ ಮತ್ತು ಪ್ರಾಣಿ ಕಲ್ಯಾಣಕ್ಕೆ ಸಂಬಂಧಿಸಿದಂತೆ ವಿವಿಧ ಉಪಕ್ರಮಗಳನ್ನು ಘೋಷಿಸಿದರು. ಎರಡೂ ದೇವಾಲಯಗಳಿಗೆ ಒಟ್ಟು 6 ಕೋಟಿ ದೇಣಿಗೆ ನೀಡಿದ್ದು, ರಾಜರಾಜೇಶ್ವರಂ ದೇವಾಲಯದ ಸಮಗ್ರ ಪುನಃ ಸ್ಥಾಪನೆಗಾಗಿ 12 ಕೋಟಿ ರೂ.ದೇಣಿಗೆ ನೀಡಿದ್ದಾರೆ. ಉತ್ತರ ಕೇರಳದ ಕಣ್ಣೂರು ಜಿಲ್ಲೆಯ ತಳಿಪರಂಬ ಪಟ್ಟಣದಲ್ಲಿ ಇರುವ ಪ್ರಾಚೀನ ರಾಜರಾಜೇಶ್ವರಂ ದೇವಾಲಯಕ್ಕೆ ಅನಂತ್ ಅಂಬಾನಿ 3 ಕೋಟಿ ರೂ.ದೇಣಿಗೆ ನೀಡಿದ್ದಾರೆ. ದೇವಾಲಯದ ಸಮಗ್ರ ನವೀಕರಣಕ್ಕಾಗಿ ಅವರು ಹೆಚ್ಚುವರಿಯಾಗಿ 12 ಕೋಟಿ ರೂ. ದೇಣಿಗೆ ನೀಡಲಿದ್ದಾರೆ. ಈ ಯೋಜನೆಯಲ್ಲಿ ಬಹಳ ದಿನಗಳಿಂದ ಶಿಥಿಲಾವಸ್ಥೆಯಲ್ಲಿ ಇದ್ದ ದೇವಾಲಯದ ಐತಿಹಾಸಿಕ ಪೂರ್ವ ಗೋಪುರದ ಪುನರ್ನಿರ್ಮಾಣ ಮತ್ತು ಮೂಲಸೌಕರ್ಯ ಮತ್ತು ಪಾರ್ಕಿಂಗ್ ಸೌಲಭ್ಯಗಳ ಸುಧಾರಣೆ ಸೇರಿವೆ.

ಪಶ್ಚಿಮ ಬಂಗಾಳ ಎಸ್‌ಐಆರ್ ನ್ಯಾಯಾಂಗ ಪರಾಮರ್ಶೆ ಪೂರ್ಣ

ಮತಪಟ್ಟಿಯಿಂದ 91 ಲಕ್ಷ ಮತದಾರರು ಡಿಲೀಟ್

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯಲ್ಲಿ ನ್ಯಾಯಾಂಗ ಪರಾಮರ್ಶೆ ಬಳಿಕ, 91ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಚುನಾವಣಾ ಆಯೋಗದ ಡೇಟಾ ಹೇಳಿದೆ. ಮತದಾರರ ಯಾದಿ ವಿಶೇಷ ಪರಿಷ್ಕರಣೆ ಪ್ರಕ್ರಿಯೆ ನಂತರ, ರಾಜ್ಯದ ಅಂತಿಮ ಪರಿಷ್ಕೃತ ಮತದಾರರ ಪಟ್ಟಿಯನ್ನು ಆಯೋಗ ಅಧಿಕೃತವಾಗಿ ಇನ್ನಷ್ಟೆ ಪ್ರಕಟಿಸಬೇಕಿದೆ. ಆದಾಗ್ಯೂ ಕಳೆದ ವರ್ಷ ಅಕ್ಟೋಬರ್ ಅಂತ್ಯವರೆಗೆ ಗುರುತಿಸಲಾದ 7.66 ಕೋಟಿ ಮತದಾರರನ್ನು ಪರಿಗಣಿಸುವಾಗ, ಯಾದಿಯಿಂದ ಡಿಲಿಟ್ ಆಗಿರುವ ಒಟ್ಟು ಮತದಾರರ ಪ್ರಮಾಣ ಶೇ.11.85ರಷ್ಟಾಗುವುದು. ಎಸ್‌ಐಆರ್ ಪ್ರಕ್ರಿಯೆ ಆರಂಭದಿಂದಲೇ ಲೆಕ್ಕ ಹಾಕಿದರೆ ಒಟ್ಟು ರದ್ದತಿ ಪ್ರಮಾಣ 90.83ಲಕ್ಷಕ್ಕಿಂತ ಕೊಂಚ ಅಧಿಕ.

'ಇತ್ಯರ್ಥ ಹಂತದಲ್ಲಿದೆ 'ಲಿಸ್ಟ್‌ನಲ್ಲಿದ್ದ 60.06 ಲಕ್ಷ ಮತದಾರರ ಪೈಕಿ 27.16 ಲಕ್ಷ ಮೀರಿ ಮತದಾರರ ಹೆಸರುಗಳನ್ನು, ನ್ಯಾಯಾಂಗ ಅಧಿಕಾರಿಗಳು ಈಗಷ್ಟೆ ಮುಗಿಸಿರುವ ಪರಾಮರ್ಶೆ ಸಂದರ್ಭ ಅಳಿಸಲಾಗಿದೆ ಎಂದು ಆಯೋಗದ ಡೇಟಾ ತಿಳಿಸಿದೆ. ನ್ಯಾಯಾಂಗ ಪರಾಮರ್ಶೆಗೀಡಾದ ಸುಮಾರು 45.22ಶೇ. ಪ್ರಕರಣಗಳು ಅಥವಾ ಮತದಾರರ ಹೆಸರುಗಳು, ಫೆ.28ರಂದು ಎಸ್‌ಐಆರ್ ನಂತರದ ಮತದಾರರ ಯಾದಿ ಪ್ರಕಟಗೊಂಡ ಬಳಿಕ ಯಾದಿಯಿಂದ ರದ್ದಾಗಿವೆ ಎಂದು ಅಂಕಿಅಂಶಗಳಿಂದ ವ್ಯಕ್ತವಾಗಿದೆ. ಇತ್ಯರ್ಥ ಹಂತದಲ್ಲಿದೆ ಕೆಟಗರಿಯಲ್ಲಿದ್ದ 32.68 ಲಕ್ಷ ಮತದಾರರ ಹೆಸರುಗಳನ್ನು ಯಥಾವತ್ ಉಳಿಸಿಕೊಂಡು ಅಂತಿಮ ಮತದಾರರ ಯಾದಿಗೆ ಸೇರಿಸಲಾಗಿದೆ.

ಮುರ್ಶಿದಾಬಾದ್ ಜಿಲ್ಲೆಯಲ್ಲಿ ಗರಿಷ್ಠ: ಮುಸ್ಲಿಂ ಬಾಹುಳ್ಯದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಗರಿಷ್ಠ ಹೆಸರುಗಳು ರದ್ದತಿಯಾಗಿವೆ. ಇಲ್ಲಿ ನ್ಯಾಯಾಂಗ ಪರಾಮರ್ಶೆ ಹಂತದಲ್ಲಿದ್ದ 11.01ಲಕ್ಷ ಹೆಸರುಗಳ ಪೈಕಿ 4.55ಲಕ್ಷಗಳಿಗೂ ಮೀರಿ ಹೆಸರುಗಳನ್ನು ಮತದಾರರ ಯಾದಿಯಿಂದ ಕಿತ್ತು ಹಾಕಲಾಗಿದೆ. ತನ್ಮೂಲಕ ಈ ಜಿಲ್ಲೆಯಲ್ಲಿ ಇತ್ಯರ್ಥ ಹಂತದಲ್ಲಿದೆ ಘಟಕದಲ್ಲಿ ಡಿಲಿಟ್ ಆದ ಮತದಾರರ ಸಂಖ್ಯೆ ಶೇ. 41.33ರಷ್ಟಾಗಿದೆ. ಬಾಂಗ್ಲಾ ಗಡಿಗೆ ಸಮೀಪದ ಉತ್ತರ 24ಪರಗಣ ಜಿಲ್ಲೆಯಲ್ಲೂ ಅಧಿಕ ಸಂಖ್ಯೆಯಲ್ಲಿ ಹೆಸರುಗಳು ಡಿಲಿಟ್ ಆಗಿವೆ. ಇಲ್ಲಿ ನ್ಯಾಯಾಂಗ ಪರಾಮರ್ಶೆ ಹಂತದಲ್ಲಿದ್ದ 5.91 ಲಕ್ಷ ಮತದಾರರ ಪೈಕಿ 3.25ಲಕ್ಷ ಮತದಾರರು ಮತದಾನಕ್ಕೆ ಅನರ್ಹರೆಂಬುದು ಬಯಲಾಗಿದೆ. ಇನ್ನು ನ್ಯಾಯಾಂಗ ಅಧಿಕಾರಿಗಳನ್ನೇ ಘೇರಾವ್ ಮಾಡಿದ ಕುಖ್ಯಾತ ಮಾಲ್ಡಾದಲ್ಲಿ ನ್ಯಾಯಾಂಗ ಪರಾಮರ್ಶೆ ಹಂತದಲ್ಲಿದ್ದ 8.28 ಮತದಾರರ ಪೈಕಿ 2.39ಲಕ್ಷ ಮತದಾರರ ಹೆಸರುಗಳು ಅನರ್ಹವೆಂದು ರದ್ದಾಗಿವೆ.

24 ಪರಗಣದಲ್ಲಿ 2.23ಲಕ್ಷಗಳು: ನ್ಯಾಯಾಂಗ ಪರಾಮರ್ಶೆ ಮುಖೇನ ಅನರ್ಹ ಮತದಾರರ ಹೆಸರುಗಳು ರದ್ದಾದ ನಂತರ 24ಪರಗಣ ಜಿಲ್ಲೆಯಲ್ಲಿ ಅಂತಿಮ ಮತದಾರರ ಯಾದಿಯಲ್ಲಿ ಉಳಿದಿರುವ ಮತದಾರರ ಸಂಖ್ಯೆ ಅಂದಾಜು 2.23ಲಕ್ಷಗಳು. ಪುರ್ಬಾ ಬರ್ಧಮಾನ್ ಜಿಲ್ಲೆಯಲ್ಲಿ ಮತದಾರರ ಯಾದಿಯಲ್ಲುಳಿದಿರುವ ಮತದಾರರ ಸಂಖ್ಯೆ 2.09ಲಕ್ಷಗಳು, ನಡಿಯಾ ಜಿಲ್ಲೆಯಲ್ಲಿ 2.98ಲಕ್ಷ ಮತದಾರರು ಮತದಾನದ ಅರ್ಹತೆ ಉಳಿಸಿಕೊಂಡಿದ್ದಾರೆ. ಸಿಎಂ ಮಮತಾ ಬ್ಯಾನರ್ಜಿ ಅವರ ಭವಾನಿಪುರ ವಿಧಾನ ಸಭಾ ಕ್ಷೇತ್ರ ಒಳಗೊಂಡ ಕೋಲ್ಕತ್ತಾ ದಕ್ಷಿಣದಲ್ಲಿ 28ಸಾವಿರ ಮತದಾರರ ಹೆಸರುಗಳು ರದ್ದಾಗಿವೆ. ನ್ಯಾಯಾಂಗ ಪರಾಮರ್ಶೆ ಹಂತದಲ್ಲಿ ಈ ಜಿಲ್ಲೆಯಲ್ಲಿ ಮತದಾರರ ಯಾದಿಯಿಂದ ಡಿಲಿಟ್ ಆದ ಮತದಾರರ ಶೇಕಡಾವಾರು 36.19. ಕೋಲ್ಕತ್ತಾ ಉತ್ತರದಲ್ಲಿ 39ಸಾವಿರ ಮತದಾರರು ಮತದಾನಕ್ಕೆ ಅನರ್ಹರಾಗಿದ್ದು, ಇಲ್ಲಿ ರದ್ದತಿ ಶೇಕಡಾ 64ರಷ್ಟಾಗಿದೆ.

ಗಡಿಯಲ್ಲಿ ಹಾವು, ಮೊಸಳೆ ನಿಯೋಜಿಸಲು ಸೇನೆ ಚಿಂತನೆ

ನುಸುಳುಕೋರರ ಬೇಟೆಗೆ ಉರಗ

ಶ್ರೀನಗರ: ಗಡಿ ಭದ್ರತೆಯ ಬಲವರ್ಧನೆ ಉದ್ದೇಶದಿಂದ ಭಾರತ–ಬಾಂಗ್ಲಾದೇಶ ಗಡಿ ಸಮೀಪ ನದಿ ತಟಗಳಲ್ಲಿ ಹಾವು ಮತ್ತು ಮೊಸಳೆಗಳಂತಹ ಉರಗಗಳನ್ನು ನಿಯೋಜಿಸಲು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮುಂದಾಗಿದೆ. ಬಾಂಗ್ಲಾದೇಶಿ ಒಳನುಸುಳುಕೋರರು (ಅಕ್ರಮ ಬಾಂಗ್ಲಾ ವಲಸಿಗರು) ಗಡಿದಾಟಿ ಬರುವುದನ್ನು ತಡೆಗಟ್ಟುವ ಉದ್ದೇಶದಿಂದ ಉರಗಗಳನ್ನು ನಿಯೋಜಿಸಲು ಬಿಎಸ್‌ಎಫ್ ಚಿಂತನೆ ನಡೆಸಿದೆ.

ಕೆಲವು ಗಡಿ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಬೇಲಿ ಹಾಕಲು ಸಾಧ್ಯವಿಲ್ಲ. ಅಂತಹ ಸ್ಥಳಗಳಲ್ಲಿ ಅಕ್ರಮ ವಲಸೆಯನ್ನು ತಡೆಗಟ್ಟಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ. ವರದಿಗಳ ಪ್ರಕಾರ, ಪ್ರಾಯೋಗಿಕವಾಗಿ ಇಂತಹದ್ದೊಂದು ಕಠಿಣ ಕ್ರಮ ತೆಗೆದುಕೊಳ್ಳಲು ಸಾಧ್ಯತೆಯ ಕುರಿತು ಪರಿಶೀಲಿಸಿ ವರದಿ ನೀಡುವಂತೆ ತನ್ನ ಸ್ಥಳೀಯ ತಂಡಗಳಿಗೆ ಬಿಎಸ್‌ಎಫ್ ಪ್ರಧಾನ ಕಚೇರಿ ಆದೇಶಿಸಿದೆ. ನದಿ ಗಡಿ ಪ್ರದೇಶಗಳಲ್ಲಿ ಉರಗಗಳನ್ನು ನಿಯೋಜಿಸಲು ಪರಿಶೀಲಿಸುವುದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೆಲವು ಸೂಚನೆಗಳನ್ನು ನೀಡಿದ್ದಾರೆ ಎನ್ನಲಾಗಿದೆ. ಬಾಂಗ್ಲಾ ಗಡಿ ಪ್ರದೇಶದಲ್ಲಿ ಬೇಲಿ ಹಾಕಲಾಗದ ಸ್ಥಳಗಳ ನದಿ ಪ್ರವಾಹದಲ್ಲಿ ಮೊಸಳೆ ಹಾಗೂ ಹಾವುಗಳಂತಹ ನೈಸರ್ಗಿಕ ನಿರೋಧಕ ಶಕ್ತಿಗಳನ್ನು ಬಳಸಿಕೊಳ್ಳಲು ಪ್ರಾಯೋಗಿಕವಾಗಿ ಸಾಧ್ಯವಾಗುವುದೇ ಎಂಬ ಸಂಶಯವಿದೆ.



ಅಧಿಕಾರಿಗಳು ಹೇಳುವುದೇನು?: ಬಿಎಸ್‌ಎಫ್ ಇಂತಹದ್ದೊಂದು ಚಿಂತನೆ ನಡೆಸಿರುವುದು ನಿಜ. ಆದರೆ ಬಾಂಗ್ಲಾ ಗಡಿ ಪ್ರದೇಶಗಳಲ್ಲಿ ಉರಗಗಳ ನಿಯೋಜಿಸುವ ಪ್ರಸ್ತಾವ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಈ ಬಗ್ಗೆ ಪರಿಶೀಲನೆಗಳನ್ನು ನಡೆಸಲಾಗುತ್ತಿದ್ದು, ಹಲವು ಪ್ರಾಯೋಗಿಕ ಸವಾಲುಗಳ ಕುರಿತು ಚರ್ಚಿಸಲಾಗುವುದು. ಉರಗಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು ಮತ್ತು ನದಿ ತಟಗಳಲ್ಲಿ ವಾಸವಾಗಿರುವ ಸ್ಥಳೀಯ ಭಾರತೀಯರ ಸುರಕ್ಷತೆ ಖಚಿತಪಡಿಸುವುದರ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಬಿಎಸ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಫೆ.9ರಂದು ಮೊದಲ ಪ್ರಸ್ತಾವ: ಫೆ. 9ರಂದು ದಿಲ್ಲಿ ಬಿಎಸ್‌ಎಫ್ ಮುಖ್ಯ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಉರಗಗಳ ನಿಯೋಜನೆ ಪ್ರಸ್ತಾವ ಬಂದಿತ್ತೆಂದು ವರದಿಯಾಗಿದೆ. ಬಾಂಗ್ಲಾ ಮತ್ತು ಪಾಕಿಸ್ತಾನ ಜತೆ ಗಡಿ ಹಂಚಿಕೊಳ್ಳುವ ಪ್ರದೇಶಗಳಲ್ಲಿ ಪ್ರಾಥಮಿಕ ಹಂತದ ಭದ್ರತಾ ಪಡೆಯಾಗಿ ಹಾವು ಮತ್ತು ಮೊಸಳೆಗಳನ್ನು ಬಳಸಿಕೊಳ್ಳಲು ಚರ್ಚೆ ನಡೆದಿದೆ.

ಕಿರುಸುದ್ದಿ

ಏ.19: ಮಣಿಪಾಲ ಆರ್‌ಎಸ್‌ಬಿಯಲ್ಲಿ 'ವಧು ವರರ ಸಮಾವೇಶ -2026'

ಶಿರ್ವ: ರಾಜಾಪುರ ಸಾರಸ್ವತ ಬ್ರಾಹ್ಮಣ ಸಂಘ ಮಣಿಪಾಲ, ರಾಜಾಪುರ ಸಾರಸ್ವತ ಬ್ರಾಹ್ಮಣ ಮಹಿಳಾ ವೇದಿಕೆ ಮಣಿಪಾಲ ಮತ್ತು ರಾಜಾಪುರ ಸಾರಸ್ವತ ಸಮಾಜ ಬೆಂಗಳೂರು ಇದರ ಅಂಗ ಸಂಸ್ಥೆಯಾದ ಆರ್‌ಎಸ್‌ಬಿ ಅನುಬಂಧ ವಿವಾಹ ವೇದಿಕೆ ಬೆಂಗಳೂರು ಇವರ ಸಹಭಾಗಿತ್ವದಲ್ಲಿ ಏ.19ರಂದು ಬೆಳಿಗ್ಗೆ ಗಂಟೆ 9ರಿಂದ ಸಂಜೆ 4ರ ವರೆಗೆ ಮಣಿಪಾಲ ಆರ್‌ಎಸ್‌ಬಿ ಸಭಾಭವನದಲ್ಲಿ 'ವಧು ವರರ ಸಮಾವೇಶ –2026' ಆಯೋಜಿಸಲಾಗಿದೆ. ಇದೊಂದು ಉಚಿತ ಕಾರ್ಯಕ್ರಮವಾಗಿದ್ದು, ಭಾಗವಹಿಸುವ ವಧು/ವರರ ಪೋಸ್ಟ್ ಕಾರ್ಡ್ ಅಳತೆಯ ಎರಡು ಭಾವಚಿತ್ರಗಳು, ಬಯೋಡೇಟಾ, ಪ್ರತಿಯನ್ನು ಏಪ್ರಿಲ್ 12ರ ಒಳಗೆ ಕಳುಹಿಸಿ ನೋಂದಾಯಿಸಬೇಕು. ವಧು/ವರರ ಜೊತೆಗೆ ಇಬ್ಬರಿಗೆ ಮಾತ್ರ ಪ್ರವೇಶಾವಕಾಶ ಇರುತ್ತದೆ. ಊಟದ ವ್ಯವಸ್ಥೆ ಇದೆ. ನೋಂದಣಿ ಹಾಗೂ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 90088 96588, 87624 66335, 94489 53091 ಸಂಪರ್ಕಿಸಬಹುದು ಎಂದು ಸಂಘಟಕರ ಪ್ರಕಟನೆ ತಿಳಿಸಿದೆ.

ಮುಲ್ಕಿ: 'ಮಕ್ಕಳ ಕೈಗೆ ಪುಸ್ತಕ ನೀಡಿ, ಮೊಬೈಲ್ ಬಿಡಿ' ಬೇಸಗೆ ಶಿಬಿರ ಉದ್ಘಾಟನೆ

ಮುಲ್ಕಿ: ಮಕ್ಕಳ ಕೈಗೆ ಪುಸ್ತಕ ನೀಡಿ, ಮೊಬೈಲ್ ಬಿಡಿ ಎಂದು ಕಾರ್ಕಳ ಭುವನೇಂದ್ರ ಕಾಲೇಜಿನ ಕನ್ನಡ ಪ್ರಾಧ್ಯಾಪಕ, ರಂಗಭೂಮಿ ಕಲಾವಿದ ರಾಮಾಂಜಿ ಹೇಳಿದರು. ಅವರು ಮುಲ್ಕಿ ಶ್ರೀನಾರಾಯಣ ಗುರು ವಿದ್ಯಾಸಂಸ್ಥೆ ಮತ್ತು ಪಡುಬಿದ್ರೆ ಓಂಕಾರ ಕಲಾಸಂಗಮ ಸಹಯೋಗದಲ್ಲಿ ನಡೆದ ಬೇಸಿಗೆ ಶಿಬಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು. ಕಾರ್ಯಕ್ರಮವನ್ನು ಬಾಲಚಂದ್ರ ಸನಿಲ್ ಉದ್ಘಾಟಿಸಿದರು. ಶಾಲಾ ಸಂಚಾಲಕ ಹರೀಂದ್ರ ಸುವರ್ಣ ಮಕ್ಕಳ ಆತ್ಮಸ್ಥೈರ್ಯ ಹೆಚ್ಚಿಸಲು ಶಿಬಿರಗಳು ಪೂರಕ ಎಂದರು. ಮುಖ್ಯ ಅತಿಥಿಗಳಾಗಿ ಓಂಕಾರ ಕಲಾಸಂಗಮದ ನಿರ್ದೇಶಕಿ ಗೀತಾ ಅರುಣ್, ಆಡಳಿತಾಧಿಕಾರಿ ಮಂಜುಳಾ ಕೆ.ವಿ., ಪ್ರಾಂಶುಪಾಲ ಯತೀಶ್ ಅಮೀನ್, ಮುಖ್ಯ ಶಿಕ್ಷಕಿ ಗೀತಾ ಶೆಟ್ಟಿ ಶಿಕ್ಷಕ ಪೃಥ್ವಿರಾಜ್ ಕಾರ್ಯಕ್ರಮ ನಿರೂಪಿಸಿದರು ಶಿಕ್ಷಕಿ ಸಾವಿತ್ರಿ ಧನ್ಯವಾದ ಅರ್ಪಿಸಿದರು.

ಕುಮಾರ್ ಪೆರ್ನಾಜೆ-ಸೌಮ್ಯ ದಂಪತಿಗೆ ಜನತಾ ನ್ಯೂಸ್ ಅವಾರ್ಡ್ಸ್

ಪುತ್ತೂರು : ಜನತಾ ನ್ಯೂಸ್ ಕನ್ನಡ ವತಿಯಿಂದ ಆಯೋಜಿಸಲಾಗಿರುವ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಗುರುತಿಸಿ ಗೌರವಿಸಿ ಸನ್ಮಾನಿಸಲು ಜನತಾ ಅವಾರ್ಡ್ಸ್ ನೀಡಲಾಗುತ್ತಿದ್ದು, 2026ರ ಪ್ರಶಸ್ತಿಗೆ ಜೇನು ಗಡ್ಡದಾರಿ, ಹವ್ಯಾಸೀ ಬರಹಗಾರ ಕುಮಾರ್ ಪೆರ್ನಾಜೆ–ಸೌಮ್ಯ ದಂಪತಿಯನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ಸಮಾರಂಭ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಜನತಾ ನ್ಯೂಸ್ ಚಾನೆಲ್ ಮುಖ್ಯಸ್ಥ ಆರ್. ಎನ್. ಭಾರದ್ವಾಜ್ ಹಾಗೂ ಅಡ್ಮಿನ್ ಗೋಪಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ರಾತ್ರಿ ಶ್ರೀದೇವಿಗೆ ಶಯನೋತ್ಸವ ವಿಜೃಂಭಣೆಯಿಂದ ನಡೆಯಿತು. ಮಲ್ಲಿಗೆ ಪ್ರಿಯ ಶ್ರೀದೇವಿಗೆ ಭಕ್ತರಿಂದ ಲಕ್ಷಕ್ಕಿಂತಲೂ ಮಿಕ್ಕಿ ಮಲ್ಲಿಗೆ ಸಮರ್ಪಣೆ ಕಾರ್ಯ ನಡೆಯಿತು.

ಕೇರಳ ವಿಧಾನಸಭಾ ಚುನಾವಣೆ: ಬಹಿರಂಗ ಪ್ರಚಾರ ಸಮಾಪ್ತಿ

ಇನ್ನು ಚುನಾವಣೆಯ ದಿನದತ್ತ ಚಿತ್ತ

ಕಾಸರಗೋಡು: ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಯ ಅಂಗವಾಗಿ ಬಹಿರಂಗ ಪ್ರಚಾರವು ಮಂಗಳವಾರ ಬೆಳಗ್ಗೆಯಿಂದ ದಿನವಿಡೀ ಪರಾಕಾಷ್ಠೆಗೆ ತಲುಪಿ ಸಂಜೆ ವೇಳೆಗೆ ಸಮಾಪ್ತಿಯಾಯಿತು. ವಿವಿಧ ಅಭ್ಯರ್ಥಿಗಳು ಮತಯಾಚನೆಗಾಗಿ ಆರಂಭಿಸಿರುವ ಬಹಿರಂಗ ಅಭಿಯಾನವು ಕೊನೆಗೊಂಡಿತು. ಈ ಅವಧಿಯೊಳಗಾಗಿ ಗರಿಷ್ಠ ಮತಗಳನ್ನು ಸೆಳೆದುಕೊಳ್ಳಲು ಅಭ್ಯರ್ಥಿಗಳು ಮತ್ತು ಆಯಾ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ನಿರಂತರ ಶ್ರಮಿಸಿದ್ದಾರೆ.

ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ, ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ, ಎಲ್‌ಡಿಎಫ್ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಶಾನವಾಸ್ ಪಾದೂರು ಅದ್ದೂರಿ ಮೆರವಣಿಗೆ ಮೂಲಕ ಬಹಿರಂಗ ಪ್ರಚಾರವನ್ನು ಮುಕ್ತಾಯಗೊಳಿಸಿದರು.

ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್, ಯುಡಿಎಫ್ ಅಭ್ಯರ್ಥಿ ಎ.ಕೆ.ಎಂ.ಅಶ್ರಫ್, ಎಲ್‌ಡಿಎಫ್ ಅಭ್ಯರ್ಥಿ ಕೆ.ಆರ್ .ಜಯಾನಂದ ಅವರು ಮಂಜೇಶ್ವರ ಮಂಡಲದ ವಿವಿಧೆಡೆ ಆಕರ್ಷಕ ಮೆರವಣಿಗೆ, ರೋಡ್ ಶೋ ಹಾಗೂ ಇನ್ನಿತರ ಬಹಿರಂಗ ಕಾರ್ಯಕ್ರಮಗಳೊಂದಿಗೆ ಪ್ರಚಾರವನ್ನು ಮುಕ್ತಾಯಗೊಳಿಸಿದರು. ಉದುಮ, ಕಾಞಂಗಾಡು, ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳ ಎನ್‌ಡಿಎ, ಎಲ್‌ಡಿಎಫ್, ಯುಡಿಎಫ್ ಅಭ್ಯರ್ಥಿ ಗಳು ಆಯಾ ಮಂಡಲಗಳಲ್ಲಿ ಸಂಭ್ರಮ ಸಡಗರದೊಂದಿಗೆ ರೋಡ್ ಶೋ ಹಾಗೂ ಇನ್ನಿತರ ಬಹಿರಂಗ ಸಮಾರಂಭಗಳನ್ನು ಹಮ್ಮಿಕೊಂಡಿದ್ದರು.

ಇಂದು ಮನೆ ಮನೆ ಸಂಪರ್ಕ

ವಿಧಾನಸಭಾ ಚುನಾವಣೆಯ ಅಂಗವಾಗಿ ಏ.8ರಂದು ಕಾಸರಗೋಡು ಜಿಲ್ಲೆಯಾದ್ಯಂತ ಅಭ್ಯರ್ಥಿಗಳು ಹಾಗೂ ಆಯಾ ಪಕ್ಷದವರು ಮನೆ ಮನೆ ಸಂಪರ್ಕದಲ್ಲಿ ತೊಡಗಲಿದ್ದಾರೆ. ಜೊತೆಗೆ ಸಾಧ್ಯವಿರುವಷ್ಟು ಮತದಾರರನ್ನು ಸಂಪರ್ಕಿಸಿ ಮತಯಾಚನೆ ನಡೆಸಲಿದ್ದಾರೆ. ಏ.9ರಂದು ಮತದಾರರು ಮತಗಟ್ಟೆಗೆ ಆಗಮಿಸಲಿದ್ದು, ಈ ನಿಟ್ಟಿನಲ್ಲಿ ಈಗಾಗಲೇ ಸಕಲ ಸಿದ್ಧತೆಗಳು ಪೂರ್ಣಗೊಂಡಿರುವುದಾಗಿ ಜಿಲ್ಲಾಡಳಿತವು ತಿಳಿಸಿದೆ.

ಅಡಿಕೆ ಎಲೆ ಚುಕ್ಕಿ ರೋಗ | ಗುತ್ತಿಗಾರಿಗೆ ಸಿಪಿಸಿಆರ್‌ಐ ನಿರ್ದೇಶಕರ ಭೇಟಿ

ಸಂಪೂರ್ಣ ಸಹಕಾರ ಭರವಸೆ

ಸುಬ್ರಹ್ಮಣ್ಯ: ಅಡಿಕೆ ಬೆಳೆಗಾರರನ್ನು ಕಂಗಾಲಾಗಿಸಿರುವ 'ಎಲೆ ಚುಕ್ಕಿ ರೋಗ'ದ ಸಮರ್ಪಕ ನಿರ್ವಹಣೆ ಹಾಗೂ ಸಂಶೋಧನಾ ಕ್ರಮಗಳ ಪರಿಶೀಲನೆಗಾಗಿ, ಕಾಸರಗೋಡಿನ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ ಸಿ.ಪಿ.ಸಿ.ಆರ್.ಐ ಹಮ್ಮಿಕೊಂಡ ನಿರ್ವಹಣಾ ಕ್ರಮದ ಪ್ರಾತ್ಯಕ್ಷಿಕೆ ತೋಟಕ್ಕೆ ಸಿಪಿಸಿಆರ್‌ಐ ನಿರ್ದೇಶಕ ಡಾ.ಕೆ. ಬಿ. ಬಾಲಚಂದ್ರ ಹೆಬ್ಬಾರ್ ಹಾಗೂ ಹಿರಿಯ ವಿಜ್ಞಾನಿಗಳ ತಂಡ ಸೋಮವಾರ ಭೇಟಿ ನೀಡಿದರು.

ಕೇಂದ್ರ ಅಡಿಕೆ ಮತ್ತು ಸಂಬಾರ ಬೆಳೆ ಅಭಿವೃದ್ಧಿ ಸಂಸ್ಥೆ ತೋಟಗಾರಿಕಾ ಸಮಗ್ರ ಅಭಿವೃದ್ಧಿ ಮಿಷನ್ ಆರ್ಥಿಕ ನೆರವಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಹಾಗೂ ನಾಲ್ಕೂರು ಗ್ರಾಮದಲ್ಲಿ ವಿಟ್ಲದ ಸಿ.ಪಿ.ಸಿ.ಆರ್.ಐ. ಪ್ರಾದೇಶಿಕ ಕೇಂದ್ರದ ವತಿಯಿಂದ ಹಮ್ಮಿಕೊಳ್ಳಲಾಗಿರುವ 'ಅಡಿಕೆ ಎಲೆ ಚುಕ್ಕಿ ರೋಗದ ನಿರ್ವಹಣೆ ಕುರಿತು ಬೃಹತ್ ಪ್ರಮಾಣದ ಪ್ರಾತ್ಯಕ್ಷಿಕೆ' ಕಾರ್ಯಕ್ರಮದ ಪ್ರಗತಿಯನ್ನು ಸಿಪಿಸಿಆರ್‌ಐ ನಿರ್ದೇಶಕ ಡಾ.ಕೆ.ಬಿ. ಹೆಬ್ಬಾರ್ ವೀಕ್ಷಿಸಿದರು.

ಕೃಷಿಕರಾದ ಸುಬ್ರಹ್ಮಣ್ಯ ಪ್ರಸಾದ್, ಗಿರೀಶ್ ಗೌಡ ನಡುಗಲ್ಲು, ಕುಮಾರಸ್ವಾಮಿ ಮೇಲ್ತೋಟ, ಚಂದ್ರಶೇಖರ ಭಟ್, ತಿರುಮಲೇಶ್ವರ ಭಟ್ ಚಣಿಲ ಅವರ ಪ್ರಾತ್ಯಕ್ಷಿಕೆ ತೋಟಕ್ಕೆ ವಿಜ್ಞಾನಿಗಳು ಭೇಟಿ ನೀಡಿದರು.

ಪರಿಶೀಲನೆ

ಈ ಸಂದರ್ಭದಲ್ಲಿ ತೋಟದಲ್ಲಿ ಅಳವಡಿಸಲಾಗಿರುವ ಹವಾಮಾನ ಮಾಪನ ಯಂತ್ರ ಹಾಗೂ ರೋಗ ಬಾಧಿತ ಮರಗಳಿಗೆ ನೀಡಲಾಗುತ್ತಿರುವ ಸಂಯೋಜಿತ ಚಿಕಿತ್ಸಾ ಕ್ರಮಗಳನ್ನು ಅವರು ಪರಿಶೀಲಿಸಿದರು. ಇದೇ ವೇಳೆ ಅಡಿಕೆ ಬೆಳೆಗಾರರಲ್ಲೂ ಪ್ರಗತಿಯ ಬಗ್ಗೆ ಮಾಹಿತಿ ಪಡೆದರು. ಅಲ್ಲದೆ ಪ್ರಾತ್ಯಕ್ಷಿಕೆ ಫಲಕದ ಮೂಲಕ ರೈತರಿಗೆ ರೋಗ ನಿರ್ವಹಣೆಯ ಕುರಿತು ನೀಡಲಾಗಿರುವ ಸಲಹೆಗಳನ್ನು ನಿರ್ದೇಶಕರು ಶ್ಲಾಘಿಸಿದರು.



ಸೆನ್ಸಾರ್ ತಂತ್ರಜ್ಞಾನ

ತೋಟದಲ್ಲಿ ಅಳವಡಿಸಲಾಗಿರುವ ಸೆನ್ಸರ್ ಆಧಾರಿತ ತಂತ್ರಜ್ಞಾನಗಳು ರೋಗದ ತೀವ್ರತೆ ಮತ್ತು ಹವಾಮಾನದ ಏರಿಳಿತಗಳ ನಡುವಿನ ಸಂಬಂಧವನ್ನು ಅಧ್ಯಯನ ಮಾಡಲು ಸಹಕಾರಿಯಾಗಿದೆ. ಅಳವಡಿಸಲಾಗಿರುವ ವೆದರ್ ಸ್ಟೇಷನ್ ಮೂಲಕ ಪರಿಸರದ ಹವಾಮಾನ ಏರಿಳಿತ ಹಾಗೂ ಬದಲಾವಣೆ ಯನ್ನು ಅರಿಯಲು ಹಾಗೂ ತೋಟದ ಮೇಲಾಗುವ ಪರಿಣಾಮಗಳ ಅಧ್ಯಯನ ಸಾಧ್ಯವಾಗುತ್ತದೆ ಎಂದರು. ವಿಜ್ಞಾನಿಗಳ ತಂಡವು ರೈತರೊಂದಿಗೆ ಸಂವಾದ ನಡೆಸಿ, ರೋಗ ನಿಯಂತ್ರಣಕ್ಕೆ ಸಂಶೋಧನಾ ಸಂಸ್ಥೆಯು ಸಂಪೂರ್ಣ ಸಹಕಾರ ನೀಡಲಿದೆ ಎಂಬ ಭರವಸೆಯನ್ನು ನೀಡಿತು.

ತಡೆಗಟ್ಟಲು ಸಲಹೆ

ಮುಖ್ಯವಾಗಿ ಮಣ್ಣು ಪರೀಕ್ಷೆಯ ಆಧಾರದ ಮೇಲೆ ಪೋಷಕಾಂಶಗಳ ನಿರ್ವಹಣೆ, ಬೋರ್ಡೋ ದ್ರಾವಣ ಮತ್ತು ಶಿಲೀಂಧ್ರನಾಶಕಗಳ ಹಂತ ಹಂತದ ಸಿಂಪಡಣೆ, ರೋಗಗ್ರಸ್ತ ಎಲೆಗಳನ್ನು ನಾಶಪಡಿಸುವ ಮೂಲಕ ರೋಗ ಹರಡುವಿಕೆಯನ್ನು ತಡೆಗಟ್ಟುವುದು ಮುಖ್ಯ ಎಂದು ಈ ಸಂದರ್ಭ ಡಾ.ಹೆಬ್ಬಾರ್ ಹೇಳಿದರು.

ಈ ಸಂದರ್ಭದಲ್ಲಿ ಕಾಸರಗೋಡು ಸಿ.ಪಿ.ಸಿ.ಆರ್.ಐ. ಹಿರಿಯ ವಿಜ್ಞಾನಿ ಡಾ. ವಿನಾಯಕ ಹೆಗ್ಡೆ, ವಿಟ್ಲ ಕೇಂದ್ರದ ವಿಜ್ಞಾನಿಗಳಾದ ಡಾ.ಭವಿಷ್ಯ, ಡಾ.ಭವಪ್ರಕಾಶ್ ಪಾಂಡ್ಯ ಹಾಗೂ ಪ್ರಾಜೆಕ್ಟ್ ಸಹಾಯಕರಾದ ಅಖಿಲ ಹಾಗೂ ಹಿತಶ್ರೀ, ಕೃಷಿಕರಾದ ರಮೇಶ್ ದೇಲಂಪಾಡಿ, ಅರುಣ್ ಕುಮಾರ್ ಕಾಂಚೋಡು, ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ಮಹೇಶ್ ಪುಚ್ಚಪ್ಪಾಡಿ ಇದ್ದರು.

ನ.3ರಿಂದ 8ರ ವರೆಗೆ ಮಂಗಳೂರಿನಲ್ಲಿ

ಅಂತಾರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಟೂರ್ನಮೆಂಟ್

ಮಂಗಳೂರು: ಪ್ರಸಕ್ತ ವರ್ಷದ ನವೆಂಬರ್ 3ರಿಂದ 8ರ ತನಕ ಮಂಗಳೂರಿನಲ್ಲಿ ಯೋನೆಕ್ಸ್ ಸನ್ ರೈಸ್ ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್ ನ್ಯಾಶನಲ್ ಚಾಲೆಂಜ್–2026 ಬ್ಯಾಡ್ಮಿಂಟನ್ ಟೂರ್ನಮೆಂಟ್ ನಡೆಯಲಿದೆ ಎಂದು ಬ್ಯಾಡ್ಮಿಂಟನ್ ಅಸೋಸಿಯೇಶನ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಸಂಜಯ್ ಮಿಶ್ರಾ ತಿಳಿಸಿದ್ದಾರೆ.

ನಗರದ ಉರ್ವ ಇಂಡೋರ್ ಸ್ಟೇಡಿಯಂನಲ್ಲಿ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿರುವ ಬೇಸಗೆಯ ಎರಡು ತಿಂಗಳ ಯೋನೆಕ್ಸ್ ಸನ್‌ರೈಸ್ ಬ್ಯಾಡ್ಮಿಂಟನ್ ತರಬೇತಿ ಶಿಬಿರಕ್ಕೆ ಮಂಗಳವಾರ ಭೇಟಿ ನೀಡಿದ ಅವರು ಉರ್ವ ಬ್ಯಾಡ್ಮಿಂಟನ್ ಸ್ಟೇಡಿಯಂನ ವ್ಯವಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಂಗಳೂರಿನಲ್ಲಿ ಸತತ ಎರಡನೇ ಬಾರಿಗೆ ಅಂತರ್‌ರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನ ಆತಿಥ್ಯ ವಹಿಸಲು ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಅಸೋಸಿಯೇಶನ್‌ಗೆ ಅವಕಾಶ ನೀಡಿರುವುದಾಗಿ ಪ್ರಕಟಿಸಿದರು.

ಇಂದು ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಯುವಕರು ಹೆಚ್ಚು ಆಸಕ್ತಿಯಿಂದ ಬರುತ್ತಿದ್ದಾರೆ. ಅವರಿಗೆ ಅಗತ್ಯ ಸೌಕರ್ಯ ಕಲ್ಪಿಸುವುದು ಕೂಡ ಅಗತ್ಯವಾಗಿದೆ. ಮಂಗಳೂರಿನಲ್ಲಿ ಉತ್ತಮ ವ್ಯವಸ್ಥೆಯಿದೆ. ಇದರ ಪ್ರಯೋಜನವನ್ನು ಬ್ಯಾಡ್ಮಿಂಟನ್ ಆಟಗಾರರು ಪಡೆದುಕೊಳ್ಳಬೇಕು ಎಂದರು.

ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಅಸೋಸಿಯೇಶನ್‌ನ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ, ಉಪಾಧ್ಯಕ್ಷ ಅಶೋಕ್ ಹೆಗ್ಡೆ, ಕಾರ್ಯದರ್ಶಿ ಸುಪ್ರೀತ್ ಆಳ್ವ, ಕೋಶಾಧಿಕಾರಿ ಲಕ್ಷ್ಮೀ ಪಿ ಸುವರ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಎ.ಕೆ.ನಿಯಾಝ್, ರಿಯಾಝ್ ಅಝುರ್ ಹಸನ್, ಡಾ.ಶರತ್ ಕುಮಾರ್ ಕೆ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಮಿಶ್ರಾ ಶ್ಲಾಘನೆ

ಕಳೆದ ವರ್ಷದ ನವೆಂಬರ್‌ನಲ್ಲಿ ಮಂಗಳೂರಿನಲ್ಲಿ ದ.ಕ. ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಶನ್ ಅತ್ಯುತ್ತಮವಾಗಿ ಅಂತರ್‌ರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನ್ನು ಆಯೋಜಿಸಿತ್ತು ಎಂದು ಸಂಜಯ್ ಮಿಶ್ರಾ ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ ಆಡಿರುವ ಕರಾವಳಿಯ ಸ್ಥಳೀಯ ಆಟಗಾರರನ್ನು ಸಂಜಯ್ ಮಿಶ್ರಾ, ಅವರು ಅಭಿನಂದಿಸಿದರು.

ಮನೆಗಣತಿ: ಆನ್‌ಲೈನ್‌ನಲ್ಲಿ ನಮೂದಿಸಿ

ಮಂಗಳೂರು: ಭಾರತದ ರಿಜಿಸ್ಟ್ರಾರ್ ಮತ್ತು ಜನಗಣತಿ ಆಯುಕ್ತರ ಕಾರ್ಯಾಲಯ ಇವರ ಪರವಾಗಿ ಜನಗಣತಿ ಕಾಯ್ದೆ–1948ರ ಪ್ರಕಾರ ಮಂಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ ಭಾರತದ ಮೊದಲ ಡಿಜಿಟಲ್ ಜನಗಣತಿ ಕಾರ್ಯವನ್ನು 2 ಹಂತಗಳಲ್ಲಿ ನಡೆಸಿ ಗಣತಿ ಮಾಹಿತಿಯನ್ನು ಸಂಗ್ರಹಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಈ ಪೈಕಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಸ್ವಯಂ ಮನೆ ಗಣತಿ ಕಾರ್ಯವನ್ನು ಮಾಡಲು ಅವಕಾಶಗಳನ್ನು ನೀಡಲಾಗಿರುತ್ತದೆ. ಆದರಂತೆ ಕಾಯ್ದೆಯ ಪ್ರಕಾರ ತಮ್ಮ ಮಾಹಿತಿ ಹೆಸರು ಮತ್ತು ಗುರುತುಗಳ ಗೌಪ್ಯವಾಗಿ ಇರಿಸಲಾಗುತ್ತದೆ. ಯಾವುದೇ ತೆರಿಗೆ ಅಥವಾ ಪರಿಶೋಧನಾ ಉದ್ದೇಶಕ್ಕೆ ದತ್ತಾಂಶವನ್ನು ಬಳಸಿಕೊಳ್ಳುವುದಿಲ್ಲ. ಇದನ್ನು ಸುರಕ್ಷಿತವಾಗಿ ಇರಿಸಲಾಗುತ್ತದೆ.

ಈ ನಿಟ್ಟಿನಲ್ಲಿ ಏ. 15 ರವರೆಗೆ ನಿರ್ದೇಶನಾಲಯದಿಂದ ನೀಡಿರುವ ಸರಳವಾದ ಹಂತಗಳನ್ನು ಅನುಸರಿಸುವುದರ ಮೂಲಕ 15–20 ನಿಮಿಷಗಳಲ್ಲಿ ತಮ್ಮ ಮನೆಯ ಸ್ವಯಂ ಗಣತಿಯನ್ನು ಮಾಡಿಕೊಂಡು ವಿಶಿಷ್ಟ ಸ್ವಯಂ ಗಣತಿ ಗುರುತಿನ ಸಂಖ್ಯೆಯನ್ನು ಪಡೆಯಬಹುದಾಗಿರುತ್ತದೆ. ಪರಿಶೀಲನೆಗೆ ಬರುವ ಗಣತಿದಾರರಿಗೆ ಐಡಿಯನ್ನು ಒದಗಿಸಿ ಮನೆಗಣತಿ ಕಾರ್ಯವನ್ನು ಪೂರ್ಣಗೊಳಿಸಿಕೊಳ್ಳಬಹುದಾಗಿದೆ. ತಮ್ಮ ಸ್ವಯಂ ಮನೆ ಗಣತಿಯ ಕಾರ್ಯದ ನಿಖರತೆ ಮತ್ತು ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಗಣತಿದಾರರು ಮತ್ತು ಮೇಲ್ವಿಚಾರಕರ ಪರಿಶೀಲನೆಗೆ ಒಳಪಟ್ಟಿದೆ.

ಮಂಗಳೂರು ತಾಲೂಕಿನ ಎಲ್ಲಾ ಸಾರ್ವಜನಿಕ/ನಾಗರಿಕರು ವೆಬ್‌ಸೈಟ್ ಲಿಂಕ್ ಮೂಲಕ ತಮ್ಮ ಮನೆಯ ಗಣತಿಯನ್ನು ಮಾಡಿಕೊಳ್ಳಬಹುದು ಎಂದು ಮಂಗಳೂರು ತಾಲ್ಲೂಕು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪಾಜೆ ಗ್ರಾಮ ಪಂಚಾಯತ್‌ಗೆ 3ನೇ ಬಾರಿ ಗಾಂಧಿಗ್ರಾಮ ಪುರಸ್ಕಾರ

ಸುಳ್ಯ: ಕರ್ನಾಟಕ ರಾಜ್ಯ ಸರಕಾರ ಗ್ರಾಮ ಪಂಚಾಯತ್‌ಗಳ ಸಮಗ್ರವಾಗಿ ತನಿಖೆಗೊಳಪಡಿಸಿ ಮಾನದಂಡಗಳಿಗೆ ಅನುಗುಣವಾಗಿ ಎಲ್ಲಾ ವಿಧದಲ್ಲಿ ಅಂಕಗಳನ್ನು ನೀಡಿದ ಬಳಿಕ ಆಯ್ಕೆಯಲ್ಲಿ ಮೊದಲ ಸ್ಥಾನವನ್ನು ತಾಲೂಕಿನಲ್ಲಿ ಪಡೆದು ಮೂರನೇ ಬಾರಿಗೆ ಗಾಂಧಿಗ್ರಾಮ ಪ್ರಶಸ್ತಿಗೆ ಸಂಪಾಜೆ ಪಂಚಾಯತ್ ಆಯ್ಕೆಯಾಗಿದೆ.

ಸುಳ್ಯ ತಾಲೂಕಿನ ಸಂಪಾಜೆ ಗ್ರಾಮ ಪಂಚಾಯತ್ 2013 ರಲ್ಲಿ ಗಾಂಧಿ ಗ್ರಾಮ ಪ್ರಥಮ ವರ್ಷದ ಸಂದರ್ಭದಲ್ಲಿ ಆಗಿನ ಪಂಚಾಯತ್ ಅಧ್ಯಕ್ಷ ಜಿ.ಕೆ. ಹಮೀದ್ ಗೂನಡ್ಕ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಕಾಂತಪ್ಪ ನೇತೃತ್ವದಲ್ಲಿ ಪಡೆದರೆ ಎರಡನೇ ಬಾರಿಗೆ 2020–21 ರಲ್ಲಿ ಅಧ್ಯಕ್ಷ ಜಿ.ಕೆ. ಹಮೀದ್ ಗೂನಡ್ಕ ಹಾಗೂ ಅಭಿವೃದ್ಧಿ ಅಧಿಕಾರಿ ಸರಿತಾ ಡಿಸೋಜ ಪ್ರಶಸ್ತಿ ಸ್ವೀಕರಿಸಿದ್ದು, ಇದೀಗ ಮೂರನೇ ಬಾರಿಗೆ ಗಾಂಧಿಗ್ರಾಮ ಪುರಸ್ಕಾರಕ್ಕೆ ಸಂಪಾಜೆ ಗ್ರಾಮ ಪಂಚಾಯತ್ ಆಯ್ಕೆಯಾಗಿದೆ. ಈಗಾಗಲೇ ರೂ. 4 ಲಕ್ಷ ಪ್ರೋತ್ಸಾಹ ಧನ ಬಿಡುಗಡೆಯಾಗಿದ್ದು ಪ್ರಸ್ತುತ 2024 –25 ನೇ ಸಾಲಿನಲ್ಲಿ ಸುಮತಿ ಶಕ್ತಿವೇಲು ಅಧ್ಯಕ್ಷತೆಯಲ್ಲಿ ಎಸ್.ಕೆ. ಹನೀಫ್ ಸಂಪಾಜೆ ಉಪಾಧ್ಯಕ್ಷರಾಗಿದ್ದು, ಸರಿತಾ ಡಿಸೋಜ ಅಭಿವೃದ್ಧಿ ಅಧಿಕಾರಿಯಾಗಿ ಸದಸ್ಯರಾಗಿ ಜಿ.ಕೆ ಹಮೀದ್ ಗೂನಡ್ಕ, ಅನುಪಮ, ಸೋಮಶೇಖರ್ ಕೆ. ಆರ್, ಜಗದೀಶ್ ರೈ, ಸುಂದರಿ ಮುಂಡಡ್ಕ, ಅಬೂಸಾಲಿ, ವಿಜಯ ಕುಮಾರ್, ಶೌಹಾದ್, ವಿಮಲಾ ಪ್ರಸಾದ್, ರಜನಿ, ಶರತ್, ಲಿಸ್ಸಿ ಮೊನಾಲಿಸಾ, ಸುಶೀಲ ಕೈಪಡ್ಕ ಹಾಗೂ ಕಾರ್ಯದರ್ಶಿ ತಿರುಮಲೇಶ್ವರ, ಸಿಬ್ಬಂದಿ ಗೋಪಮ್ಮ, ಭರತ್, ಮಧುರಾ, ನಸೀಮಾ, ಸವಿತಾ, ಹರ್ಷಿತ್, ಬೋಜಪ್ಪ ಕರ್ತವ್ಯ ನಿರ್ವಹಿಸುತ್ತಿರುವ ಸಂಪಾಜೆ ಗ್ರಾಮ ಪಂಚಾಯತ್ ಅತ್ಯುತ್ತಮವಾಗಿ ಕೇಂದ್ರ ಮತ್ತು ರಾಜ್ಯ ಸರಕಾರದ ಸವಲತ್ತುಗಳನ್ನು ಜನರಿಗೆ ತಲುಪಿಸುವ ಜೊತೆಗೆ ಜನರ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ಬೀದಿ ದೀಪ, ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಉತ್ತಮ ಪಂಚಾಯತ್ ಆಗಿ ರೂಪುಗೊಂಡಿದೆ.



ಹಿರಿಮೆಗೆ ಮತ್ತೊಂದು ಗರಿ

ಸಂಜೀವಿನಿ ಒಕ್ಕೂಟದ ಮೂಲಕ ಕಸ ಸಂಗ್ರಹ ಮಾಡುವ ಮೂಲಕ ಘಟಕಕ್ಕೆ ರವಾನೆ ಗ್ರಾಮದಲ್ಲಿ ಕಸ ವಿಲೇವಾರಿ ಘಟಕ, ಕಸ ಸಂಗ್ರಹಿಸಲು ವಾಹನದ ವ್ಯವಸ್ಥೆ, ಗ್ರಂಥಾಲಯ, ಸರಕಾರಿ ಶಾಲೆಗಳಿಗೆ ಗ್ರಂಥಾಲಯ, ಗ್ರಾಮ ವ್ಯಾಪ್ತಿಯಲ್ಲಿ ಸಿಸಿ ಕ್ಯಾಮರ ಅಳವಡಿಕೆ, ಸಾರ್ವಜನಿಕ ಶೌಚಾಲಯ, ಮಾರುಕಟ್ಟೆ, ಸೋಲಾರ್ ಹೈಮಾಸ್ಟ್ ದೀಪ, ಅಂಗನವಾಡಿ ಕೇಂದ್ರ ಹಾಗೂ ಸರಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆಗಳೊಂದಿಗೆ ಸಮಗ್ರವಾಗಿ ಗ್ರಾಮದ ಅಭಿವೃದ್ಧಿ ಮಾಡಲಾಗಿದ್ದು, ಪಂಚಾಯತ್ ಆದಾಯಕ್ಕೆ ವಾಣಿಜ್ಯ ಕಟ್ಟಡ, ಮಾರುಕಟ್ಟೆ ವ್ಯವಸ್ಥೆಯೊಂದಿಗೆ ಸಮಗ್ರವಾಗಿ ಅಭಿವೃದ್ಧಿ ದೂರದೃಷ್ಟಿ ಯೋಜನೆಯ ಮೂಲಕ 3ನೇ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರ ಪಡೆಯುವ ಮೂಲಕ ಗಡಿ ಗ್ರಾಮವು ತನ್ನ ಹಿರಿಮೆಗೆ ಮತ್ತೊಂದು ಗರಿ ಪಡೆದುಕೊಂಡಿದೆ.

ಕದ್ರಿ, ಕೈಬಟ್ಟಲು, ಕದ್ರಿ, ದೇವಸ್ಥಾನ ರಸ್ತೆಯಲ್ಲಿ ನೀರು ಪೂರೈಕೆ ವ್ಯತ್ಯಯ | ಒಳಚರಂಡಿ ಸಮಸ್ಯೆ ಪರಿಹಾರ

ನೀರು ಒಸರುವ ಕದ್ರಿ ಪ್ರದೇಶದಲ್ಲಿ ನೀರಿನ ಕೊರತೆ

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಲ್‌ಬಾಗ್

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಕದ್ರಿ ಸುತ್ತಲಿನ ಪರಿಸರ ನೀರಿನ ಒಸರು ಇದ್ದ ಜಾಗ. ಆದರೆ, ಈಗ ಈ ಹಿಂದೆ ಗದ್ದೆಗಳಿದ್ದ ಜಾಗದಲ್ಲಿ ಮನೆ, ಫ್ಲ್ಯಾಟ್‌ಗಳು ಎದ್ದು ನಿಂತಿದ್ದು, ಇಲ್ಲೂ ನೀರಿನ ಕೊರತೆ ಕಾಣಿಸಿಕೊಂಡಿದೆ.

ಕದ್ರಿ ದಕ್ಷಿಣ ವಾರ್ಡ್‌ನ ಕದ್ರಿ ಕೈಬಟ್ಟಲು ಸುತ್ತಲಿನ ಪ್ರದೇಶದಲ್ಲಿ ನೀರಿನ ಸಮಸ್ಯೆ ಇದೆ. ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಮನೆಗಳು, ಕದ್ರಿ ದೇವಸ್ಥಾನ ಸುತ್ತಲಿನ ಪ್ರದೇಶದಲ್ಲಿ ಎದ್ದು ನಿಂತಿರುವ ಅಪಾರ್ಟ್‌ಮೆಂಟ್‌ಗಳು, ಜನವಸತಿ ಪ್ರದೇಶಗಳ ಹೆಚ್ಚಳದಿಂದ ಇಲ್ಲೂ ಕೆಲವೊಮ್ಮೆ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿದೆ.

ಕರಂಗಲಪಾಡಿ ಮಾರುಕಟ್ಟೆಯಿಂದ ಎಡಬದಿಗೆ ಬಂಟ್ಸ್‌ಹಾಸ್ಟೆಲ್, ಸಿವಿ ನಾಯಕ್ ಹಾಲ್, ಸಿಟಿ ಆಸ್ಪತ್ರೆ, ಮಲ್ಲಿಕಟ್ಟೆ, ನಂತೂರು ಜಂಕ್ಷನ್‌ನಿಂದ ಕದ್ರಿ ಜೋಗಿ ಮಠದವರೆಗೆ, ಕದ್ರಿ ಕೈಬಟ್ಟಲು, ಕದ್ರಿ ದೇವಸ್ಥಾನ ರಸ್ತೆ ಪ್ರದೇಶಗಳಲ್ಲಿ ವ್ಯಾಪಿಸಿರುವ ಕದ್ರಿ ದಕ್ಷಿಣ ವಾರ್ಡ್‌ನಲ್ಲಿ ಒಂದೆರಡು ಕಡೆ ನೀರಿನ ಸಮಸ್ಯೆಯಿದೆ.

ಮುಖ್ಯವಾಗಿ ಕದ್ರಿ ಕೈಬಟ್ಟಲು ಐದು, ಆರು, ಏಳನೇ ಕ್ರಾಸ್, ಕದ್ರಿ ದೇವಸ್ಥಾನ ರಸ್ತೆ, ನಂತೂರು ಕಾಲನಿಯಲ್ಲಿ ಆಗಾಗ್ಗೆ ನೀರು ಸರಬರಾಜು ಸಮರ್ಪಕವಾಗಿ ಆಗುತ್ತಿಲ್ಲ. ಈ ವಾರ್ಡ್‌ನ ನಂತೂರು, ಜೋಗಿ ಮಠ ಪರಿಸರಕ್ಕೆ ಕದ್ರಿ ಪದವು ಭದ್ರಕಾಳಿ ದೇವಸ್ಥಾನ ಬಳಿಯ ಟ್ಯಾಂಕ್‌ನಿಂದ ನೀರು ಬರುತ್ತಿದೆ. ಉಳಿದ ಎಲ್ಲ ಪ್ರದೇಶಗಳಿಗೆ ಬೆಂದೂರು ಪಂಪ್‌ಹೌಸ್‌ನಿಂದ ನೀರು ಪೂರೈಕೆ ಆಗುತ್ತಿದೆ.

ಕದ್ರಿ ಕೈಬಟ್ಟಲು ಐದು, ಆರು, ಏಳನೇ ಕ್ರಾಸ್‌ನಲ್ಲಿ ನೀರಿನ ಪ್ರೆಶರ್ ಸಮಸ್ಯೆಯಿಂದ ಅಗತ್ಯ ಇರುವಷ್ಟು ನೀರು ಸರಬರಾಜು ಆಗುತ್ತಿಲ್ಲ. ಇಲ್ಲಿನ ಎತ್ತರದ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ ಎಂಬ ದೂರುಗಳಿವೆ. ನೀರು ಪೂರೈಕೆಯಲ್ಲಿ ಪ್ರೆಶರ್ ಕೊರತೆಯಿಂದ ಕದ್ರಿ ದೇವಸ್ಥಾನ ಸುತ್ತಲಿನ ಫ್ಲ್ಯಾಟ್‌ಗಳ ನೀರಿನ ತೊಟ್ಟಿಗಳು ತುಂಬುತ್ತಿಲ್ಲ. ನೀರಿನ ತೊಟ್ಟಿಗಳು ತುಂಬುವ ಮೊದಲೇ ನೀರು ಪೂರೈಕೆ ಸ್ಥಗಿತಗೊಳ್ಳುತ್ತದೆ ಎನ್ನುತ್ತಾರೆ ಸ್ಥಳೀಯರು.

ನಂತೂರು ಕಾಲನಿ ಎತ್ತರದ ಪ್ರದೇಶವಾಗಿರುವ ಕಾರಣ ಇಲ್ಲಿಗೆ ನೀರು ತಲುಪುವಲ್ಲಿ ಸಮಸ್ಯೆ ಆಗುತ್ತಿದೆ. ಕದ್ರಿ ಕೈಬಟ್ಟಲು ಪ್ರದೇಶಕ್ಕೆ ನೀರು ಪೂರೈಕೆಗೊಂಡ ಬಳಿಕ ಪೈಪ್‌ಲೈನ್‌ನಲ್ಲಿ ನಂತೂರು ಕಾಲನಿ ಪ್ರದೇಶಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಕದ್ರಿ ಕೈಬಟ್ಟಲು ಪ್ರದೇಶಕ್ಕೇ ಪ್ರೆಶರ್ ಕೊರತೆಯಿಂದ ನೀರಿನ ಸಮಸ್ಯೆ ಆಗುತ್ತಿದೆ. ಇನ್ನು, ಅದಕ್ಕಿಂತಲೂ ಎತ್ತರದ ನಂತೂರಿಗೆ ನೀರು ಬರುವುದು ಕಷ್ಟಸಾಧ್ಯ ಎನ್ನುವುದು ಸ್ಥಳೀಯರ ಅಭಿಪ್ರಾಯ.

ಮುಂದಿನ ವಾರ್ಡ್ -34 ಶಿವಭಾಗ್ ಪರಿಸರದ ಸ್ಥಿತಿಗತಿ



ಸಿಟಿ ಆಸ್ಪತ್ರೆ ಬಳಿ ಜಲಸಿರಿ ಕಾಮಗಾರಿ ವೇಳೆ ರಸ್ತೆ ಕೆಳಭಾಗದಲ್ಲಿರುವ ತೋಡು ಕುಸಿದಿದೆ



ವಾರ್ಡ್ ನಂಬರ್ 33 ಕದ್ರಿ ದಕ್ಷಿಣ

ಕದ್ರಿ ಮೈದಾನದಿಂದ ಕದ್ರಿ ಕಂಬಳ ಸಂಪರ್ಕಿಸುವ ರಸ್ತೆ ಗುಂಡಿಗಳಿಂದ ಕೂಡಿದ್ದು, ಶೀಘ್ರ ಅಭಿವೃದ್ಧಿಗೊಳ್ಳಲಿದೆ.

ಟ್ಯಾಂಕರ್ ಬರುತ್ತಿಲ್ಲ

ಕದ್ರಿ ದಕ್ಷಿಣ ವಾರ್ಡ್‌ನಲ್ಲಿ ನೀರಿನ ಕೊರತೆ ಉಂಟಾದಾಗ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ. ಆದರೆ, ಮನಪಾ ಟ್ಯಾಂಕರ್‌ಗಳ ಸಂಖ್ಯೆ ಕಡಿಮೆ ಇರುವುದರಿಂದ ಪ್ರತಿದಿನ ನೀರಿನ ಟ್ಯಾಂಕರ್ ಬರುತ್ತಿಲ್ಲ. ಫ್ಲ್ಯಾಟ್ ನಿವಾಸಿಗಳು, ಶ್ರೀಮಂತರು ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಸರಕಾರಿ ಬಾವಿ, ಬೋರ್‌ವೆಲ್‌ಗಳು ಇಲ್ಲ.


ಗಾಣದಕೊಟ್ಯದಲ್ಲಿ ಒಳಚರಂಡಿ ಇಲ್ಲ

ಕದ್ರಿ ಗಾಣದಕೊಟ್ಯ ಪ್ರದೇಶಕ್ಕೆ ಒಳಚರಂಡಿ ಸಂಪರ್ಕವೇ ಆಗಿಲ್ಲ. ಇಲ್ಲಿ 20 ಮನೆಗಳಿವೆ. ಒಳಚರಂಡಿ ಪೈಪ್‌ಲೈನ್ ಅಳವಡಿಸಲು ಅವಕಾಶ ನೀಡುವಂತೆ ಖಾಸಗಿ ಜಾಗವೊಂದರ ಮಾಲಕರಲ್ಲಿ ವಿನಂತಿ ಮಾಡಲಾಗಿದೆ. ಕದ್ರಿ ದೋಬಿ ಟ್ಯಾಂಕ್ ಬಳಿ ಡ್ರೈನೇಜ್ ಇರಲಿಲ್ಲ. ಪ್ರಸ್ತುತ ಅಲ್ಲಿಗೆ ಒಳಚರಂಡಿ ಸಂಪರ್ಕ ಕಲ್ಪಿಸಲಾಗಿದೆ. ನಂತೂರು ಕೊಚ್ಚಿನ್ ಬೇಕರಿ ಸಮೀಪವೂ ಹಿಂದೆ ಡ್ರೈನೇಜ್ ಇರಲಿಲ್ಲ. ಈಗ ಡ್ರೈನೇಜ್ ಕಾಮಗಾರಿ ನಡೆಸಲಾಗಿದೆ ಎನ್ನುತ್ತಾರೆ ನಿಕಟಪೂರ್ವ ಕಾರ್ಪೋರೇಟರ್ ಕದ್ರಿ ಮನೋಹರ ಶೆಟ್ಟಿ.



ಕದ್ರಿ ದಕ್ಷಿಣ ವಾರ್ಡ್‌ನ ಕದ್ರಿ ಕೈಬಟ್ಟಲು ಪರಿಸರದಲ್ಲಿ ನೀರಿನ ಸಮಸ್ಯೆಯಿದೆ. ನಂತೂರು, ಕದ್ರಿ ಕೈಬಟ್ಟಲು ಪ್ರದೇಶದಲ್ಲಿ ಕೊಳವೆಬಾವಿ ಕೊರೆಯಿಸುವಂತೆ ಮಂಗಳೂರು ಮಹಾನಗರ ಪಾಲಿಕೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ವಾರ್ಡ್‌ನಲ್ಲಿ ಕದ್ರಿ ಕೈಬಟ್ಟಲು ಪ್ರದೇಶದಿಂದ ಕದ್ರಿ ರಾಕ್‌ವರೆಗೆ ರಾಜಕಾಲುವೆಯಿದ್ದು, ಈ ಬಾರಿ ಹೂಳು ತೆಗೆದಿಲ್ಲ. ಮುಂದಿನ ಮೂರ್ನಾಲ್ಕು ದಿನದೊಳಗೆ ರಾಜಕಾಲುವೆ ಕ್ಲೀನ್ ಮಾಡಿಸುವುದಾಗಿ ಮನಪಾ ಅಧಿಕಾರಿಗಳು ತಿಳಿಸಿದ್ದಾರೆ. ಸಿಟಿ ಆಸ್ಪತ್ರೆಯಿಂದ ಕದ್ರಿ ಮೈದಾನದವರೆಗಿನ ರಸ್ತೆ 50 ಲಕ್ಷ ರೂ.ವೆಚ್ಚದಲ್ಲಿ ಅಭಿವೃದ್ಧಿಗೊಳ್ಳಲಿದೆ. ಸಿಟಿ ಆಸ್ಪತ್ರೆ ಬಳಿ ಜಲಸಿರಿ ಕಾಮಗಾರಿ ವೇಳೆ ರಸ್ತೆ ಕೆಳಭಾಗದಲ್ಲಿರುವ ತೋಡು ಕುಸಿದಿದೆ. ಇಲ್ಲಿ ಇನ್ನಷ್ಟೇ ಕಾಮಗಾರಿ ಆಗಬೇಕಿದೆ. ಕದ್ರಿ ಮೈದಾನದಿಂದ ಕದ್ರಿ ಕಂಬಳವರೆಗಿನ ರಸ್ತೆ ಅಭಿವೃದ್ಧಿಗೆ 1 ಕೋಟಿ ರೂ. ವೆಚ್ಚದ ಟೆಂಡರ್ ಆಗಿದೆ. ಜಲಸಿರಿ ಯೋಜನೆ ಹಾಗೂ ಡ್ರೈನೇಜ್ ಕೆಲಸದ ಹಿನ್ನೆಲೆಯಲ್ಲಿ ಈ ಕಾಮಗಾರಿ ವಿಳಂಬವಾಗಿದೆ. ಮುಂದಿನ ವಾರ ಇಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಾರಂಭಗೊಳ್ಳಲಿದೆ.

■ ಕದ್ರಿ ಮನೋಹರ ಶೆಟ್ಟಿ,
ಕದ್ರಿ ದಕ್ಷಿಣ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್



ಕದ್ರಿ ಕೈಬಟ್ಟಲು ಪರಿಸರದಲ್ಲಿ ನೀರಿನ ಸಮಸ್ಯೆಯಿದೆ. ಮನಪಾ ವತಿಯಿಂದ ಪೂರೈಕೆಯಾಗುವ ನೀರಿನ ಪೈಪ್‌ಲೈನ್‌ನಲ್ಲಿ ಪ್ರೆಶರ್ ಇಲ್ಲದಿರುವುದರಿಂದ ಇಲ್ಲಿ ನೀರಿನ ಕೊರತೆ ಉಂಟಾಗುತ್ತಿದೆ. ಕದ್ರಿ ಪ್ರದೇಶಕ್ಕೆ ನೀರಿನ ಪೂರೈಕೆ ಅವಧಿ ಹೆಚ್ಚಿಸಿ, ಉತ್ತಮ ಪ್ರೆಶರ್‌ನೊಂದಿಗೆ ನೀರು ಪೂರೈಕೆಗೆ ಮನಪಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

■ ಪ್ರತಾಪಚಂದ್ರ ಶೆಟ್ಟಿ,
ಕದ್ರಿ ಕೈಬಟ್ಟಲು ನಿವಾಸಿ

ರಾಜ್ಯದ ಹಲವೆಡೆ ಲೋಕಾಯುಕ್ತ ದಾಳಿ

ಬೆಂಗಳೂರು/ಮೈಸೂರು: ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ರಾಜ್ಯದ ಹಲವೆಡೆ ಏಕಕಾಲಕ್ಕೆ ದಾಳಿ ನಡೆಸಿದ್ದಾರೆ.

ಮಂಡ್ಯ, ಮೈಸೂರು, ಕೊಡಗು, ಮಂಗಳೂರು, ಬೀದರ್, ಬೆಳಗಾವಿ, ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ ಸೇರಿದಂತೆ ವಿವಿಧ ಜಿಲ್ಲೆ ಹಾಗೂ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕನಿಷ್ಠ ಎಂಟು ಅಧಿಕಾರಿಗಳ ಮನೆ ಮತ್ತು ಕಚೇರಿಗಳ ಮೇಲೆ ಮಂಗಳವಾರ ಬೆಳಗ್ಗೆ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಕೊಡಗು ಜಿಲ್ಲೆಯ ಹಾರಂಗಿ ಅಣೆಕಟ್ಟು ಉಪವಿಭಾಗದಲ್ಲಿ ನಿಯೋಜಿಸಲಾದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿ ಯರ್ (ಎಇಇ) ಐ ಕೆ ಪುಟ್ಟಸ್ವಾಮಿ ಅವರ ನಿವಾಸ ಹಾಗೂ ಕಚೇರಿ ಮೇಲೆ ದಾಳಿ ನಡೆಸಲಾಗಿದೆ. ಚಿತ್ರದುರ್ಗ ನಿರ್ಮಿತಿ ಕೇಂದ್ರದ ಅಸಿಸ್ಟೆಂಟ್ ಅಕೌಂಟೆಂಟ್ ಸುಶೀಲಮ್ಮ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಸುಶೀಲಮ್ಮರ ಮೆದೇಹಳ್ಳಿ ರಸ್ತೆ ನಿವಾಸ ಹಾಗೂ ಹಿರಿಯೂರಿನ ಯಾರದಕಟ್ಟೆ ತೋಟದ ಮನೆ ಮೇಲೆ ದಾಳಿ ನಡೆಸಿದ್ದಾರೆ.

ಅಕ್ರಮ ಆಸ್ತಿ ಗಳಿಕೆ ಹಿನ್ನೆಲೆಯಲ್ಲಿ ಲೋಕಾಯುಕ್ತ ವಾಸುದೇವ್ ರಾಮ್ ಹಾಗೂ ಮೃತ್ಯುಂಜಯ ನೇತೃತ್ವದಲ್ಲಿ ಅಸಿಸ್ಟೆಂಟ್ ಅಕೌಂಟೆಂಟ್ ಮನೆ ಮೇಲೆ ದಾಳಿ ನಡೆಸಿ ದಾಖಲೆ ಪರಿಶೀಲಿಸುತ್ತಿದ್ದಾರೆ. ಬಳ್ಳಾರಿಯಲ್ಲೂ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಮೀನುಗಾರಿಕ ಇಲಾಖೆ ಸಹಾಯಕ ನಿರ್ದೇಶಕ ಶಿವಣ್ಣ ಮನೆ ಮತ್ತು ಕಚೇರಿ ಮೇಲೆ ದಾಳಿ ಮಾಡಲಾಗಿದೆ. ಬಳ್ಳಾರಿ ನಗರದ ಸಿದ್ಧಾರ್ಥ್ ನಗರದಲ್ಲಿರುವ ಮನೆ ಸೇರಿದಂತೆ ಒಟ್ಟು ನಾಲ್ಕು ಕಡೆ ದಾಳಿ ನಡೆದಿದೆ. ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆ ಬಗ್ಗೆ ಆರೋಪ ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ದಾಳಿ ಮಾಡಲಾಗಿದೆ. ಶಿವಣ್ಣ ನಿವಾಸದಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ಮಾಡ್ತಿದ್ದಾರೆ.

ಶಿವಮೊಗ್ಗದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶೋಭಾ ಅವರ ಕಚೇರಿ ಹಾಗೂ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳ ದಾಳಿ ನಡೆದಿದೆ. ಶಿಕಾರಿಪುರ ಬಳಿ ತರಲಘಟ್ಟ ನಿವಾಸ, ಸಾಗರ ತಾಲೂಕಿನ ಆನಂದಪುರ ಬಳಿ ಆಚಾಪುರ ಶಾಲೆ–ಕಚೇರಿ ಹಾಗೂ ಚಾಲುಕ್ಯ ನಗರದ ರಾಘವೇಂದ್ರ ಅವರ ನಿವಾಸ ಸೇರಿ 3–4 ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ.

ಇನ್ನು ಬೆಳಗಾವಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಎಇಇ ಅಜಯ್ ಸಿಂಗ್ ರಜಪೂತ್ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳ ದಾಳಿ ನಡೆಸಿದ್ದಾರೆ. ಬೆಳಗಾವಿ ಆಂಜನೇಯ ನಗರ, ಅಥಣಿ ಹಾಗೂ ಹುಕ್ಕೇರಿ ಸೇರಿದಂತೆ ಮೂರು ಸ್ಥಳಗಳಲ್ಲಿಯೂ ಏಕಕಾಲದಲ್ಲಿ ದಾಳಿ ನಡೆದಿದೆ. ಲೋಕಾಯುಕ್ತ ಪೊಲೀಸರು ಮಂಡ್ಯ ಲೋಕೋಪಯೋಗಿ ಇಲಾಖೆಯ ಎಇಇ ರೇವಣ್ಣ ವಿರುದ್ಧ ಆದಾಯಕ್ಕೂ ಮೀರಿ ಆಸ್ತಿ ಗಳಿಕೆ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ದಾಳಿ ನಡೆಸಿದ್ದಾರೆ.

ಕೋಟ್ಯಂತರ ಮೌಲ್ಯದ ಆಸ್ತಿ ಪತ್ತೆ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಆರೋಪ ಸಂಬಂಧ ಲೋಕಾಯುಕ್ತ ಪೊಲೀಸರು ಏಕಕಾಲದಲ್ಲಿ ಮಂಗಳೂರಿನ ಪ್ರಾದೇಶಿಕ ಉಪ ಡ್ರಗ್ ಕಂಟ್ರೋಲರ್ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಡ್ರಗ್ ಕಂಟ್ರೋಲರ್ ಬಾಬು ಬಿ.ಎನ್ ಅವರ ಮನೆ ಹಾಗೂ ವಿವಿಧ ಸ್ಥಳಗಳಲ್ಲಿ ದಾಳಿ ನಡೆಸಿದ್ದು ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಪತ್ತೆಯಾಗಿದೆ. ಪೊಲೀಸ್ ವರಿಷ್ಠಾಧಿಕಾರಿ ಬಿ.ಪಿ. ದಿನೇಶ್ ಕುಮಾರ್ ಅವರ ಮೇಲ್ವಿಚಾರಣೆಯಲ್ಲಿ, ಆರು ಲೋಕಾಯುಕ್ತ ತಂಡಗಳು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪಟ್ಟಣ, ಬೆಂಗಳೂರು ನಗರ ಮತ್ತು ಮಂಗಳೂರಿನಲ್ಲಿರುವ ಆರೋಪಿಗಳಿಗೆ ಸಂಬಂಧಿಸಿದ ಆಸ್ತಿಗಳ ಮೇಲೆ ದಾಳಿ ನಡೆಸಿವೆ. ದಾಳಿಯಲ್ಲಿ ಬಾಬು ಬಿ.ಎನ್. ಅವರಿಗೆ ಸಂಬಂಧಿಸಿದ ವಸತಿ ಮನೆಗಳು, ವಾಣಿಜ್ಯ ಸಂಸ್ಥೆಗಳು, ಫ್ಲಾಟ್‌ಗಳು ಮತ್ತು ಕಚೇರಿಗಳು ಸೇರಿವೆ.ಶೋಧ ವೇಳೆ ಆದಾಯಕ್ಕಿಂತ ಹೆಚ್ಚುವರಿಯಾಗಿ ಸುಮಾರು 3.37 ಕೋಟಿ ರೂ. ಮೌಲ್ಯದ ಚರಾಸ್ತಿ ಮತ್ತು ಸ್ಥಿರ ಆಸ್ತಿಗಳನ್ನು ಪತ್ತೆಹಚ್ಚಿದ್ದಾರೆ ಎಂದು ಹೇಳಲಾಗುತ್ತದೆ. ಬೆಂಗಳೂರಿನ ನಿವಾಸದಲ್ಲಿ, ಚಿನ್ನ ಮತ್ತು ಬೆಳ್ಳಿ ಆಭರಣಗಳ ಜೊತೆಗೆ 23.64 ಲಕ್ಷ ರೂ. ನಗದು ಸಹ ಪತ್ತೆಯಾಗಿದೆ. ಭ್ರಷ್ಟಾಚಾರ ತಡೆ ಕಾಯ್ದೆಯ ವಿವಿಧ ನಿಬಂಧನೆಗಳ ಅಡಿಯಲ್ಲಿ ಲೋಕಾಯುಕ್ತ ಪೊಲೀಸರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಗ್ಯಾರಂಟಿ ತಡೆಗೆ ಪ್ರಯತ್ನ: ಡಿಸಿಎಂ

ದಾವಣಗೆರೆ: ನಮ್ಮ ಗ್ಯಾರಂಟಿ ಕಾರ್ಯಕ್ರಮಗಳನ್ನು ಟೀಕೆ ಮಾಡಿದವರೆ ಇಂದು ಚುನಾವಣೆಗಳಲ್ಲಿ ಅವುಗಳನ್ನು ಅಳವಡಿಸಿಕೊಂಡಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ನಡೆಯುತ್ತಿರುವ ವೇಳೆಯಲ್ಲಿ ಗ್ಯಾರಂಟಿಗಳಿಗೆ ಹಣ ಬಿಡುಗಡೆ ಮಾಡದಂತೆ ಚುನಾವಣಾ ಆಯೋಗಕ್ಕೆ ಬಿಜೆಪಿ ಪತ್ರ ಬರೆದಿದೆ, ದೂರು ನೀಡಿದೆ. ಇದರೊಂದಿಗೆ ಬಿಜೆಪಿ ಮುಖವಾಡ ಕಳಚಿದೆ ಎಂದರು. ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲು ದೊಡ್ಡ ಷಡ್ಯಂತ್ರ ಮಾಡುತ್ತಿದ್ದಾರೆ. ನಾವು ಕಾನೂನಿನಡಿ ಕೆಲಸ ಮಾಡುತ್ತಿದ್ದೇವೆ. ಕಳೆದ ತಿಂಗಳಿನದ್ದು, ಈ ತಿಂಗಳಿನಲ್ಲಿ ಹಣ ನೀಡಬಾರದೆಂದುಕೋರ್ಟಿಗೆ ಹಾಕಿದ್ದು ಖಂಡನೀಯ. ಇದು ರೆಗ್ಯುಲರ್ ಸ್ಕೀಂ ಆಗಿದ್ದು, ಎಲ್ಲರಿಗೂ ಹಣ ತಲುಪಿದೆ. ಜನರಲ್ಲಿ ಆತಂಕ ಮೂಡಿಸಿ, ಭಯದ ವಾತಾವರಣ ಉಂಟು ಮಾಡುವ ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದರು. ಚುನಾವಣಾ ಆಯೋಗಕ್ಕೆ ಬಿಜೆಪಿ ನೀಡಿದ ದೂರಿನ ಪ್ರತಿಯನ್ನು ಬಿಡುಗಡೆ ಮಾಡಿದ ಡಿಸಿಎಂ ಡಿ.ಕೆ.ಶಿವಕುಮಾರ, ಚುನಾವಣಾ ಆಯೋಗಕ್ಕೆ ನಾವು ಉತ್ತರ ಕೊಟ್ಟಿದ್ದೇವೆ. ಕೋರ್ಟಿಗೂ ಹಾಕಿದ್ದರು, ಅಲ್ಲಿ ನೋಟೀಸ್ ಆರ್ಡರ್ ಮಾಡಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರುವುದಿಲ್ಲ. ಇಲ್ಲಿ ಕೆಲಸವೂ ನಿಲ್ಲುವುದಿಲ್ಲ. 58 ಸಾವಿರ ಫಲಾನುಭವಿಗಳ ಕುಟುಬಗಳು ಗ್ಯಾರಂಟಿಗೆ ಅಡ್ಡಿ ಪಡಿಸುತ್ತಿರುವ ಬಿಜೆಪಿಗೆ ಉಪ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಬೇಕು ಎಂದು ಕರೆ ನೀಡಿದರು. ಸುಮಾರು 1 ಕೋಟಿಗೂ ಅಧಿಕ ಫಲಾನುಭವಿಗಳು ಬಿಜೆಪಿ ವರ್ತನೆಯನ್ನು ಅರಿಯಬೇಕು. ಬಿಜೆಪಿಯ ನಿಜವಾದ ಮುಖವಾಡ ಜನರಿಗೆ ತಿಳಿಸಬೇಕು. ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣದಲ್ಲಿ ಅತಿ ಹೆಚ್ಚು ಮತದಾನ ಮಾಡುವ ಮೂಲಕ ಬಿಜೆಪಿ ತಕ್ಕ ಪಾಠ ಕಲಿಸಬೇಕು. ಇಲ್ಲಿ ದಕ್ಷಿಣದಲ್ಲಿ ಸಮರ್ಥ ಶಾಮನೂರು ಹಾಗೂ ಬಾಗಲಕೋಟೆಯಲ್ಲಿ ಉಮೇಶ ಮೇಟಿಗೆ ಗೆಲ್ಲಿಸಬೇಕು ಎಂದು ಡಿ.ಕೆ.ಶಿವಕುಮಾರ ಮನವಿ ಮಾಡಿದರು.

ಬಿಜೆಪಿಗೆ ಉಪ ಚುನಾವಣೆಯಲ್ಲಿ ತಕ್ಕ ಉತ್ತರ: ಡಿ.ಕೆ. ಶಿವಕುಮಾರ್

ತೆಲಂಗಾಣ ಸಚಿವ, ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹಮ್ಮದ್ ಅಜರುದ್ದೀನ್, ಜಿಲ್ಲಾ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ ಇದ್ದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಮೂಲ

ದಿನದ ಮಾತು

ತನ್ನನ್ನು ನೋಡಿ ನಗಬಲ್ಲವನು ಬೇರೆಯವರನ್ನು ನೋಡಿ ನಗುವುದಿಲ್ಲ.

▲ ಲಾಮೋತ್ಸೆ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಾನು, ಮೋದಿ ಸೇರಿದರೆ ಅಸಾಧ್ಯವಾದ ಯಾವುದನ್ನೂ ಸಾಧಿಸುವೆವು

– ಟ್ರಂಪ್

–ಅಸಾಧ್ಯವಾದುದನ್ನು ಸಾಧಿಸುವುದಕ್ಕಿಂತಲೂ ಸಾಧುವಾದದನ್ನು ಸಾಧಿಸುವ ಕಡೆ ಗಮನವಿರಲಿ ಎಂಬುದು ನಮ್ಮದೊಂದು ಕಿವಿಮಾತು!

ದಿನ ಭವಿಷ್ಯ

ಮೇಷ ವೃತ್ತಿಯಲ್ಲಿ ಏರುಪೇರಿನ ಪರಿಸ್ಥಿತಿ. ಪ್ರಯತ್ನ ವಿಫಲವಾದರೂ ಕೈಬಿಡಬೇಡಿ. ಕುಟುಂಬದಲ್ಲಿ ಆರೋಗ್ಯ ಸಮಸ್ಯೆ. ಖರ್ಚು ಹೆಚ್ಚಳ.

ವೃಷಭ ಸಹನೆ ಕೆಡಿಸುವ ಬೆಳವಣಿಗೆ. ಆದರೂ ತಾಳ್ಮೆಯಿಂದ ವರ್ತಿಸಿ. ನಿಮ್ಮ ಕಾರ್ಯಕ್ಕೆ ಕೆಲವರ ಅಡ್ಡಿ. ಕೌಟುಂಬಿಕ ಬಿಕ್ಕಟ್ಟು ಬೆಳೆಸದಿರಿ. ಪರಿಹರಿಸಿ.

ಮಿಥುನ ವೃತ್ತಿಯಲ್ಲಿ ಉತ್ತೇಜನಕಾರಿ ಪರಿಸ್ಥಿತಿ. ಬಂಧುಗಳ ಜತೆ ವಿನಯದಿಂದ ವರ್ತಿಸಿ. ಶೇರು ಹೂಡಿಕೆ ಇಂದು ಬೇಡ, ಕಾದು ನೋಡಿ.

ಕಟಕ ನಿಮ್ಮ ನಿರೀಕ್ಷೆ ಇಂದು ಸಾಕಾರವಾಗದು. ನಿರಾಶೆ ಉಂಟಾದೀತು. ಅತಿ ಒತ್ತಡ ಆರೋಗ್ಯದ ಮೇಲೆ ಪರಿಣಾಮ. ಇತರರಿಗಾಗಿ ಹಣ ವ್ಯಯಿಸುವ ಪ್ರಸಂಗ.

ಸಿಂಹ ಸುಲಭ ಕೆಲಸವೂ ಕಠಿಣವಾದೀತು. ಒತ್ತಡ ಹೆಚ್ಚಳ. ಮನೆಯವರ ಜತೆ ಸಹನೆಯಿಂದ ವರ್ತಿಸಿ. ಧನವ್ಯಯ ನಿಯಂತ್ರಣ. ಇದರಿಂದ ತುಸು ನಿರಾಳತೆ.

ಕನ್ಯಾ ಇತರರ ಜತೆ ವ್ಯವಹಾರದಲ್ಲಿ ನಿಮ್ಮ ನಿಲುವನ್ನು ಸ್ಪಷ್ಟಪಡಿಸಿ. ನಿಮ್ಮ ಬಗ್ಗೆ ತಪ್ಪಭಿಪ್ರಾಯ ಮೂಡದಂತೆ ಎಚ್ಚರ ವಹಿಸಿ. ಧನಪ್ರಾಪ್ತಿ.

ತುಲಾ ಮಾನಸಿಕ ಮತ್ತು ಭಾವನಾತ್ಮಕ ದೃಢತೆ ಕಾಯ್ದುಕೊಳ್ಳಿ. ಏಕೆಂದರೆ ಅಂತಹ ಪರಿಸ್ಥಿತಿ ಇಂದು ನಿರ್ಮಾಣವಾದೀತು. ವೃತ್ತಿಯಲ್ಲಿ ಉನ್ನತಿ.

ವೃಶ್ಚಿಕ ಎಲ್ಲರ ಗಮನ ಸೆಳೆಯುವ ನಿರ್ವಹಣೆ. ಆದರೂ ಮನದೊಳಗೆ ಅತೃಪ್ತಿ. ಇತರರ ಜತೆ ಹೋಲಿಕೆ ಮಾಡಿಕೊಳ್ಳಬೇಡಿ. ಬಂಧುಗಳ ಸಹಕಾರ.

ಧನು ವ್ಯವಹಾರ ಸುಗಮ. ಅಡ್ಡಿಗಳ ನಿವಾರಣೆ. ಮನೆಯ ಕಷ್ಟವೊಂದು ಪರಿಹಾರ ಕಾಣಲಿದೆ. ಆತ್ಮೀಯರು ನೆರವಿಗೆ ಬರುವರು.

ಮಕರ ಕುಟುಂಬ ಸದಸ್ಯರ ಕಾಳಜಿಗೆ ಗಮನ ಕೊಡಿ. ವೃತ್ತಿ ಒತ್ತಡದಲ್ಲಿ ಅದನ್ನು ಮರೆಯಬೇಡಿ. ಟೀಕೆ ಕೇಳಿಬಂದರೂ ಅದರತ್ತ ಗಮನ ಕೊಡಬೇಡಿ.

ಕುಂಭ ಸಣ್ಣಪುಟ್ಟ ವಾಗ್ವಾದ ನಡೆಯುವುದು ಸಹಜ. ಆದರೆ ದ್ವೇಷ ಬೇಡ. ಸಹೋದ್ಯೋಗಿಗಳ ಜತೆ ಸಹಕಾರದಿಂದ ವರ್ತಿಸಿ. ಕೌಟುಂಬಿಕ ಸಮಾಧಾನ.

ಮೀನ ನಿಮ್ಮ ಯೋಜನೆಗೆ ಸೂಕ್ತ ಬೆಂಬಲ ಸಿಗಲಿದೆ. ವೃತ್ತಿಯಲ್ಲಿ ತೃಪ್ತಿಕರ ಬೆಳವಣಿಗೆ. ಹಣದ ಪರಿಸ್ಥಿತಿ ಸಮಾಧಾನಕರ. ಅಲರ್ಜಿ ಸಂಬಂಧಿ ಸಮಸ್ಯೆ ಸಂಭವ.

ರಾಹುಕಾಲ: 12.00–1.30
ಗುಳಿಕಕಾಲ: 10.30–12.00

ಅದೃಷ್ಟ ಸಂಖ್ಯೆ : 8,2,0,4

ಬಿಜೆಪಿಯವರಿಂದ ಗೊಂದಲ | ಯಾವ ವರ್ಗಕ್ಕೂ ಅನ್ಯಾಯ ಇಲ್ಲ

ಒಳಮೀಸಲಾತಿ ಜಾರಿಗೆ ಸರ್ಕಾರ ಬದ್ಧ: ಮುನಿಯಪ್ಪ

ಬಾಗಲಕೋಟೆ: ಒಳಮೀಸಲಾತಿಯನ್ನು ಜಾರಿ ಮಾಡುವಲ್ಲಿ ಯಾವುದೇ ಗೊಂದಲವಿಲ್ಲ. ಎಲ್ಲರಿಗೂ ನ್ಯಾಯ ಕೊಡಲು ಸರ್ಕಾರ ಬದ್ಧತೆ ಪ್ರದರ್ಶನ ಮಾಡಲಿದೆ. ಒಳಮೀಸಲಾತಿ ಜಾರಿಯಾಗಲಿದೆ ಎಂದು ಸಚಿವ ಮುನಿಯಪ್ಪ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ವಿಚಾರದಲ್ಲಿ ಯಾರಿಗೆ ಎಷ್ಟು ಮೀಸಲಾತಿ ಎಂಬುದರ ಕುರಿತು ಚರ್ಚೆಯಾಗಿದೆ. ಯಾವ ವರ್ಗಕ್ಕೂ ಅನ್ಯಾಯವಾಗದ ರೀತಿ ಸರ್ಕಾರ ಕ್ರಮ ಕೈಗೊಳ್ಳಲಾಗಿದೆ. ಬಿಜೆಪಿಯವರು ಈ ಬಗ್ಗೆ ಗೊಂದಲ ಸೃಷ್ಟಿ ಮಾಡುತ್ತಿದ್ದರೆ ಅದಕ್ಕೆ ಕಿವಿಗೊಡಬಾರದು ಎಂದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರ ವಹಿಸಿಕೊಂಡ ನಂತರ ಜನರಿಗೆ ಮಾತು ಕೊಟ್ಟಂತೆ ಐದು ಗ್ಯಾರಂಟಿಗಳನ್ನು ಅನುಷ್ಠಾನ ಮಾಡಿ ಜನರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ. ರಾಜ್ಯದಲ್ಲಿ ಸಾಕಷ್ಟು ಜನ ಗ್ಯಾರಂಟಿಯಿಂದ ಅಭಿವೃದ್ಧಿ ಹೊಂದಿದ್ದಾರೆ. ಇದರ ಜತೆಗೆ ರಾಜ್ಯದಲ್ಲಿ ರಸ್ತೆ, ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಿದೆ ಎಂದು ಹೇಳಿದರು. ಹಿಂದೆ ಸಿದ್ದರಾಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಅನ್ನಭಾಗ್ಯ ಜಾರಿ ಮಾಡಿದರು. ಈ ಅವಧಿಯಲ್ಲಿಯೂ ಕೂಡ ಅನ್ನಭಾಗ್ಯ ಮುಂದುವರಿಸಿದ್ದಾರೆ. ಹಸಿವು ಮುಕ್ತ ದೇಶವಾಗಬೇಕು ಎಂಬ ಕಲ್ಪನೆಯೊಂದಿಗೆ ಈ ಯೋಜನೆಯನ್ನು ಜಾರಿ ಮಾಡಿದ್ದು ಯುಪಿಎ ಸರ್ಕಾರ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ ಮುಳಗಡೆಯಾಗುವ ನೀರಾವರಿ ಭೂಮಿಗೆ 40 ಲಕ್ಷ ಒಣಬೇಸಾಯ ಭೂಮಿಗೆ 30 ಲಕ್ಷ ರೂ. ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಂಡಿದೆ. ಎಲ್ಲ ರೈತರಿಗೆ ಪರಿಹಾರ ಕೊಡಲು ಸರ್ಕಾರ ಬದ್ಧವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಜು ಮನ್ನಿಕೇರಿ, ಪ್ರಾಣೇಶ, ಸುಬ್ಬಣ್ಣ ಇದ್ದರು.



30 ವರ್ಷಗಳಿಂದ ಹೋರಾಟ

30 ವರ್ಷಗಳ ಒಳ ಮೀಸಲಾತಿ ಹೋರಾಟಕ್ಕೆ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಸೇರಿ ಏಳು ಜನ ನ್ಯಾಯಾಧೀಶರ ಒಳಗೊಂಡು ಮಹತ್ವದ ಪೀಠವು ತೀರ್ಪನ್ನು ನೀಡಿದ್ದು ಎಸ್ಸಿ ಎಸ್ಟಿ ಒಳಮೀಸಲಾತಿ ಜನಸಂಖ್ಯೆ ಆಧಾರದ ಮೇಲೆ ಅವರಿಗೆ ಹಾರ್ಥಿಕ, ಶೈಕ್ಷಣಿಕ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಇದು ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ರಾಜ್ಯಗಳು ಸುಮಾರು 30 ವರ್ಷಗಳಿಂದ ಹೋರಾಟ ಮಾಡುತ್ತಿತ್ತು ಎಸ್ಸಿ ಸಮುದಾಯದ 101 ಉಪಜಾತಿಗಳು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ ಇವರಿಗೆ ಸಮಾನವಾಗಿ ಮೀಸಲಾತಿಯನ್ನು ಹಂಚಲು ಸುಪ್ರೀಂ ಕೋರ್ಟ್ ಈ ಮಹತ್ವದ ತೀರ್ಪನ್ನು ನೀಡಿದೆ ಎಂದು ಹೇಳಿದರು.

ಮಹಿಳೆ ಸೇರಿದಂತೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲು

ವಿಜಯಪುರ: ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಿಗೆ ಬ್ಲ್ಯಾಕ್‌ಮೇಲ್ ಮಾಡಿ ಹಣಕ್ಕಾಗಿ ಪೀಡಿಸಿರುವ ಮತ್ತು ಅವರ ಮೇಲೆ ಹಲ್ಲೆ ನಡೆಸಿರುವ ಘಟನೆಗೆ ಸಂಬಂಧಿಸಿದಂತೆ ನಗರದ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ.



ಬೆಂಗಳೂರು ಮೂಲದ ತ್ರಿವೇಣಿ ಎಂಬಾಕೆ ಕಳೆದ ಎರಡೂರು ವರ್ಷಗಳ ಹಿಂದೆ 'ಆಶ್ರಿತ (ಪ್ರಗತಿ) ಫೌಂಡೇಷನ್' ಹೆಸರಿನಲ್ಲಿ ಶ್ರೀಗಳನ್ನು ಭೇಟಿಯಾಗಿದ್ದಳು. ಸಮಾಜ ಸೇವೆ ಮತ್ತು ಪಂಚಮಸಾಲಿ ಹೋರಾಟಕ್ಕೆ ಸಾಥ್ ನೀಡುವುದಾಗಿ ನಂಬಿಸಿದ್ದ ಈಕೆ, ನಂತರ ತನ್ನ ಫೌಂಡೇಷನ್‌ಗೆ ಹಣ ನೀಡುವಂತೆ ಶ್ರೀಗಳಿಗೆ ಪೀಡಿಸಲು ಶುರು ಮಾಡಿದ್ದಳು. ಶ್ರೀಗಳು ಹಣ ನೀಡಲು ನಿರಾಕರಿಸಿದಾಗ ರಾಜಕೀಯ ವ್ಯಕ್ತಿಗಳ ಪಿತೂರಿಯೊಂದಿಗೆ ಸೇರಿ ಅವರ ತೇಜೋವಧೆ ಮಾಡಲು ಸಂಚು ರೂಪಿಸಿದ್ದಾಳೆ ಎನ್ನಲಾಗಿದೆ. ಫೆಬ್ರವರಿ 11ರಂದು ಸ್ವಾಮೀಜಿಯವರು ವಿಜಯಪುರ ತಾಲೂಕಿನ ಕಗ್ಗೋಡ ಬಳಿ ತೆರಳುತ್ತಿದ್ದಾಗ, ತ್ರಿವೇಣಿ ಮತ್ತು ಆಕೆಯ ತಂಡ ವಾಹನವನ್ನು ಅಡ್ಡಗಟ್ಟಿ ಹಣಕ್ಕಾಗಿ ಬೇಡಿಕೆಯಿಟ್ಟು, ಕಾರಿನ ಗ್ಲಾಸಿಗೆ ಹೊಡೆದು ಹಲ್ಲೆ ನಡೆಸಿದ್ದಾರೆ.

ಸ್ವಾಮೀಜಿ ವಿರುದ್ಧ ಆಯೋಗಕ್ಕೆ ದೂರು

ಬೆಂಗಳೂರು: ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರು ತಮಗೆ ದೈಹಿಕ, ಮಾನಸಿಕ ಹಾಗೂ ಲೈಂಗಿಕವಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಬೆಂಗಳೂರಿನ ಮಹಿಳೆಯೊಬ್ಬರು ರಾಜ್ಯ ಮಹಿಳಾ ಆಯೋಗಕ್ಕೆ ಮಂಗಳವಾರ ಅಧಿಕೃತವಾಗಿ ದೂರು ಸಲ್ಲಿಸಿದ್ದಾರೆ. ಸಂತ್ರಸ್ತ ಮಹಿಳೆಯು ನೀಡಿರುವ ದೂರಿನಲ್ಲಿ ಸ್ವಾಮೀಜಿ ವಿರುದ್ಧ ಗಂಭೀರವಾದ ಅಂಶಗಳನ್ನು ಉಲ್ಲೇಖಿಸಿದ್ದಾರೆ. ಸ್ವಾಮೀಜಿಯವರು ತಮ್ಮ ಖಾಸಗಿ ವಿಡಿಯೋಗಳನ್ನು ಇಟ್ಟುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಮತ್ತು ಬ್ಲ್ಯಾಕ್‌ಮೇಲ್ ಮಾಡುವ ಮೂಲಕ ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ವಾಮೀಜಿಯವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ತಮಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಅವರು ಆಯೋಗವನ್ನು ಮನವಿ ಮಾಡಿದ್ದಾರೆ.

ಧಾರ್ಮಿಕ ಆಚರಣೆ ಹಿನ್ನೆಲೆ: ಕೇಂದ್ರ

ಪುಟ ೧➜ ಬದಲಿಗೆ ಧಾರ್ಮಿಕ ಆಚರಣೆ, ನಂಬಿಕೆ ಮತ್ತು ದೇವರ ನಿರ್ದಿಷ್ಟ ಪಾತ್ರದಲ್ಲಿ ಬೇರೂರಿರುವಂಥದ್ದು ಎಂದು ತಿಳಿಸಿದೆ.

ಶ್ರೀಅಯ್ಯಪ್ಪನ ನೈಷ್ಠಿಕ ಬ್ರಹ್ಮಚರ್ಯೆ ಹಿನ್ನೆಲೆಯಲ್ಲಿ ಬಂದ ಆಚರಣೆ: ಶಬರಿಮಲೆಯಲ್ಲಿ ಮಹಿಳೆಯರ ಮೇಲಿನ ನಿಷೇಧವು (ಎಲ್ಲ ಮಹಿಳೆಯರಿಗೆ ನಿರ್ಬಂಧವಾಗಿರದೆ 10–50 ವರ್ಷ ವಯಸ್ಸಿನವರಿಗೆ ಮಾತ್ರ) ಶ್ರೀ ಅಯ್ಯಪ್ಪನ ನೈಷ್ಠಿಕ ಬ್ರಹ್ಮಚರ್ಯೆಯ ಹಿನ್ನೆಲೆಯಲ್ಲಿ ಬಂದಿದೆ. ಅಶುದ್ಧತೆ ಅಥವಾ ಕೀಳರಿಮೆಯಿಂದಲ್ಲ ಎಂದು ವಿಚಾರಣೆಗೆ ಮುಂಚಿತವಾಗಿ ಸಲ್ಲಿಸಲಾದ ಲಿಖಿತ ಅರ್ಜಿಯಲ್ಲಿ ಕೇಂದ್ರ ಸರ್ಕಾರ ವಿವರಿಸಿದೆ.

ಹೊಸ ನಿಲುವಿನಿಂದ ಪೂಜಾ ಸ್ವರೂಪವೇ ಬದಲು: ಮಹಿಳೆಯರ ಪ್ರವೇಶ ಅನುಮತಿಸುವುದರಿಂದ ಇಲ್ಲಿನ ಪೂಜೆಯ ಸ್ವರೂಪವನ್ನೇ ಬದಲಾಯಿಸುತ್ತದೆ. ಸಂವಿಧಾನದಿಂದ ರಕ್ಷಿಸಲ್ಪಟ್ಟ ಧಾರ್ಮಿಕ ಬಹುತ್ವವನ್ನು ದುರ್ಬಲಗೊಳಿಸುತ್ತದೆ. ಭಕ್ತರು, ಅಂದರೆ ಪುರುಷರು ಮತ್ತು ಮಹಿಳೆಯರು ಇಬ್ಬರೂ ಶತಮಾನಗಳಿಂದ ಶಬರಿಮಲೆಯಲ್ಲಿ ದೇವಾಲಯದ ಸ್ಥಾಪಿತ ಸಂಪ್ರದಾಯಗಳಿಗೆ ಅನುಗುಣವಾಗಿ ಭಗವಾನ್ ಶ್ರೀ ಅಯ್ಯಪ್ಪ ಸ್ವಾಮಿಯನ್ನು ಪೂಜಿಸುತ್ತಿದ್ದಾರೆ ಎಂದು ಕೇಂದ್ರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಾಲಯಕ್ಕೆ ತಿಳಿಸಿದರು. ಕೇರಳದ ಶಬರಿಮಲೆ ದೇವಸ್ಥಾನಕ್ಕೆ ಋತುಮತಿ ವಯಸ್ಸಿನ ಮಹಿಳೆಯರ ಪ್ರವೇಶದ ಮೇಲಿನ ನಿರ್ಬಂಧವನ್ನು ಎತ್ತಿಹಿಡಿಯುವಂತೆ ಕೇಂದ್ರವು ಸುಪ್ರೀಂ ಕೋರ್ಟ್‌ನ್ನು ಒತ್ತಾಯಿಸಿದೆ.

ಭಾರತೀಯ ಸಮಾಜದಲ್ಲಿದೆ ಮಹಿಳೆಯರಿಗೆ ಉನ್ನತ ಗೌರವ: ಭಾರತೀಯ ಸಮಾಜವು ಮಹಿಳೆಯರನ್ನು ಸಮಾನವಾಗಿ ಪರಿಗಣಿಸುವುದಲ್ಲದೆ, ಅವರನ್ನು ಉನ್ನತ ಸ್ಥಾನದಲ್ಲಿರಿಸುತ್ತದೆ.ಇಂದಿನ ವಿಚಾರಣೆಯಲ್ಲಿ, ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶವನ್ನು ಒತ್ತಾಯಿಸುವವರು ತಮ್ಮ ವಾದಗಳಲ್ಲಿ 'ಪಿತೃಪ್ರಭುತ್ವ'ವನ್ನು ಏಕೆ ಉಲ್ಲೇಖಿಸುತ್ತಾರೆ ಭಾರತ ಯಾವತ್ತೂ ಸ್ತ್ರೀಯರನ್ನು ಸಮಾನವಾಗಿ ನಡೆಸಿಕೊಂಡಿದೆ. ಅವರನ್ನು ಯಾವಾಗಲೂ ಉನ್ನತ ಸ್ಥಾನದಲ್ಲಿರಿಸಿ ಗೌರವಿಸಲಾಗಿದೆ.ಆದರೆ ಇತ್ತೀಚಿನ ದಿನಗಳಲ್ಲಿ 'ಪಿತೃಪ್ರಧಾನ ಸಮಾಜ' ಅಥವಾ ಕೆಲವು 'ಲಿಂಗ ಸ್ಟೀರಿಯೊಟೈಪ್' ಇತ್ಯಾದಿ ಪರಿಕಲ್ಪನೆ ಇರುವ ಕೆಲವು ತೀರ್ಪುಗಳು ಬಂದಿವೆ. ಅವು ಎಂದಿಗೂ ಇರಲಿಲ್ಲ. ಭಾರತೀಯ ಸಮಾಜದಲ್ಲಿ, ನಾವು ಮಹಿಳೆಯರನ್ನು ಪೂಜಿಸುತ್ತೇವೆ. ಭಾರತದ ರಾಷ್ಟ್ರಪತಿಯಿಂದ ಹಿಡಿದು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರವರೆಗೆ, ನಾವು ನಮ್ಮ ಸ್ತ್ರೀ ದೇವತೆಗಳಿಗೆ ನಮಸ್ಕರಿಸಿ ಶ್ರದ್ಧಾ ಭಕ್ತಿ ತೋರುತ್ತೇವೆ. ಆದ್ದರಿಂದ ನಾವು 'ಪಿತೃಪ್ರಭುತ್ವ' ಮತ್ತು 'ಲಿಂಗ ಸ್ಟೀರಿಯೊಟೈಪ್'ಪರಿಕಲ್ಪನೆಗಳ ಆಧಾರದಲ್ಲಿ ಈ ವಿಚಾರವನ್ನು ನೋಡಬಾರದು. ಭಾರತಕ್ಕೆ ಈ ಕಲ್ಪನೆಯು ಪರಕೀಯವಾಗಿದೆ ಎಂದು ಮೆಹ್ತಾ ಒತ್ತಿ ಹೇಳಿದರು.

ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ ಹಲವು ಕಾನೂನು ಮತ್ತು ಸಾಂವಿಧಾನಿಕ ಪ್ರಶ್ನೆಗಳನ್ನು ಪರಿಶೀಲಿಸುತ್ತಿರುವ ಸುಪ್ರೀಂ ಕೋರ್ಟ್‌ನ ಒಂಬತ್ತು ನ್ಯಾಯಾಧೀಶರ ಪೀಠದ ಮುಂದೆ ಎಸ್‌ಜಿ ಮೆಹ್ತಾ ಈ ಅಂಶವನ್ನು ಅರುಹಿದ್ದಾರೆ. ದುರದೃಷ್ಟವಶಾತ್ ನಾವು ವಾಸಿಸುತ್ತಿದ್ದ ಸಮಾಜದಲ್ಲಿ, ಹಿಂದೆ ಹಿಂದುಗಳ ಒಂದು ನಿರ್ದಿಷ್ಟ ಭಾಗವು ವಿಶಾಲ ಹಿಂದು ಪಂಗಡದ ಭಾಗವಾಗಲು ಅನುಮತಿಸದ ಸಮಾಜದಲ್ಲಿ ವಾಸಿಸುತ್ತಿದ್ದೆವು. ಅವರ ಪೂಜಾ ಹಕ್ಕನ್ನು ನಿರಾಕರಿಸಲಾಯಿತು. ಇದಕ್ಕೆ ಲಿಂಗದೊಂದಿಗೆ ಯಾವುದೇ ಸಂಬಂಧವಿರಲಿಲ್ಲ. ಕಳೆದ ದಶಕಗಳಲ್ಲಿ, ಅಭಿವೃದ್ಧಿಪಡಿಸಲಾದ ನ್ಯಾಯಶಾಸ್ತ್ರವಿದೆ, ಅಲ್ಲಿ ಪ್ರತಿ ಸಾಂವಿಧಾನಿಕ ನಿಬಂಧನೆಯನ್ನು ಲಿಂಗದ ಮಸೂರದಿಂದ ನೋಡಬೇಕಾಗುತ್ತದೆ. ಅಲ್ಲಿ ಯಾವುದೇ ತಾರತಮ್ಯಕ್ಕೆ ಸ್ಥಾನವಿಲ್ಲ(ಸಂವಿಧಾನದ) ವಿಧಿ14 ರಲ್ಲಿ – ಎಲ್ಲಾ ಲಿಂಗಗಳು ಸಮಾನರು. ವಿಧಿ 15 – ಲಿಂಗವನ್ನು ಲೆಕ್ಕಿಸದೆ, ಎಲ್ಲಾ ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ. ಇದು (ತಾರತಮ್ಯದ ವಿರುದ್ಧದ ಹಿಂದಿನ ಕಾನೂನುಗಳು) ಆ ಯುಗದ ನಿರ್ದಿಷ್ಟ ನಿಬಂಧನೆಯಾಗಿತ್ತು, ಅದು ಸಾರ್ವಜನಿಕ ದೇವಾಲಯ ಅಥವಾ ಸಾರ್ವಜನಿಕ ಧಾರ್ಮಿಕ ಸಂಸ್ಥೆಯಾಗಿದ್ದರೆ, ಅದು ಎಲ್ಲರಿಗೂ ಮುಕ್ತವಾಗಿರಬೇಕು. ನಾವು ಅಸ್ಪೃಶ್ಯತೆ ಅಥವಾ ಒಂದು ವಿಭಾಗದೊಳಗಿನ ವಿಭಾಗ ಇತ್ಯಾದಿಗಳನ್ನು ತೊಡೆದುಹಾಕಬೇಕು. ಆದರೆ ಶಬರಿಮಲೆ ಪ್ರಕರಣ ಲಿಂಗ ತಾರತಮ್ಯದ ಹಿನ್ನೆಲೆಯದ್ದಲ್ಲ ಎಂಬುದನ್ನು ಎತ್ತಿತೋರಿದರು.

7 ಪ್ರಶ್ನೆಗಳನ್ನೆತ್ತಿದ ನ್ಯಾಯಪೀಠ

ಪುಟ ೧➜ ಮತ್ತು ಧಾರ್ಮಿಕ ಸಂಪ್ರದಾಯಗಳ ನಡುವಿನ ಸಮತೋಲನ, ನೈತಿಕತೆಯ ಅರ್ಥ, ಧಾರ್ಮಿಕ ಆಚರಣೆಗಳ ಮೇಲಿನ ನ್ಯಾಯಾಂಗ ಪರಿಶೀಲನೆ, ಹಿಂದುಗಳ ವಿಭಾಗಗಳು ಎಂಬ ಪದದ ಅರ್ಥ ಮತ್ತು ಧಾರ್ಮಿಕ ಸಂಪ್ರದಾಯಗಳ ವಿರುದ್ಧ ಭಕ್ತರಲ್ಲದವರು ಅಥವಾ ಹಿಂದು ಧರ್ಮಕ್ಕೆ ಸೇರದವರು ಪಿಐಎಲ್ ದಾಖಲಿಸುವ ಹಕ್ಕುಗಳಿಗೆ ಸಂಬಂಧಿಸಿ ನ್ಯಾಯಾಂಗ ಪೀಠವು 7 ಮುಖ್ಯ ಪ್ರಶ್ನೆಗಳನ್ನು ಎತ್ತಿದೆ.

ತಂಟೆಗೆ ಬಂದರೆ ಪಾಕ್ ಛಿದ್ರ

ಹೊಸದಿಲ್ಲಿ: ಪಶ್ಚಿಮ ಬಂಗಾಳದ ಮೇಲೇನಾದರೂ ದಾಳಿ ಮಾಡಿದಲ್ಲಿ ಪಾಕಿಸ್ತಾನವನ್ನು ತುಂಡುತುಂಡಾಗಿ ಕತ್ತರಿಸಲಾಗುವುದು ಎಂದು ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್ ಗುಡುಗಿದ್ದಾರೆ.

ಭವಿಷ್ಯದಲ್ಲಿ ಭಾರತವೇನಾದರೂ ದುಸ್ಸಾಹಸಕ್ಕೆ ಮುಂದಾದಲ್ಲಿ ಕೋಲ್ಕತ್ತಾ ಮೇಲೆ ದಾಳಿ ನಡೆಸಲಾಗುವುದೆಂಬ ಪಾಕ್ ರಕ್ಷಣಾ ಸಚಿವ ಖವಾಜಾ ಆಸಿಫ್ ಬೆದರಿಕೆಗೆ ಪ್ರತಿಯಾಗಿ, ಸಚಿವ ಸಿಂಗ್ ಸಿಡಿಲಿನಂತಹ ಪ್ರತ್ಯುತ್ತರ ನೀಡಿದ್ದಾರೆ. ಪ್ರಚೋದನಾಕಾರಿ ವಾಕ್ಚಾತುರ್ಯ ಮೆರೆದಲ್ಲಿ ಪರಿಣಾಮ ನೆಟ್ಟಗಿರದೆಂದು ಸಚಿವ ಸಿಂಗ್ ಎಚ್ಚರಿಸಿದ್ದಾರೆ.

ಐದು ದಶಕಗಳಿಗೂ ಹಿಂದೆ ಪಾಕ್ ವಿಭಜನೆ ಯಿಂದಾಗಿದ್ದ ದುಷ್ಪರಿಣಾಮಗಳು, ಅನಾಹುತಗಳನ್ನು ನೆನಪಿಸಿರುವ ಸಚಿವ ಸಿಂಗ್, ಉಭಯ ರಾಷ್ಟ್ರಗಳ ನಡುವೆ ಉದ್ವಿಗ್ನತೆಯನ್ನು ಹೆಚ್ಚಿ ಸುವಂತಹ ಹೇಳಿಕೆ ನೀಡದಿರಿ. ಪಾಕ್ ರಕ್ಷಣಾ ಸಚಿವರು ಪ್ರಚೋದನಾತ್ಮಕ ಹೇಳಿಕೆ ನೀಡಕೂಡದಿತ್ತು.



55ವರ್ಷ ಹಿಂದೆ ಪಾಕಿಸ್ತಾನ ಎರಡು ಹೋಳಾಗಿ ವಿಭಜನೆಯಾದಾಗ ತಾಂಡವಿಸಿದ್ದ ದುಷ್ಪರಿಣಾಮಗಳು, ಕಹಿ ಅನುಭವಗಳು ಪಾಕ್‌ಗೆ ನೆನಪಿಲ್ಲವೇ ಎಂದು ಕುಟುಕಿದ್ದಾರೆ. ಪಾಕಿಸ್ತಾನ ಬಂಗಾಳದ ಮೇಲೆ ಕಣ್ಣಿಡಲು ಪ್ರಯತ್ನಿಸಿದಲ್ಲಿ, ಆ ರಾಷ್ಟ್ರ ಈ ಬಾರಿ ಅದೆಷ್ಟು ಹೋಳಾಗಲಿದೆ ಎಂಬುದನ್ನು ಭಗವಂತನೇ ಬಲ್ಲ ಎಂದು ಸಚಿವ ಸಿಂಗ್ ಖಡಕ್ ಎಚ್ಚರಿಕೆ ನೀಡಿದ್ದಾರೆ. ಭಾರತವೇನಾದರೂ ಫಾಲ್ಸ್ ಫ್ಲ್ಯಾಗ್ ಆಪರೇಶನ್‌ಗೆ ಮುಂದಾದಲ್ಲಿ ದೇವರಿಟ್ಟೆಯಂತೆ ನಾವು ಕೋಲ್ಕತ್ತಾ ಮೇಲೆ ದಾಳಿ ಮಾಡೇಸಿದ್ಧ ಎಂದು ಆಸಿಫ್ ಸಿಯಾಲ್‌ಕೋಟ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದ್ದರು.

ಪಾಕ್ ಜೈಲಲ್ಲಿ ಬಂಧನದಲ್ಲಿರುವ ವ್ಯಕ್ತಿಗಳನ್ನು ಭಯೋತ್ಪಾದಕರಂತೆ ಬಿಂಬಿಸಿ, ಇದೇ ಸೋಗಲ್ಲಿ ಭಾರತ ಪಾಕ್ ವಿರುದ್ಧ ನಕಲಿ ಕಾರ್ಯಾಚರಣೆ ನಡೆಸುವ ಸಾಧ್ಯತೆಗಳಿವೆ ಎಂಬ ವರದಿಗಳಿವೆ ಎಂದು ಸುದ್ದಿಗಾರರಲ್ಲಿ ಆರೋಪಿಸಿದ್ದ ಸಚಿವ ಆಸಿಫ್, ತಾನು ಮಾಡಿದ ಆರೋಪಗಳಿಗೆ ಪೂರಕ ಸಾಕ್ಷ್ಯಗಳನ್ನು ಮಾತ್ರ ನೀಡಿರಲಿಲ್ಲ. ಇಷ್ಟೇ ಅಲ್ಲ, ಯಾವುದೇ ದಾಳಿಗೂ ಪಾಕ್ ಪ್ರತಿಕ್ರಿಯೆ ತ್ವರಿತ, ಕರಾರುವಕ್ಕಾಗಿರುವುದು ಮತ್ತು ನಿರ್ಣಾಯಕವಾಗಿರುವುದು ಎಂದು ಇದಕ್ಕೂ ಮುನ್ನ ಆಸಿಫ್ ಹೇಳಿದ್ದರು.

ಇರಾನ್‌ನಲ್ಲಿ ಆತಂಕ

ಪುಟ ೧➜ ಯಾರಿಗೆ ಗೊತ್ತು? ಇಂದು (ಮಂಗಳವಾರ) ರಾತ್ರಿ ಎಲ್ಲವೂ ತಿಳಿಯಲಿದೆ. ಇದು ಜಗತ್ತಿನ ಇತಿಹಾಸದಲ್ಲಿ ದೀರ್ಘಕಾಲ ನೆನಪಿನಲ್ಲಿಡುವ ಕ್ಷಣಗಳಾಗಿವೆ. 47 ವರ್ಷಗಳ ದಬ್ಬಾಳಿಕೆ, ಭ್ರಷ್ಟಾಚಾರ, ಸಾವು ಕೊನೆಗೂ ಕೊನೆಗೊಳ್ಳಲಿದೆ. ಇರಾನ್ ಶ್ರೇಷ್ಠ ನಾಗರಿಕರಿಗೆ ದೇವರು ಆಶೀರ್ವದಿಸಲಿ ಎಂದು ಟ್ರಂಪ್ ಟ್ರುಥ್ ಸೋಷಿಯಲ್‌ನಲ್ಲಿ ಬರೆದಿದ್ದಾರೆ.

ಟ್ರಂಪ್ ಗಡುವು: ಮಂಗಳವಾರ ರಾತ್ರಿ 8 ಗಂಟೆಯೊಳಗೆ (ಅಂದರೆ ಭಾರತೀಯ ಕಾಲಮಾನ ಬುಧವಾರ ಮುಂಜಾನೆ 5.30ರೊಳಗೆ) ಕದನ ವಿರಾಮ ಒಪ್ಪಂದ ಮಾಡಿಕೊಳ್ಳಿ ಎಂದು ಟ್ರಂಪ್ ಇರಾನ್ ಆಡಳಿತಕ್ಕೆ ಅವಕಾಶ ನೀಡಿದ್ದರು. ಆದರೆ ಇರಾನ್ ತಮ್ಮ ಕದನವಿರಾಮ ಯೋಜನೆ ತಿರಸ್ಕರಿಸಿದ್ದರಿಂದ ಅಧ್ಯಕ್ಷ ಟ್ರಂಪ್ ಅತ್ಯಂತ ಹತಾಶೆಗೆ ಒಳಗಾಗಿದ್ದರು.

ತಮ್ಮ ಕದನವಿರಾಮ ಯೋಜನೆಯನ್ನು ತಿರಸ್ಕರಿಸಿದ ಟೆಹ್ರಾನ್ ದೊಡ್ಡ ಬೆಲೆ ಕಟ್ಟಬೇಕಾಗುತ್ತದೆಂದು ಟ್ರಂಪ್ ಅವರು ಬೆದರಿಕೆಯೊಡ್ಡಿದ್ದು, ಇದಾದ 24 ಗಂಟೆಗಳೊಳಗೆ ಅಮೆರಿಕ ಖಾರ್ಗ್ ದ್ವೀಪದ 50 ಸ್ಥಳಗಳ ಮೇಲೆ ದಾಳಿ ನಡೆಸಿದೆ. ಯುದ್ಧ ಆರನೇ ವಾರ ಪ್ರವೇಶಿಸಿದ್ದು, ಸಂಘರ್ಷಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಲು ಇರಾನ್ ಬಯಸುತ್ತಿದೆ.

ಇರಾನ್‌ನ ತೈಲ ರಫ್ತು ಕೇಂದ್ರ ಖಾರ್ಗ್

ಇರಾನ್‌ನ ಸುಮಾರು ಶೇ.90ರಷ್ಟು ಕಚ್ಚಾ ತೈಲ ರಫ್ತನ್ನು ಖಾರ್ಗ್ ದ್ವೀಪದಲ್ಲಿನ ತೈಲ ಘಟಕಗಳು ನಿರ್ವಹಿಸುತ್ತವೆ. ಇಲ್ಲಿ 30 ದಶಲಕ್ಷ ಬ್ಯಾರೆಲ್‌ಗಳಷ್ಟು ತೈಲ ಸಂಗ್ರಹಿಸುವ ವ್ಯವಸ್ಥೆಯಿದೆ. ಇರಾನ್ ಕರಾವಳಿಯಿಂದ 26 ಕಿ.ಮೀ. ಮತ್ತು ಹಾರ್ಮುಜ್‌ನಿಂದ 483 ಕಿ.ಮೀ. ದೂರದಲ್ಲಿದೆ. ದ್ವೀಪಕ್ಕೆ ಸಾಮಾನ್ಯರಿಗೆ ಪ್ರವೇಶ ಇಲ್ಲದಿರುವ ಕಾರಣಕ್ಕೆ ಇದನ್ನು ಸ್ಥಳೀಯರು ನಿಷೇಧಿತ ದ್ವೀಪವೆಂದು ಕರೆಯುತ್ತಾರೆ.

ಅಣ್ವಸ್ತ್ರ ಬಳಸಲ್ಲ: ಶ್ವೇತಭವನ

ಇರಾನ್ ಮೇಲೆ ಪರಮಾಣು ದಾಳಿ ನಡೆಸುವ ಯಾವುದೇ ಇರಾದೆ ನಮಗಿಲ್ಲ ಎಂದು ಅಮೆರಿಕದ ಶ್ವೇತಭವನವು ಮಂಗಳವಾರ ರಾತ್ರಿ ಸ್ಪಷ್ಟಪಡಿಸಿದೆ. ಅಧ್ಯಕ್ಷ ಟ್ರಂಪ್ ನೀಡಿದ ಹೊಸ ಬೆದರಿಕೆಯ ಕುರಿತು ಬುಡಾಪೆಸ್ಟ್‌ನಲ್ಲಿ ಪ್ರತಿಕ್ರಿಯಿಸಿದ್ದ ಉಪಾಧ್ಯಕ್ಷ ವ್ಯಾನ್ಸ್, ನಮ್ಮ ಟೂಲ್‌ಕಿಟ್‌ನಲ್ಲಿ ಹಲವು ಟೂಲ್‌ಗಳಿವೆ. ಈವರೆಗೆ ಅವುಗಳನ್ನು ಬಳಸಲು ನಿರ್ಧರಿಸಿಲ್ಲ ಎಂದು ಹೇಳಿದ್ದರು. ಇದು ಪರಮಾಣು ಬಾಂಬ್ ಬಳಕೆಯ ಬಗ್ಗೆ ವ್ಯಾನ್ಸ್ ಉಲ್ಲೇಖಿಸಿದ್ದಾರೆಂದು ಪ್ರಚಾರ ಪಡೆದಿತ್ತು. ಆದರೆ ಶ್ವೇತಭವನದ ರ್‍ಯಾಪಿಡ್ ರೆಸ್ಪೋನ್ಸ್ ಅಲ್ಲಗಳೆದಿದೆ.

ತಿಮ್ಮಾಪುರ ವಿರುದ್ಧ ಮಾನನಷ್ಟ ಮೊಕದ್ದಮೆ

ಬಾಗಲಕೋಟೆ: ಬಿಟಿಡಿಎ ವ್ಯಾಪ್ತಿಯಲ್ಲಿ 30 ಎಕರೆ ಜಮೀನು ತೆಗೆದುಕೊಂಡು ಅದನ್ನು ಭೂಸ್ವಾಧೀನ ಮಾಡಿಕೊಂಡು ಪರಿಹಾರ ನೀಡಬೇಕು ಎಂದು ಬಿಟಿಡಿಎಗೆ ಅರ್ಜಿಯನ್ನು ನೀಡಿದ್ದರೆ ಹಾಗೂ ನಾನು 30 ಎಕರೆ ಜಮೀನು ಖರೀದಿ ಮಾಡಿದ್ದು ದಾಖಲೆ ತೋರಿಸಿ ಸಾಬೀತುಪಡಿಸದಿದ್ದರೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ನೂರು ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡುವೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು.



ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಟಿಡಿಎದಿಂದ ಜಮೀನು ಸ್ವಾಧೀನಪಡಿಸಿಕೊಳ್ಳಿ ಎಂದು ಯಾವತ್ತೂ ಅರ್ಜಿ ಹಾಕಿಲ್ಲ. ನಾನು ಎಲ್ಲಿಯೂ ಭೂಮಿಯನ್ನು ಖರೀದಿ ಮಾಡಿಲ್ಲ ಎಂದು ಹೇಳಿದರು.

ಜಾತಿ ಜಾತಿಗಳು, ಧರ್ಮಗಳ ನಡುವೆ ವಿಷಬೀಜ ಬಿತ್ತಿ ಮತ ಬ್ಯಾಂಕ್ ಮಾಡಿಕೊಳ್ಳುವುದೇ 79 ವರ್ಷಗಳ ಕಾಂಗ್ರೆಸ್ಸಿನ ಸಾಧನೆಯಾಗಿದೆ. ಇಂಥ ಮಹಾನ್ ಮೋಸಗಾರ ಸಿದ್ದರಾಮಯ್ಯನನ್ನು ನಂಬದಿರಿ ಎಂದು ಮತದಾರರನ್ನು ವಿನಂತಿಸಿದರು. 17 ಬಜೆಟ್ ಮಂಡಿಸುವಾಗ ರಾಜಕೀಯ ಪುನರ್ಜನ್ಮ ನೀಡಿದ ಬಾಗಲಕೋಟೆ ನೆನಪಾಗಲಿಲ್ಲವೇ ಎಂದು ಪ್ರಶ್ನಿಸಿದರು. 3 ವರ್ಷಗಳಿಂದ ಕೇವಲ ಗ್ಯಾರಂಟಿ ಎಂದು ಮೋಸ ಮಾಡಿದ್ದಾರೆ. ಬಡವರ ಮನಸ್ಸನ್ನು ಕದ್ದು ಮತಬ್ಯಾಂಕ್ ಮಾಡಿಕೊಳ್ಳುವ ಪ್ರಯತ್ನ ಇವರದು. 2018, 2023ರಲ್ಲಿ ನೀವು ಘೋಷಿಸಿದ ಯಾವುದಾದರೂ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೀರಾ ಎಂದು ಕಾಂಗ್ರೆಸ್ಸಿನವರನ್ನು ಪ್ರಶ್ನಿಸಿದರು.

ಹೆಂಡ, ಹಣದ ಹೊಳೆ ಹರಿಸಿ ಗೆಲ್ಲುವ ಪ್ರಯತ್ನ ಮಾಡಲಾಗುತ್ತಿದೆ. ಮುಖ್ಯಮಂತ್ರಿ, 20 ಸಚಿವರು, 50 ಜನ ಶಾಸಕರು ಚುನಾವಣೆ ಗೆಲ್ಲಲು ಭ್ರಷ್ಟಾಚಾರದಿಂದ ಮಾಡಿದ ಕೋಟ್ಯಂತರ ಹಣವನ್ನು ಹಂಚುತ್ತಿದ್ದಾರೆ ಎಂದು ಆರೋಪಿಸಿದರು.

ಚುನಾವಣೆಯಲ್ಲಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು, ಸರ್ಕಾರಿ ವಾಹನಗಳಲ್ಲಿ ಹಣ, ಕರಪತ್ರ ಹಂಚುತ್ತಿರುವುದು ನಾಚಿಕೆಗೇಡಿನ ಸಂಗತಿ. ಕಾಂಗ್ರೆಸ್ ಗೂಂಡಾಗಳನ್ನು ಕಳಿಸಿ ಅಲ್ಲಲ್ಲಿ ಗಲಾಟೆ ಮಾಡಿಸುತ್ತಿದ್ದಾರೆ. ಇದನ್ನು ಪ್ರತಿಯೊಬ್ಬರೂ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು. ಬಡವರು, ಕೃಷಿ ಕಾರ್ಮಿಕರ ಸಲುವಾಗಿ ಉದ್ಯೋಗ ಖಾತ್ರಿ ಜಿರಾಮ್‌ಜಿ ಯೋಜನೆಯನ್ನು ಏಕೆ ನಿಲ್ಲಿಸಿದ್ದೀರಿ ಎಂದು ಪ್ರಶ್ನಿಸಿದರು. ಬಡವರ ಬಗ್ಗೆ ಚಿಂತೆ ಇಲ್ಲ ಎಂದು ಆರೋಪಿಸಿದರು. ಇವರು ಎಸ್‌ಸಿ ಜನಾಂಗಕ್ಕೆ ವಿಶ್ವಾಸದ್ರೋಹ, ದೊಡ್ಡ ಅನ್ಯಾಯ ಮಾಡಿದ್ದಾರೆ. ಮೋದಿ ಅವರು ಎಲ್ಲ ಬಡವರಿಗಾಗಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಅವುಗಳನ್ನು ಬಾಗಲಕೋಟೆಯಲ್ಲಿ ಅನುಷ್ಠಾನಕ್ಕೆ ತರುತ್ತಿಲ್ಲ. ಈಗ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ಬಾಗಲಕೋಟೆಗೆ ಭರ್ಜರಿ ಯೋಜನೆ ಘೋಷಣೆ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು. ಅಭಿವೃದ್ಧಿಯ ಹರಿಕಾರ ವೀರಣ್ಣ ಚರಂತಿಮಠರನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು.

ಇಂದು ಮನೆ ಪ್ರಚಾರ, ಬರೀ ಲೆಕ್ಕಾಚಾರ

ಪುಟ ೧➜ ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ ಸೇರಿದಂತೆ ಪ್ರಮುಖರು ಗೆಲುವಿನ ತಂತ್ರ ರೂಪಿಸಿದ್ದು, ಮತದಾರರ ಮೇಲೆ ಎಷ್ಟು ಪರಿಣಾಮ ಬೀರಲಿದೆ ಎಂಬುವುದು ಫಲಿತಾಂಶದ ದಿನದಂದು ತಿಳಿಯಲಿದೆ.

2 ಕ್ಷೇತ್ರಗಳಲ್ಲಿ 603 ಮತಗಟ್ಟೆ

ಬಾಗಲಕೋಟೆ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರಿದ್ದರೆ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಒಟ್ಟು 2,31,683 ಮತದಾರರು ಮತ ಚಲಾಯಿಸಲು ಅರ್ಹರಿದ್ದಾರೆ.

ಖರ್ಗೆ ಬಂಧನಕ್ಕೆ ಬಿಜೆಪಿ ಆಗ್ರಹ

ಬೆಂಗಳೂರು: ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಮೊಕದ್ದಮೆ ದಾಖಲಿಸಿ ಅವರನ್ನು ಬಂಧಿಸಲು ಒತ್ತಾಯಿಸಿ ಬಿಜೆಪಿ ನಿಯೋಗ ಸೋಮವಾರ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದೆ.

ಬಳಿಕ ಮಾತನಾಡಿದ ಶಾಸಕ ಎಸ್.ಮುನಿರಾಜು, ಅಸ್ಸಾಂನಲ್ಲಿ ಭಾನುವಾರ ಚುನಾವಣಾ ಭಾಷಣ ಮಾಡುವಾಗ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ



ಮಲ್ಲಿಕಾರ್ಜುನ ಖರ್ಗೆ ಅವರು ನಮಾಜ್ ಮಾಡುವಾಗ ವಿಷಸರ್ಪ ಬಂದರೆ ನೀವು ನಮಾಜನ್ನು ನಿಲ್ಲಿಸಿ ಅದನ್ನು ಕೊಲ್ಲಿ; ನಮಾಜ್ ಮಾಡುವಾಗ ಬಿಜೆಪಿ, ಆರ್‌ಎಸ್‌ಎಸ್‌ನವರು ಬಂದರೆ ನಮಾಜನ್ನು ನಿಲ್ಲಿಸಿ ಅವರನ್ನು ಕೊಲ್ಲಿ; ಇದು ಕುರಾನ್‌ನಲ್ಲಿ ಉಲ್ಲೇಖ ಆಗಿದೆ ಎಂದಿದ್ದಾರೆಂದು ಆಕ್ಷೇಪಿಸಿದರು. ಇದು ಬೆಂಕಿ ಹಚ್ಚುವ ಕೆಲಸ ಎಂದು ಟೀಕಿಸಿದರು.

ಕೋಮುಗಲಭೆ ಹರಡುವ ಸಂದರ್ಭಗಳು ಬರಬಹುದು. ದೇಶದ್ರೋಹಿಗಳು, ಮೂಲಭೂತವಾದಿಗಳಿಗೆ ಬೆಂಬಲ ಸೂಚಿಸುವ ಮಾತುಗಳಿವು. ಇದರ ವಿರುದ್ಧ ಹೋರಾಟ ಮಾಡಲಾಗುತ್ತಿದೆ. ಡಿಜಿಪಿಯವರನ್ನು ಭೇಟಿ ಮಾಡಿ ದೂರು ನೀಡಿದ್ದೇವೆ ಎಂದರು. ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ ಎಂದು ತಿಳಿಸಿದರು. ಇದು ದೇಶದ್ರೋಹಿ ಮಾತು. ಇದನ್ನಾಡಿದ ಖರ್ಗೆ ಅವರನ್ನು ಬಂಧಿಸಲು ಒತ್ತಾಯಿಸಿದರು. ಮಲ್ಲಿಕಾರ್ಜುನ ಖರ್ಗೆ ಅವರು ಸಂವಿಧಾನ ವಿರೋಧಿ ಮಾತನ್ನಾಡಿದ್ದು ಅವರ ವಿರುದ್ಧ ಕ್ರಮ ಕೈಗೊಳ್ಳಲು ಸಿ.ಕೆ. ರಾಮಮೂರ್ತಿ ಆಗ್ರಹಿಸಿದರು. ನಿಯೋಗದಲ್ಲಿ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ರಾಜ್ಯ ವಕ್ತಾರ ಎಸ್.ಪ್ರಕಾಶ್ ಮುಂತಾದ ಪ್ರಮುಖರಿದ್ದರು.

ಮತ ಪ್ರಚಾರ...



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮಂಗಳವಾರ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಡಿಸಿಎಂ ಡಿ.ಕೆ. ಶಿವಕುಮಾರ ಮತ ಪ್ರಚಾರ ಮಾಡಿದರು.

ಕೇಂದ್ರದಿಂದ ದಕ್ಷಿಣ ಭಾರತದ ನಿರ್ಲಕ್ಷ್ಯ: ಡಿ.ಕೆ. ಶಿವಕುಮಾರ್

ಹುಬ್ಬಳ್ಳಿ: ವಿದೇಶದಿಂದ ಎರಡು ಶಿಪ್‌ಗಳು ಬಂದವು ಅವು ಏಕೆ ಗುಜರಾತ್‌ಗೆ ಹೋದವು? ಕೇಂದ್ರ ಸರ್ಕಾರಕ್ಕೆ ಉತ್ತರ ಭಾರತದ ಬಗ್ಗೆ ಹೆಚ್ಚು ಆದ್ಯತೆ ನೀಡುತ್ತದೆ. ದಕ್ಷಿಣ ಭಾರತದ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಿಡಿಕಾರಿದರು.



ಆಟೋ ಚಾಲಕರು ಗ್ಯಾಸ್ ಬಿಟ್ಟು ಪೆಟ್ರೋಲ್ ಬಳಸಬೇಕು ಎಂಬ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿಕೆಗೆ ಮಂಗಳವಾರ ಮಾಧ್ಯಮದವರೊಂದಿಗೆ ಪ್ರತಿಕ್ರಿಯಿಸಿದ ಅವರು, ಪ್ರಹ್ಲಾದ ಜೋಶಿ ಅವರು ರಾಜ್ಯದ ಜನರ ಹಿತಕ್ಕೆ ಮೊದಲು ಆದ್ಯತೆ ನೀಡಬೇಕು ಎಂದರು.

ಕೇರಳದಲ್ಲಿ ಕಳೆದ 10 ವರ್ಷದಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಆದ್ದರಿಂದ ವಿಧಾನಸಭೆ ಚುನಾವಣೆಯಲ್ಲಿ ಇಂಡಿಯಾ ಮೈತ್ರಿ ಕೂಟಕ್ಕೆ ಸ್ಪಷ್ಟ ಬಹುಮತ ಸಿಗಲಿದೆ ತಿಳಿಸಿದರು. ನಾನು ಸೇರಿದಂತೆ ಹಲವು ನಾಯಕರು ಕೇರಳದಲ್ಲಿ ಚುನಾವಣಾ ಪ್ರಚಾರ ಮಾಡಿದ್ದೇವೆ. ಅಲ್ಲಿಯ ರಾಜಕೀಯ ಪಕ್ಷಗಳಿಗೆ ಶಿಸ್ತು ಇದ್ದು, ಅವರಿಂದ ನಾವು ಕಲಿಯುವುದು ಬಹಳಷ್ಟಿದೆ ಎಂದರು.

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಪಡೆಯುತ್ತಿರುವ ಜನ ಖುಷಿ ಪಡುತ್ತಿದ್ದಾರೆ. ಈ ಹಿನ್ನೆಲೆ ಇಲ್ಲಿ ನಡೆಯುವ ಎರಡು ಉಪಚುನಾವಣೆಯಲ್ಲಿ ನಾವು ಗೆಲ್ಲುತ್ತೇವೆ ಎಂದು ತಿಳಿಸಿದರು. 2028ರ ವರೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರುತ್ತಾರೆ ಎಂಬ ಸಚಿವ ಜಮೀರ್ ಅಹ್ಮದ ಹೇಳಿಕೆ ಪ್ರತಿಕ್ರಿಯಿಸಿದ ಅವರು, ಬೇರೆ ಅವರ ಪ್ರಶ್ನೆಗೆ ನಾನು ಉತ್ತರ ನೀಡುವುದಿಲ್ಲ. ನಮ್ಮಿಬ್ಬರ ಮಾತು ಬಿಟ್ಟರೆ ಬೇರೆ ಅವರ ಮಾತು ಗೌಣ. ನನ್ನ ತಾಳ್ಮೆಗೆ ಕಾಲವೇ ಉತ್ತರ ಹೇಳಲಿದೆ. ನಾಯಕತ್ವ ಬದಲಾವಣೆ ಬಗ್ಗೆ ನಿಮಗೇಕೆ ಸಮಸ್ಯೆ ಎಂದು ಪ್ರಶ್ನಿಸಿದರು.

ಕಿರುಸುದ್ದಿ

ಐಪಿಎಲ್ ಟಿಕೆಟ್ ಅಕ್ರಮ ಮಾರಾಟ: 11 ಮಂದಿ ಸೆರೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್‌ಕಿಂಗ್ಸ್ ನಡುವಿನ ಟಾಟಾ ಐಪಿಎಲ್ ಟಿ-20 ಪಂದ್ಯದ ವೇಳೆ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ಸಿಸಿಬಿಯ ವಿಶೇಷ ವಿಚಾರಣಾ ದಳದ ಅಧಿಕಾರಿಗಳು ಭೇದಿಸಿದ್ದಾರೆ. ಏಪ್ರಿಲ್ 5, ರಂದು ನಡೆದ ಪಂದ್ಯದ ಸಂದರ್ಭದಲ್ಲಿ ಕಬ್ಬನ್‌ಪಾರ್ಕ್ ಮತ್ತು ಚಾಮರಾಜಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಏಕಕಾಲಕ್ಕೆ ದಾಳಿ ನಡೆಸಿದ ಅಧಿಕಾರಿಗಳು ಒಟ್ಟು 11 ವ್ಯಕ್ತಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತರಿಂದ ಸುಮಾರು 4.53 ಲಕ್ಷ ರೂ. ಮೌಲ್ಯದ 28 ಐಪಿಎಲ್ ಟಿಕೆಟ್‌ಗಳು, 8 ಮೊಬೈಲ್ ಫೋನ್‌ಗಳು ಮತ್ತು ಆನ್‌ಲೈನ್‌ನಲ್ಲಿ ಟಿಕೆಟ್ ಮಾರಾಟ ಮಾಡಲು ಯತ್ನಿಸಿದ ವಾಟ್ಸಪ್ ಸ್ಕ್ರೀನ್‌ಶಾಟ್ ಪ್ರತಿಗಳನ್ನು ಜಪ್ತಿಮಾಡಿದ್ದಾರೆ. ಕಬ್ಬನ್‌ಪಾರ್ಕ್ ಠಾಣಾ ವ್ಯಾಪ್ತಿಯಲ್ಲಿ 10 ಮಂದಿಯನ್ನು ಬಂಧಿಸಿ ಅವರಿಂದ 18 ಟಿಕೆಟ್ ಹಾಗೂ 7 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ಇನ್ನು ಚಾಮರಾಜಪೇಟೆ ವ್ಯಾಪ್ತಿಯಲ್ಲಿ ಓರ್ವ ಆರೋಪಿಯನ್ನು ಬಂಧಿಸಿ ಆತನಿಂದ 10 ಟಿಕೆಟ್ ಹಾಗೂ ಒಂದು ಮೊಬೈಲ್ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಒಟ್ಟು 7 ಪ್ರಕರಣಗಳು ದಾಖಲಾಗಿದ್ದು, ಸದ್ಯ ಆರೋಪಿಗಳ ವಿರುದ್ಧ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದರು.

ಗುಂಡೇಟಿನಿಂದ ಚಿರತೆ ಸಾವು: ತನಿಖೆಗೆ ಆದೇಶ

ಮೈಸೂರು: ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಗುಳ್ಳೆದಹಳ್ಳ ರಾಜ್ಯ ಅರಣ್ಯದಿಂದ 2 ಕಿ.ಮೀ ದೂರದಲ್ಲಿರುವ ಕೊಪ್ಪ ವಿಭಾಗದಲ್ಲಿ ಗುಂಡೇಟಿನಿಂದ ಚಿರತೆ ಸಾವಿಗೀಡಾಗಿರುವ ಘಟನೆ ನಡೆದಿದೆ. ಎರಡು ವರ್ಷ ವಯಸ್ಸಿನ ಹೆಣ್ಣು ಚಿರತೆಯೊಂದು ಗುಂಡೇಟಿನಿಂದ ಮೃತಪಟ್ಟಿರುವುದು ಕಂಡು ಬಂದಿದೆ. ಚಿರತೆಯ ದೇಹದೊಳಗೆ ಮೂರು ಗುಂಡುಗಳು ಪತ್ತೆಯಾಗಿವೆ.



ಈ ಘಟನೆ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಲಿಖಿತ ಸೂಚನೆ ನೀಡಿರುವ ಅವರು, ಚಿರತೆ ಹತ್ಯೆ ಅತ್ಯಂತ ನೋವಿನ ಸಂಗತಿಯಾಗಿದ್ದು, ವನ್ಯಜೀವಿ ಅಂಗಾಂಗಕ್ಕಾಗಿ ಕಳ್ಳಬೇಟೆ ಇನ್ನೂ ನಡೆಯುತ್ತಿದೆ ಎಂಬುದಕ್ಕೆ ಪುಷ್ಟಿ ನೀಡುತ್ತಿದೆ. ಮೃತ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿದ ಡಾ. ಆದರ್ಶ್ ಗುಂಡೇಟಿನಿಂದ ಚಿರತೆ ಹತ್ಯೆಯಾಗಿದೆ ಎಂದು ವರದಿ ಮಾಡಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ವನ್ಯಜೀವಿ ಕಳ್ಳಬೇಟೆಗಾರರನ್ನು ಪತ್ತೆ ಹಚ್ಚಿ ಕಾನೂನು ರೀತ್ಯ ಶಿಕ್ಷೆ ಕೊಡಿಸಲು ಮತ್ತು ಈ ವಲಯದಲ್ಲಿ ಗಸ್ತು ವೈಫಲ್ಯವಾಗಿದ್ದಲ್ಲಿ ಸಂಬಂಧಿತ ಗಸ್ತು ಸಿಬ್ಬಂದಿಯ ಮೇಲೆ ಶಿಸ್ತುಕ್ರಮ ಜರುಗಿಸಲು ಹಾಗೂ ಅರಣ್ಯ ಅಪರಾಧ ನಿಯಂತ್ರಣ ಕೋಶವನ್ನು ಹೆಚ್ಚು ಸಕ್ರಿಯಗೊಳಿಸಲು ಸೂಚನೆ ನೀಡಿದ್ದಾರೆ.

ಅಪ್ರಾಪ್ತರ ಗರ್ಭಧಾರಣೆಯ ಲೆಕ್ಕಪರಿಶೋಧನೆ ಕಡ್ಡಾಯ

ಬೆಂಗಳೂರು: ತಾಲೂಕು ಆರೋಗ್ಯ ಅಧಿಕಾರಿಯಿಂದ ಹದಿಹರೆಯದ ಗರ್ಭಧಾರಣೆಯ ಲೆಕ್ಕಪರಿಶೋಧನೆ ಕಡ್ಡಾಯವಾಗಿ ಅನುಷ್ಠಾನ ಆಗಬೇಕೆಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಗುರುತಿಸಲಾದ ಎಲ್ಲಾ ಹದಿಹರೆಯದ ಗರ್ಭಧಾರಣೆಯನ್ನು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಸಂಸ್ಥೆಗಳು ಕಡ್ಡಾಯವಾಗಿ ವರದಿ ಮಾಡಬೇಕಿದೆ. ಲೆಕ್ಕಪರಿಶೋಧನೆಯಲ್ಲಿ ಮದುವೆ ವಯಸ್ಸು, ಶೈಕ್ಷಣಿಕ ಸ್ಥಿತಿ, ಶಾಲಾ ಹಾಜರಾತಿ, ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ ಜಾಗೃತಿ, ಗರ್ಭನಿರೋಧಕ ಮತ್ತು ಸಮಾಲೋಚನೆ ಸೇವೆಗಳ ಲಭ್ಯತೆ, ಸಾಮಾಜಿಕ-ಆರ್ಥಿಕ ಮತ್ತು ಕೌಟುಂಬಿಕ ದುರ್ಬಲತೆಗಳು ಬಗ್ಗೆ ಮಾಹಿತಿ ಸಂಗ್ರಹಿಸಬೇಕಿದೆ. ಮಾರ್ಗಸೂಚಿಗಳ ಪ್ರಕಾರ ಗರ್ಭನಿರೋಧಕ ಸೇವೆಗಳು ಮತ್ತು ಗರ್ಭಧಾರಣೆಯ ಪರೀಕ್ಷಾ ಕಿಟ್‌ಗಳನ್ನು ಒದಗಿಸುವುದು. ಶಾಲೆ ಬಿಟ್ಟವರು, ವಲಸಿಗರು ಮತ್ತು ಸಾಮಾಜಿಕವಾಗಿ ದುರ್ಬಲ ಕುಟುಂಬಗಳು ಸೇರಿದಂತೆ ದುರ್ಬಲ ಹದಿಹರೆಯದ ಹುಡುಗಿಯರ ಗುರುತಿಸುವಿಕೆ ಮತ್ತು ಮ್ಯಾಪಿಂಗ್ ಸೇರಿದಂತೆ ಹದಿಹರೆಯದ ಗರ್ಭಿಣಿ ಹುಡುಗಿಯರಿಗೆ ಸಮಾಲೋಚನೆ ನಡೆಸಬೇಕಿದೆ. ಎಲ್ಲಾ ಪ್ರಕರಣಗಳನ್ನು ಕಟ್ಟುನಿಟ್ಟಾದ ಗೌಪ್ಯತೆಯಿಂದ ಮತ್ತು ಸಂಬಂಧಿತ ಮಕ್ಕಳ ರಕ್ಷಣಾ ಕಾನೂನುಗಳ ಅಡಿಯಲ್ಲಿ ಕಡ್ಡಾಯ ವರದಿ ಮಾಡುವ ಅವಶ್ಯಕತೆಗಳನ್ನು ಒಳಗೊಂಡಂತೆ ಅನ್ವಯವಾಗುವ ಕಾನೂನು ನಿಬಂಧನೆಗಳಿಗೆ ಅನುಸಾರವಾಗಿ ನಿರ್ವಹಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾಜ್ಯದ ಮುಂದಿನ ಭವಿಷ್ಯ ತೀರ್ಮಾನ: ಪ್ರತಿಪಕ್ಷ ನಾಯಕ ಅಶೋಕ
ಬಡವ-ಶ್ರೀಮಂತರ ಸ್ಪರ್ಧೆ

ಬೆಂಗಳೂರು: ರಾಜ್ಯದ ಎರಡು ಕ್ಷೇತ್ರಗಳಲ್ಲಿ ನಡೆಯುವ ಉಪಚುನಾವಣೆಯಲ್ಲಿ ಬಡವರು ಹಾಗೂ ಶ್ರೀಮಂತರ ನಡುವೆ ಸ್ಪರ್ಧೆ ನಡೆಯಲಿದೆ. ಇದರಲ್ಲಿ ಕಾಂಗ್ರೆಸ್ ಸೋತು ಮುಂದಿನ ರಾಜ್ಯದ ಭವಿಷ್ಯ ತೀರ್ಮಾನವಾಗಲಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗರೆ ಹಾಗೂ ಬಾಗಲಕೋಟೆಯಲ್ಲಿ ಬಡವರು ಮತ್ತು ಶ್ರೀಮಂತರ ನಡುವೆ ಚುನಾವಣೆ ನಡೆಯುತ್ತಿದೆ. ಬಡವರನ್ನೇ ಗೆಲ್ಲಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದರಿಂದ ಬಡ ಅಭ್ಯರ್ಥಿಗಳನ್ನು ಬಿಜೆಪಿಯಿಂದ ಕಣಕ್ಕಿಳಿಸಲಾಗಿದೆ ಎಂದರು.

ದಾವಣಗರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ ಮುಂದೆ ಮುಸ್ಲಿಮರಿಗೆ ಅವಕಾಶ ಸಿಗುವುದಿಲ್ಲ ಎಂದು ಗೊತ್ತಾಗಿ ಮುಸ್ಲಿಮರು ಕಾಂಗ್ರೆಸ್ ಪಕ್ಷವನ್ನು ವಿರೋಧಿಸುತ್ತಿದ್ದಾರೆ. ಸಚಿವ ಜಮೀರ್ ಅಹ್ಮದ್ ಕ್ಷೇತ್ರಕ್ಕೆ ಪ್ರಚಾರಕ್ಕೆ ಬಾರದೆ ಓಡಿದ್ದು, ಅವರ ಬಗ್ಗೆ ಭಿನ್ನಾಭಿಪ್ರಾಯವಿದೆ. ಹಿಂದುಳಿದ ವರ್ಗಗಳು ಒಂದಾಗಬೇಕೆಂದು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಟಿಕೆಟ್ ಕೂಡ ಹಿಂದುಳಿದವರಿಗೆ ನೀಡಿಲ್ಲ ಎಂದು ತಿಳಿಸಿದರು.

ದಾವಣಗೆರೆಯಲ್ಲಿ ಸಾಮಾನ್ಯ ವ್ಯಕ್ತಿಗೆ ಬಿಜೆಪಿ ಟಿಕೆಟ್ ನೀಡಿದೆ. ಆದರೆ, ಕಾಂಗ್ರೆಸ್ ಬಲಾಢ್ಯರಿಗೆ ಟಿಕೆಟ್ ನೀಡಿದೆ. ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿಯ ಬಗ್ಗೆ ಉತ್ತಮ ಅಭಿಪ್ರಾಯವಿದೆ. ಕಾಂಗ್ರೆಸ್ ಎರಡೂ ಕಡೆ ವಂಶಾಡಳಿತಕ್ಕೆ ಅವಕಾಶ ಕೊಟ್ಟಿದೆ. ಆದ್ದರಿಂದ ಎರಡೂ ಕಡೆ ಬಿಜೆಪಿಗೆ ಗೆಲ್ಲುವ ಅವಕಾಶವಿದೆ. ಕಾಂಗ್ರೆಸ್ ಮುಖಂಡರು ಬಾಗಲಕೋಟೆಯಲ್ಲಿ ರೌಡಿಸಂ ಮಾಡಿದ್ದು, ಆ ಬಗ್ಗೆ ದೂರು ಸಲ್ಲಿಕೆಯಾಗಿದೆ. ಸರ್ಕಾರದ ಭ್ರಷ್ಟಾಚಾರ, ಗ್ಯಾರಂಟಿಗಳ ಅಸಮರ್ಪಕ ಜಾರಿಯಿಂದಾಗಿ ಜನವಿರೋಧಿ ಅಲೆ ಉಂಟಾಗಿದೆ. ಬಜೆಟ್ ಮಂಡನೆ ಬಳಿಕ ಎಲ್ಲಕ್ಕೂ ತೆರಿಗೆ ಹೇರುವ ಕೆಲಸ ಮಾಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಆಡಳಿತ ಕುಸಿದಿದೆ. ಯಾವುದೇ ಅಭಿವೃದ್ಧಿ ಯೋಜನೆ ನೀಡುತ್ತಿಲ್ಲ. ಮುಖ್ಯಮಂತ್ರಿ ಕುರ್ಚಿಗಾಗಿ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಕಾದಾಡುತ್ತಿದ್ದಾರೆ. ಕೇರಳ ವಿಧಾನಸಭಾ ಚುನಾವಣೆ ಗೆಲ್ಲುವ ವಿಶ್ವಾಸವಿಲ್ಲದೆ ಸಿದ್ದರಾಮಯ್ಯ ಮರಳಿ ಬಂದಿದ್ದಾರೆ. ಈ ಉಪ ಚುನಾವಣೆ ಕಾಂಗ್ರೆಸ್‌ನ ಅಸಲಿ ಮುಖವನ್ನು ಬಯಲು ಮಾಡಲಿದೆ. ಅಲ್ಪಸಂಖ್ಯಾತರನ್ನು ಮತಬ್ಯಾಂಕ್ ಮಾಡಿಕೊಳ್ಳುವ ಪ್ರಯತ್ನ ಕಾಂಗ್ರೆಸ್‌ನಿಂದ ನಡೆದಿದೆ ಎಂದರು.

ಈ ಉಪ ಚುನಾವಣೆಯು ಕಾಂಗ್ರೆಸ್ ಸರ್ಕಾರವನ್ನು ಕಿತ್ತುಹಾಕಲು ಅವಕಾಶ ಕೊಡಲಿದ್ದು, ಭವಿಷ್ಯವನ್ನು ತೀರ್ಮಾನಿಸಲಿದೆ. ಯುವಜನರು ಉದ್ಯೋಗವಿಲ್ಲದೆ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಎಲ್ಲ ಕಡೆ ಆಡಳಿತ ವಿರೋಧಿ ಅಲೆ ಕಂಡುಬಂದಿದೆ. ಸರ್ಕಾರಕ್ಕೆ ಬುದ್ಧಿ ಕಲಿಸಲು ಇದು ಜನರಿಗೆ ಸಿಕ್ಕ ಅವಕಾಶ ಎಂದರು.

ನಾಲಿಗೆ ಹರಿಬಿಟ್ಟ ಖರ್ಗೆ

ಮಂಗಳೂರಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಮಾಡಿದವರು ಯಾರು ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಲಿ. ಇವರಿಗೆ ಭಯೋತ್ಪಾದಕರು ದೇವದೂತರಂತೆ ಕಾಣುತ್ತಾರೆ. ನಕ್ಸಲರ ವಿರುದ್ಧ ಒಂದೇ ಒಂದು ಮಾತು ಬಾಯಲ್ಲಿ ಬರುವುದಿಲ್ಲ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕುರಿತು ಮಾತ್ರ ಟೀಕೆ ಮಾಡುತ್ತಾರೆ. ಈಗ ಎಲ್ಲ ರಾಜ್ಯಗಳಲ್ಲಿ ವಿಷದ ಹಾವುಗಳು ಮುಕ್ತವಾಗುತ್ತಿವೆ. ಇನ್ನು ಮೂರು ರಾಜ್ಯಗಳಲ್ಲಿರುವ ಹಾವುಗಳನ್ನು ಓಡಿಸಬೇಕಿದೆ. ಜನರು ಯಾರು ಹಾವು ಎಂದು ನಿರ್ಧಾರ ಮಾಡುತ್ತಾರೆ. ಇಂತಹ ಮಾತಿಗೆ ಮಗನೇ ಪ್ರೇರಣೆ ಎಂದು ಆರ್. ಅಶೋಕ ಹೇಳಿದರು.

ಕೇಂದ್ರ ಸರ್ಕಾರಕ್ಕೆ ಡಿ.ಕೆ. ಸುರೇಶ್ ಒತ್ತಾಯ
ಉತ್ತರದ ರಾಜ್ಯಗಳಿಗೆ ತೆರಿಗೆ ಹಂಚಿಕೆಯಾಗಲಿ

ಬೆಂಗಳೂರು: ಲೋಕಸಭಾ, ವಿಧಾನಸಭಾ ಕ್ಷೇತ್ರಗಳ ಮರು ವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳಲ್ಲಿ ಕ್ಷೇತ್ರಗಳು ಕಡಿಮೆಯಾಗುವುದರ ಜೊತೆಗೆ ಆರ್ಥಿಕ ಮುಗ್ಗಟನ್ನು ಎದುರಿಸಬೇಕಾಗುತ್ತದೆ. ನಮ್ಮ ತೆರಿಗೆ ಉತ್ತರದ ರಾಜ್ಯಗಳಿಗೆ ಹಂಚಿಕೆಯಾಗಲಿದೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಕಳವಳ ವ್ಯಕ್ತಪಡಿಸಿದರು.



ಮಂಗಳವಾರ ತಮ್ಮ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕ್ಷೇತ್ರಗಳ ಮರು ವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದೆ. ದಕ್ಷಿಣದ ರಾಜ್ಯಗಳು ಎಚ್ಚೆತ್ತುಕೊಳ್ಳಬೇಕು. ನಾನು ಈ ಬಗ್ಗೆ ಹಿಂದೆಯೇ ಹೇಳಿದ್ದೆ ಎಂದರು. ಒಂದಲ್ಲ ಒಂದು ದಿನ ಈ ಕೂಗು ಎದ್ದೇಳಲಿದೆ ಎಂದಿದ್ದೆ, ಜನರು ಪರ್ಯಾಯ ಮಾರ್ಗಗಳನ್ನು ಆಲೋಚನೆ ಮಾಡುತ್ತಾರೆ ಎಂದು ಹೇಳಿದ್ದೆ. ಎಷ್ಟು ಸೀಟು ಹೋಗಲಿದೆ, ಬರಲಿದೆ ಎನ್ನುವುದು ಮುಖ್ಯವಲ್ಲ. ಒಟ್ಟಾರೆ ದಕ್ಷಿಣದ ಹಣವನ್ನು ಉತ್ತರದ ರಾಜ್ಯಗಳಿಗೆ ತೆಗೆದುಕೊಂಡು ಹೋಗುವಂತಹ ಹುನ್ನಾರ ಇದಾಗಿದೆ ಎಂದು ಹೇಳಿದರು. 2011ರ ಜನಗಣತಿಯ ಅನ್ವಯ ವಿಂಗಡಣೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಇದು ಇನ್ನೂ ಮಾರಕ. 2011ರ ಜನಗಣತಿ ಪ್ರಕಾರ ಬೆಂಗಳೂರಿನ ಜನಸಂಖ್ಯೆ 60 ರಿಂದ 70 ಲಕ್ಷ. ಈಗ 1.40 ಕೋಟಿ ಜನಸಂಖ್ಯೆಯಿದೆ. ಕರ್ನಾಟಕದಲ್ಲಿ 7 ಕೋಟಿಗೂ ಮೀರಿ ಜನಸಂಖ್ಯೆ ಬೆಳೆಯುತ್ತಿದೆ. ಇದರ ಜೊತೆಗೆ ಆರ್ಥಿಕ ಸವಾಲು ಸೇರಿದಂತೆ ಅನೇಕ ಸವಾಲುಗಳು ಎದುರಾಗುತ್ತವೆ. ಎಲ್ಲಾ ಪಕ್ಷಗಳು ಇದರ ಬಗ್ಗೆ ಚಿಂತನೆ ಮಾಡಬೇಕು ಎಂದು ತಿಳಿಸಿದರು.

ಪ್ರಧಾನಿ ಸಂದೇಶ ನೀಡಲಿ

ಯುದ್ಧದಿಂದ ಸಾಕಷ್ಟು ಸಮಸ್ಯೆಗಳನ್ನು ನಮ್ಮ ದೇಶ ಎದುರಿಸುತ್ತಿದೆ. ಇದರ ಬಗ್ಗೆ ಕೇಂದ್ರ ಸರ್ಕಾರ ತನ್ನ ಮೌನವನ್ನು ಮುರಿದಿಲ್ಲ. ಯಾವ ವಿಚಾರದಲ್ಲಿ ಸಮಸ್ಯೆಯಿದೆ. ಮುಂದಿನ ಆರು ತಿಂಗಳು ಹೇಗೆ ಇವುಗಳನ್ನು ಎದುರಿಸಬೇಕು. ಇದಕ್ಕೆ ಯಾವ ಕ್ರಮಗಳನ್ನು ಅನುಸರಿಸಬೇಕು ಎನ್ನುವ ಸಂದೇಶವನ್ನು ಪ್ರಧಾನಿಯವರು ನೀಡಬೇಕು ಎಂದರು.

ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಕಿವಿಮಾತು
ಸಮಾಜ ಸೇವೆಗೂ ಜ್ಞಾನ ದಾರಿಯಾಗಲಿ

ಬೆಂಗಳೂರು: ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಸಮಾಜ ಮತ್ತು ರಾಷ್ಟ್ರದ ಕಲ್ಯಾಣಕ್ಕಾಗಿ ಬಳಸಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಕರೆ ನೀಡಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಮಂಗಳವಾರ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ನೀವು ಸಂಪಾದಿಸಿರುವ ಜ್ಞಾನವು ವೈಯಕ್ತಿಕ ಪ್ರಗತಿಗೆ ಮಾತ್ರ ಸೀಮಿತವಾಗಿಸದೇ ಸಮಾಜ ಸೇವೆಗೂ ದಾರಿಯಾಗಬೇಕು. ಜ್ಞಾನವು ಜನರ ಹಿತಕ್ಕಾಗಿ ಬಳಸಿದಾಗ ಮಾತ್ರ ಅದರ ನಿಜವಾದ ಮೌಲ್ಯ ಹೊರಹೊಮ್ಮುತ್ತದೆ. ಜ್ಞಾನವು ವಿನಮ್ರತೆ ತರುತ್ತದೆ. ವಿನಮ್ರತೆ ಯೋಗ್ಯತೆಯನ್ನು, ಯೋಗ್ಯತೆ ಸಮೃದ್ಧಿಯನ್ನು ಮತ್ತು ಸಮೃದ್ಧಿ ಸದಾಚಾರವನ್ನು ತರುತ್ತದೆ ಎಂದರು.

ಸಂಸ್ಕೃತವು ಕೇವಲ ಒಂದು ಭಾಷೆಯಲ್ಲ, ಅದು ಭಾರತದ ಆತ್ಮವಾಗಿದೆ. ನಮ್ಮ ನಾಗರಿಕತೆ, ಸಂಸ್ಕೃತಿ ಮತ್ತು ತತ್ತ್ವಶಾಸ್ತ್ರದ ಮೂಲಾಧಾರವಾಗಿದೆ. ವೇದ, ಉಪನಿಷತ್ತು ಮತ್ತು ಮಹಾಕಾವ್ಯಗಳು ಸಂಸ್ಕೃತದಲ್ಲೇ ಹುಟ್ಟಿಕೊಂಡಿವೆ. ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಜ್ಞಾನದ ಕ್ಷೇತ್ರದಲ್ಲಿ ಸಂಸ್ಕೃತದ ರಚನಾತ್ಮಕ ಸ್ಪಷ್ಟತೆಗೆ ಉಪಯುಕ್ತವಾಗಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಸ್ವಾವಲಂಬಿ ಭಾರತ ಮತ್ತು ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದಲ್ಲಿ ಯುವಕರ ಪಾತ್ರ ಅತ್ಯಂತ ಮುಖ್ಯವಾಗಿದೆ. ಪ್ರಾಚೀನ ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಸಂಯೋಜಿಸಿ, ನವೀನತೆ ಮತ್ತು ಸಂಶೋಧನೆಯಲ್ಲಿ ತೊಡಗಿಕೊಳ್ಳಬೇಕು. ಇಡೀ ಜಗತ್ತು ಮಾನಸಿಕ ಒತ್ತಡ, ಪರಿಸರ ಬಿಕ್ಕಟ್ಟು, ಸಾಮಾಜಿಕ ಅಸಮತೋಲನ ಮತ್ತು ಮೌಲ್ಯಹೀನತೆಯಂತಹ ಸವಾಲುಗಳನ್ನು ಎದುರಿಸುತ್ತಿರುವಾಗ, ಭಾರತೀಯ ಜ್ಞಾನ ಪರಂಪರೆ, ಸಂಸ್ಕೃತ ಸಾಹಿತ್ಯ ಮತ್ತು ಸಂಸ್ಕೃತದ ವಸುಧೈವ ಕುಟುಂಬಕಂ ಹಾಗೂ ಸರ್ವೇ ಭವಂತು ಸುಖಿನಃ ಎಂಬ ಶಾಶ್ವತ ತತ್ತ್ವಗಳು ಮಾನವೀಯತೆಗೆ ಹೊಸ ದಿಕ್ಕನ್ನು ನೀಡುತ್ತಿವೆ ಎಂದು ತಿಳಿಸಿದರು.

ಮುಂಬರುವ ವರ್ಷಗಳಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು



ಪ್ರಾಚೀನ ಜ್ಞಾನ ಮತ್ತು ಆಧುನಿಕ ವಿಜ್ಞಾನದ ನಡುವೆ ಸೇತುವೆಯನ್ನು ನಿರ್ಮಿಸಲು ಶ್ರಮಿಸುತ್ತದೆ ಎಂದು ನನಗೆ ವಿಶ್ವಾಸವಿದೆ. ನಮ್ಮ ಧರ್ಮಗ್ರಂಥಗಳಲ್ಲಿ ಲಭ್ಯವಿರುವ ಯೋಗ, ಆಯುರ್ವೇದ, ಧ್ಯಾನ, ಪರಿಸರ ಸಮತೋಲನ, ಕುಟುಂಬ ವ್ಯವಸ್ಥೆ ಮತ್ತು ನೈತಿಕ ಜೀವನದ ತತ್ವಗಳು ಸಾವಿರಾರು ವರ್ಷಗಳ ಹಿಂದೆ ಎಷ್ಟು ಪ್ರಸ್ತುತವಾಗಿದ್ದವೋ ಇಂದಿಗೂ ಅಷ್ಟೇ ಪ್ರಸ್ತುತವಾಗಿವೆ ಎಂದರು.

ಸಂಸದ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, ಸಂಸ್ಕೃತ ಕೇವಲ ಒಂದು ಭಾಷೆ ಅಲ್ಲ, ಬದಲಾಗಿ ಅದು ನಮ್ಮ ನೈತಿಕ ಮೌಲ್ಯ, ಸಿದ್ಧಾಂತ, ಸಾಂಸ್ಕೃತಿಕ ಪರಂಪರೆಯ ಅಭಿವ್ಯಕಿಯಾಗಿದೆ. ಸಂಸ್ಕೃತ ಭಾಷೆಯಲ್ಲಿ ವಿಪುಲವಾದ ಜ್ಞಾನ ಸಂಪತ್ತು ಅಡಗಿದೆ ಎಂದರು. ಭಿಕ್ಷು ಆನಂದ ಥೇರೊ, ಡಾ.ಪುಷ್ಪಾ ದೀಕ್ಷಿತ್, ಡಾ.ವ್ಯಾಸನಕೆರೆ ಪ್ರಭಂಜನಾಚಾರ್ಯ, ಪ್ರೊ. ಶಿಂಗಪ್ಪ ಎಚ್.ಎಂ., ಪ್ರೊ.ಸುಕಾಂತ್ ಕುಮಾರ್ ಸೇನಾಪತಿ ಅವರಿಗೆ ಗೌರವ ಪದವಿ, 42 ವಿದ್ಯಾರ್ಥಿಗಳಿಗೆ ನಗದು ಬಹುಮಾನ, 53 ವಿದ್ಯಾರ್ಥಿಗಳಿಗೆ ಸ್ವರ್ಣ ಪದಕ, 36 ಪಿಎಚ್.ಡಿ ಪದವಿ ಹಾಗೂ 917 ವಿದ್ಯಾರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿವಿ ಕುಲಪತಿ ಪ್ರೊ. ಅಹಲ್ಯಾ ಎಸ್. ಉಪಸ್ಥಿತರಿದ್ದರು.

ಪಂಚಮಸಾಲಿ ಸಮಾಜದ ಬೇಡಿಕೆ ಆದ್ಯತೆ ಮೇಲೆ ಈಡೇರಿಕೆ: ಸಿಎಂ

ಬಾಗಲಕೋಟೆ: ಪಂಚಮಸಾಲಿ ಸಮಾಜದ ಎಲ್ಲ ಬೇಡಿಕೆಗಳನ್ನು ಆದ್ಯತೆ ಮೇಲೆ ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಪಂಚಮಸಾಲಿ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಮಾಜ ಬಂಧುಗಳು ಪಕ್ಷಕ್ಕೆ ನಿರಂತರ ಬೆಂಬಲ ನೀಡುತ್ತಿದ್ದು, ಪ್ರಸಕ್ತ ಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರನ್ನು ಬೆಂಬಲಿಸಬೇಕು ಎಂದು ಕೋರಿದರು. ದಿ.ಎಚ್.ವೈ.ಮೇಟಿ ಅವರು ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಅಭಿವೃದ್ಧಿ ಬಗ್ಗೆ ಅವರು ಇನ್ನೂ ಸಾಕಷ್ಟು ಕನಸುಗಳನ್ನು ಕಂಡಿದ್ದರು. ಆ ಕನಸುಗಳು ಸಾಕಾರಗೊಳ್ಳಲು ಮತ್ತೊಮ್ಮೆ ಕಾಂಗ್ರೆಸ್‌ಗೆ ಮತ ನೀಡಬೇಕು. ನಿಮ್ಮ ಸಮಾಜದ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದರು.



ಸಮಾಜದ ಪರವಾಗಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಮಾತನಾಡಿ, ಸಮಾಜದ ಎಲ್ಲ ಬಂಧುಗಳು ಪಕ್ಷದ ಬೆಂಬಲಕ್ಕೆ ನಿಂತಿದ್ದಾರೆ. ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲ ಭರವಸೆಗಳನ್ನು ಈಡೇರಿಸಲಿದೆ ಎಂಬ ವಿಶ್ವಾಸವಿದೆ. ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸೋಣ ಎಂದರು.

ಏ.9ಕ್ಕೆ ದ್ವಿತೀಯ ಪಿಯು ಫಲಿತಾಂಶ?

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-1ರ ಫಲಿತಾಂಶ ಏ.9ಕ್ಕೆ ಪ್ರಕಟಿಸೋಣ, ಸಿದ್ಧರಾಗಿರಿ ಎಂದು ಶಾಲಾ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಪರೀಕ್ಷಾ ಮಂಡಳಿಯ ಉನ್ನತ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ಪರೀಕ್ಷೆ ಫಲಿತಾಂಶ ಪ್ರಕಟದ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ. ಏ.9ಕ್ಕೆ ಉಪ ಚುನಾವಣೆಯ ಮತದಾನ ನಡೆಯಲಿದ್ದು, ನಂತರ ಸಂಜೆ 6 ನಂತರ ಪಿಯು ಫಲಿತಾಂಶ ಪ್ರಕಟಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ತಿಳಿದು ಬಂದಿದೆ. ಶಾಲಾ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಏ.9ಕ್ಕೆ ಫಲಿತಾಂಶ ಪ್ರಕಟಿಸೋಣ, ಸಿದ್ಧರಾಗಿರಿ ಎಂಬ ಮೌಖಿಕ ಸೂಚನೆ ನೀಡಿದ್ದಾರೆ. ಆದರೆ, ಅಂದು ಎಷ್ಟು ಗಂಟೆಗೆ ಫಲಿತಾಂಶ ಪ್ರಕಟವಾಗಲಿದೆ ಎಂಬ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ನೀಡಿಲ್ಲ ಎಂದು ಪರೀಕ್ಷಾ ಮಂಡಳಿಯ ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ.

ಮಾನವ ಕಳ್ಳ ಸಾಗಣೆ ಅನುಮಾನ | ಪ್ರತಿ ದಿನವೂ ಎರಡು, ಮೂರು ಪ್ರಕರಣ ದಾಖಲು
ಹುಬ್ಬಳ್ಳಿಯಲ್ಲಿ ಹೆಚ್ಚಿದ ಯುವತಿಯರ ನಾಪತ್ತೆ ಪ್ರಕರಣ

▸ **ವಿಜಯಕುಮಾರ ಬೆಳ್ಳೇರಿಮಠ**


ಹುಬ್ಬಳ್ಳಿ: ಒಂದು ಕಡೆ ಹುಬ್ಬಳ್ಳಿ-ಧಾರವಾಡ ಮಹಾನಗರದ ಜಿಮ್‌ಗಳಲ್ಲಿ ಲವ್ ಜಿಹಾದ್ ಯತ್ನ ಆರೋಪ ಪದೇ ಪದೆ ಕೇಳಿ ಬರುತ್ತಿದ್ದು, ಇನ್ನೊಂದು ಕಡೆ ಅಪ್ರಾಪ್ತ ಬಾಲಕಿಯರು ಹಾಗೂ ಯುವತಿಯರ ನಾಪತ್ತೆ ಪ್ರಕರಣ ಹೆಚ್ಚುತ್ತಿವೆ.

2023ರಿಂದ ಈವರೆಗೆ ಅವಳಿನಗರದಲ್ಲಿ 694 ಯುವತಿಯರು ನಾಪತ್ತೆಯಾಗಿದ್ದು, ಬಹುತೇಕರು ಮದುವೆಯಾಗಿಯೇ ಪತ್ತೆಯಾಗಿದ್ದಾರೆ. ಅದರಲ್ಲಿ ಇನ್ನೂ 34 ಯುವತಿಯರು ಪತ್ತೆಯಾಗದಿರುವುದು ಮಾನವ ಕಳ್ಳ ಸಾಗಾಣಿಕೆ ಎಂಬ ಅನುಮಾನ ಸಾರ್ವಜನಿಕರಲ್ಲಿ ದಟ್ಟವಾಗಿ ಮೂಡುವಂತಾಗಿದೆ.

ಪೊಲೀಸರಿಗೆ ಹಾಗೂ ಪಾಲಕರು ಹುಡುಕಾಟದಲ್ಲಿದ್ದು, ವರ್ಷಗಳು ಕಳೆದರು ಇನ್ನೂ ಪತ್ತೆಯಾಗಿಲ್ಲ. ಪೊಲೀಸ್ ಇಲಾಖೆ ಏನು ಮಾಡುತ್ತಿದೆ ಎಂಬುವುದು ಸಾರ್ವಜನಿಕರ ಪ್ರಶ್ನೆಯಾಗಿದೆ.

ಸ್ನೇಹಿತರ ಮನೆಗೆ, ಕಾಲೇಜಿಗೆ, ಪರೀಕ್ಷೆಗೆ, ದೇವಸ್ಥಾನಕ್ಕೆ, ಪ್ರವಾಸಕ್ಕೆ, ಹೊಲಿಗೆ ತರಬೇತಿಗೆ, ಔಷಧಿ ಅಂಗಡಿಗೆ, ಮಾರುಕಟ್ಟೆಗೆ, ಸಂಘದ ಹಣ ತುಂಬಲು, ಹಾಲು ತರಲು ಹೀಗೆ ಮನೆಯಲ್ಲಿ ವಿವಿಧ ಕಾರಣ ಹೇಳಿ ಯುವತಿಯರು ನಾಪತ್ತೆಯಾಗಿದ್ದಾರೆ.

ಹು-ಧಾ ಪೊಲೀಸ್ ಕಮಿಷನರೇಟ್ ವ್ಯಾಪ್ತಿ ವಿವಿಧ ಪೊಲೀಸ್ ಠಾಣೆಯಲ್ಲಿ ಪ್ರತಿ ದಿನವೂ 2-3 ಪ್ರಕರಣಗಳು ದಾಖಲಾಗುತ್ತಿವೆ.



ಇನ್ನು ಕೆಲವರು ಮನೆಯಲ್ಲಿ ಯಾರೂ ಇಲ್ಲದ ವೇಳೆ ಹಾಗೂ ರಾತ್ರಿ ಎಲ್ಲರೂ ಮಲಗಿದ್ದ ಸಂದರ್ಭದಲ್ಲಿ ನಾಪತ್ತೆಯಾಗಿದ್ದಾರೆ. ಹೀಗೆ ನಾಪತ್ತೆಯಾದ ಯುವತಿಯರಲ್ಲಿ 18 ರಿಂದ 23 ವರ್ಷದ ಒಳಗಿನವರೇ ಹೆಚ್ಚು ಎಂಬುವುದು ದಾಖಲಾದ ಪ್ರಕರಣಗಳ ಅಂಕಿ-ಅಂಶಗಳಿಂದ ಗೊತ್ತಾಗಿದೆ.

2025ರ ಅಕ್ಟೋಬರ್‌ನಿಂದ 2026ರ ಮಾರ್ಚ್ ವರೆಗೆ ಇಂತಹ 60ಕ್ಕೂ ಹೆಚ್ಚು ಪ್ರಕರಣಗಳನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಪ್ರಸ್ತುತ ವರ್ಷ ಜನವರಿಯಿಂದ ಮಾಚ್‌ವರೆಗೆ ವಿವಿಧ ಪೊಲೀಸ್ ಠಾಣೆಗಳಲ್ಲಿ 30 ನಾಪತ್ತೆ ಪ್ರಕರಣಗಳು ದಾಖಲಾಗಿವೆ. 14 ಮಂದಿ ಪತ್ತೆಯಾಗಿದ್ದಾರೆ. ಪತ್ತೆಯಾದ ಬಹುತೇಕ ಯುವತಿಯರು ಮದುವೆಯಾಗಿದೆ. ಕಾಲೇಜ್, ಜಿಮ್, ವಿವಿಧ ಸಮಾರಂಭದಲ್ಲಿ ಪರಿಚಯವಾದ ಯುವಕರೊಂದಿಗೆ ನಾಪತ್ತೆಯಾಗಿರುವುದು ಪೊಲೀಸರು ತನಿಖೆಯಿಂದ ತಿಳಿದು ಬಂದಿದೆ.

ಪಾಲಕರು ಮಗಳು ಮರಳಿ ಮನೆಗೆ ಬಾರದ ಕಾರಣಕ್ಕೆ ಹಾಗೂ ನಾಪತ್ತೆ ಆಗಿರುವುದಕ್ಕೆ ಸ್ನೇಹಿತ, ಪಕ್ಕದ ಮನೆಯ ಹುಡುಗ ಹಾಗೂ ಪರಿಚಯದ ಹುಡುಗ ಅಪಹರಣ ಮಾಡಿದ್ದಾನೆ ಎಂದು ದೂರು ನೀಡಿದ್ದಾರೆ. ಇಂತಹ ಪ್ರಕರಣಗಳ ಬೆನ್ನು ಬಿದ್ದ ಪೊಲೀಸರಿಗೆ ಕಂಡು ಬಂದಿದ್ದು, ಪ್ರೇಮ ವಿವಾಹ!

ಪಾಲಕರ ಜಾಗೃತಿ ಅವಶ್ಯಕ: ಒತ್ತಡ ಜೀವನ, ಸಂಪಾದನೆ ಕಾರಣದಿಂದ ಪಾಲಕರು ತಮ್ಮ ಮಕ್ಕಳನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ವಿದ್ಯಾಭಾಸದ ಒತ್ತಡ, ಮನೆ ಕೆಲಸದಿಂದ, ಪಾಲಕರಿಂದ ಮಾನಸಿಕ ಕಿರುಕುಳ ಹಾಗೂ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗಿ ಯುವತಿಯರು ಮನೆ ಬಿಟ್ಟು ಹೋಗುತ್ತಾರೆ. ಬಹುತೇಕ ಯುವತಿಯರ ನಾಪತ್ತೆಗೆ ಪ್ರೀತಿ-ಪ್ರೇಮವೇ ಕಾರಣವಾಗಿದೆ. ಅದಕ್ಕೆ ಪಾಲಕರು ತಮ್ಮ ಮಕ್ಕಳನ್ನು ಮೊದಲ ಆದ್ಯತೆ ನೀಡಿ, ಸರಿಯಾಗಿ ಬೆಳಸಬೇಕು. ಅವರನ್ನು ಪ್ರೀತಿಯಿಂದ ನೋಡಿಕೊಂಡರೆ ಪಾಲಕರ ಬಿಟ್ಟು ಮಕ್ಕಳು ಎಲ್ಲಿಗೂ ಹೋಗಲ್ಲ ಎನ್ನುತ್ತಾರೆ ಪೊಲೀಸರು. 2024ರಲ್ಲಿ 28 ಬಾಲಕಿಯರು ಅಪಹರಣವಾಗಿದ್ದು, ಒಬ್ಬಳು ಇನ್ನೂ ಪತ್ತೆಯಾಗಿಲ್ಲ. 2025ರಲ್ಲಿ ಅಪಹರಣವಾದ 23 ಬಾಲಕಿಯರಲ್ಲಿ 18 ಮಂದಿ ಮಾತ್ರ ಪತ್ತೆಯಾಗಿದ್ದಾರೆ. ಪ್ರಸ್ತುತ ವರ್ಷ ಇಬ್ಬರು ಅಪಹರಣಕ್ಕೊಳಗಾಗಿದ್ದು, ಪತ್ತೆ ಕಾರ್ಯ ನಡೆಯುತ್ತಿದೆ.

ವಿವಿಧ ಕಾರಣಕ್ಕೆ ಯುವಕರು, ಯುವತಿಯರು ಮನೆಯಲ್ಲಿ ಹೇಳದೆ ಹೋಗುತ್ತಾರೆ. ಪಾಲಕರು ಮಕ್ಕಳ ಚಲನವಲನ ಗಮನಿಸಬೇಕು. ಪೊಲೀಸ್ ಇಲಾಖೆ ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಲಿದೆ. ಕಳೆದ ವರ್ಷ ಹೋಲಿಸಿದರೆ ಈ ವರ್ಷ ನಾಪತ್ತೆ ಪ್ರಕರಣ ಕಡಿಮೆ ದಾಖಲಾಗಿವೆ.
■ **ಎನ್.ಶಶಿಕುಮಾರ,** ಆಯುಕ್ತ ಹು-ಧಾ ಪೊಲೀಸ್ ಕಮಿಷನರೇಟ್

ಪಾಲಕರು ತಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸಬೇಕು. ವಿದೇಶಿ ಸಂಸ್ಕೃತಿ ಮೊರೆ ಹೋಗುತ್ತಿರುವ ಮಕ್ಕಳು ಪ್ರೀತಿ-ಪ್ರೇಮದ ಬಲೆಗೆ ಬೀಳುತ್ತಿದ್ದಾರೆ. ತಂದೆ ತಾಯಿಗಳು ಮಕ್ಕಳನ್ನು ಪ್ರೀತಿ, ವಾತ್ಸಲ್ಯದಿಂದ ಬೆಳಸಬೇಕು
■ **ಭವ್ಯಾಗೌಡ,** ಸಂಯೋಜಕಿ ರಣರಾಗಿಣಿ ಮಹಿಳಾ ವಿಭಾಗ

ಯುವತಿಯರ ನಾಪತ್ತೆ ಪ್ರಕರಣ

ವರ್ಷ	ಪ್ರಕರಣ	ಪತ್ತೆ	ತನಿಖೆ
2023	239	234	05
2024	250	243	07
2025	180	169	11
2026(ಫೆ.15ರ ವರೆಗೆ)	25	14	11

ಸಂಪಾದಕೀಯ

'ಲಾಕಪ್ ಸಾವು' ತಡೆಯುವುದಗತ್ಯ

ತಮಿಳುನಾಡಿನ ಸಾತಂಕುಲಂನಲ್ಲಿ 2020ರಲ್ಲಿ ಸಂಭವಿಸಿದ ತಂದೆ ಮತ್ತು ಮಗನ ಲಾಕಪ್ ಸಾವಿಗೆ ಸಂಬಂಧಿಸಿದಂತೆ 9 ಪೊಲೀಸರಿಗೆ ಮಧುರೈ ನ್ಯಾಯಾಲಯವು ಮರಣದಂಡನೆ ಶಿಕ್ಷೆ ವಿಧಿಸಿರುವುದು ಒಂದು ಅಪರೂಪದ ನ್ಯಾಯದಾನವೇ ಸರಿ. ಭಾರತದಲ್ಲಿ 'ಅಪರೂಪದಲ್ಲಿ ಅಪರೂಪದ' ಪ್ರಕರಣಗಳಲ್ಲಷ್ಟೇ ಮರಣದಂಡನೆ ನೀಡುವ ಪದ್ಧತಿಯಿದ್ದು, ಮಧುರೈ ನ್ಯಾಯಾಲಯವು ಈ ಲಾಕಪ್ ಸಾವನ್ನು ಕೂಡಾ ಅಪರೂಪದ ಪ್ರಕರಣವೆಂಬುದಾಗಿಯೇ ಪರಿಗಣಿಸಿದೆ. ಕಾನೂನು ಸುವ್ಯವಸ್ಥೆ ಕಾಪಾಡುವ ಬಾಧ್ಯತೆ ಹೊಂದಿರುವ ಪೊಲೀಸ್ ಅಧಿಕಾರಿಗಳೇ ಕಾನೂನಿಗೆ ವಿರುದ್ಧವಾಗಿ ವರ್ತಿಸಿ ಹಲ್ಲೆ ನಡೆಸಿರುವ ಅಪರೂಪದ ಪ್ರಕರಣವಿದಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಿಸಿದೆ. ಜಯರಾಜ್ ಮತ್ತು ಅವರ ಪುತ್ರ



ಬೆನ್ನಿಕ್ಸ್ ಎಂಬವರನ್ನು ಲಾಕಪ್‌ನಲ್ಲಿ ಮಾರಣಾಂತಿಕವಾಗಿ ಥಳಿಸಿ ಹತ್ಯೆಗೈದ ಪೊಲೀಸರ ಅಮಾನುಷ ವರ್ತನೆಯು ಅಕ್ಷಮ್ಯ ಎಂಬುದರಲ್ಲಿ ಅನುಮಾನವಿಲ್ಲ. ಇಷ್ಟಕ್ಕೂ ಅವರು ಯಾವುದೇ ಅಪರಾಧವನ್ನೂ ಎಸಗಿರಲಿಲ್ಲ. ಕೋವಿಡ್ ಸಮಯದಲ್ಲಿ ಸಮಯಮಿತಿಯೊಳಗೆ ತಮ್ಮ ಮೊಬೈಲ್ ಅಂಗಡಿಯನ್ನು ಮುಚ್ಚಲಿಲ್ಲ ಎಂಬ ಕಾರಣಕ್ಕಾಗಿಯಷ್ಟೇ ಅವರನ್ನು ಬಂಧಿಸಲಾಗಿತ್ತು. ಅಲ್ಲೂ ಅವರನ್ನು ಸುಳ್ಳು ದೂರು ದಾಖಲಿಸಿ ಬಂಧಿಸಲಾಗಿತ್ತು ಎಂಬುದೂ ಕಂಡುಬಂದಿತ್ತು.ಬಳಿಕ ತಂದೆ ಮಗ ಇಬ್ಬರೂ ಪತ್ತೆಯಾದುದು ಶವವಾಗಿಯೆ. ಪೊಲೀಸರು ಠಾಣೆಯಲ್ಲಿನ ಸಿಸಿಟಿವಿ ವಿಡಿಯೋಗಳನ್ನು ಅಳಿಸಿ ಸಾಕ್ಷ್ಯ ನಾಶಕ್ಕೂ ಪ್ರಯತ್ನಿಸಿದ್ದರು. ಇವೆಲ್ಲದರ ಹಿನ್ನೆಲೆಯಲ್ಲಿ ಪೊಲೀಸರಿಗೆ ಮರಣದಂಡನೆ ವಿಧಿಸಿರುವ ನ್ಯಾಯಾಲಯವು ಪೊಲೀಸರಿಗೆ ಇದೊಂದು ಎಚ್ಚರಿಕೆ ಗಂಟೆ ಎಂದು ಹೇಳಿದೆ.

ಈ ಮರಣದಂಡನೆ ಶಿಕ್ಷೆ ಜಾರಿಯಾಗುವುದೆ ಎಂಬ ಕುರಿತಂತೆ ಖಚಿತವಾಗಿ ಹೇಳಲಾಗದು. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ಉನ್ನತ ನ್ಯಾಯಾಲಯಗಳು ಮರಣದಂಡನೆ ಜಾರಿಗೊಳಿಸುವುದು ಕಡಿಮೆಯಾಗಿದೆ. ಈ 9 ಮಂದಿ ಪೊಲೀಸರು ಕೂಡಾ ಮೇಲ್ಮನವಿ ಸಲ್ಲಿಸುವುದು ಹಾಗೂ ಅಂತಿಮ ತೀರ್ಪು ಬರಲು ಇನ್ನೂ ಕೆಲವು ವರ್ಷ ಕಾಯಬೇಕಾಗಿರುವುದು ಸಹಜವಾಗಿದೆ. ಆದರೆ ಲಾಕಪ್ ಸಾವುಗಳನ್ನು ತಡೆಯುವಲ್ಲಿ ಹೆಚ್ಚಿನ ಕ್ರಮಗಳು ಬೇಕಾಗಿವೆ ಎಂಬುದನ್ನಂತೂ ಮಧುರೈ ನ್ಯಾಯಾಲಯದ ತೀರ್ಪು ಎತ್ತಿ ಹಿಡಿದಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ದೇಶದಲ್ಲಿ ಸಾವಿರಾರು ಲಾಕಪ್ ಸಾವುಗಳು ಸಂಭವಿಸುತ್ತಿವೆ ಎಂದು ಹೇಳುತ್ತಿದೆ. ಈ ವರ್ಷದ ಮೊದಲ ಮೂರು ತಿಂಗಳಲ್ಲೇ 170 ಲಾಕಪ್ ಸಾವು ಸಂಭವಿಸಿರುವುದಾಗಿ ನುಡಿಯುತ್ತಿದೆ. ಪೊಲೀಸರು ರಾಜ್ಯ ಸರಕಾರವನ್ನು ಪ್ರತಿನಿಧಿಸುವುದರಿಂದ ಆಯಾ ರಾಜ್ಯದ ಸರಕಾರವೂ ಲಾಕಪ್ ಸಾವಿನ ಹೊಣೆ ಹೊರಬೇಕಾಗುತ್ತದೆ. ಆದ್ದರಿಂದ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಥಳಿತಕ್ಕೆ ಸಿಲುಕಿ ಸಾವು ಸಂಭವಿಸುವುದನ್ನು ತಡೆಯಲು ಸೂಕ್ತ ಉಪಕ್ರಮಗಳಂತೂ ಅಗತ್ಯವಾಗಿದೆ.

ಔರ್ಧ್ವದೈಹಿಕಕ್ರಿಯೆಗಳ ವಿಧಾನ, ಉದ್ದೇಶ ಮತ್ತು ಅರ್ಥ

ಪದಸಂಚಲನ
ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಇಲ್ಲಿಯವರೆಗೆ ಜೀವನ ಜನ್ಮಪ್ರಕ್ರಿಯೆ, ಮರಣದ ಪ್ರಕ್ರಿಯೆ, ಮರಣದ ಅನಂತರ ಉಪಾಸಕನು ಸಾಗುವ ಮಾರ್ಗ, ಕರ್ಮಿಯು ಸಾಗುವ ಮಾರ್ಗ ಮತ್ತು ಇವೆರಡೂ ಅಲ್ಲದವರ ಮೂರನೆಯ ಮಾರ್ಗ, ಮತ್ತೆ ದೇಹವನ್ನು ಹೊಂದಲು ತಿರುಗಿ ಬರುವ ಮಾರ್ಗ ಇತ್ಯಾದಿ ಅಂಶಗಳನ್ನು ಕ್ರಮಶಃ ವಿಚಾರಿಸಲಾಯಿತು. ಇನ್ನು ಮುಂದೆ ಜೀವನ ಔರ್ಧ್ವದೈಹಿಕಕ್ರಿಯೆಗಳ ಉದ್ದೇಶ, ವಿಧಾನ ಮತ್ತು ಅರ್ಥಗಳನ್ನು ಮುಂದಿನ ಲೇಖನಗಳಲ್ಲಿ ಯಥಾಶಕ್ತಿ ನೋಡೋಣ. ಈ ಸರಣಿಯ ಆರಂಭದಲ್ಲಿಯೇ ಅನೇಕರು ಮರಣದ ಪ್ರಕ್ರಿಯೆಯ ಬಗೆಗೆ ಬರೆಯುವಾಗ ಸಂಕೋಚದಿಂದ ಕೇಳಿದ್ದುಂಟು. ಮರಣದ ಪ್ರಕ್ರಿಯೆಯೆಂದರೆ ಅಶುಭವಲ್ಲವೇ? ಸಾವು ಎಂಬ ಶಬ್ದವನ್ನು ಮನೆಯೊಳಗೆ ನುಡಿಯುವುದೂ ಅಶುಭಸೂಚಕ ಎಂಬ ಪ್ರತೀತಿಯಿದೆಯಲ್ಲ? ಅಂಥದ್ದರಲ್ಲಿ ಅದರ ಬಗ್ಗೆ ಬರೆಯುವುದು, ಯೋಚಿಸುವುದು, ವಿಚಾರವನ್ನು ನಡೆಸುವುದು ಇವೆಲ್ಲ ಅಶುಭವೇ ಅಲ್ಲವೇ? ಎಂಬುದಾಗಿ. ಅವರ ಪ್ರಶ್ನೆಯ ಹಿಂದಿನ ಭಯ ಅರ್ಥವಾಗವಂಥದ್ದು. ಯಾಕೆಂದರೆ, ಲೋಕದಲ್ಲಿ ಸಾಮಾನ್ಯವಾಗಿ ಮರಣದ ಭಯ ಎಲ್ಲರಿಗೂ ಇರುವಂಥದ್ದೇ. ನಮ್ಮಲ್ಲಿ ಆಶೀರ್ವಾದದ ಸಮಯದಲ್ಲಿಯಾಗಲೀ, ದೇವತಪ್ರಾರ್ಥನೆಯ ಸಮಯದಲ್ಲಿಯಾಗಲೀ ನೂರು ವರ್ಷ ಆಯುಸ್ಸು ದೊರಕಲಿ ಎಂದೇ ಹರಸಲಾಗುತ್ತದೆ ಅಥವಾ ಬೇಡಿಕೊಳ್ಳಲಾಗುತ್ತದೆ. ಸಾವು ಎಂಬುದು ಯಾರಿಗೂ ಬೇಕಿಲ್ಲ. ಜೊತೆಗೆ ಸಾವೆಂದರೆ ತುಂಬ ಭಯ ಕೂಡ. ಹಾಗಿರುವಾಗ ಶಾಸ್ತ್ರಗಳು ಯಾಕೆ ಮರಣದ ಬಗೆಗೆ ವಿಸ್ತೃತವಾಗಿ ವಿಚಾರವನ್ನು ನಡೆಸಿವೆ ಎಂಬ ಪ್ರಶ್ನೆ ಸಹಜ.

ವಸ್ತುತಃ ಮರಣ ಎಂಬುದು ಶಾಸ್ತ್ರಗಳ ದೃಷ್ಟಿಯಲ್ಲಿ ಅತ್ಯಂತ ಸಹಜ ಪ್ರಕ್ರಿಯೆ. ನಮ್ಮ ದೃಷ್ಟಿಯಲ್ಲಿ ಸಾವು ಎಂದರೆ ಅದು ಒಮ್ಮೆ ಮಾತ್ರ ಆಗುವಂಥ ಪ್ರಕ್ರಿಯೆ. ಯಾಕೆಂದರೆ ಸಾವಿನ ಅನಂತರ ಏನು ಎಂಬುದು ನಮ್ಮ ಇಂದ್ರಿಯಗಳಿಗೆ ನಿಲುಕುವುದಿಲ್ಲ. ಜೊತೆಗೆ ಸಾವಿನ ಅನಂತರ ನಮ್ಮೆಲ್ಲ ಭೋಗಗಳೂ ನಿಂತು ಹೋಗುತ್ತವೆ. ಹಾಗಾಗಿ ಸಾವಿನ ಅನಂತರದ ವಿಷಯದಲ್ಲಿ ನಮ್ಮ ಬುದ್ಧಿ ಕೆಲಸ ಮಾಡುವುದಿಲ್ಲ. ಸಾವೆಂದರೆ ಅಮಂಗಲ, ಅಶುಭ, ಅಪಶಕುನ ಎಂದೆಲ್ಲ ಲೋಕದಲ್ಲಿ ಪ್ರತೀತಿ ಆ ಕಾರಣಕ್ಕಾಗಿ ಬಂದಿದೆ. ಆದರೆ ಭಾರತೀಯಸಂಸ್ಕೃತಿಯಲ್ಲಿ ಸಾವೆಂಬುದು ಇದೇ ಮೊದಲಲ್ಲ, ಸಾವು ಕೊನೆಯೂ ಅಲ್ಲ. ವಸ್ತುತಃ ಹೇಳಬೇಕೆಂದರೆ ಶಾಸ್ತ್ರಗಳ ದೃಷ್ಟಿಯಲ್ಲಿ ಜೀವನಿಗೆ ಪ್ರತಿಕ್ಷಣವೂ ಸಾವು ಮತ್ತು ಪ್ರತಿಕ್ಷಣವೂ ಹುಟ್ಟು. ನಮಗೇ ಗೊತ್ತಿಲ್ಲದಂತೆ ನಮ್ಮ ಶರೀರದಲ್ಲಿ ಪ್ರತಿಕ್ಷಣವೂ ಜೀವಕೋಶಗಳು ಸಾಯುತ್ತಲೂ, ಹೊಸ ಜೀವಕೋಶಗಳು ಹುಟ್ಟುತ್ತಲೂ ಇರುವುದು ನಮಗೆ ತಿಳಿಯುವುದೇ ಇಲ್ಲ. ಬಾಲ್ಯದಿಂದ ಯೌವ್ವನವನ್ನೂ, ಯೌವ್ವನದಿಂದ ವಾರ್ಧಕ್ಯವನ್ನೂ ಪಡೆಯುವುದೆಲ್ಲ ನಮಗೆ ಅರಿವಿಗೆ ಬಾರದಂತೆ ನಡೆಯುತ್ತಿರುತ್ತವೆ. ಇವೆಲ್ಲ ಒಂದು ರೀತಿಯ ಸೂಕ್ಷ್ಮವಾದ ಸಾವು ಮತ್ತು ಹುಟ್ಟುಗಳೇ ಆಗಿವೆ. ಹಳೆಯ ಅವಸ್ಥೆಯಿಂದ ಹೊಸ ಅವಸ್ಥೆಯನ್ನು ಪಡೆಯುವುದೇ ಹುಟ್ಟು. ಹಳೆಯದನ್ನು ಬಿಡುವುದೇ ಮರಣ.

ಜೊತೆಗೆ ಭಾರತೀಯ ಸಂಸ್ಕೃತಿಯಲ್ಲಿ ಪುನರ್ಜನ್ಮವನ್ನು ಸ್ವೀಕರಿಸಲಾಗುವುದರಿಂದ ಅನಾದಿಕಾಲದಿಂದಲೂ ಜೀವನು ಹುಟ್ಟು-ಸಾವುಗಳ ಚಕ್ರ ದಲ್ಲಿ ಸಿಲುಕಿಯೇ ಇದ್ದಾನೆ. ಹುಟ್ಟುತ್ತ, ಸಾಯುತ್ತಲೇ ಈ ಶ್ರೇಷ್ಠವಾದ ಮನುಷ್ಯ ಜನ್ಮವನ್ನು ಪಡೆದಿದ್ದಾನೆ. ಮುಂದೆಯೂ ಇದಕ್ಕಿಂತ ಶ್ರೇಷ್ಠವೋ, ಅಧಮವೋ ಆದ ಶರೀರವನ್ನು ತಮ್ಮ ತಮ್ಮ ಕರ್ಮಾನುಸಾರ ಮತ್ತೆ ಪಡೆಯುತ್ತಲೇ ಹೋಗುತ್ತಾನೆ. ಹೀಗೆ ಸಂಸರಣ ಮಾಡುವುದರಿಂದಲೇ ಇದನ್ನು ಸಂಸಾರವೆಂದು ಕರೆಯಲಾಗುತ್ತದೆ. ಹಾಗಾಗಿ ಹುಟ್ಟು ಮತ್ತು ಸಾವು ಇವೆರಡರಲ್ಲಿ ಯಾವುದೂ ಜೀವನಿಗೆ ಹೊಸದಲ್ಲ. ಅವೆರಡೂ ನಿತ್ಯ ಪ್ರಕ್ರಿಯೆಗಳು.

ಶಾಸ್ತ್ರಗಳ ದೃಷ್ಟಿಯಲ್ಲಿ ಸಾವೆಂಬುದು ಕೂಡ ಒಂದು ಪವಿತ್ರವಾದ ಕ್ರಿಯೆ. ಹುಟ್ಟಿದ ಪ್ರತಿಯೊಂದು ಜೀವನೂ ಮತ್ತೊಂದು ಶರೀರವನ್ನು ಪಡೆಯಲು ಇರುವ ಮಾಧ್ಯಮವೇ ಸಾವು. ಸಾವೆಂದರೆ ತನ್ನ ನಾಶವಲ್ಲ. ಬದಲಿಗೆ ಸ್ಥೂಲಶರೀರಮಾತ್ರದ ತ್ಯಾಗ. ಅರ್ಥಾತ್ ಸಾವಿನ ಅನಂತರ ಆತ ತನ್ನ ಸೂಕ್ಷ್ಮಶರೀರದಲ್ಲಿದ್ದುಕೊಂಡು ಇನ್ನೊಂದು ಸ್ಥೂಲಶರೀರವನ್ನು ಪಡೆಯುತ್ತಾನೆ. ಈ ನಡುವೆ ಆತನಿಗೆ ಔರ್ಧ್ವದೈಹಿಕಕ್ರಿಯೆಗಳು ಒಂದು ಶರೀರದಿಂದ ಮತ್ತೊಂದು ಸ್ಥೂಲಶರೀರವನ್ನು ಪಡೆಯುವಲ್ಲಿ ವೇಗವನ್ನು ವರ್ಧಿಸುತ್ತವೆ. ಮರಣದ ಅನಂತರ ವ್ಯಕ್ತಿಗೆ ನಡೆಸಲ್ಪಡುವ ಔರ್ಧ್ವದೈಹಿಕಕ್ರಿಯೆಗಳೂ ಕೂಡ ಆತನಿಗೆ ಒಂದು ಸಂಸ್ಕಾರವೇ ಆಗಿವೆ. ಅಷ್ಟೇ ಅಲ್ಲ, ಇಂಥ ಔರ್ಧ್ವದೈಹಿಕಕ್ರಿಯೆಗಳನ್ನು ಯಜ್ಞವೆಂದೇ ಕರೆಯಲಾಗಿದೆ. ಅದನ್ನು ಅಂತ್ಯೇಷ್ಟಿ ಎಂದು ಕರೆಯಲಾಗುತ್ತದೆ. ಭಾರತೀಯಸಂಸ್ಕೃತಿಯಲ್ಲಿ ಮನುಷ್ಯನ ಜೀವನವಿಡೀ ಅಗ್ನಿಯ ಆರಾಧನೆ ಹಾಗೂ ಸಾಂಗತ್ಯವನ್ನು ಹೇಳಲಾಗಿದೆ. ಉಪನಯನದಿಂದ ಆರಂಭವಾಗುವ ಈ ಅಗ್ನಿಯ ಸಂಬಂಧ ಸಾವಿನ ಅನಂತರವೂ ಮುಂದುವರೆಯುತ್ತದೆ.

ಉಪನಯನದಲ್ಲಿ ಪ್ರಾರಂಭವಾದ ಅಗ್ನಿಕಾರ್ಯವು ನಿರಂತರ ಮುಂದುವರೆದು, ಅದೇ ಅಗ್ನಿಯಲ್ಲಿಯೇ ವಿವಾಹಹೋಮವನ್ನು ಮಾಡಲಾಗುತ್ತದೆ. ಅದನ್ನು ಔಪಾಸನಾಗ್ನಿ ಎಂದು ಕರೆಯಲಾಗುತ್ತದೆ. ವಿವಾಹದ ಅನಂತರ ಆತ ಅಗ್ನಿಹೋತ್ರವನ್ನು ಆರಂಭಿಸುತ್ತಾನೆ. ಇದನ್ನು ಶ್ರೌತಾಗ್ನಿ ಎಂದು ಕರೆಯಲಾಗುತ್ತದೆ. ಇದು ನಿತ್ಯಾಗ್ನಿಹೋತ್ರವಾಗಿದೆ. ಹೀಗೆ ಜೀವನವಿಡೀ ಅಗ್ನಿಯನ್ನು ಉಪಾಸಿಸುತ್ತಾ, ಕೊನೆಗೆ ಆ ವ್ಯಕ್ತಿಯ ಮರಣದ ಸಮಯದಲ್ಲಿ ಆತನ ದೇಹವನ್ನು ಇದೇ ಅಗ್ನಿಯಲ್ಲಿಯೇ ಸಮರ್ಪಿಸಲಾಗುತ್ತದೆ. ಆಗ ಆ ವ್ಯಕ್ತಿಯ ದೇಹವೇ ಆ ಅಗ್ನಿಗೆ ಆಹುತಿಯಾಗುತ್ತದೆ. ಹೀಗೆ ಜೀವನವಿಡೀ ಆಜ್ಯವೇ ಮೊದಲಾದ ದ್ರವ್ಯಗಳನ್ನು ಆಹುತಿಯನ್ನಾಗಿ ನೀಡಿದ ವ್ಯಕ್ತಿಯ ಶರೀರವೇ ಆ ಅಗ್ನಿಗೆ ಕೊನೆಯ ಆಹುತಿಯಾಗುತ್ತದೆ. ಹೀಗೆ ನಮ್ಮಲ್ಲಿ ದೇಹದ ದಹನವನ್ನೂ ಕೂಡ ಒಂದು ಯಜ್ಞವನ್ನಾಗಿಯೇ ಪರಿಗಣಿಸಲಾಗಿದೆ.

ಮರಣವನ್ನು ಹೊಂದಿದವನು ಉತ್ತಮ ಲೋಕಗಳನ್ನು ಹೊಂದಲಿ ಎಂಬ ಕಾರಣಕ್ಕೆ ಆತನ ಪುತ್ರರು ಆತನ ಔರ್ಧ್ವದೈಹಿಕಕ್ರಿಯೆಯನ್ನು ನೆರವೇರಿಸುತ್ತಾರೆ. ಆ ಮೂಲಕ ಮರಣವನ್ನು ಹೊಂದಿದ ಜೀವನು ತನ್ನ ಕರ್ಮಾನುಸಾರ ಉತ್ತಮ ಲೋಕಗಳನ್ನು ಕ್ಷಿಪ್ರವಾಗಿ ಹೊಂದಲಿ ಎಂಬುದು ಇವುಗಳ ಮುಖ್ಯ ಉದ್ದೇಶ. ಅರ್ಥಾತ್ ಜೀವನು ಮರಣದ ಅನಂತರ ತನ್ನ ಕರ್ಮಾನುಸಾರವಾಗಿಯೇ ಮುಂದಿನ ಲೋಕವನ್ನು ಅಥವಾ ಜನ್ಮವನ್ನು ಹೊಂದುತ್ತಾನೆಯಾದರೂ, ಅಂಥ ಲೋಕದ ಪ್ರಾಪ್ತಿಯು ತೊಡಕಿಲ್ಲದೇ ಆಗುವಂತೆ ಈ ಕ್ರಿಯಾಕಲಾಪವು ನೆರವಾಗುತ್ತದೆ. ಔರ್ಧ್ವದೈಹಿಕಕ್ರಿಯೆಗಳು ಕೂಡ ಮೃತಜೀವಕ್ಕೆ ಒಂದು ವಿಧದ ಸಂಸ್ಕಾರವೇ ಆಗಿದೆ. ಗರ್ಭದಿಂದ ಆರಂಭಿಸಿ ವಿವಾಹದವರೆಗೆ ಅನೇಕ ಸಂಸ್ಕಾರಗಳನ್ನು ಪಡೆದ ವ್ಯಕ್ತಿಯು ಔರ್ಧ್ವದೈಹಿಕಕ್ರಿಯೆಯೆಂಬ ಅಂತಿಮ ಸಂಸ್ಕಾರದ ಮೂಲಕ ಪೂರ್ಣನಾಗುತ್ತಾನೆ. ಪಿತೃಲೋಕವೇ ಮೊದಲಾದ ಉಚಿತ ಲೋಕವನ್ನು ಕುರಿತು ತೆರಳಲು ಆತನಿಗೆ ಈ ಸಂಸ್ಕಾರ ಮುಖ್ಯವಾಗುತ್ತದೆ. ಹಾಗೆ ನೋಡಿದರೆ ಎಲ್ಲ ಸಂಸ್ಕಾರಗಳೂ ಅತೀಂದ್ರಿಯವೇ ಆಗಿವೆ. ಗರ್ಭಾಧಾನದಿಂದ ಹಿಡಿದು, ಹುಟ್ಟಿದಾಗ ಮಾಡುವ ಜಾತಕರ್ಮವಿರಲಿ, ಹುಟ್ಟಿದ ಮೇಲಿನ ಉಪನಯನ, ವಿವಾಹಗಳವರೆಗೆ ಎಲ್ಲವೂ ಒಂದು ರೀತಿಯ ಅತೀಂದ್ರಿಯವಾದ ಅತಿಶಯವನ್ನು ಆಯಾ ವ್ಯಕ್ತಿಯಲ್ಲಿ ಈ ಸಂಸ್ಕಾರಗಳು ಆಧಾನಮಾಡುತ್ತವೆ. ಸಂಸ್ಕಾರವೆಂದರೆ ಗುಣದ ಆಧಾನ ಮತ್ತು ದೋಷದ ನಿವಾರಣೆಯೇ ಆಗಿದೆ. ಹಾಗೆಯೇ ಮರಣದ ಅನಂತರದ ಕ್ರಿಯೆಗಳೂ ಕೂಡ ಒಂದು ಸಂಸ್ಕಾರವೇ ಆಗಿದ್ದು, ಅದು ಜೀವನನ್ನು ಸೂಕ್ಷ್ಮವಾಗಿ ತಲುಪುತ್ತವೆ.

ಪಶುಗಳಿಗೆಲ್ಲ ಔರ್ಧ್ವದೈಹಿಕಕ್ರಿಯೆಗಳೇ ಇಲ್ಲದೇ ಸಾಕ್ಷಾತ್ ಮಣ್ಣಿನಲ್ಲಿ ಸೇರಿಹೋದರೂ ಅವು ಹೇಗೆ ಪ್ರೇತವಾಗುವುದಿಲ್ಲ? ಮನುಷ್ಯನಿಗೆ ಮಾತ್ರ ಯಾಕೆ ಶ್ರಾದ್ಧಾದಿ ಕರ್ಮಗಳು ಬೇಕು? ಎಂಬ ಪ್ರಶ್ನೆ ಉಂಟಾಗಬಹುದು. ಆದರೆ ಯಾವ ಕರ್ಮಗಳೂ ಕೂಡ ಪಶ್ವಾದಿಗಳಿಗೆ ಹೇಳಿದ್ದಲ್ಲ. ಎಲ್ಲವೂ ಮನುಷ್ಯನಿಗೆ ಮಾತ್ರ. ಇದಕ್ಕೆ ಶಾಸ್ತ್ರಗಳೇ ಪ್ರಮಾಣ. ಮನುಷ್ಯನಿಗೆ ಸಂಸ್ಕಾರವಿಲ್ಲದೆಯೇ ಹೇಗಾಗುತ್ತಾನೆ ಎಂಬುದು ನಮಗೆ ತಿಳಿದೇ ಇದೆ. ಪಶುಗಳಿಗೆ ಯಾವ ಸಂಸ್ಕಾರಗಳೂ ಇಲ್ಲ. ಯಾಕೆಂದರೆ ಅವುಗಳಿಗೆ ಅವುಗಳದೇ ಆದ ನಿಯತವಾದ ಸ್ವಭಾವವಿದೆ. ಏನೇ ಆದರೂ ಅದನ್ನು ಮೀರಲು ಅವುಗಳಿಗೆ ಸಾಧ್ಯವಾಗುವುದಿಲ್ಲ. ಆದರೆ ಮಾನವನಿಗೆ ಮಾತ್ರ ಹಾಗಲ್ಲ. ಆತ ಸಂಸ್ಕಾರದಿಂದ ಎಷ್ಟು ಎತ್ತರವನ್ನು ಬೇಕಿದ್ದರೂ ತಲುಪಬಲ್ಲ. ಆತನಲ್ಲಿ ಆಗುವ ಸೂಕ್ಷ್ಮವಾದ ಪರಿಣಾಮಗಳು ಆತನ ಮುಂದಿನ ಜನ್ಮವನ್ನು ನಿರ್ಧರಿಸುತ್ತವೆ. ಇಲ್ಲಿ ಶ್ರದ್ಧೆಯೇ ಮುಖ್ಯವಾದುದು. ಪಶುವಿಗೂ ಮತ್ತು ಸಂಸ್ಕಾರವಂತ ಮನುಷ್ಯರಿಗೂ ಒಂದೇ ವ್ಯತ್ಯಾಸವೆಂದರೆ ಅದು ಶ್ರದ್ಧೆ. ಶ್ರದ್ಧೆಯಿಂದ ಮಾಡಲಾಗುವುದ ರಿಂದಲೇ ಇವೆಲ್ಲವೂ ಫಲಿತಗೊಳ್ಳುತ್ತವೆ. ಔರ್ಧ್ವದೈಹಿಕಕ್ರಿಯೆಗಳೂ ಕೂಡ ಮನುಷ್ಯನ ಸಾವಿನ ಅನಂತರದ ಮಾರ್ಗಗಳನ್ನು ಪ್ರಶಸ್ತಗೊಳಿಸುತ್ತವೆ. ಕೇವಲ ಶ್ರಾದ್ಧ, ಪಿಂಡಪ್ರದಾನ, ತರ್ಪಣಗಳಿಂದಲೇ ಆತ ಸ್ವರ್ಗವನ್ನೋ, ಮೋಕ್ಷವನ್ನೋ ಹೊಂದುವುದಿಲ್ಲ. ಆದರೆ ಆತನ ಕರ್ಮಕ್ಕನುಗುಣವಾದ ಫಲವನ್ನು ಶೀಘ್ರವಾಗಿ ಹೊಂದಲು ಹಾಗೂ ಸಣ್ಣ ಪುಟ್ಟ ಪ್ರತಿಬಂಧಕಗಳಿದ್ದರೆ ಅದನ್ನು ನಿವಾರಿಸಿಕೊಳ್ಳಲು ಇವುಗಳು ಸಹಾಯವಾಗುತ್ತವೆ.

ಇನ್ನು ಔರ್ಧ್ವದೈಹಿಕಕ್ರಿಯೆಯು ಋಣಪ್ರಜ್ಞೆಯ ನೆಲೆಯಲ್ಲಿ ರೂಪುಗೊಂಡದ್ದು. ಮಕ್ಕಳಿಗೆ ತನ್ನ ಹೆತ್ತವರ ಋಣವಿರುತ್ತದೆ. ಅದಕ್ಕೆ ಪ್ರತಿಯಾಗಿ ಏನನ್ನಾದರೂ ಮಾಡಲು ವಾರ್ಧಕ್ಯದಲ್ಲಿನ ಸೇವೆ ಮತ್ತು ಮರಣಾನಂತರದ ಪ್ರಕ್ರಿಯೆಗಳು ಒಂದು ಅವಕಾಶ. ಹಿರಿಯರನ್ನು ನೆನೆದು ತಾನು ಬದುಕುವುದರಿಂದ ವ್ಯಕ್ತಿಯು ಇನ್ನಷ್ಟು ವಿಧೇಯನಾಗಿ, ಪ್ರಾಮಾಣಿಕವಾಗಿ ಬದುಕಲು ಅನುವಾಗುತ್ತದೆ. ಆ ಮೂಲಕ ಸಮಾಜದಲ್ಲಿ ಇಂಥ ಒಂದು ಪ್ರಜ್ಞೆ ಜಾಗರಿತವಾಗಿ, ತನಗೆ ಬದುಕನ್ನು ಕೊಟ್ಟ ತಂದೆ-ತಾಯಿಯರಿಗೂ, ಪ್ರಕೃತಿಗೂ, ಸಮಾಜಕ್ಕೂ ತನ್ನ ಕರ್ತವ್ಯದ ಮೂಲಕ ಸೇವೆಯನ್ನು ಮಾಡುವ ಮನೋಭಾವ ಬೆಳೆಯುತ್ತದೆ. ಹೀಗೆ ವ್ಯಷ್ಟಿಯಿಂದ ಸಮಷ್ಟಿಯವರೆಗೆ ಎಲ್ಲರ ಹಿತವೂ ಇಂಥ ಕ್ರಿಯೆಗಳಲ್ಲಿ ಸೂಕ್ಷ್ಮವಾಗಿ ಅಡಕವಾಗಿರುವುದನ್ನು ನಾವು ಗಮನಿಸಬೇಕು. ಇದೇ ಸನಾತನ ಸಂಸ್ಕೃತಿಯ ಹಿರಿಮೆಯಾಗಿದೆ ಎಂಬುದನ್ನು ನಾವು ಮರೆಯಬಾರದು.

ಇನ್ನು ಮುಂದೆ ಮರಣಾನಂತರ ಮಾಡಲಾಗುವ ಕೆಲವು ಕ್ರಿಯಾವಿಧಾನಗಳನ್ನು ನೋಡೋಣ.

ನಾಯಿ ಕಡಿತ : ನೆಲದ ಸತ್ಯ!

ಕಳವಳಕಾರಿ ಮಟ್ಟದಲ್ಲಿ ಹೆಚ್ಚಿರುವ ನಾಯಿ ಕಡಿತಗಳ ಸಮಸ್ಯೆಯ ನಿವಾರಣೆಗೆ ತಾನು ಕೈಕೊಂಡಿರುವ ಕ್ರಮಗಳ ವಿವರಗಳನ್ನು ರಾಜ್ಯ ಸರ್ಕಾರವು, ಜನ ಮೆಚ್ಚಿ ಅಹುದಹುದೆನ್ನುವಂತೆ ಮಾಧ್ಯಮಗಳಿಗೆ ಬಿಡುಗಡೆ ಮಾಡಿದೆ. ಆದರೆ ನೆಲದ ಸತ್ಯವು ಇದಕ್ಕೆ ವ್ಯತಿರಿಕ್ತವಾಗಿದೆ. ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿ ಒಂದು ವರ್ಷದ ಕೆಳಗೆ ಬೀದಿನಾಯಿಯೊಂದು ನನ್ನನ್ನೂ ಒಳಗೊಂಡಂತೆ ಏಳು ಜನರನ್ನು ಕಚ್ಚಿದ್ದಕ್ಕೆ ದೂರು ನೀಡಿದರನ್ವಯ ಮಹಾನಗರ ಪಾಲಿಕೆಯು ಅದನ್ನು ಹಿಡಿದುಕೊಂಡು ಹೋಯಿತು. ಎರಡು ವಾರದ ನಂತರ ಮತ್ತೆ ತಂದು ಬಿಟ್ಟಿತು. ಅನಂತರ ಅದು ಮತ್ತೆ ನಾಲ್ವರಿಗೆ ಕಚ್ಚಿದೆ. ಈಗಲೂ ವೃದ್ಧರನ್ನು, ಮಕ್ಕಳನ್ನು ಅಟ್ಟಿಸಿಕೊಂಡುಹೋಗಿ ಕಚ್ಚುತ್ತಿದೆ. ನಾಗರಿಕರಿಂದ ವಿವಿಧ ಬಗೆಯ ಪ್ರಯತ್ನಗಳ ನಡುವೆಯೂ ಮಹಾನಗರ ಪಾಲಿಕೆಗೆ ಆ ನಾಯಿಯನ್ನು ಇಲ್ಲಿಂದ ಕೊಂಡೊಯ್ಯಲು ಸಮಯವಿಲ್ಲ ಅಥವಾ ಸಾಧ್ಯವಾಗುತ್ತಿಲ್ಲ! ರಾಜ್ಯದ ಎಲ್ಲ ಕಡೆಯೂ ಪರಿಸ್ಥಿತಿ ಇದೇ ರೀತಿ ಇದೆ. ಇದು ಈ ನೆಲದ ಸತ್ಯ. ನಮ್ಮನ್ನು ಆಳುವವರು, ಪ್ರಕಟಣಾಶೂರರೇ ಹೊರತು ಕರ್ತವ್ಯತತ್ಪರರಲ್ಲ.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಐಪಿಎಲ್‌ನಿಂದ ಮಾಲಿನ್ಯ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಪಂದ್ಯದಿಂದ ಆಗುವ ಪರಿಸರ ಮಾಲಿನ್ಯ ಭಯಾನಕವಾಗಿದೆ. ಅಂಕಿಅಂಶಗಳ ಪ್ರಕಾರ, ಒಂದು ಪಂದ್ಯವು ಸರಾಸರಿ 16,000 ಕೆಜಿಗಿಂತ ಹೆಚ್ಚು ತ್ಯಾಜ್ಯವನ್ನು ಉತ್ಪಾದಿಸುತ್ತದೆ ಮತ್ತು ಸುಮಾರು 18,000 ಟನ್ ಕಾರ್ಬನ್ ಡೈಆಕ್ಸೈಡ್ ತತ್ಸಮಾನ ಇಂಗಾಲವನ್ನು ಹೊರಸೂಸುತ್ತದೆ. ಇದು ಸಾವಿರಾರು ಮನೆಗಳ ದಿನನಿತ್ಯದ ಇಂಧನ ಬಳಕೆಗೆ ಸಮಾನವಾಗಿದೆ. ನಗರವನ್ನು ಕಸ-ಮುಕ್ತ ಎಂದು ಘೋಷಿಸಿರುವುದು ಕೇವಲ ಕಣ್ಣೊರೆಸುವ ತಂತ್ರ. ಇದು ಕಸವನ್ನು ಇಲ್ಲವಾಗಿಸುವುದಿಲ್ಲ, ಬದಲಾಗಿ ಪ್ಲಾಸ್ಟಿಕ್ ಬಾಟಲಿಗಳು ಮತ್ತು ಕಸವನ್ನು ಕಬ್ಬನ್ ಪಾರ್ಕ್‌ನಂತಹ ಹಸಿರು ವಲಯಗಳಿಗೆ ತಳ್ಳುತ್ತಿದೆ. ಸ್ವಯಂಸೇವಕರು ಕಸ ಆರಿಸಿದಷ್ಟಕ್ಕೇ ಪರಿಸರ ಸ್ವಚ್ಛವಾಗುವುದಿಲ್ಲ. ಶೂನ್ಯ ತ್ಯಾಜ್ಯ ಕ್ರೀಡಾಂಗಣ ನೀತಿಯನ್ನು ಜಾರಿಗೆ ತರಬೇಕು. ಕ್ರೀಡಾಂಗಣದ ಸುತ್ತಲಿನ 5 ಕಿ.ಮೀ ವ್ಯಾಪ್ತಿಯಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿಷೇಧಿಸದಿದ್ದರೆ ಮತ್ತು ಆಯೋಜಕರು ವೈಜ್ಞಾನಿಕ ತ್ಯಾಜ್ಯ ವಿಲೇವಾರಿಗೆ ಜವಾಬ್ದಾರರಾಗದಿದ್ದರೆ, ಕೇವಲ ಮನರಂಜನೆಗಾಗಿ ನಮ್ಮ ಹಸಿರು ಬೆಂಗಳೂರನ್ನು ಬಲಿ ನೀಡಿದಂತಾಗುತ್ತದೆ.

-ಡಾ.ವಿಜಯಕುಮಾರ ಎಚ್.ಕೆ, ರಾಯಚೂರು

ಟ್ರಂಪ್ ಉತ್ತರ ನೀಡುವರೆ?

ಭಾರತ- ಪಾಕಿಸ್ತಾನ ಸಂಘರ್ಷದ ವೇಳೆ ಅಷ್ಟು ವಿಮಾನ ಉರುಳಿದೆ, ಇಷ್ಟು ವಿಮಾನ ಉರುಳಿದೆ ಎಂದು ಗಳಹುತ್ತಿದ್ದ ಡೊನಾಲ್ಡ್ ಟ್ರಂಪ್ ಈಗ ಇರಾನ್ ಮೇಲಿನ ಸಮರದ ವೇಳೆ ತಮ್ಮ ದೇಶದ ಎಷ್ಟು ಯುದ್ಧವಿಮಾನಗಳು ನೆಲಕಚ್ಚಿವೆ ಎಂಬುದರ ವಿವರ ನೀಡಿದರೆ ಚೆನ್ನಾಗಿತ್ತು. ಯುದ್ಧ ನಿಲ್ಲಿಸಿದ ಶಾಂತಿದೂತನೆಂಬಂತೆ ವರ್ತಿಸುತ್ತಿದ್ದ ಟ್ರಂಪ್ ಈಗ ತಾವೇ ಸಮರ ದೂತರಾಗಿರುವುದು ದೊಡ್ಡ ಅಣಕವೇ ಸರಿ.

-ಚಿದಂಬರ ರಾವ್, ಕುಂದಾಪುರ

ಈಶಾನ್ಯ ಭಾರತದಲ್ಲಿ ಅಮೆರಿಕದ ರಹಸ್ಯ ಚಟುವಟಿಕೆ?

ದಿನೇಶ್

ರಾಷ್ಟ್ರೀಯ ತನಿಖಾ ದಳವು ಇತ್ತೀಚೆಗೆ ಒಬ್ಬ ಅಮೆರಿಕನ್ ಪ್ರಜೆ ಮತ್ತು ಆರೂ ಮಂದಿ ಉಕ್ರೇನ್ ಪ್ರಜೆಗಳನ್ನು ದೇಶದ ವಿವಿಧೆಡೆಗಳಿಂದ ಬಂಧಿಸಿತು. ಇದು ಭಾರತದ ಪಾಲಿಗೆ ದೂರಗಾಮಿ ಪರಿಣಾಮ ಬೀರಬಲ್ಲ ಪ್ರಕರಣವಾಗಿದ್ದು, ಭದ್ರತೆಗೆ ಒದಗುವ ಅಪಾಯವನ್ನೂ ತೋರ್ಪಡಿಸಿದೆ. ಸದ್ಯಕ್ಕೆ ಈ ಬಂಧಿತರ ಕಾರ್ಯಾಚರಣೆಯು ಮ್ಯಾನ್ಮಾರ್‌ಗೆ ಸಂಬಂಧಿಸಿದ್ದೆಂದು ಕಂಡುಬಂದರೂ ದೀರ್ಘಾವಧಿಯಲ್ಲಿ ಈಶಾನ್ಯ ಭಾರತಕ್ಕೂ ಈ ಅಪಾಯ ತಟ್ಟಲಿರುವುದು ಖಂಡಿತವಾಗಿದೆ.

ಮೇಲ್ನೋಟಕ್ಕೆ ಇದು ವಿದೇಶಿಯರು ವೀಸಾ ನಿಯಮಗಳನ್ನು ಉಲ್ಲಂಘಿಸಿ ಗಡಿ ಪ್ರದೇಶದಲ್ಲಿ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿದ ಪ್ರಕರಣವೆಂಬಂತೆ ಕಂಡುಬಂದರೂ ಇದನ್ನು ಆಳವಾಗಿ ವಿಶ್ಲೇಷಿಸಿದಾಗ ಆತಂಕಕಾರಿ ಚಿತ್ರಣವು ದೊರಕುತ್ತದೆ. ಈ ವ್ಯಕ್ತಿಗಳು ಅಧಿಕೃತ ಪ್ರವಾಸೀ ವೀಸಾದೊಂದಿಗೆ ಭಾರತಕ್ಕೆ ಬಂದಿದ್ದರು. ಬಳಿಕ ಅಸ್ಸಾಮಿಗೆ ತೆರಳಿ ಅಲ್ಲಿಂದ ಅಗತ್ಯ ಅನುಮತಿ ಇಲ್ಲದೆ ಮಿಜೋರಾಂ ಪ್ರವೇಶಿಸಿದ್ದರು. ಅಲ್ಲಿಂದ ಬಳಿಕ ಮ್ಯಾನ್ಮಾರ್‌ಗೆ ನುಸುಳಿ ಅಲ್ಲಿ ೨ ಕೆಲವು ಸಶಸ್ತ್ರ ಗುಂಪುಗಳಿಗೆ ಡ್ರೋನ್ ಹಾಗೂ ಎಲೆಕ್ಟ್ರಾನಿಕ್ ಸಮರದ ತರಬೇತಿ ನೀಡಿದ್ದರು.

ಪ್ರಸ್ತುತ ಮ್ಯಾನ್ಮಾರ್‌ನಲ್ಲಿ ಮಿಲಿಟರಿ ಆಡಳಿತ ಹಾಗೂ ಸಶಸ್ತ್ರ ಜನಾಂಗೀಯ ಗುಂಪುಗಳ ಮಧ್ಯೆ ಆಂತರಿಕ ಸಮರ ನಡೆಯುತ್ತಿದೆ. ಅಮೆರಿಕವು ಸಶಸ್ತ್ರ ದಂಗೆಕೋರ ಗುಂಪುಗಳಿಗೆ ನೆರವು ನೀಡುತ್ತಿದೆ. ಈ ಗುಂಪುಗಳು ಮಾದಕ ವಸ್ತು ಕಳ್ಳಸಾಗಣೆಯಲ್ಲಿ ಕೂಡಾ ತೊಡಗಿದ್ದು ಈಶಾನ್ಯ ಭಾರತದಲ್ಲಿರುವ ಕೆಲವು ಅತಿಕ್ರಮಣಕಾರಿ ಬಣಗಳೊಂದಿಗೆ ಸಂಪರ್ಕ ಹೊಂದಿವೆ.ಈ ಬಂಡುಕೋರ ಗುಂಪುಗಳಿಗೆ ಡ್ರೋನ್ ತಂತ್ರಜ್ಞಾನ ಸಹಿತ ಅತ್ಯಾಧುನಿಕ ಸಮರ ತಂತ್ರಗಳನ್ನು ತರಬೇತಿ ನೀಡುತ್ತಿರುವುದು ಭವಿಷ್ಯದಲ್ಲಿ ಭಾರತಕ್ಕೂ ಅಪಾಯಕಾರಿಯಾಗಬಲ್ಲಂಥ ಬೆಳವಣಿಗೆ.

ಈ ಪರಿಸ್ಥಿತಿಯನ್ನು ಹೆಚ್ಚು ಅಪಾಯಕಾರಿಗೊಳಿಸಿರುವ ಅಂಶವೆಂದರೆ ಮಿಜೋರಾಂ, ಮಣಿಪುರ ಮತ್ತು ನಾಗಾಲ್ಯಾಂಡ್‌ಗಳಲ್ಲಿ ಭಾರತ ಮತ್ತು ಮ್ಯಾನ್ಮಾರ್ ನಡುವಿನ ಗಡಿಪ್ರದೇಶವು ಮುಕ್ತವಾಗಿರುವುದು. ಹಾಗಾಗಿ ಮ್ಯಾನ್ಮಾರ್‌ನಲ್ಲಿ ಬೆಳೆಯುತ್ತಿರುವ ಸಶಸ್ತ್ರ ಬಂಡುಕೋರ ತಂಡಗಳು ಭಾರತಕ್ಕೇನೂ ಅಪಾಯ ಉಂಟು ಮಾಡಲಾರವು ಎಂದು ಕಣ್ಮುಚ್ಚಿ ಕೂರುವಂತಿಲ್ಲ.

ದಶಕಗಳಿಂದ ಈಶಾನ್ಯ ಭಾರತವು ಅಂತಾರಾಜ್ಯ ಅತಿಕ್ರಮಣಕ್ಕೆ ಪ್ರಯೋಗಾಲಯದಂತಾಗಿದೆ. ಸಶಸ್ತ್ರ ಸಂಘರ್ಷಗಳು, ವಿಧ್ವಂಸಕ ಕೃತ್ಯಗಳು ಈ ಭಾಗದಲ್ಲಿ ನಡೆಯುತ್ತಿವೆ. ಇದಕ್ಕೀಗ ಹೊಸ ಆಯಾಮ ಸೇರಿದಂತಾಗಿದೆ. ಪಾಶ್ಚಿಮಾತ್ಯ ಹಂತಕರು ಮತ್ತು ಮಿಲಿಟರಿ ತರಬೇತಿ ಪಡೆದ ವಿದೇಶಿ ಪರಿಣತರು ಇಲ್ಲಿ ಪ್ರವೇಶ ಪಡೆದಿದ್ದಾರೆ. ಈ ಪ್ರದೇಶದಲ್ಲಿ ಚೀನಾದ ಹೆಜ್ಜೆ ಗುರುತುಗಳು ಈಗಾಗಲೇ ಸಾಬೀತಾಗಿದೆ. ಇನ್ನೀಗ ಅಮೆರಿಕಾದ ಛಾಯೆಯೂ ಕಂಡುಬಂದಿರುವುದು ಇಲ್ಲಿನ ಪರಿಸ್ಥಿತಿಯನ್ನು ಹೆಚ್ಚು ಸೂಕ್ಷ್ಮ ಮತ್ತು ಸಂಕೀರ್ಣಗೊಳಿಸಿದೆ.

ಮ್ಯಾಥ್ಯೂ ವಾನ್‌ಡೈಕ್ ಎಂಬ ಅಮೆರಿಕನ್ ಪ್ರಜೆ ಇದರಲ್ಲಿ ಪಾಲ್ಗೊಂಡಿರುವುದು ಅತ್ಯಂತ ಗಂಭೀರ ಪ್ರಶ್ನೆಗಳನ್ನೆತ್ತುತ್ತದೆ. ಈತ ಖಾಸಗಿ ಮಿಲಿಟರಿ ಸೈನಿಕ ಎನ್ನಲಾಗಿದ್ದು ಸಿರಿಯಾ, ಲಿಬಿಯಾ, ಅಫ್ಘಾನಿಸ್ಥಾನ ಮತ್ತು ಇರಾಕ್ ಸಂಘರ್ಷದಲ್ಲಿ ಅಲ್ಲಿನ ಗುಂಪುಗಳಿಗೆ ತರಬೇತಿ ನೀಡಿದವನಾಗಿದ್ದಾನೆ. ಆತ ಅಮೆರಿಕನ್ ಸೈನ್ಯದಿಂದ ನಿವೃತ್ತಿಯಾಗಿರುವವನೇನೂ ಅಲ್ಲ. ಅಮೆರಿಕನ್ ಆಡಳಿತದ ಪರವಾಗಿಯೇ ಆತ ಕಾರ್ಯ ನಿರ್ವಹಿಸುತ್ತಿರುವ ಸಾಧ್ಯತೆಗಳಿವೆ. ಅಮೆರಿಕದ ಗುಪ್ತಚರ ಜಾಲದೊಂದಿಗೆ ಮತ್ತು ಸಿಐಎ ಜತೆಗೆ ಆತ ಸಂಪರ್ಕಗಳನ್ನು ಹೊಂದಿದ್ದಾನೆ. ಸೂಕ್ಷ್ಮಸಂವೇದಿ ಈಶಾನ್ಯ ಭಾರತದಲ್ಲಿ ಆತ ಕಂಡುಬಂದಿರುವುದು ಖಂಡಿತವಾಗಿಯೂ ಆಕಸ್ಮಿಕವಲ್ಲ.



ಮ್ಯಾಥ್ಯೂ ವಾನ್‌ಡೈಕ್

ಇದು ಭಾರತವು ಕಳವಳ ಪಡುವಂತಹ ಬೆಳವಣಿಗೆಯೇ ಆಗಿದೆ.

ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಪದಚ್ಯುತರಾಗುವ ತುಸುವೇ ಮುನ್ನ ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್‌ಗಳನ್ನು ಸೇರಿಸಿಕೊಂಡು ಕ್ರೈಸ್ತ ಬಹುಸಂಖ್ಯಾತ ರಾಜ್ಯವೊಂದನ್ನು ನಿರ್ಮಿಸುವ ಯೋಜನೆಯನ್ನು ಅಮೆರಿಕ ಹೊಂದಿರುವುದಾಗಿ ಎಚ್ಚರಿಸಿದ್ದರು. ಅಮೆರಿಕವು ಬಂಗಾಳ ಕೊಲ್ಲಿಯಲ್ಲಿ ಮಿಲಿಟರಿ ಸೌಲಭ್ಯ ಹೆಚ್ಚಿಸಿಕೊಳ್ಳುತ್ತಿರುವ ಕುರಿತೂ ಹೇಳಿದ್ದರು. ಎಲ್ಲರೂ ಅದನ್ನು ಅತಿರಂಜಿತ ಕಲ್ಪನೆಯೆಂದು ತಳ್ಳಿ ಹಾಕಿದ್ದರು. ಆದರೆ ಈಗ ಅದು ಸತ್ಯವೆಂಬಂತೆ ತೋರಿಬರುತ್ತಿದೆ.

ಈಶಾನ್ಯ ಭಾರತದ ಜನಸಂಖ್ಯೆ ಮತ್ತು ರಾಜಕೀಯ ಪರಿಸ್ಥಿತಿಯನ್ನು ಗಮನಿಸುವಾಗ ಅಮೆರಿಕದ ಸೂತ್ರದ ಅಪಾಯ ಅರಿವಾಗುತ್ತದೆ. ಈಶಾನ್ಯ ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ನಾಗಲ್ಯಾಂಡ್ ಮತ್ತು ಮಿಜೋರಾಂನಲ್ಲಿ ಅಮೆರಿಕನ್ ಮಿಷನರಿಗಳು ಭದ್ರವಾಗಿ ಬೇರೂರಿದ್ದಾರೆ. ಮಣಿಪುರದಲ್ಲಿ ಜನಾಂಗೀಯ ಸಂಘರ್ಷವು ನಿರಂತರವಾಗಿ ನಡೆಯುತ್ತಿದ್ದು, ಅದಕ್ಕೆ ವಿದೇಶೀ ಕುಮ್ಮಕ್ಕೂ ಇದೆ.

ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ನಡುವಿನ ಸಂಘರ್ಷವು ಕೇವಲ ಜನಾಂಗೀಯವಲ್ಲ. ಅದು ಧಾರ್ಮಿಕ ಆಯಾಮವನ್ನೂ ಪಡೆದಿದೆ. ಮೈತೇಯಿಗಳು ವೈಷ್ಣವ ಹಿಂದುಗಳಾಗಿದ್ದು, ಮಣಿಪುರದಲ್ಲಿ ಶೇ. 41.39 ಜನಸಂಖ್ಯೆ ಹೊಂದಿದ್ದಾರೆ. ಅವರು ಹೆಚ್ಚಾಗಿ ಇಂಪಾಲ ಕಣಿವೆಯಲ್ಲಿ ಕೇಂದ್ರಿತವಾಗಿದ್ದಾರೆ. 1951ರಲ್ಲಿ ಶೇ. 65ರಷ್ಟಿದ್ದ ಅವರ ಸಂಖ್ಯೆ 2011ರ ವೇಳೆಗೆ ಶೇ.44ಕ್ಕೆ ಕುಸಿದಿದೆ. ಇದೇವೇಳೆ ನಾಗಾ-ಕುಕಿ ಆದಿವಾಸಿಗಳು ಪ್ರಮುಖವಾಗಿ ಕ್ರೈಸ್ತರಾಗಿದ್ದು, ಸುತ್ತಲಿನ ಬೆಟ್ಟ ಪ್ರದೇಶಗಳಲ್ಲಿ ವ್ಯಾಪಿಸಿದ್ದಾರೆ.

> ಎನ್‌ಐಎ ವಿದೇಶಿಯರನ್ನು ಬಂಧಿಸಿರುವುದು ಸದ್ಯಕ್ಕೆ ಈ ಚಟುವಟಿಕೆಗೆ ಕಡಿವಾಣ ಹಾಕಿರಬಹುದು. ಆದರೆ ಇದು ಕೇವಲ ಒಂದು ಘಟನೆಯೆಂದು ಸುಮ್ಮನೆ ಕೂರುವಂತಿಲ್ಲ. ಇದರ ಹಿಂದೆ ದೊಡ್ಡ ಷಡ್ಯಂತ್ರವಿದೆ. ಆ ಕುರಿತಂತೆ ಭಾರತ ಹೆಚ್ಚು ಎಚ್ಚರದಿಂದಿರಬೇಕು.

ಇಂಪಾಲ ಕಣಿವೆಯು ರಾಜ್ಯದ ಶೇ. 10ರಷ್ಟು ಪ್ರದೇಶ ಹೊಂದಿದ್ದರೆ, ಉಳಿದ 90 ಭಾಗದಲ್ಲಿ ಕುಕಿಗಳಿರುವ ಬೆಟ್ಟ ಪ್ರದೇಶಗಳಿವೆ. ಇನ್ನೊಂದು ವಿಷಯವೆಂದರೆ ಆದಿವಾಸಿಗಳು ಇಂಪಾಲ ಕಣಿವೆಯಲ್ಲಿ ಭೂಮಿಯನ್ನು ಖರೀದಿಸಬಹುದಾಗಿದೆ. ಆದರೆ ಮೈತೇಯಿಗಳು ಬೆಟ್ಟಗುಡ್ಡಗಳಲ್ಲಿ ನೆಲೆಸುವಂತಿಲ್ಲ. ಎರಡೂ ಜನಾಂಗದವರು ಸಮಾನ ಜನಾಂಗೀಯ ಮೂಲವನ್ನು ಹೊಂದಿದ್ದರೂ ಬೇರೆ ಧರ್ಮಕ್ಕೆ ಸೇರಿದವರಾಗಿರುವುದರಿಂದ ಜನಾಂಗೀಯ ದ್ವೇಷ ಹೆಚ್ಚಿದೆ.

ಇಂತಹ ಪರಿಸ್ಥಿತಿಯಲ್ಲಿ ಸಶಸ್ತ್ರ ತರಬೇತಿ ಪಡೆದಿರುವಂತಹ ಶಂಕಾಸ್ಪದ ಮಿಲಿಟರಿ ವ್ಯಕ್ತಿಗಳು ಈ ಪ್ರದೇಶವನ್ನು ಪ್ರವೇಶಿಸುವುದು ಎಷ್ಟು ಅಪಾಯಕಾರಿಯಾದೀತು ಎಂದು ಊಹಿಸಬಹುದು.

ಈ ಪ್ರದೇಶದಲ್ಲಿ ಅಮೆರಿಕವು ತನ್ನ ಪ್ರಭಾವ ಹರಡಲು ಯತ್ನಿಸುತ್ತಿದೆಯೆಂದು ಕೇಳಿಬರುತ್ತಿದ್ದ ಪಿಸುಮಾತುಗಳು ಈಗ ದೃಢಪಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಈಶಾನ್ಯ ಭಾರತಕ್ಕೆ ಅಮೆರಿಕದ ಪ್ರತಿನಿಧಿಗಳು ಪೂರ್ವಾನುಮತಿ ಪಡೆಯದೆ ಭೇಟಿ ನೀಡುತ್ತಿರುವುದೂ ಹೆಚ್ಚುತ್ತಿದೆ.

ಭಾರತದೊಂದಿಗೆ ಅಮೆರಿಕದ ಸಂಬಂಧವು ಯಾವಾಗಲೂ ದ್ವಿಮುಖವಾಗಿದೆ. ಒಂದು ಕಡೆಯಿಂದ ಸಹಕಾರ ಹಸ್ತ ಚಾಚುತ್ತಿದ್ದರೆ ಇನ್ನೊಂದೆಡೆಯಿಂದ ಭಾರತದ ಮೇಲೆ ಒತ್ತಡ ಹೇರುತ್ತದೆ. ಭಾರತದೊಂದಿಗೆ ಸ್ನೇಹ ಹೊಂದಿರುವಂತೆ ನಟಿಸುತ್ತಲೇ ಬೆನ್ನಿಗೆ ಚೂರಿ ಇರಿಯುವ ಕೆಲಸ ಮಾಡುತ್ತದೆ. ಭಾರತವು ಮತ್ತೊಂದು ಬಲಿಷ್ಠ ರಾಷ್ಟ್ರವಾಗುವುದನ್ನು ಅಮೆರಿಕ ಸಹಿಸುವುದಿಲ್ಲವೆಂಬುದು ಅದರ ನೀತಿಯಿಂದ ಸ್ಪಷ್ಟವಾಗಿದೆ.

ಭಾರತದ ಈಶಾನ್ಯ ಭಾಗದಲ್ಲಿ ಅಮೆರಿಕವು ರಹಸ್ಯವಾಗಿ ಕಾರ್ಯಾಚರಿಸುತ್ತಿದೆ. ಪ್ರಸ್ತುತ ಮ್ಯಾನ್ಮಾರ್‌ನ್ನು ಕೇಂದ್ರೀಕರಿಸಿ ಅಮೆರಿಕದ ಚಟುವಟಿಕೆ ನಡೆಯುತ್ತಿದೆಯಾದರೂ ಅದು ಈಶಾನ್ಯ ಭಾರತಕ್ಕೂ ವ್ಯಾಪಿಸುವ ದಿನಗಳು ದೂರವಿಲ್ಲ.

ಎನ್‌ಐಎ ವಿದೇಶಿಯರನ್ನು ಬಂಧಿಸಿರುವುದು ಸದ್ಯಕ್ಕೆ ಈ ಚಟುವಟಿಕೆಗೆ ಕಡಿವಾಣ ಹಾಕಿರಬಹುದು. ಆದರೆ ಇದು ಕೇವಲ ಒಂದು ಘಟನೆಯೆಂದು ಸುಮ್ಮನೆ ಕೂರುವಂತಿಲ್ಲ. ಇದರ ಹಿಂದೆ ದೊಡ್ಡ ಷಡ್ಯಂತ್ರವಿದೆ. ಆ ಕುರಿತಂತೆ ಭಾರತ ಹೆಚ್ಚು ಎಚ್ಚರದಿಂದಿರಬೇಕು.

'ಮಿಲೆನಿಯಲ್ಸ್'ಗಳಿಗಿಂತ 'ಜೆನ್-ಝಿ' ಕಡಿಮೆ ಬುದ್ಧಿವಂತರೆ?

ಅರವಿಂದ ಶೆಣೈ

ಜೆನ್-ಝಿ ಕುರಿತಂತೆ ಇತ್ತೀಚೆಗೆ ಬಹಳಷ್ಟು ಕೇಳುತ್ತಿರುತ್ತೇವೆ. ಆಧುನಿಕ ಪೀಳಿಗೆ ಎಂಬರ್ಥದಲ್ಲಿ 'ಜನರೇಶನ್ ಜಿ'ಯನ್ನು ಬಣ್ಣಿಸಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ದೇಶಗಳಲ್ಲಿ ಜೆನ್-ಝಿ ದಂಗೆಯಿಂದಾಗಿ ಸರಕಾರಗಳೇ ಉರುಳಿದ್ದು, ಆಡಳಿತ ಬದಲಾವಣೆಯಾಗಿದ್ದು ಕೇಳಿದ್ದೇವೆ.

ಆದರೆ ಜೆನ್-ಝಿ ತಲೆಮಾರಿನವರು ಅವರ ಹಿಂದಿನ ತಲೆಮಾರಾದ ಮಿಲೆನಿಯಲ್ಸ್‌ಗಳಿಗಿಂತ ಕಡಿಮೆ ಬುದ್ಧಿವಂತರೆ? ಎಂಬಂತಹ ಚರ್ಚೆಯೊಂದು ಈಗ ಶುರುವಾಗಿದೆ. ಹಿಂದಿನ ಪೀಳಿಗೆಯವರಿಗಿಂತ ಜೆನ್-ಝಿ ಪೀಳಿಗೆಯವರ ಬುದ್ಧಿವಂತಿಕೆ ಕಡಿಮೆ ಎಂಬುದಾಗಿ ಡಾ. ಜೇರೆಡ್ ಕೂನಿ ಹೋರ್ವತ್ ಎಂಬ ನ್ಯೂರೋ ವಿಜ್ಞಾನಿ ಪ್ರತಿಪಾದಿಸಿದ್ದಾರೆ. ಅಮೆರಿಕದ ಸಂಸತ್ತಿನ ವಾಣಿಜ್ಯ ಮತ್ತು ವಿಜ್ಞಾನದ ಮೇಲಿನ ಸೆನೆಟ್ ಸಮಿತಿಯ ಮುಂದೆ ಅವರು ಈ ಕುರಿತಾದ ಸಂಶೋಧನಾ ಮಾಹಿತಿಯನ್ನು ಸಲ್ಲಿಸುತ್ತಾ ಇದನ್ನು ತಿಳಿಸಿದ್ದಾರೆ.

ಪ್ರತಿಯೊಂದು ಪೀಳಿಗೆಯು ತನ್ನ ಹಿಂದಿನ ಪೀಳಿಗೆಗಿಂತ ಹೆಚ್ಚು ಬುದ್ಧಿವಂತಿಕೆಯನ್ನು ಸಾಧಿಸುತ್ತಾ ಬಂದಿದೆ.ಆದರೆ ಇದೇ ಮೊದಲ ಬಾರಿಯಾಗಿ ಪೀಳಿಗೆಯೊಂದು ಹಿಂದಿನ ಪೀಳಿಗೆಗಿಂತ ಕಡಿಮೆ ಬುದ್ಧಿವಂತಿಕೆ ಪ್ರದರ್ಶಿಸುತ್ತಿದೆ ಎನ್ನುವುದು ಅವರ ಅಭಿಪ್ರಾಯ. ಅದಕ್ಕೆ ಅವರು ಕಾರಣವನ್ನೂ ನೀಡಿದ್ದಾರೆ. "ಕಂಪ್ಯೂಟರ್, ಟ್ಯಾಬ್ಲೆಟ್‌ಗಳು ಸೇರಿದಂತೆ ಶೈಕ್ಷಣಿಕ ತಂತ್ರಜ್ಞಾನಗಳ ಹೆಚ್ಚೆಚ್ಚು ಬಳಕೆಯಿಂದಾಗಿ ಹೊಸ ಪೀಳಿಗೆಯವರು ಕಡಿಮೆ ಬುದ್ಧಿವಂತರಾಗುತ್ತಿದ್ದಾರೆ" ಎಂಬುದು ಅವರ ವಿವರಣೆ.



ಜೆನ್-ಝಿ ಮತ್ತು ಮಿಲೆನಿಯಲ್ಸ್

ಜೆನ್-ಝಿ ಎಂದರೆ 1997ರಿಂದ 2012ರ ಅವಧಿಯಲ್ಲಿ ಹುಟ್ಟಿದವರು. ಮಿಲೆನಿಯಲ್ಸ್ ಎಂದರೆ 1980ರಿಂದ 1996ರ ಅವಧಿಯಲ್ಲಿ ಜನಿಸಿದವರು. ಜೆನ್-ಝಿಗಳು ಶಾಲಾ ಕಲಿಕೆಗೆ ಡಿಜಿಟಲ್ ತಂತ್ರಜ್ಞಾನವನ್ನು ಹೆಚ್ಚಾಗಿ ಅವಲಂಬಿಸಿರುವುದರಿಂದ ಅವರ ಸಹಜ ಬುದ್ಧಿಶಕ್ತಿಯ ವಿಕಸನಕ್ಕೆ ಅಡ್ಡಿಯಾಗುತ್ತಿದೆ. ಜೆನ್-ಝಿ ಮಂದಿ 20ನೇ ಶತಮಾನದವರಿಗಿಂತ ಹೆಚ್ಚು ಸಮಯ ಶಾಲಾ ಕಾಲೇಜುಗಳಲ್ಲಿ ಕಳೆಯುವಂತಾಗಿದ್ದರೂ ಅವರ ಬುದ್ಧಿಶಕ್ತಿಯ ಮಟ್ಟ ಕುಸಿದಿದೆ ಎಂಬುದಾಗಿ ಈ ನರವಿಜ್ಞಾನಿ ಹೇಳುತ್ತಾರೆ.

ಈ ಪೀಳಿಗೆಯವರು ಸಣ್ಣ ಸಣ್ಣ ವಿಡಿಯೋಗಳ ಮೂಲಕ, ಪುಟ್ಟ ವಾಕ್ಯಗಳ ಮೂಲಕ ತಮ್ಮ ಕಲಿಕೆ ನಡೆಸುತ್ತಿದ್ದಾರೆ. ದೊಡ್ಡ ದೊಡ್ಡ ವಿವರಗಳನ್ನೂ ಈ ವಿಡಿಯೋ ವಿವರಣೆಗಳು ಅತ್ಯಂತ ಸಂಕ್ಷಿಪ್ತವಾಗಿ ನೀಡುತ್ತವೆ. ಆದರೆ ಮಾನವನ ಮಿದುಳು ಈ ರೀತಿ ಮೊಟಕು ಹಾದಿಯ ಮೂಲಕ ಕಲಿಯಲು ರೂಪುಗೊಂಡಿಲ್ಲ ಎಂದು ಅವರು ಹೇಳುತ್ತಾರೆ.

ಈಗಿನ ಹದಿಹರೆಯದವರು ತಾವು ಎಚ್ಚರದಲ್ಲಿರುವ ಸಮಯದಲ್ಲಿ ಅರ್ಧದಷ್ಟು ಕಾಲವನ್ನು ಮೊಬೈಲ್ ಅಥವಾ ಕಂಪ್ಯೂಟರ್ ಸ್ಕ್ರೀನ್ ವೀಕ್ಷಿಸುವುದರಲ್ಲೇ ಕಳೆಯುತ್ತಾರೆ. ಮನುಷ್ಯರ ದೇಹಶಾಸ್ತ್ರವು ಇತರ ಮನುಷ್ಯರಿಂದ ಮತ್ತು ಆಳವಾದ ಅಧ್ಯಯನದಿಂದ ಕಲಿತುಕೊಳ್ಳಲು ಪೂರಕವಾಗುವಂತೆ ರೂಪಿಸಲ್ಪಟ್ಟಿದೆಯೇ ಹೊರತು ಪುಟ್ಟ ಪುಟ್ಟ ಅಂಶಗಳನ್ನಷ್ಟೇ ನೆನಪಿಟ್ಟುಕೊಳ್ಳುವ ಮೂಲಕ ಅಲ್ಲ ಎನ್ನುತ್ತಾರೆ ಹೋರ್ವತ್. ಮೊಬೈಲ್ ಸ್ಕ್ರೀನ್ ನೋಡಿಕೊಂಡು ಕಲಿಯುವ ಮೂಲಕ ಈ ಪೀಳಿಗೆಯವರು ಸ್ಕಿಮ್ಮರ್‌ಗಳಂತಾಗಿದ್ದಾರೆ.ದೊಡ್ಡ ದೊಡ್ಡ ಪುಸ್ತಕಗಳನ್ನು ಎತ್ತಿಕೊಳ್ಳದಿರುವ ಮೂಲಕ ಸುಂದರ ಮನಸ್ಸುಗಳೂ ನಿಂತ ನೀರಿನಂತಾಗುತ್ತವೆ ಎನ್ನುತ್ತಾರವರು. ತಾನೇನೂ ತಂತ್ರಜ್ಞಾನ ವಿರೋಧಿಯಲ್ಲ. ಆದರೆ ವಿದ್ಯಾರ್ಥಿಗಳು ಮೊಬೈಲ್‌ನಲ್ಲಿ ಕಾಲಕಳೆಯುವ ಸಮಯವನ್ನು ನಿಯಂತ್ರಿಸಬೇಕಾಗಿದೆ. ಪುಸ್ತಕ ಓದುವಂತಹ ಹಳೆಯ ತಲೆಮಾರಿನ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕಾಗಿದೆ ಎಂಬುದು ಅವರ ಸಲಹೆ. ಪ್ರತಿಯೊಂದು ಪೀಳಿಗೆಯೂ ಅದರ ಹಿಂದಿನ ಪೀಳಿಗೆಗಿಂತ ಹೆಚ್ಚು ಬುದ್ಧಿವಂತಿಕೆಯನ್ನು ಹೊಂದಿರುತ್ತದೆ. ಆದರೆ ಜೆನ್ ಝೀ ಮಾತ್ರ ತನ್ನ ಹಿಂದಿನ ಪೀಳಿಗೆಗಿಂತ ಕಡಿಮೆ ಬುದ್ಧಿವಂತಿಕೆ ಹೊಂದಿದೆ. ಇದು ಕೇವಲ ಅಮೆರಿಕಕ್ಕಷ್ಟೇ ಸೀಮಿತವಲ್ಲ. ಜಾಗತಿಕವಾಗಿ ಕಂಡುಬರುತ್ತಿರುವ ವಿದ್ಯಮಾನ ಎಂದೂ ಅವರು ವಿವರಿಸುತ್ತಾರೆ.

ಜಾಗತಿಕ ಟ್ರೆಂಡ್

ಅಂಕಿಅಂಶಗಳನ್ನು ಗಮನಿಸಿದರೆ ಸುಮಾರು 80 ದೇಶಗಳಲ್ಲಿ ಇದೇ ಬಗೆಯ ಟ್ರೆಂಡ್ ಕಾಣಬಹುದು. ಶಾಲೆಗಳಲ್ಲಿ ಕಲಿಕೆಗೆ ಡಿಜಿಟಲ್ ಮಾಧ್ಯಮವನ್ನು ಬಳಸಿದ ಬಳಿಕ ವಿದ್ಯಾರ್ಥಿಗಳ ನಿರ್ವಹಣೆಯು ಗಣನೀಯವಾಗಿ ಕಡಿಮೆಯಾಗಿರುವುದನ್ನು ಕಾಣಬಹುದು.

ಅಮೆರಿಕ ನಡೆಸಿದ ಸಮೀಕ್ಷೆಯೊಂದು ಈಗ 8ರಿಂದ 18ರ ಹರೆಯದೊಳಗಿನ ಮಕ್ಕಳಲ್ಲಿ ಓದುವ ಅಭ್ಯಾಸ ಬಹಳಷ್ಟು ಕಡಿಮೆಯಾಗಿರುವುದನ್ನು ಕಂಡುಕೊಂಡಿದೆ. ತಲಾ ಐವರಲ್ಲಿ ಒಬ್ಬರು ಮಾತ್ರ ಓದುವ ಹವ್ಯಾಸ ಹೊಂದಿದ್ದಾರೆ. ಕಳೆದ ಎರಡು ದಶಕಗಳಲ್ಲಿ ವಿದ್ಯಾರ್ಥಿಗಳಲ್ಲೂ, ಹಿರಿಯರಲ್ಲೂ ಓದುವ ಹವ್ಯಾಸ ಶೇ. 40ರಷ್ಟು ಕಡಿಮೆಯಾಗಿದೆ ಎಂದು ಮತ್ತೊಂದು ಅಧ್ಯಯನವು ತಿಳಿಸಿದೆ.

ಕೋವಿಡ್ ಕಾಲದಲ್ಲಿ ಮಕ್ಕಳ ಕೈಗೆ ಮೊಬೈಲ್ ಬರುವಂತಾಗಿತ್ತು. ಶಾಲಾ ಕಲಿಕೆಗೆ ಮೊಬೈಲನ್ನೇ ಆಶ್ರಯಿಸುವಂತಾಗಿತ್ತು. ಆ ಬಳಿಕ ಕಂಡುಬಂದ ಅಂಶವೆಂದರೆ ಮೂರನೇ ತರಗತಿವರೆಗಿನ ಮಕ್ಕಳಲ್ಲಿ ಸ್ಪಷ್ಟವಾಗಿ ಓದುವ ಅಭ್ಯಾಸ ಶೇ. 30ರಷ್ಟು ಕಡಿಮೆಯಾಗಿದೆ ಎಂಬುದಾಗಿ. ಲೆಕ್ಕಗಳನ್ನು ಮಾಡಲು ಈಗ ಕ್ಯಾಲ್ಕುಲೇಟರ್‌ಗಳನ್ನು ಹೆಚ್ಚೆಚ್ಚು ಬಳಸುತ್ತಿರುವುದರಿಂದಾಗಿ ಮಕ್ಕಳಲ್ಲಿ ಮತ್ತು ಯುವಜನರಲ್ಲಿ ಗಣಿತ ಪರಿಣತಿ, ಮನದಲ್ಲೇ ಲೆಕ್ಕ ಹಾಕುವ ತಜ್ಞತೆ ಕಡಿಮೆಯಾಗಿದೆ ಎಂದೂ ಹೇಳಲಾಗುತ್ತಿದೆ.

ಒಂದಂತೂ ನಿಜ. ತಂತ್ರಜ್ಞಾನವು ಬೆಳೆದಂತೆ ಅದು ಚಿಂತನಾ ಶೈಲಿಯನ್ನು, ಕಲಿಕೆಯ ಮಾದರಿಯನ್ನು ಕೂಡಾ ಬದಲಿಸಿದೆ. ಓದುವ ಅಭ್ಯಾಸ ಕಡಿಮೆಯಾಗಿದೆ. ಆಳ ಗಮನ ಇಲ್ಲ. ಸುದೀರ್ಘ ವಿವರಣೆಗಿಂತ ಸಂಕ್ಷಿಪ್ತ ವಿವರಣೆಗಳೇ ಮುಖ್ಯವಾಗುತ್ತಿವೆ. ಪ್ರಶ್ನೆಗಳಿಗೆ ಮೊದಲಿನಂತೆ ಹುಡುಕಾಟ ನಡೆಸಬೇಕಾಗಿಲ್ಲ. ತಂತ್ರಜ್ಞಾನವು ತಕ್ಷಣವೇ ಉತ್ತರ ನೀಡುತ್ತದೆ.

ಹಾಗೆಂದು ಇವೆಲ್ಲ ಮನುಷ್ಯನ ಬುದ್ಧಿವಂತಿಕೆ ನಶಿಸುತ್ತಿರುವುದರ ಸಂಕೇತವೆಂದೇ ಹೇಳುವುದು ತಪ್ಪು. ಪೀಳಿಗೆಯೊಂದರ ಸ್ಥಿತ್ಯಂತರ ಎಂದೂ ಇದನ್ನು ಬಣ್ಣಿಸಬಹುದಾಗಿದೆ.

ಕಿರುಸುದ್ದಿ

ಮಡಿಕೇರಿಯಲ್ಲಿಂದು ಮಿನಿ ಉದ್ಯೋಗ ಮೇಳ

ಮಡಿಕೇರಿ: ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆ ವತಿಯಿಂದ ಏ. 8 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ 'ಉದ್ಯೋಗ ಮೇಳ' ನಡೆಯಲಿದೆ.

ಈ ಉದ್ಯೋಗ ಮೇಳದಲ್ಲಿ ಜಾಯ್ ಆಲುಕಾಸ್ ಜ್ಯುವೆಲ್ಲರಿ ಮೈಸೂರು, ಕಲ್ಯಾಣಿ ಮೋಟಾರ್ಸ್ ಕಾರ್ ಶೋ ರೂಂ ಮಡಿಕೇರಿ, ಕೂರ್ಗ್ ಕ್ಲಿಫ್ಟ್ಸ್ ರೆಸಾರ್ಟ್ ಮಡಿಕೇರಿ, ಹ್ಯೂಂಡಾಯಿ ಕಾರ್ ಶೋ ರೂಮ್ ಮಡಿಕೇರಿ, ಇವೊಲೋಬ್ಯಾಕ್ ರೆಸಾರ್ಟ್ ಮಡಿಕೇರಿ ಇವರು ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಈ ಮೇಳದಲ್ಲಿ ಖಾಸಗಿ ಕಂಪೆನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಈ ಉದ್ಯೋಗ ಮೇಳದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ,ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತರ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಭಾಗವಹಿಸಿ ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ದಾಖಲಾತಿಗಳು, ಅನುಭವ ಪ್ರಮಾಣಪತ್ರ (ಅನ್ವಯಿಸುವವರಿಗೆ ಮಾತ್ರ) ಹಾಗೂ ಸ್ವ-ವಿವರಗಳ ಪ್ರತಿಗಳೊಂದಿಗೆ ಉದ್ಯೋಗಮೇಳಕ್ಕೆ ಹಾಜರಾಗುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಸಿ.ಬಿ.ಮಂಜುನಾಥ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಜಾಬ್ ಕೋಆರ್ಡಿನೇಟರ್ 8296020826 ನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಮಂಜಲ್ ಪಾದೆ ಪ್ರೀಮಿಯರ್ ಲೀಗ್ ಸೀಸನ್- 4 ಆರಂಭ

ಬಂಟ್ವಾಳ: ಇಲ್ಲಿನ ಮಂಜಲ್ಪಾದೆ ನೇತ್ರಾವತಿ ಬಳಗ ವತಿಯಿಂದ ಮಂಜಲ್ ಪಾದೆ ಪ್ರೀಮಿಯರ್ ಲೀಗ್ ಸೀಸನ್- 4 ಕ್ರಿಕೆಟ್ ಪಂದ್ಯಾಟವನ್ನು ಸಜೀಪ ಮಾಗಣೆ ತಂತ್ರಿಗಳಾದ ಎಂ.ಸುಬ್ರಮಣ್ಯ ಭಟ್ ದೀಪ ಬೆಳಗಿಸಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಕ್ರೀಡೆಯಿಂದ ಶಾರೀರಿಕ, ಮಾನಸಿಕ ಬೆಳವಣಿಗೆ ಆಗುವುದರೊಂದಿಗೆ ಒಗ್ಗಟ್ಟು ಸಮಯೋಚಿತ ನಡೆ ಹೊಂದಾಣಿಕೆಯ ಮನೋಸ್ಥಿತಿ ಉತ್ತಮಗೊಳ್ಳುವುದು ಎಂದರು. ಅತಿಥಿಯಾಗಿದ್ದ ಬಂಟ್ವಾಳ ಸಮಾಜ ಸೇವಾ ಬ್ಯಾಂಕ್ ನಿರ್ದೇಶಕ ಅರುಣ್ ಕುಮಾರ್ ಮಾತನಾಡಿ ಯುವಜನತೆ ದುಶ್ಚಟಗಳಿಗೆ ಬಲಿ ಬೀಳದೆ ಸಾಮಾಜಿಕ ಚಟುವಟಿಕೆಗಳು ನಡೆಸುವುದರ ಮೂಲಕ ಉತ್ತಮ ನಾಗರಿಕರಾಗಲು ಸಾಧ್ಯವಾಗುತ್ತದೆ ಎಂದರು. ಅರ್ಚಕ ಕೇಶವ ಭಟ್, ಪ್ರೇಮಾ ಜಿ. ಶೆಟ್ಟಿ. ಭಜನಾ ಮಂದಿರದ ಅಧ್ಯಕ್ಷ ಸತೀಶ್ ಗಟ್ಟಿ, ಶಾರದಾ ಯುವಕ ಸಂಘದ ಅಧ್ಯಕ್ಷ ಯೋಗೇಶ್, ನೇತ್ರಾವತಿ ಬಳಗದ ಅಧ್ಯಕ್ಷ ಶ್ರೇಯಸ್ ಗಟ್ಟಿ, ಹಿಂದೂ ಜಾಗರಣ ವೇದಿಕೆ ಮಂಗಳೂರು ಮಹಾನಗರದ ಸುರೇಂದ್ರ ಅಮೀನ್, ಪರಮೇಶ್ವರ ಪೂಜಾರಿ, ದರ್ನಪ್ಪ ಗಟ್ಟಿ, ವಾಸು ಗಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಬಾಬು ಗೌಡ, ಮಾವಿನಕಟ್ಟೆ ಮನೆ, ಕೊಯ್ಯೂರು, ಗೇರುಕಟ್ಟೆ ವಯಾ ಗುರುವಾಯನಕೆರೆ, ಬೆಳ್ತಂಗಡಿ (ತಾ).
2. ಗೀತಾ ಅಣ್ಣಪ್ಪ, 'ಶ್ರೀ ರಾಮ್', ದೊಡ್ಡೋಣಿ ರಸ್ತೆ, ಬೀಜಾಡಿ, ಕೋಟೇಶ್ವರ ಶ್ರೀ ಕೋಟಿಲಿಂಗೇಶ್ವರ ದೇವಸ್ಥಾನದ ವಠಾರದಲ್ಲಿ.
3. ಜಯರಾಮ, ದೊಂಬೆಲ ಹೌಸ್, ಮುಕ್ಕ, ಸುರತ್ಕಲ್- ಮುಕ್ಕ ಶ್ರೀ ಸತ್ಯಧರ್ಮದೇವಿ ದೇವಸ್ಥಾನ ವಠಾರದಲ್ಲಿ.
4. ನಿಶ್ಚಿತಾ ಸತೀಶ್ ಶೆಟ್ಟಿ, ಶೆಟ್ಟಿಪಾಲ್ ಹೌಸ್, ಕೊಳಂಬೆ ವಯಾ ಬಜಪೆ.
5. ಹತ್ತು ಸಮಸ್ತರು, ಕಾರಿಂಜೆ ಕ್ರಾಸ್, ವಗ್ಗ, ಬಂಟ್ವಾಳ (ತಾ).
6. ಅಯ್ಯಪ್ಪ ಸೇವಾ ಸಮಿತಿ, ಗುರುನಗರ, ಕೊಂಚಾಡಿ ಕೊರಗಜ್ಜ ಗುಡಿಯ ಬಳಿ, ಮಂಗಳೂರು.
7. ಕರಿಶ್ಮಾ ಅಶು, ಕಜೆಕಾರು ಹೊಸಮನೆ, ಮಡಂತ್ಯಾರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

ಶ್ರೀ ಧರ್ಮಸ್ಥಳ ಮೇಳ
ಕೆರಾಡಿ- ಕುಳ್ಳಂಬಳ್ಳಿಯಲ್ಲಿ
ಶ್ರೀ ನಾರಾಯಣ ಶೆಟ್ಟಿ S/o ರಂಗಯ್ಯ ಶೆಟ್ಟಿ, ಮೈಪಾಡಿ, ಬ್ರಹ್ಮಶ್ರೀ ನಿಲಯ

ಶ್ರೀ ಸಾಲಿಗ್ರಾಮ ಮೇಳ
ಸಾಸ್ತಾನ ಕಾರ್ತಿಕೇಯ ಎಸ್ಟೇಟ್‌ನಲ್ಲಿ ಬಯಲಾಟ
- ಮಾಯಾ ಶೂರ್ಪನಖಿ, ಜಟಾಯು ಮೋಕ್ಷ- ಬಬ್ರುವಾಹನ

ಶ್ರೀ ಪೆರ್ಡೂರು ಮೇಳ
ಶ್ರೀ ನಂದಿಕೇಶ್ವರ ದೈವಸ್ಥಾನ, ಮೇರ್ಡಿಯಲ್ಲಿ- **ಚದುರಂಗ**

ಶ್ರೀ ಹನುಮಗಿರಿ ಮೇಳ
ಬನ್ನಾಡಿಯಲ್ಲಿ

ಶ್ರೀ ಪಾವಂಜೆ ಮೇಳ
ಪಾರಂಪಳ್ಳಿ ಪಡುಕೆರೆಯಲ್ಲಿ
ಪಾಪಣ್ಣ ವಿಜಯ, ಗುಣಸುಂದರಿ



ವಿಕಲಚೇತನ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ಉಡುಪಿ ಜಿಲ್ಲೆ ಮತ್ತು ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ವಿಕಲಚೇತನ ಫಲಾನುಭವಿಗಳಿಗೆ ಮಂಜೂರಾದ ಯಂತ್ರ ಚಾಲಿತ ದ್ವಿಚಕ್ರ ವಾಹನ ಹಾಗೂ ಶ್ರವಣ ಸಾಧನವನ್ನು ಕಾಪು ಶಾಸಕರ ಕಚೇರಿಯಲ್ಲಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಮಂಗಳವಾರ ವಿತರಿಸಿದರು. ಬಡಾ ಗ್ರಾಮ ಪಂಚಾಯತ್ ವ್ಯಾಪ್ತಿಯ ದಿನೇಶ್ ಆಚಾರ್ಯ ಅವರಿಗೆ ಯಂತ್ರ ಚಾಲಿತ ದ್ವಿಚಕ್ರ ವಾಹನ ಹಾಗೂ ಮಲ್ಲಾರು ರಾಣ್ಯಕೇರಿ ನಿವಾಸಿ ಶಾಂತ ಅವರಿಗೆ ಶ್ರವಣ ಸಾಧನವನ್ನು ವಿತರಿಸಲಾಯಿತು.

ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಬಿಜೆಪಿ ಮುಖಂಡ ಹರಿಕೃಷ್ಣ ಬಂಟ್ವಾಳ್ ಖಂಡನೆ

ಬಂಟ್ವಾಳ: ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇತ್ತೀಚೆಗೆ ಚುನಾವಣಾ ಭಾಷಣವೊಂದರಲ್ಲಿ ಬಿಜೆಪಿ ಮತ್ತು ಆರ್ ಎಸ್‌ಎಸ್‌ನ್ನು ವಿಷಪೂರಿತ ಹಾವಿಗೆ ಹೋಲಿಸಿ ಅದನ್ನು ಸಾಯಿಸುವುದು ಪ್ರತಿಯೋರ್ವರ ಧರ್ಮವಾಗಿದೆ ಎಂದು ಹೇಳಿರುವುದನ್ನು ದ.ಕ.ಜಿಲ್ಲಾ ಬಿಜೆಪಿ ಮುಖಂಡ,ಕಿಯೋನಿಕ್ಸ್ ನಿಗಮದ ಮಾಜಿ ಅಧ್ಯಕ್ಷ ಹರಿಕೃಷ್ಣ ಬಂಟ್ವಾಳ ಅವರು ಕಟು ಶಬ್ದಗಳಿಂದ ಖಂಡಿಸಿದ್ದಾರೆ.



ರಾಜಕಾರಣವನ್ನೇ ತನ್ನ ಕಸುಬಾಗಿಸಿಕೊಂಡಿರುವ ಹಿರಿಯ ಕಾಂಗ್ರೆಸಿಗ ಖರ್ಗೆ ಅವರು ನಕಲಿಗಾಂಧಿಗಳ ಕುಟುಂಬವನ್ನು ಮೆಚ್ಚಿಸುವುದಕ್ಕಾಗಿ ಅಲ್ಪಸಂಖ್ಯಾತರೇ ಸೇರಿರುವ ಸಮಾವೇಶವನ್ನುದ್ದೇಶಿಸಿ ಮಾತನಾಡಿ, ಮುಸಲ್ಮಾನರು ನಮಾಜ್ ಮಾಡುವಾಗ ಅಲ್ಲಿ ಹಾವೊಂದು ಪ್ರತ್ಯಕ್ಷವಾದರೆ, ನಮಾಜನ್ನು ನಿಲ್ಲಿಸಿ ಹಾವನ್ನು ಕೊಲ್ಲಬೇಕೆಂದು ಕುರಾನ್ ಹೇಳಿದೆ. ಅದೇ ರೀತಿ ಈ ಬಿಜೆಪಿ ಮತ್ತು ಆರ್‌ಎಸ್‌ಎಸ್ ಕೂಡ ಈ ಹಾವಿನ ರೀತಿಯಲ್ಲಿದ್ದು, ಅದನ್ನು ಸಾಯಿಸುವುದು ನಮ್ಮ ಆದ್ಯ ಕರ್ತವ್ಯವಾಗಬೇಕು ಎಂದು ಪ್ರಚೋದನಕಾರಿ ಭಾಷಣ ಮಾಡುವ ಮೂಲಕ ಖರ್ಗೆಯವರ ಮೆದುಳಿನ ಮಾನಸಿಕತೆ ಎಂತಹ ದ್ವೇಷಪೂರಿತವಾಗಿದೆ ಎಂಬುದನ್ನು ದೇಶದ ಜನತೆ ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದು ಹರಿಕೃಷ್ಣ ಬಂಟ್ವಾಳ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಖರ್ಗೆಯವರ ಈ ಪ್ರಚೋದನಾಕಾರಿ ಭಾಷಣ ಈಗಾಗಲೇ ಸಾಮಾಜಿಕ ಜಾಲತಾಣದಲ್ಲಿಯು ವ್ಯಾಪಕವಾಗಿ ವೈರಲ್ ಅಗಿದ್ದು,ಖರ್ಗೆಯವರ ಈ ಹೇಳಿಕೆ ಭಾರತದ ಜಾತ್ಯಾತೀತ ನಿಲುವಿಗೆ ಮತ್ತು ಸಂವಿಧಾನ ವಿರೋಧವು ಆಗಿದೆ.ಪ್ರಚೋದನಾಕಾರಿ ಹೇಳಿಕೆಯ ಹಿನ್ನಲೆಯಲ್ಲಿ ಅವರ ವಿರುದ್ದ ಸೋಮೊಟೋ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಜರಗಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರು ದೇಶದ ಜನರ ಕ್ಷಮೆ ಯಾಚಿಸಬೇಕು, ಬಿಜೆಪಿ ರಾಜ್ಯಾಧ್ಯಕ್ಷರು ತಕ್ಷಣ ಕಾರ್ಯಕಾರಿ ಸಮಿತಿ ಸಭೆ ಕರೆದು ಅವರ ಮೇಲೆ ಕ್ರಮಕ್ಕೆ ಮುಂದಾಗಬೇಕು ಎಂದು ತಮ್ಮ ಹೇಳಿಕೆಯ ಮೂಲಕ ಆಗ್ರಹಿಸಿದ್ದಾರೆ.

ಕುಮಾರಧಾರಾ ತಟದಲ್ಲಿ ಜೀವವೈವಿಧ್ಯ ಸಮಾವೇಶ, ಗಂಗಾ ಪೂಜೆ | ಆಶೀಸರ ಅಭಿಮತ

ಜನಾಂದೋಲನದಿಂದ ಪಶ್ಚಿಮಘಟ್ಟ ಉಳಿವು

ಕಡಬ: ಪಶ್ಚಿಮಘಟ್ಟ ಪ್ರದೇಶದಲ್ಲಿ ಅನೇಕ ಜನವಿರೋಧಿ ಯೋಜನೆಗಳನ್ನು ಅನುಷ್ಠಾನ ಮಾಡುವ ಮೂಲಕ ಸರಕಾರ ಪಶ್ಚಿಮ ಘಟ್ಟವನ್ನು ಸರ್ವನಾಶ ಮಾಡಲು ಹೊರಟಿದೆ. ಅದನ್ನು ತಡೆಯಬೇಕಾದರೆ ಜನಾಂದೋಲನ ಒಂದೇ ಪರಿಹಾರ ಎಂದು ರಾಜ್ಯ ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಹೇಳಿದರು.

ಅವರು ಸೋಮವಾರ ಸಂಜೆ ಕಡಬ ತಾಲೂಕಿನ ಪೆರಾಬೆ ಗ್ರಾಮದ ಹೊಸ್ಮಠ ಸಮೀಪ ಉರುಂಬಿ ಎಂಬಲ್ಲಿ ಕುಮಾರಧಾರಾ ನದಿ ತಟದಲ್ಲಿ ಕುಮಾರಧಾರಾ ಪರಿಸರ ಸಂರಕ್ಷಣಾ ಸಮಿತಿ ಆಶ್ರಯದಲ್ಲಿ ನಡೆದ ಸತ್ಯನಾರಾಯಣ ಪೂಜೆ, ಕುಮಾರಧಾರಾ ನದಿಗೆ ಗಂಗಾ ಪೂಜೆ ಮತ್ತು ಜೀವವೈವಿಧ್ಯ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಶ್ಚಿಮಘಟ್ಟ ಪ್ರದೇಶ ಜೀವವೈವಿಧ್ಯಗಳ ತಾಣವಾಗಿದ್ದು, ಅದರ ಸರ್ವನಾಶ ಮಾಡಲು ಹೊರಟಿರುವ ಸರಕಾರದ ವಿರುದ್ಧ ನಾವುಗಳು ಗಟ್ಟಿ ಧ್ವನಿ ಎತ್ತಬೇಕಾಗಿದೆ. ಜನಪ್ರತಿನಿಧಿಗಳಿಗೆ ಒತ್ತಡ ಹಾಕಿ ಸರಕಾರಗಳು ಎಚ್ಚೆತ್ತುಕೊಳ್ಳುವಂತೆ ಮಾಡಬೇಕಾಗಿದೆ. ಅಭಿವೃದ್ಧಿಯ ಹೆಸರಲ್ಲಿ ವಿವಿಧ ಯೋಜನೆಗಳಿಗೆ ಸರಕಾರ ಕೋಟ್ಯಂತರ ರೂ. ಹಣ ವ್ಯಯ ಮಾಡುತ್ತದೆ. ಆದರೆ ನಮ್ಮ ನದಿ, ಕಣಿವೆ, ಪಶ್ಚಿಮಘಟ್ಟ ಅಭಿವೃದ್ಧಿಗಾಗಿ ಯಾವುದೇ ಯೋಜನೆ ರೂಪಿಸುವುದಿಲ್ಲ. ಇದು ವಿಷಾದನೀಯ ಎಂದರು.

ಎತ್ತಿನ ಹೊಳೆ ಯೋಜನೆಗೆ 24 ಸಾವಿರ ಕೋಟಿ ಖರ್ಚು ಮಾಡಲಾಗಿದೆ. ಮುಂದೆ ಅದು 36 ಸಾವಿರ ಕೋಟಿಗೆ ಏರಿಕೆ ಆಗಲಿದೆ. ಈ ಯೋಜನೆಯಿಂದ ಅಪಾರ ಕಾಡು ನಾಶ ಆಗಿದೆ. ಆದರೂ ಚಿಕ್ಕಬಳ್ಳಾಪುರಕ್ಕೆ ನೀರು ಪೂರೈಕೆ ಇನ್ನೂ ಸಾಧ್ಯವಾಗಿಲ್ಲ, ನೀರಿಗಾಗಿ ಎತ್ತಿನಹೊಳೆ ಪ್ರದೇಶದಲ್ಲಿ ಮತ್ತೆ 3 ಡ್ಯಾಂಗಳು ನಿರ್ಮಾಣವಾಗಲಿದೆ. ಅದರಿಂದ ಕೆಂಪುಹೊಳೆ, ಗುಂಡ್ಯ ಹೊಳೆಯ ಮೂಲಕ ಕುಮಾರಧಾರಾ, ನೇತ್ರಾವತಿಗೆ ಬರುವಂತಹ ಅಲ್ಪಸ್ವಲ್ಪ ನೀರಿಗೂ ತಡೆ ಆಗಲಿದೆ. ಮುಂದೊಂದು ದಿನ ಈ ಜಾಗಕ್ಕೆ ನೀರೇ ಇಲ್ಲದಂತಾಗಬಹುದು. ಅದರೊಟ್ಟಿಗೆ ಪಶ್ಚಿಮಘಟ್ಟದ ಜೀವವೈವಿಧ್ಯವೂ ನಾಶವಾಗಲಿದೆ ಎಂದಯ ಆಶೀಸರ ಆತಂಕ ವ್ಯಕ್ತಪಡಿಸಿದರು.



ಕುಮಾರಧಾರಾ ನದಿಗೆ ಗಂಗಾ ಪೂಜೆ ಮತ್ತು ಜೀವವೈವಿಧ್ಯ ಸಮಾವೇಶದಲ್ಲಿ ಪಾಲ್ಗೊಂಡ ಪ್ರಮುಖರು

> ಹೋರಾಟ ಸಮಿತಿ ಸತ್ಯನಾರಾಯಣ ಪೂಜೆಯ ಮೂಲಕ ಹೋರಾಟ ಆರಂಭಿಸಿದ್ದು, ದೇವರ ಅನುಗ್ರಹದಿಂದಾಗಿ ಹೋರಾಟಕ್ಕೆ ಫಲ ದೊರೆತಿದೆ. ಪರಿಸರ ಮತ್ತು ದೇವರು ಬೇರೆ ಅಲ್ಲ, ಪರಿಸರ ಪ್ರೀತಿಯ ಮೂಲಕ ದೇವರನ್ನು ನೋಡಬಹುದು ಎಂಬುದನ್ನು ಇಲ್ಲಿ ಕಾಣಬಹುದು.
>
> ■ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಸುಬ್ರಹ್ಮಣ್ಯ ಮಠಾಧೀಶರು

ಭಾರತೀಯ ಜೀವ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಟಿ.ವಿ. ರಾಮಚಂದ್ರ ಅವರು ಮಾತನಾಡಿ, ಎತ್ತಿನ ಹೊಳೆಯ ಮೂಲಕ ಚಿಕ್ಕಬಳ್ಳಾಪುರಕ್ಕೆ 24 ಟಿ.ಎಂ.ಸಿ. ನೀರು ಕೊಡುವುದಾಗಿ ಸರಕಾರ ಹೇಳಿಕೊಂಡಿದೆ. ಆದರೆ ಈ ಭಾಗದಲ್ಲಿ 110 ವರ್ಷಗಳ ಕಾಲ ಸುರಿದ ಮಳೆ ಪ್ರಮಾಣದ ಪ್ರಕಾರ ಇಲ್ಲಿ ಸಂಗ್ರಹ ಆಗುವ ನೀರು 12.85 ಟಿ.ಎಂ.ಸಿ. ಮಾತ್ರ. ಅದರಲ್ಲಿ 9 ಟಿ.ಎಂ.ಸಿ. ಸ್ಥಳೀಯ ರೈತರಿಗೆ, 3 ಟಿ.ಎಂ.ಸಿ. ಮೀನುಗಳಿಗೆ ಹೋಗುತ್ತದೆ. ಇನ್ನು ಕೇವಲ 0.85 ಟಿ.ಎಂ.ಸಿ. ನೀರು ಉಳಿಕೆಯಾಗುತ್ತಿದ್ದು, ಆ ನೀರು ಯಾವುದಕ್ಕೂ ಸಾಲದು. 19 ಸಾವಿರ ಕೋಟಿ ವ್ಯಯ ಮಾಡಿ ಅಲ್ಲಿನ ಕೆರೆಗಳನ್ನು ಪುನಶ್ಚೇತನಗೊಳಿಸಿದರೆ ಅಲ್ಲಿ 165 ಟಿ.ಎಂ.ಸಿ. ನೀರು ಪಡೆಯಬಹುದಾಗಿದೆ. ಹೀಗಿರುವಾಗ ಎತ್ತಿನ ಹೊಳೆಗೆ ಇಷ್ಟೊಂದು ಹಣ ವ್ಯಯ ಮಾಡುವ ಅಗತ್ಯವಿರಲಿಲ್ಲ, ಕೇವಲ ಲೂಟಿ ಮಾಡುವ ಸಲುವಾಗಿ ಹಾಕಿಕೊಂಡಿರುವ ಯೋಜನೆಗಳಾಗಿದೆ. ನದಿ ಸಂರಕ್ಷಿಸುವ, ಪ್ರಭೇದ, ಜೀವವೈವಿಧ್ಯಗಳ ಕಾಪಾಡುವ ನಿಟ್ಟಿನಲ್ಲಿ ನಾವು ಜಾಗೃತರಾಗಬೇಕಾಗಿದೆ ಎಂದರು.

ಕುಮಾರಧಾರಾ ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷ ಕರುಣಾಕರ ಗೋಗಟೆ ಮಾತನಾಡಿ, ಉರುಂಬಿಯಲ್ಲಿ ಕಂಪೆನಿಯೊಂದರ ಮೂಲಕ ಕುಕ್ಕೆ ಜಲ ವಿದ್ಯುತ್ ಯೋಜನೆ ನಿರ್ಮಿಸಲು ಮುಂದಾಗಿತ್ತು. ಅದರ ವಿರುದ್ಧ ಕಳೆದ 8 ವರ್ಷಗಳಿಂದ ನಡೆಸಿರುವ ಹೋರಾಟಕ್ಕೆ ಜಯ ಸಿಕ್ಕಿದೆ. ಯೋಜನೆ ರದ್ದುಗೊಳಿಸಿರುವುದಾಗಿ ಆದೇಶ ಹೊರಡಿಸಿದೆ, ನಮ್ಮ ಹೋರಾಟಕ್ಕೆ ಅನಂತ ಹೆಗಡೆ ಆಶೀಸರಿಂದ ಆರಂಭಗೊಂಡು ಊರವರು, ಪರಿಸರವಾದಿಗಳು, ಭಾರತೀಯ ಜೀವ ವಿಜ್ಞಾನ ಸಂಸ್ಥೆಯ ಅಧಿಕಾರಿಗಳು ಸಹಕಾರ, ಪ್ರೋತ್ಸಾಹ ನೀಡಿದ್ದಾರೆ ಎಂದರು.

ಜೀವವೈವಿಧ್ಯ ಸಂಸ್ಥೆಯ ಹಿರಿಯ ವಿಜ್ಞಾನಿ ಪ್ರೀತಂ, ನಿರ್ದೇಶಕಿ ಪವಿತ್ರ, ಕಡಬ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ನವೀನ್ ಭಂಡಾರಿ, ಹೋರಾಟ ಸಮಿತಿಯ ಉಪಾಧ್ಯಕ್ಷ ಗೋಪಾಲಕೃಷ್ಣ, ಕಾನೂನು ಸಲಹೆಗಾರ ಶ್ರೀನಿವಾಸ್ ರಾವ್, ಹೋರಾಟ ಸಮಿತಿಯ ಎಲ್ದಿ ಥೋಮಸ್ ಉಪಸ್ಥಿತರಿದ್ದರು. ಹೋರಾಟ ಸಮಿತಿಯ ಕಿರಣ್ ಗೋಗಟೆ ವಂದಿಸಿದರು. ಉಪನ್ಯಾಸಕ ಅಜಿತ್ ಹೆಬ್ಬಾರ್ ನಿರ್ವಹಿಸಿದರು.

ಬಾಂಜಾರುಮಲೆಯಲ್ಲಿ 'ವಂದೇ ಪ್ರಕೃತಿ ಮಾತರಂ': ಪರಿಸರ ಸಂರಕ್ಷಣೆ ಮಾಹಿತಿ



ಬೆಳ್ತಂಗಡಿ: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಬೆಳ್ತಂಗಡಿ ತಾಲೂಕು ಘಟಕದ ವತಿಯಿಂದ ನೆರಿಯ ಗ್ರಾಮದ ಅತ್ಯಂತ ದುರ್ಗಮ ಪ್ರದೇಶವಾದ ಬಾಂಜಾರು ಮಲೆಯಲ್ಲಿ 'ವಂದೇ ಪ್ರಕೃತಿ ಮಾತರಂ' ಎಂಬ ಪರಿಸರ ಸಂರಕ್ಷಣೆ ಮಾಹಿತಿ ಕಾರ್ಯಕ್ರಮ ಭಾನುವಾರ ಜರಗಿತು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಎಸ್‌ಡಿಎಂ ಸ್ವಾಯತ್ತ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀಧರ್ ಭಟ್ ಮಾತನಾಡಿ, ದೈವದತ್ತವಾಗಿ ಪ್ರಕೃತಿಯಲ್ಲಿ ಸಿಗುವ ಉತ್ತಮ ಗಾಳಿ, ನೀರು, ಭೂಮಿ ಯನ್ನು ಗೌರವ ಯುತವಾಗಿ ಕಂಡು ಅದರ ಬಳಕೆ ಮಾಡಬೇಕು. ಉತ್ತಮ ಪ್ರಕೃತಿಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ನಮ್ಮ ಜವಾಬ್ದಾರಿ.ಬಾಂಜಾರು ಮಲೆಯ ಪ್ರಕೃತಿ ಸೌಂದರ್ಯ ಕಾಪಾಡಿಕೊಂಡು ಬರುತ್ತಿರುವ ಇಲ್ಲಿನ ನಾಗರಿಕರು ಎಲ್ಲರಿಗೂ ಮಾದರಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಭಾಸಾಪ ತಾಲೂಕು ಘಟಕದ ಅಧ್ಯಕ್ಷ ಗಣಪತಿ ಭಟ್ ಕುಳಮರ್ವ ಮಾತನಾಡಿ, ಗ್ರಾಮೀಣ ಭಾಗದ ಜನರ ಜೀವನಶೈಲಿಗೆ ಪ್ರಕೃತಿಯ ಕೊಡುಗೆ ವರದಾನವಾಗಿದೆ. ಪ್ರಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಘಟಕದ ವತಿಯಿಂದ ಹೆಚ್ಚಿನ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಕಾರ್ಯದರ್ಶಿ ಸುಭಾಷಿಣಿ, ಸದಸ್ಯರಾದ ರಮೇಶ್ ಮಯ್ಯ, ರಾಮಕೃಷ್ಣ ಭಟ್ ಬದನಾಜೆ, ಆಶ್ವಿಜಾ ಶ್ರೀಧರ್, ತ್ರಿವಿಕ್ರಮ ಹೆಬ್ಬಾರ್, ಪ್ರಕಾಶ ನಾರಾಯಣ್ ರಾವ್, ಅಖಿಲ ಪ್ರಕಾಶ್ ಮಠದ ಮಜಲು ಮತ್ತಿತರರಿದ್ದರು. ನವೀನ್ ನೆರಿಯ ಸ್ವಾಗತಿಸಿದರು.

ಸ್ಥಳೀಯರನ್ನು ಭೇಟಿಯಾಗಿ ಅಲ್ಲಿನ ಜನಜೀವನದ ಬಗ್ಗೆ, ಸಮಸ್ಯೆಗಳ ಕುರಿತು ಅವಲೋಕನ ನಡೆಸಲಾಯಿತು.

ಯಕ್ಷಗಾನ ಕಲೆ ಗಟ್ಟಿಯಾಗಿ ಬೇರೂರಲು ಸಂಘಟನೆಗಳೂ ಕಾರಣ: ಎಡನೀರು ಶ್ರೀ

ಪುತ್ತೂರು: ಯಕ್ಷಗಾನ ಕಲೆಯು ಕರಾವಳಿಯಾದ್ಯಂತ ಗಟ್ಟಿಯಾಗಿ ನೆಲೆ ನಿಂತಿದ್ದರೆ, ಅದಕ್ಕೆ ಸದಾಕಾಲ ಪ್ರೋತ್ಸಾಹಿಸುತ್ತಿರುವ ಹಲವು ಯಕ್ಷ ಸಂಘಟನೆಗಳು, ಸಂಘಟಕರು ಕೂಡಾ ಕಾರಣರು ಎಂದು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದರು.

ಇಲ್ಲಿನ ಕುಂಟ್ಯಾನ ಶ್ರೀ ಸದಾಶಿವ ದೇವಸ್ಥಾನದ ಆವರಣದಲ್ಲಿ ಯಕ್ಷ ಮಿತ್ರರು ಬೆಂಗಳೂರು ಟ್ರಸ್ಟ್ ವತಿಯಿಂದ ಹಿರಿಯ ಯಕ್ಷಗಾನ ತಾಳಮದ್ದಳೆ ಕಲಾವಿದ ಹರೀಶ್ ಬಳಂತಿ ಮೊಗರು ಸಮ್ಮಾನ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಇತರೆಲ್ಲಾ ಕಲೆಗಿಂತ ಹೆಚ್ಚಿನ ಪ್ರೋತ್ಸಾಹ ವಿಂದು ಯಕ್ಷಗಾನಕ್ಕೆ ಈ ನಮ್ಮ ಸೀಮಿತ ಪ್ರದೇಶದಲ್ಲಿ ಸಿಗುತ್ತಿದೆ. ಯಕ್ಷಮಿತ್ರರು ಬೆಂಗಳೂರು ಸಂಘಟನೆಯಿಂದ ಶ್ಲಾಘನೀಯ ಕಾರ್ಯನಡೆಯುತ್ತಿದೆ. ಯಕ್ಷಗಾನ ಕಲಾವಿದರೂ ಕೂಡಾ ಯಕ್ಷಾಭಿಮಾನಿಗಳ ವಿಶ್ವಾಸವನ್ನು ಉಳಿಸಿಕೊಂಡು ಬರುವುದು ಮುಖ್ಯ ಎಂದು ಅವರು ತಿಳಿಸಿದರು.



> ಇದೇ ವೇಳೆ ಹನುಮಗಿರಿ ಮೇಳದವರಿಂದ ದಮಯಂತಿ ಪುನಃಸ್ವಯಂವರ, ಗದಾಯುದ್ಧ, ರಕ್ತರಾತ್ರಿ ಯಕ್ಷಗಾನ ಪ್ರದರ್ಶನ ನಡೆಯಿತು.

ಸಮ್ಮಾನ ಸ್ವೀಕರಿಸಿದ ಕಲಾವಿದ ಹರೀಶ್ ಬಳಂತಿಮೊಗರು, ಸಮ್ಮಾನ ಎನ್ನುವುದು ನನಗಲ್ಲ, ಅದು ನನ್ನಲ್ಲಿ ಇರುವ ಕಲೆಗೆ. ಕಲೆ ಎನ್ನುವುದನ್ನು ಮುಂದಿನ ಜನಾಂಗಕ್ಕೆ ದಾಟಿಸುವುದಕ್ಕೆ ಭಗವಂತ ಇದೊಂದು ಅವಕಾಶ ಕೊಟ್ಟಿದ್ದಾನೆ ಎಂದು ಭಾವ ಕಲಾವಿದರಲ್ಲಿ ಇರಬೇಕು. ಹಾಗಿದ್ದರೆ ಕಲೆಗೆ ಸರಿಯಾದ ನ್ಯಾಯ ಸಲ್ಲಿಸಲು ಸಾಧ್ಯ. ಕಲೆ ನಮ್ಮನ್ನು ಪುನೀತರನ್ನಾಗಿ, ಸಜ್ಜನರನ್ನಾಗಿ ಮಾಡಲಿ ಎಂದು ಆಶಿಸಿದರು.

ಯಕ್ಷ ಮಿತ್ರರು ಬೆಂಗಳೂರು ಗೌರವಾಧ್ಯಕ್ಷ ಆರ್.ಕೆ. ಬೆಳ್ಳಾರೆ, ಕುಂಟ್ಯಾನ ಸದಾಶಿವ ದೇವಳ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಧರ್ಣಪ್ಪ ಮೂಲ್ಯ, ಆಡಳಿತ ಮೊಕ್ತೇಸರ ರಾಘವೇಂದ್ರ ಮಯ್ಯ, ಗ್ರಾಮದ ಹಿರಿಯರಾದ ರಾಜಶೇಖರ ಜೈನ್ ನೀರ್ಪಾಜೆ ಉಪಸ್ಥಿತರಿದ್ದರು. ಯಕ್ಷ ಮಿತ್ರರು ಟ್ರಸ್ಟ್ ಸಂಚಾಲಕ ಶ್ಯಾಮಸೂರ್ಯ ಮುಳಿಗದ್ದೆ ಪ್ರಸ್ತಾವಿಸಿದರು. ರಶ್ಮಿ ಕೆ. ಕಾರ್ಯಕ್ರಮ ನಿರೂಪಿಸಿದರು.

114ನೇ ವರ್ಷ ಇತಿಹಾಸವಿರುವ ಎಂಸಿಸಿ ಬ್ಯಾಂಕ್‌ನ ಚರಿತ್ರೆಯಲ್ಲಿ ಹೊಸ ದಾಖಲೆ | ವರ್ಷದೊಳಗೆ 25 ಶಾಖೆ ವಿಸ್ತರಣೆಯ ಗುರಿ

ಎಂಸಿಸಿ ಬ್ಯಾಂಕ್‌ಗೆ 13 ಕೋಟಿ ರೂಪಾಯಿ ಲಾಭ: ಅನಿಲ್ ಲೋಬೋ

ಮಂಗಳೂರು: ಮಂಗಳೂರಿನ ಹಂಪನಕಟ್ಟೆಯಲ್ಲಿ ಪ್ರಧಾನ ಕಚೇರಿ ಹೊಂದಿ ಕಾರ್ಯನಿರ್ವಹಿಸುತ್ತಿರುವ ಎಂಸಿಸಿ ಬ್ಯಾಂಕ್ ಪ್ರಸಕ್ತ 2026 ಮಾರ್ಚ್ ಅಂತ್ಯಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಗಮನಾರ್ಹ ಸಾಧನೆ ತೋರಿದೆ. ಬ್ಯಾಂಕ್ ಈ ಆರ್ಥಿಕ ವರ್ಷದಲ್ಲಿ ರೂ.13 ಕೋಟಿ ಲಾಭವನ್ನು ದಾಖಲಿಸಿದೆ.

ಮಂಗಳವಾರ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಬ್ಯಾಂಕಿನ ಅಧ್ಯಕ್ಷ ಅನಿಲ್ ಲೋಬೊ ಅವರು, ಬ್ಯಾಂಕಿನ ಒಟ್ಟು ವ್ಯವಹಾರ ರೂ.1525 ಕೋಟಿಗೆ ತಲುಪಿದ್ದು, ಶೇ.23ರಷ್ಟು ಹೆಚ್ಚಳವಾಗಿದೆ ಎಂದರು.

2018ನೇ ವರ್ಷದಲ್ಲಿ ಬ್ಯಾಂಕಿನ ಚುಕ್ಕಾಣಿ ಹಿಡಿದ ಪ್ರಸ್ತುತ ಆಡಳಿತ ಮಂಡಳಿಯ ಅವಧಿಯಲ್ಲಿ ರೂ.500 ಕೋಟಿ ಇದ್ದ ಬ್ಯಾಂಕಿನ ಒಟ್ಟು ವ್ಯವಹಾರವು ಕಳೆದ ಏಳೂವರೆ ವರ್ಷದಲ್ಲಿ ಮೂರು ಪಟ್ಟು ಹೆಚ್ಚಾಗಿದೆ. ಇದು 114 ವರ್ಷದ ಇತಿಹಾಸವಿರುವ ಬ್ಯಾಂಕಿನ ಚರಿತ್ರೆಯಲ್ಲಿಯೇ ದಾಖಲೆಯಾಗಿದೆ. ಬ್ಯಾಂಕಿನ ನೆಟ್ ವರ್ತ್ ರೂ.83.76 ಕೋಟಿಯಿಂದ ರೂ.91.80 ಕೋಟಿಗೆ ಏರಿಕೆಯಾಗಿದೆ. ಬ್ಯಾಂಕ್ ಆರ್ಥಿಕ ವರ್ಷದಲ್ಲಿ ನಿಗದಿಪಡಿಸಿದ್ದ ಠೇವಣಿಗಳು ಹಾಗೂ ಸಾಲಗಳ ಗುರಿಗಳನ್ನು ಯಶಸ್ವಿಯಾಗಿ ಸಾಧಿಸಿದೆ. ಆರ್ಥಿಕ ವರ್ಷದಲ್ಲಿ ಬ್ಯಾಂಕ್ ರೂ.285 ಕೋಟಿಗಳ ಒಟ್ಟು ವ್ಯವಹಾರ ವಹಿವಾಟನ್ನು ದಾಖಲಿಸಿದೆ. ಇದು ಮಹತ್ವದ ಸಾಧನೆಯಾಗಿದೆ ಎಂದು ಅವರು ಮಾಹಿತಿ ನೀಡಿದರು.



ಶಾಖೆಗಳ ಜೊತೆ 7 ಹೊಸ ಎಟಿಎಂ ಕೇಂದ್ರ

ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬೈಂದೂರಿನಲ್ಲಿ 20ನೇ ಶಾಖೆ ಹಾಗೂ ಸಂತೆಕಟ್ಟೆಯಲ್ಲಿ 21ನೇ ಶಾಖೆಯನ್ನು ಆರಂಭಿಸಲಾಗಿದೆ. ದೇರಳಕಟ್ಟೆಯಲ್ಲಿ 22ನೇ ಶಾಖೆ ಹಾಗೂ ಕಟಪಾಡಿಯಲ್ಲಿ 23ನೇ ಶಾಖೆ ಆರಂಭಿಸಲು ಸಿದ್ಧತೆ ನಡೆದಿದೆ. ಮುಂದಿನ ವರ್ಷಾಂತ್ಯಕ್ಕೆ ಶಾಖೆಗಳ ಸಂಖ್ಯೆಯನ್ನು 25ಕ್ಕೆ ಏರಿಸಲಾಗುವುದು. ಕುಲಶೇಖರ ಶಾಖೆಯನ್ನು ಸ್ವಂತ ಕಟ್ಟಡಕ್ಕೆ ಸುಸಜ್ಜಿತ ಸೌಲಭ್ಯದೊಂದಿಗೆ ಸ್ಥಳಾಂತರಿಸಲಾಗಿದೆ. ಬೆಳ್ಮಣ್, ಸುರತ್ಕಲ್, ಉಡುಪಿ, ಬೆಳ್ತಂಗಡಿ, ಸಂತೆಕಟ್ಟೆ, ಕಿನ್ನಿಗೋಳಿ ಹಾಗೂ ಕುಲಶೇಖರದಲ್ಲಿ ಹೊಸ 7 ಏಟಿಎಮ್‌ಗಳನ್ನು ಸ್ಥಾಪಿಸಲಾಗಿದೆ. ಹೀಗೆ ಎಟಿಎಮ್‌ಗಳ ಸಂಖ್ಯೆ 15ಕ್ಕೆ ಏರಿದೆ ಎಂದು ಅನಿಲ್ ಲೋಬೊ ಮಾಹಿತಿ ನೀಡಿದರು.

> ಎಂಸಿಸಿ ಬ್ಯಾಂಕ್ ಎನ್‌ಆರ್‌ಐ ಸೌಲಭ್ಯವನ್ನು ಹೊಂದಿರುವ ಎರಡನೇ ನಗರ ಪಟ್ಟಣ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಬ್ಯಾಂಕ್ ಸಂಪೂರ್ಣವಾಗಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿದ್ದು, ಖಾಸಗಿ ಮತ್ತು ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ಸಮಾನವಾದ ಸೇವೆ ಒದಗಿಸುತ್ತಿದೆ.
>
> ■ ಅನಿಲ್ ಲೋಬೊ, ಅಧ್ಯಕ್ಷರು ಎಂಸಿಸಿ ಬ್ಯಾಂಕ್

- ಬ್ಯಾಂಕಿನ ಒಟ್ಟು ವ್ಯವಹಾರ ರೂ.1525 ಕೋಟಿ ತಲುಪಿದ್ದು, ಶೇ.23ರಷ್ಟು ಹೆಚ್ಚಳ
- ಆರ್ಥಿಕ ವರ್ಷದಲ್ಲಿ ಬ್ಯಾಂಕ್ ರೂ.285 ಕೋಟಿಗಳ ಒಟ್ಟು ವ್ಯವಹಾರ

ಸುದ್ದಿಗೋಷ್ಠಿಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿಸಿಲ್ವ, ನಿರ್ದೇಶಕರಾದ ಆಂಡ್ರೂ ಡಿಸೋಜಾ, ಡಾ.ಜೆರಾಲ್ಡ್ ಪಿಂಟೊ, ಅನಿಲ್ ಪತ್ರಾವೊ, ಜೆ.ಪಿ. ರೊಡ್ರಿಗಸ್, ಡೇವಿಡ್ ಡಿಸೋಜಾ, ಎಲ್ರೊಯ್ ಕಿರಣ್ ಕ್ರಾಸ್ಟೊ, ಹೆರಾಲ್ಡ್ ಮೊಂತೇರೊ, ರೋಶನ್ ಡಿಸೋಜಾ, ಮೆಲ್ವಿನ್ ವಾಸ್, ವಿನ್ಸೆಂಟ್ ಲಸ್ರಾದೊ, ಸಿ.ಜಿ. ಪಿಂಟೊ, ಸುಶಾಂತ್ ಸಲ್ಡಾನ್ಹಾ, ಐರಿನ್ ರೆಬೆಲ್ಲೊ, ಡಾ.ಫ್ರೀಡಾ ಡಿಸೋಜಾ, ಆಲ್ವಿನ್ ಪಿ. ಮೊಂತೆರೊ, ಫೆಲಿಕ್ಸ್ ಡಿಕ್ರೂಜ್, ಶರ್ಮಿಳಾ ಮಿನೇಜಸ್, ಮಹಾಪ್ರಬಂಧಕ ಸುನಿಲ್ ಮಿನೇಜಸ್ ಉಪಸ್ಥಿತರಿದ್ದರು.

ಶ್ರೀ ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿ (ರಿ.) ಸುಬ್ರಹ್ಮಣ್ಯ

ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆ ಬಿಳಿನೆಲೆ, ಕಡಬ ತಾಲೂಕು, ದಕ್ಷಿಣ ಕನ್ನಡ -574230

ಬೇಕಾಗಿದ್ದಾರೆ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ಬೆಂಗಳೂರು ಇವರ ಆದೇಶ ಸಂಖ್ಯೆ: DPI.CPIO;C8(2)/FOV.18/E.1554165/ಖಾಹುಭ.ಅನು/60/2024-25 ದಿನಾಂಕ: 31-03-2026 ರ ಅನ್ವಯ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ **ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆ ಬಿಳಿನೆಲೆ, ಕಡಬ ತಾಲೂಕು, ದಕ್ಷಿಣ ಕನ್ನಡ** ಇಲ್ಲಿ ಈ ಕೆಳಗೆ ಖಾಲಿ ಇರುವ ಅನುದಾನಿತ ಸಹಶಿಕ್ಷಕ ಹುದ್ದೆಯನ್ನು ಸರಕಾರದ ಆದೇಶ ಅನುಸಾರ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿಷಯ	ಹುದ್ದೆ	ವಿದ್ಯಾರ್ಹತೆ	ಮೀಸಲಾತಿ
1	ಸಹ ಶಿಕ್ಷಕರು (ಪಿಸಿಎಂ)	01	ಬಿ.ಎಸ್ಸಿ, ಬಿ.ಎಡ್	ಅನ್ವಯಿಸುವುದಿಲ್ಲ

ಅರ್ಜಿ ಸಲ್ಲಿಸುವ ವಿಧಾನ: ಅರ್ಹ ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸ್ವ ಕೈಬರಹದ ಅರ್ಜಿಯೊಂದಿಗೆ ತಮ್ಮ ಶೈಕ್ಷಣಿಕ ವಿದ್ಯಾರ್ಹತೆ, ಜಾತಿ ಪ್ರಮಾಣ ಪತ್ರ ಮತ್ತು ಸಂಬಂಧಪಟ್ಟ ಪ್ರಮಾಣ ಪತ್ರಗಳ ದೃಢೀಕರಿಸಿದ ನಕಲು ಪ್ರತಿಗಳೊಂದಿಗೆ ಈ ಪ್ರಕಟಣೆ ಪ್ರಕಟಗೊಂಡ **21 ದಿವಸದೊಳಗಾಗಿ** ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಬೇಕು ಮತ್ತು ಅರ್ಜಿಯ ಪ್ರತಿಯೊಂದನ್ನು ಅಗತ್ಯ ದಾಖಲೆಗಳೊಂದಿಗೆ **ಮಾನ್ಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಮಂಗಳೂರು** ಇವರಿಗೆ ನಿಗದಿತ ಸಮಯದೊಳಗೆ ಕಳುಹಿಸಿಕೊಡಬೇಕು. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ, ನಂತರ ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ದಿನಾಂಕ, ಸಮಯ ಹಾಗೂ ಸ್ಥಳ ವಿವರಗಳನ್ನು ತಿಳಿಸಲಾಗುವುದು.

ಅರ್ಜಿ ಸಲ್ಲಿಸುವ ವಿಳಾಸ: **ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿ (ರಿ.) ಸುಬ್ರಹ್ಮಣ್ಯ, ಸುಬ್ರಹ್ಮಣ್ಯ ಗ್ರಾಮ ಮತ್ತು ಅಂಚೆ ಕಡಬ ತಾಲೂಕು, ದಕ್ಷಿಣ ಕನ್ನಡ-574238.**

ಸಹಿ/-ಅಧ್ಯಕ್ಷರು

ಪುರಸಭಾ ಕಾರ್ಯಾಲಯ, ಹೊಸದುರ್ಗ-577527

(ಜಿಲ್ಲೆ: ಚಿತ್ರದುರ್ಗ.)

ಫೋನ್ ನಂ. 08199-230221 E-mail:tmchosadurga@yahoo.com

Webist: hosadurgatown.gov.in

ಕ್ರಮಾಂಕ : ತಾ.ಶಾ/ಸಿಆರ್-08/2025-26/10/2 ದಿನಾಂಕ: 06.04.2026

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ಪ್ರಕಾರ ಹೊಸದುರ್ಗ ಪುರಸಭೆ ವ್ಯಾಪ್ತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 29.04.2026 ರ ಸಂಜೆ 5:30 ಗಂಟೆವರೆಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.hosdurgatown.mrc.gov.in ಮತ್ತು https://kppp.karnataka.gov.in ಹಾಗೂ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

ಕಾಮಗಾರಿ ಹೆಸರು:- **DMA/2025-26/OW/WORK_INDENT55438/Call-2**

ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) (ಜಿ.ಎಸ್.ಟಿ. ಹೊರತು ಪಡಿಸಿ) 97,37,873-00 ಇ.ಎಂ.ಡಿ (ರೂ.ಗಳಲ್ಲಿ) 194760-00. ನಿಗಧಿಪಡಿಸಿದ ಕಾಲಾವಧಿ:- 9 Months (Including Monsoon season)

"ಷರತ್ತುಗಳು" 1. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಮತ್ತು ಈ ಪುರಸಭೆಯ ಅಧಿಕೃತ ಅಂತರ್ಜಾಲ ತಾಣ http://www.hosadurgatown.mrc.gov.in ರ Tender ವಿಭಾಗದಲ್ಲೂ ಸಹ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/- ಆಡಳಿತಾಧಿಕಾರಿಗಳು, ಪುರಸಭೆ, ಹೊಸದುರ್ಗ. ಹಾಗೂ ಉಪ ವಿಭಾಗಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ಸಹಿ/-ಮುಖ್ಯಾಧಿಕಾರಿಗಳು, ಪುರಸಭೆ, ಹೊಸದುರ್ಗ.

DIPR/CTA/KSMCA/12/2026-27

ನಗರಸಭಾ ಕಾರ್ಯಾಲಯ, ಪುತ್ತೂರು, ದ.ಕ

ಕಿಲ್ಲೆ ಮೈದಾನ ಹತ್ತಿರ, ಕೋರ್ಟ್ ರಸ್ತೆ, ಪುತ್ತೂರು, ದಕ್ಷಿಣ ಕನ್ನಡ-574201

ವೆಬ್‌ಸೈಟ್: www.putturcity.mrc.gov.in ಇಮೇಲ್: co.puttur.cmc@gmail.com

ಪು.ನ.ಸ/ವಿ.ನಿ/07/ತಾಂ.ವಿ.ಸಿ.ಆರ್/06/2026-27 ದಿನಾಂಕ: 06/04/2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸರಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ kppp.karnataka.gov.in ನಿಯಮಗಳನ್ವಯ ಒಟ್ಟು: 1 ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಿದೆ. (1) Pre Bid Meeting ದಿನಾಂಕ: 13/04/2026 ಪೂರ್ವಾಹ್ನ: 11.30 ಗಂಟೆಗೆ ಸ್ಥಳ ನಗರಸಭೆ ಪುತ್ತೂರು ಕಿಲ್ಲೆ ಮೈದಾನ ಕೋರ್ಟು ರಸ್ತೆ ಪುತ್ತೂರು (2) Tender Queries/Clarifications ಕೊನೆಯ ದಿನಾಂಕ: 13/04/2026 ಪೂರ್ವಾಹ್ನ: 11.30 ಗಂಟೆ. (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ: 21/04/2026 ಅಪರಾಹ್ನ: 5.30 ಗಂಟೆ. (4) ಸ್ವೀಕೃತವಾದ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 23/04/2026 ಪೂರ್ವಾಹ್ನ: 11.00 ಗಂಟೆ. (5) ಸ್ವೀಕೃತವಾದ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 27/04/2026 ಪೂರ್ವಾಹ್ನ: 11.00 ಗಂಟೆ. (6) ಜಿ.ಎಸ್.ಟಿ ತೆರಿಗೆ ಪ್ರತ್ಯೇಕ ಪಾವತಿಸಲಾಗುವುದು. ಗುತ್ತಿಗೆದಾರರು ಟೆಂಡರ್ ಶೆಡ್ಯೂಲ್ ನಲ್ಲಿ GST ಯನ್ನು ಹೊರತುಪಡಿಸಿದ ದರವನ್ನು ನಮೂದಿಸುವುದು. (7) ದಿನಾಂಕಗಳಲ್ಲಿನ ಯಾವುದೇ ಬದಲಾವಣೆಗಳು ಅಥವಾ ಟೆಂಡರ್ ನಲ್ಲಿನ ತಿದ್ದುಪಡಿಯನ್ನು ಕೊರಿಜೆಂಡಮ್ /ಅಡೆಂಡಮ್ ಮೂಲಕ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ನಗರಸಭಾ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಅಥವಾ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆದುಕೊಳ್ಳುವುದು. ಯಾವುದೇ ತಿದ್ದುಪಡಿ ಮತ್ತು ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು.

(1) ಕಾಮಗಾರಿ ಹೆಸರು: ಪುತ್ತೂರು ನಗರಸಭಾ ವ್ಯಾಪ್ತಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕೆರೆ ಅಭಿವೃದ್ಧಿ ಕಾಮಗಾರಿ. ಇಂಡೆಂಟ್ ನಂಬ್ರ: DMA/2025-26/OW/WORK_INDENT56287, ಟೆಂಡರ್ ಮೊತ್ತ ರೂ. 373.95 ಲಕ್ಷ.

ಸಹಿ/-, ಆಡಳಿತಾಧಿಕಾರಿಗಳು, ನಗರಸಭೆ ಪುತ್ತೂರು

ಸಹಿ/-, ಪೌರಾಯುಕ್ತರು, ನಗರಸಭೆ ಪುತ್ತೂರು

DIPR/DK/KSMCA/42/26-27 dt. 07.04.2026

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುವಿ:ಕಿಇಂ-3:ಟೆಂಡರ್ 03/2026-27

ದಿನಾಂಕ : 06.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.03/2025-26 ದಿನಾಂಕ: 06.04.2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2026-27 ದಿನಾಂಕ 06-04-2026 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 03 ಕಾಮಗಾರಿಗಳಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ:282.29 ಲಕ್ಷಗಳು ಮತ್ತು ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ:199.38 ಲಕ್ಷಗಳು ಇ.ಎಂ.ಡಿ ಗರಿಷ್ಠ ಮೊತ್ತ ರೂ. 423445/- ಮತ್ತು ಇ.ಎಂ.ಡಿ ಕನಿಷ್ಠ ಮೊತ್ತ ರೂ. 299072/-, ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 09 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 18-04-2026 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 06-04-2026 ರಿಂದ 21-04-2026 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 21-04-2026 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 22-04-2026 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 23-04-2026ರ 17-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/12/KSMCA/2026-27

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ, ಗದಗ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಗದಗ.

ದೂರವಾಣಿ ಸಂ: 08372-233996, 231744, ಫ್ಯಾಕ್ಸ್ ಸಂ: 08372-239597

ಮೇಲ್: gadagdfwo@gmail.com

ಕ್ರ.ಸಂ /ಜಿಆಕುಕಆಸ/ಜಿಗುಭಘ/ **BMW-** ಟೆಂಡರ್‌ಪ್ರಕಟಣೆ/ 14/2026-27

ದಿನಾಂಕ: 06.04.2026

ಟೆಂಡರ್ ಪ್ರಕಟಣೆ

2026-27 ನೇ ಸಾಲಿಗೆ ಎನ್.ಹೆಚ್.ಎಂ ಯೋಜನೆಯ ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮದಡಿಯಲ್ಲಿ ಗದಗ ಜಿಲ್ಲೆಯಲ್ಲಿ **191** ಆರೋಗ್ಯ ಕೇಂದ್ರಗಳ (THs/CHCs/PHCs/UPHCs /Namma Clinics/SC-AAMs) ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ಸೇವೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ, ಟೆಂಡರ್ ಅಂದಾಜು ಮೊತ್ತ **ರೂ. 26.74/- ಲಕ್ಷಗಳು** ಇ.ಎಮ್.ಡಿ ಮೊತ್ತ **ರೂ. 53488/-** ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆ ದಿನಾಂಕ: **06/04/2026** ರಿಂದ ಪ್ರಾರಂಭ ಹಾಗೂ **21/04/2026** ರಂದು ಸಂಜೆ **04:00 ಗಂಟೆಗೆ** ವರೆಗೆ, ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in/** ಮೂಲಕ **Tender Reference Number : _DHFWS/2026-27/SE2137** ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ ಅಥವಾ **gadagdfwo@gmail.com/ dhogadag@gmail.com** ಸಂಪರ್ಕಿಸಬಹುದಾಗಿದೆ.

ವಂದನೆಗಳೊಂದಿಗೆ,

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗದಗ

ವಾ.ಸಾ.ಇ./ಗದಗ/10/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ ಸೂರ್ಯನಗರ 4ನೇ ಹಂತದ ಕೋನಸಂದ್ರ ಬೊಮ್ಮಂಡನಹಳ್ಳಿ ಗ್ರಾಮಗಳ ಬ್ಲಾಕ್ 22, 23, 24, 25, 26, 27, 28 ಮತ್ತು 29 ರಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳು & 100 ಡುಪ್ಲೆಕ್ಸ್ ಮನೆಗಳ ನಿರ್ಮಾಣ ಕಾಮಗಾರಿಗಳ ಮೇಲ್ವಿಚಾರಣೆಗಾಗಿ ಯೋಜನಾ ಉಸ್ತುವಾರಿ ಸಂಸ್ಥೆ (PMC)ಯನ್ನು ನೇಮಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕಟಣೆ ಸಂಖ್ಯೆ:

1. CE/PMC/SNR/KHB/2025-26/SE0259/CALL-2 to SE0264/CALL-2 and KHB/2026-27/SE0373 & SE0374 Date: 06.04.2026
2. CE/PMC/100 Houses-Suryanagara Phase-4/KHB/2026-27/SE0376 Date: 07.04.2026

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 21.04.2026 ಸಂಜೆ 4.00 ಗಂಟೆಗೆ. ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/80/ಆಕಾರ್/2026-27

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)

ಇ-ಮೇಲ್: midhly@yahoo.co.in ಫೋ.ನಂ: 08284-220113

ನಂ:ಕಾನಿಅ/ಸನೀವಿಹ/ತಾವಿ/ಟೆಂಡರ್/Consultancy Services/2026-27/09 ದಿನಾಂಕ: 04/04/2026

ಟೆಂಡರ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್)

2022-23ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಖಾರಲ್ಯಾಂಡ ಯೋಜನೆಯ ನಿರ್ಮಾಣ/ಪುನರುಜ್ಜೀವನಕ್ಕಾಗಿ ಅನುಮೋದನೆಗೊಂಡ ಕಾಮಗಾರಿಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಯೋಜನಾ ನಿರ್ವಹಣೆ, ನಿರ್ಮಾಣ ಉಸ್ತುವಾರಿ ಹಾಗೂ ಗುಣನಿಯಂತ್ರಣ ಪರೀಕ್ಷೆಗಳನ್ನು ಕೈಗೊಳ್ಳಲು ಅನುಕೂಲವಾಗುವ ಉದ್ದೇಶದಿಂದ ಸಮಾಲೋಚಕರನ್ನು ನೇಮಿಸಿಕೊಳ್ಳಲು (Consultancy Services) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಕನ್ಸಲ್‌ಟೆನ್ಸಿ ಡಾಕ್ಯೂಮೆಂಟ್ (KC-6) ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ" ಅಂತರ್ಜಾಲದ ವೆಬ್‌ಸೈಟ್ (ದ್ವಿ-ಲಕೋಟೆ) ಪದ್ಧತಿಯ ಮುಖಾಂತರ ಟೆಂಡರ ಕರೆಯಲಾಗಿದೆ.

(1) ಇಂಟೆಂಡ್ ನಂ: MI/2026-27/SE0534 (2) ಇಂಟೆಂಡ್ ನಂ: MI/2026-27/SE0535 (3) ಇಂಟೆಂಡ್ ನಂ: MI/2026-27/SE0536 (4) ಇಂಟೆಂಡ್ ನಂ: MI/2026-27/SE0537 (5) ಇಂಟೆಂಡ್ ನಂ: MI/2026-27/SE0538

ಖಾಲಿ ಟೆಂಡರ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ವೆಬ್‌ಸೈಟ್ ವಿಳಾಸ: "https://kppp.karnataka.gov.in" ದಲ್ಲಿ ದಿನಾಂಕ: 08-04-2026 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 21-04-2026 ರೊಳಗಾಗಿ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ: 22-04-2026 ರ ಸಾಯಂಕಾಲ 05.15 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 23-04-2026 ಸಾಯಂಕಾಲ 05.30 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಕೆ.ಡಬ್ಲ್ಯೂ ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-, (ಎಂ. ನಾಗರಾಜ) ಕಾರ್ಯನಿರ್ವಾಹಕ ಅಭಿಯಂತರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)

DIPR/KWR/KSMCA/27/ 26-27 Dt.-07.04.2026

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಉತ್ತರಹಳ್ಳಿ ಮತ್ತು ಅಂಜನಾಪುರ ವಿಭಾಗ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಅಮೃತ್ ನಗರ-ಕೋಣನಕುಂಟೆ ಮುಖ್ಯ ರಸ್ತೆ, ಸೌದಾಮಿನಿ ಲೇಔಟ್, ಬೆಂಗಳೂರು-62.

ಸಂಖ್ಯೆ: ಕಾಪಾಅ/ಉಅವಿ/ಟೆಂಡರ/01/2026-27 ದಿನಾಂಕ:07-04-2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ ಟೆಂಡರ್)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಉತ್ತರಹಳ್ಳಿ ಮತ್ತು ಅಂಜನಾಪುರ ವಿಭಾಗ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೆಂಗಳೂರು-62 ಇವರು ಆಯುಕ್ತರ ಪರವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಬೆಂಜಮಂ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ಉತ್ತರಹಳ್ಳಿ ಉಪ ವಿಭಾಗದ ಯಾದಾಲಂನಗರ ಕಾಲೋನಿ, ವಸಂತಪುರ ಕಾಲೋನಿ (ಬ್ಲಾಕ್ 27_2) ಭುವನೇಶ್ವರಿನಗರ ಕಾಲೋನಿ, ವಡ್ಡರಪಾಳ್ಯ ಕಾಲೋನಿ, ಶ್ರೀನಿವಾಸ ಕಾಲೋನಿ, ಉತ್ತರಹಳ್ಳಿ ಕಾಲೋನಿ ಮತ್ತು ಚಿಕ್ಕಲ್ಲಸಂದ್ರ ಕಾಲೋನಿಗಳ ಪ.ಜಾ/ಪ.ಪಂ. ಫಲಾನುಭವಿ ಪ್ರದೇಶ ಮತ್ತು ಸಂಪರ್ಕಿತ ರಸ್ತೆಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2ನೇ ಕರೆ) (ಸಾಮಾನ್ಯರಿಗೆ). **ಟೆಂಡರ್‌ಗಿಟ್ಟ ಅಂದಾಜು ಮೊತ್ತ: ₹.397.49 ಲಕ್ಷಗಳು, ಇಎಂಡಿ: ₹.5,96,235.00**
2.	ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ, ವಾರ್ಡ್ ಸಂಖ್ಯೆ-51, ಸುಬ್ರಮಣ್ಯಪುರದ ಗುಬ್ಬಲಾಳ ಮತ್ತು ಸುತ್ತಮುತ್ತಲ ಪ್ರದೇಶಗಳು, ಜೆ.ಟಿ. ಬಡಾವಣೆ, ಶ್ರೀನಿವಾಸ ಕಾಲೋನಿ, ವಡ್ಡರಪಾಳ್ಯ ಗ್ರಾಮ, ಅರೇಹಳ್ಳಿ, ತುರಹಳ್ಳಿ ಬಸವಣ್ಣ ದೇವಸ್ಥಾನ ರಸ್ತೆಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2ನೇ ಕರೆ) (ಸಾಮಾನ್ಯರಿಗೆ). **ಟೆಂಡರ್‌ಗಿಟ್ಟ ಅಂದಾಜು ಮೊತ್ತ: ₹.397.49 ಲಕ್ಷಗಳು, ಇಎಂಡಿ: ₹.5,96,235.00**
3.	ದೊರೆಕೆರೆ ಕೆರೆ, ಉತ್ತರಹಳ್ಳಿ ಕೆರೆ ಮತ್ತು ದೇವರಕೆರೆ ಕೆರೆಗಳನ್ನು ವಾರ್ಷಿಕ ನಿರ್ವಹಣೆ ಮಾಡುವುದು. (2ನೇ ಕರೆ)(ಪರಿಶಿಷ್ಟ ಪಂಗಡ) **ಟೆಂಡರ್‌ಗಿಟ್ಟ ಅಂದಾಜು ಮೊತ್ತ: ₹.49.00 ಲಕ್ಷಗಳು, ಇಎಂಡಿ: ₹.49000.00**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ದಿನಾಂಕ: **08-04-2026**ರಿಂದ (2) ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **15-04-2026**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **17-04-2026**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಮತ್ತು ಅಂಜನಾಪುರ ವಿಭಾಗ

CHANGE OF NAME

I, **CHAITHRA,** D/o. B. Chandappa Poojary, aged 29 years, residing at 21-182/(C)1. Rengelu House, Panemangalore Village and Post, Bantwal Taluk. Dakshina Kannada District, Karnataka State-574231, have changed my name as **CHAITHRA C KOTIAN** for all purposes, vide affidavit dated 04-04-2026, sworn before Advocate & Notary, P. Jayarama Rai, B.C. Road, Bantwal Taluk.

ಮಾನ್ಯ ಜೆ.ಎಮ್.ಎಫ್.ಸಿ. 4ನೇ ನ್ಯಾಯಾಲಯ, ಮಂಗಳೂರು, ದ.ಕ. ಜಿಲ್ಲೆ

ಕ್ರಿ.ಎಂ.ಸಿ. : 295/2026

ಇವರೊಳಗೆ,

ಎಮ್.ಎಚ್. ಅಬ್ದುಲ್ ರಹೀಂ ...ಪಿರ್ಯಾದಿದಾರರು

ಮತ್ತು

ಜನನ ಮತ್ತು ಮರಣ ರಿಜಿಸ್ಟ್ರಾರರು ಮಹಾನಗರಪಾಲಿಕೆ, ಮಂಗಳೂರು ವಲಯ ಕಚೇರಿ-1, ಸುರತ್ಕಲ್, ಮಂಗಳೂರು, ದ.ಕ. ...ಎದ್ರಿದಾರರು

ಸಾರ್ವಜನಿಕ ಪ್ರಕಟಣೆ

ಮೇಲಿನ ಪ್ರಕರಣದಲ್ಲಿ ಎದ್ರಿದಾರರ ಕಾರ್ಯವ್ಯಾಪ್ತಿಗೊಳಪಟ್ಟ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಕಟ್ಟಡ ಸಂಖ್ಯೆ 7-40ಎಫ್/3, ಫ್ಲ್ಯಾಟ್ ನಂಬ್ರ 103, ಐಕಾನ್ ರೆಸಿಡೆನ್ಸಿ, ಬದ್ರಿಯ ಶಾಲೆಯ ಬಳಿ, 7ನೇ ಬ್ಲಾಕ್, ಕೃಷ್ಣಾಪುರ, ಕುಕ್ಕಾಡಿ, ಸುರತ್ಕಲ್ ಎಂಬಲ್ಲಿ ವಾಸವಾಗಿರುವ ದಿವಂಗತ ಆಲಿ ಸಾಹೇಬ್‌ರವರ ಮಗನಾದ ಎಮ್. ಎಚ್. ಅಬ್ದುಲ್ ರಹೀಂರವರು ದಿನಾಂಕ: 11.07.2020ರಂದು ಮೃತಪಟ್ಟಿದ್ದು, ಎದ್ರಿದಾರರ ಮರಣ ವಹಿಯಲ್ಲಿ ತಡನೋಂದಣಿ ಮಾಡುವರೇ ವಿಳಂಬ ವಿನಾಯಿತಿ ಕೋರಿ ಅರ್ಜಿದಾರರು ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಈ ಬಗ್ಗೆ ಯಾರಿಗಾದರೂ ಆಕ್ಷೇಪ ಗಳಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ **ದಿನಾಂಕ: 11.05.2026ರಂದು ಪೂರ್ವಾಹ್ನ 11.00 ಗಂಟೆಗೆ** ವೈಯಕ್ತಿಕವಾಗಿ ಯಾ ತಮ್ಮ ವಕೀಲರ ಮೂಲಕ ಹಾಜರಾಗತಕ್ಕದ್ದು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 28ನೇ ಮಾರ್ಚ್ ತಿಂಗಳ 2026ರಂದು ನೀಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/- ಮುಖ್ಯ ಲಿಪಿಕಾಧಿಕಾರಿ ಜೆ.ಎಮ್.ಎಫ್.ಸಿ. 4ನೇ ನ್ಯಾಯಾಲಯ, ಮಂಗಳೂರು

ಸಹಿ/- ಶ್ರೀಮತಿ ಶಿಲ್ಪ ಆರ್. ಆಳ್ವ ಅರ್ಜಿದಾರರ ವಕೀಲರು

ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ, ಕೊಡಗು ಜಿಲ್ಲೆ.

ಸಿ.ಆರ್.ಎಂ.ಸಿ. ನಂ.:92/2026

ಅರ್ಜಿದಾರರು: ಶ್ರೀ ಕೆ.ಯು. ವೆಂಕಪ್ಪ ಮತ್ತು ಇತರರು

ವಿರುದ್ಧ

ಎದುರುದಾರರು: ತಹಶೀಲ್ದಾರರು ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲಿನ ಕೇಸಿನ ಅರ್ಜಿದಾರರ ತಾಯಿಯಾದ ಕೆ.ಯು..ಪೊನ್ನವ್ವ ಇವರು **ದಿನಾಂಕ 20.11.1974 ರಂದು** ಕೊಡಗು ಜಿಲ್ಲೆ, ಮಡಿಕೇರಿ ತಾಲೂಕಿನ ಹೆರವನಾಡು ಗ್ರಾಮದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣಪತ್ರವನ್ನು ಪಡೆಯಲು ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ **ದಿನಾಂಕ:25.06.2026ರಂದು ಬೆಳಿಗ್ಗೆ 11.00 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದ್ದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/- ಶಿರಸ್ತೇದಾರರು ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ, ಮಡಿಕೇರಿ ಕೊಡಗು ಜಿಲ್ಲೆ

ಸಹಿ/- ಕೆ.ಎಸ್. ಚಂದ್ರಶೇಖರ್ ಅರ್ಜಿದಾರರ ಪರ ವಕೀಲರು

ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ, ಕೊಡಗು ಜಿಲ್ಲೆ.

ಸಿ.ಆರ್.ಎಂ.ಸಿ. ನಂ.:91/2026

ಅರ್ಜಿದಾರರು: ಶ್ರೀ ಬಿದ್ದಪ್ಪ ಮತ್ತು ಇತರರು

ವಿರುದ್ಧ

ಎದುರುದಾರರು: ತಹಶೀಲ್ದಾರರು ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲಿನ 1ರಿಂದ 4ನೇ ಅರ್ಜಿದಾರರ ತಾಯಿಯಾದ 8ನೇ ಮತ್ತು 9ನೇ ಪ್ರತಿವಾದಿಯವರ ಅತ್ತೆಯವರಾದ 6 ರಿಂದ 8ನೇ ಮತ್ತು 10ರಿಂದ 11ನೇ ಪ್ರತಿವಾದಿಯರ ಅಜ್ಜಿಯವರಾದ ಕೈಬಿಲಿರ ಎ. ಅಕ್ಕವ್ವ ಇವರು ದಿನಾಂಕ 17.11.2002 ರಂದು ಕೊಡಗು ಜಿಲ್ಲೆ, ಮಡಿಕೇರಿ ತಾಲೂಕಿನ ಕುಂಜಿಲ ಗ್ರಾಮದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ **ದಿನಾಂಕ: 27.06.2026 ರಂದು ಬೆಳಿಗ್ಗೆ 11.00 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದ್ದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/- ಶಿರಸ್ತೇದಾರರು ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ, ಮಡಿಕೇರಿ ಕೊಡಗು ಜಿಲ್ಲೆ

ಸಹಿ/- ಕೆ.ಎಸ್. ಚಂದ್ರಶೇಖರ್ ಅರ್ಜಿದಾರರ ಪರ ವಕೀಲರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ

ಸ್ಥಾಪನೆ-1947

ಮುರುಘಾಮಠದ ಹತ್ತಿರ, ಸವದತ್ತಿ ರಸ್ತೆ, ಧಾರವಾಡ-580 008.

ಇ-ಮೇಲ್: apmcdharwad@rediffmail.com ದೂರವಾಣಿ: 0836-2448157, 2970324

ಸಂ:ಕೃಮಾಇ:ಕೃಉಮಾಸ(ಧಾ):07 :2026-27 ದಿನಾಂಕ: 06-04-2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ ವತಿಯಿಂದ ಈ ಕೆಳಕಂಡತೆ https://kppp.Karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 22/04/2026** ಆಗಿರುತ್ತದೆ. ಹೆಚ್ಚಿನ ನಿಯಮ ಹಾಗೂ ಮಾಹಿತಿಗಾಗಿ ಕರ್ನಾಟಕ ಸರ್ಕಾರದ https://kppp.Karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ / ದಿನಾಂಕ	ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ) (ರೂ.ಗಳಲ್ಲಿ)
1	ದಿನಾಂಕ: 25/03/2026 ರ ಕೃಉಮಾಸ(ಧಾ) :ಟೆಂ.ಪ್ರ; 954 : 2025-26	APMC/2025-26 / WO / WORK_INDENT_916 (ಸಾಮಾನ್ಯ ವರ್ಗ)	ರೂ. 54,13,212-00
2	ದಿನಾಂಕ: 25/03/2026 ರ ಕೃಉಮಾಸ(ಧಾ) :ಟೆಂ.ಪ್ರ; 953 : 2025-26	APMC/2025-26 / WO / WORK_INDENT_915 (ಸಾಮಾನ್ಯ ವರ್ಗ)	ರೂ. 9,16,488-00
3	ದಿನಾಂಕ: 25/03/2026 ರ ಕೃಉಮಾಸ(ಧಾ) : ಟೆಂ.ಪ್ರ; 952 : 2025-26	APMC/2025-26 / SE0835	ರೂ. 17,24,396-96

ಸಹಿ/- (ಎ. ಪಿ. ಪಾಟೀಲ) ಕಾರ್ಯದರ್ಶಿ(ಪ್ರ), ಕೃ. ಉ. ಮಾ. ಸ., ಧಾರವಾಡ

ಸಹಿ/- (ಕೆ. ಹೆಚ್. ಗುರುಪ್ರಸಾದ) ಆಡಳಿತಾಧಿಕಾರಿಗಳು ಕೃ. ಉ. ಮಾ. ಸ., ಧಾರವಾಡ

ವಾ.ಸಾ.ಇ./ಧಾರವಾಡ/31/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ

ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ-591302

ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2026-27/43-45 ದಿನಾಂಕ: 06.04.2026.

"ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ"

(ಕೆಪಿಪಿ-ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ **ಕೆಪಿಪಿ-ಪೋರ್ಟಲ್** ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆದಾರರ ದರ್ಜೆ
1	Improvements to road from Beejagarni village to Janewadi village in Belagavi Taluka. **(W.I. No. KNNL/2025-26/RD/WORK_INDENT4176/Call-2)**	338.81	ದರ್ಜೆ 2 ಮತ್ತು ಮೇಲ್ಪಟ್ಟು
2	Improvements to road from Belavatti village to Karle-Kawalewadi Main road in Belagavi Tulaka. **(W.I. No. KNNL/2025-26/RD/WORK_INDENT4177/Call-2)**	422.48	ದರ್ಜೆ 2 ಮತ್ತು ಮೇಲ್ಪಟ್ಟು
3	Improvements to road from Kudaremani Village main road to Shinoli-Surute main road and Shinoli-Surute main road Sonoli Village limits in Belagavi Taluka. **(W.I. No. KNNL/2025-26/RD/WORK_INDENT4178/ Call-2)**	338.84	ದರ್ಜೆ 2 ಮತ್ತು ಮೇಲ್ಪಟ್ಟು

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 15.04.2026ರಂದು ಸಂಜೆ 4.00 ಗಂಟೆ** ವರೆಗೆ ಸಲ್ಲಿಸಬಹುದು. ಪ್ರಿ-ಬಿಡ್ ಸಭೆಯನ್ನು **ದಿನಾಂಕ: 10.04.2026ರಂದು ಮುಂಜಾನೆ 11.00 ಗಂಟೆಗೆ** ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.04.2026 ಸಂಜೆ 4.30 ಗಂಟೆಗೆ.** ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು **ಕೆಪಿಪಿ-ಪೋರ್ಟಲ್** ಮುಖಾಂತರ https://kppp.karnataka.gov.in ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ **ಸಂಖ್ಯೆ: 08336-222163** ಸಂಪರ್ಕಿಸುವದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ

ವಾ.ಸಾ.ಇ./ಬೆಳಗಾವಿ/52/2026-27/ದೇಶಪಾಂಡೆಪಬ್ಲಿಸಿಟಿ

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ-573201.

Email:commn_hassan@yahoo.com ದೂರವಾಣಿ: 08172-268276, 263033 **web: http://www.hassancity.mrc.gov.in** ಸಹಾಯವಾಣಿ: 233702 ಫ್ಯಾಕ್ಸ್: 234792

ನಂ:ಮನಪಾಹಾ/ಮಿ.ಶಾ/ಸಿಆರ್/2025-26 ದಿನಾಂಕ:04-04-2026

:: ಹರಾಜು ಪ್ರಕಟಣೆ ::

ಈ ಮೂಲಕ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ: 06-04-2026 ರಿಂದ ದಿನಾಂಕ: 21-04-2026 ರ ವರೆಗಿನ ಅವಧಿಯಲ್ಲಿ ಈ ಕೆಳಕಂಡ ವಿವಿದ ಬಾಬುಗಳ ಸುಂಕ ವಸೂಲಿ ಹಕ್ಕುಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ವಿಲೇವಾರಿ ಮಾಡಲು ಹರಾಜು ಇಸ್ತಿಯಾರ್ ಹೊರಡಿಸಲಾಗಿದೆ. (http:/kppp.karnataka4.gov.in) ಸದರಿ ಬಾಬುಗಳ ಸುಂಕ ವಸೂಲಿ ಹಕ್ಕನ್ನು ಪಡೆಯುವ ಆಸಕ್ತರು/ಏಜೆನ್ಸಿಯವರು ದಿನಾಂಕ:21-04-2026 ರಂದು ಸಂಜೆ 5 ಗಂಟೆಯೊಳಗಾಗಿ ಠೇವಣಿ ಮೊತ್ತವನ್ನು ಪಾವತಿಸಿ ಆನ್‌ಲೈನ್ ಮೂಲಕ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಂದಾಯಾಧಿಕಾರಿಯನ್ನು ಸಂಪರ್ಕಿಸುವುದು. ಕ್ರ.ಸಂ.ಬಾಬುಗಳ ವಿವರ 1)ಪ್ರತಿ ಮಂಗಳವಾರ ಗೊರೂರು ರಸ್ತೆಯ ಬದಿ ಸಂತೆ ಸಾಲಗಾಮೆ ರಸ್ತೆ ಕ್ರೀಡಾಂಗಣದ ಹತ್ತಿರ ಎನ್.ಸಿ.ಸಿ. ಕಛೇರಿ ಮುಂಭಾಗ ನಡೆಯುವ ಸಂತೆ, ಕೇಂದ್ರ ಅರಣ್ಯ ಇಲಾಖೆ ಹತ್ತಿರ ನಡೆಯುವ ಸಂತೆ ಸುಂಕ ವಸೂಲಿ ಮಾಡುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.2,00,000.00 ಅಖೈರು ಬಿಡ್ ಹೊಂದಲು ಕನಿಷ್ಠ ಬಿಡ್ ಮೊತ್ತ ರೂ.40,00,000.00 ಮೇಲ್ಪಟ್ಟು Live Bidding time 22-04-2026 ನೇ ಬುಧವಾರ ಬೆಳಿಗ್ಗೆ 10.30 ರಿಂದ ಸಂಜೆ 2.00 ಗಂಟೆ ವರೆಗೆ 2)ಗೊರೂರು ರಸ್ತೆ ಎಡಭಾಗದಲ್ಲಿ ನಿರ್ಮಿಸಿರುವ (ಕಸಾಯಿ ಖಾನೆಯಲ್ಲಿ) ಕುರಿ ಮಾಂಸ ಮಾರಾಟ ಮಾಡುವ ಹಕ್ಕು, ಮಹಾನಗರ ಪಾಲಿಕೆ ಜಾಗದ ಮಳಿಗೆಗಳಲ್ಲಿ ಮೀನು ಮಾರಾಟ ಮಾಡುವ ಹಕ್ಕು ಮತ್ತು ಖಸಾಯಿ ಖಾನೆಯಲ್ಲಿ ಬೀಳುವ ಗೊಬ್ಬರವನ್ನು ತೆಗೆದುಕೊಂಡು ಹೋಗುವ ಹಕ್ಕು ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ. 1,00,000.00 ಅಖೈರು ಬಿಡ್ ಹೊಂದಲು ಕನಿಷ್ಠ ಬಿಡ್ ಮೊತ್ತ ರೂ. 2,00,000.00 ಮೇಲ್ಪಟ್ಟು 3)ಹಾಸನ ಮಹಾನಗರ ಪಾಲಿಕೆಯ ಮುಖ್ಯ ರಸ್ತೆಗಳಾದ ಸಹ್ಯಾದ್ರಿ ರಸ್ತೆಯ ಫುಡ್ ಕೋರ್ಟ್, ಎಂ.ಜಿ.ರಸ್ತೆಯ ಫುಡ್ ಕೋರ್ಟ್ ಹಾಗೂ ಪೃಥ್ವಿ ಥಿಯೇಟರ್ ಹತ್ತಿರ ಇರುವ ಫುಡ್ ಕೋರ್ಟ್ ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.1,00,000.00 ಅಖೈರು ಬಿಡ್ ಹೊಂದಲು ಕನಿಷ್ಠ ಬಿಡ್ ಮೊತ್ತ ರೂ.13,00,000.00 ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ ಷರತ್ತುಗಳು 1.ಹರಾಜಿನಲ್ಲಿ ಭಾಗವಹಿಸುವವರು ಕಾಲಂ ನಂ 3 ರಲ್ಲಿ ಸೂಚಿಸಿರುವಂತೆ ಐಟಂವಾರು ಠೇವಣಿ ಮೊತ್ತವನ್ನು ಆನ್‌ಲೈನ್ ಮೂಲಕ ಕಡ್ಡಾಯವಾಗಿ ಪಾವತಿಸಬೇಕು. 2.ಹರಾಜು ಅಖೈರಾದ ಕೂಡಲೇ ಅಖೈರು ಸವಾಲುದಾರರು ಹರಾಜಿನ ಬಾಕಿ ಮೊತ್ತವನ್ನು ಹರಾಜು ಆದ ಸ್ಥಳದಲ್ಲಿಯೇ ಪೂರ್ಣ ಮೊತ್ತವನ್ನು ಜಿ.ಎಸ್.ಟಿ. ಮೊತ್ತದೊಂದಿಗೆ ಪಾವತಿ ಮಾಡಿ ರಸೀದಿ ಪಡೆಯತಕ್ಕದ್ದು. 3.ಹರಾಜು ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಹರಾಜನ್ನು ರದ್ದುಪಡಿಸುವ ಅಧಿಕಾರ ಮಹಾನಗರ ಪಾಲಿಕೆ ಆಯುಕ್ತರಿಗೆ ಇರುತ್ತದೆ. 4.ಹರಾಜು ಖಾಯಂ ಆಯಿತೆಂದು ವಿಷಯವನ್ನು ಅಖೈರು ಸವಾಲುದಾರರಿಗೆ ಬರವಣಿಗೆ ಮೂಲಕ ತಿಳಿಯಪಡಿಸಿದ ಕೂಡಲೇ ಸವಾಲುದಾರರನ್ನು ಗುತ್ತಿಗೆದಾರನೆಂದು (ಕಂಟ್ರಾಕ್ಟರ್) ಕರೆಯಲ್ಪಡುತ್ತಾನೆ. ಈ ರೀತಿ ಬರವಣಿಗೆ ಮೂಲಕ ಅವರ ಸವಾಲನ್ನು ಅಂಗೀಕರಿಸುವುದಾಗಿ ತಿಳಿಸಿದ ನಂತರ ಹರಾಜು ಇಸ್ತಿಯಾರ್‌ನಲ್ಲಿ ವಿಧಿಸಿರುವ ಷರತ್ತಿನಂತೆ ತಾನು ಮತ್ತು ತನ್ನ ವಾರಸುದಾರರು ಬದ್ಧರಾಗಿರುತ್ತೇನೆಂತಲು ಮತ್ತು ಕೆಳಗೆ ನಮೂದಿಸಿರುವ ಆಗಿಂದ್ದಾಗ್ಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡಬಹುದಾದ ಆದೇಶಗಳಿಗೆ ಬದ್ಧರಾಗಿರುತ್ತಾರೆಂದು ಛಾಪಾ ಕಾಗದಲ್ಲಿ ಸ್ಟ್ಯಾಂಪ್ ಕಾಯ್ದೆ(ಸ್ಟ್ಯಾಂಪ್ ರೂಲ್ಸ್) ಅನುಸರಿಸಿ ಬರೆದ ಸ್ವಂತ ಖರ್ಚಿನಿಂದ ರಿಜಿಸ್ಟರ್ ಮಾಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲು ಆಗುವ ನಷ್ಟವನ್ನು ಮೊದಲನೇ ಹರಾಜುದಾರರು ಕಟ್ಟಿಕೊಡಬೇಕಾಗುತ್ತದೆ. 5.ಗುತ್ತಿಗೆದಾರು (ಕಂಟ್ರಾಕ್ಟರ್) ಯಾವುದೇ ಕಾರಣದಿಂದಲೂ ಒಳಗುತ್ತಿಗೆ ಮಾಡಕೂಡದು, ಈ ರೀತಿ ಮಾಡಿದ್ದು ಕಂಡುಬಂದಲ್ಲಿ ಸದರಿ ಗುತ್ತಿಗೆಯನ್ನು ತಪ್ಪಿಸಿ ಠೇವಣಿಯ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಕೂಡಲೇ ಅವರ ಹಕ್ಕನ್ನು ರದ್ದುಪಡಿಸಿ ಮಹಾನಗರ ಪಾಲಿಕೆ ಸ್ವಾದೀನಪಡಿಸಿಕೊಳ್ಳಲಾಗುವುದು. ಮತ್ತು ಗುತ್ತಿಗೆವಾಯಿದೆಯವರಿಗೆ ಆಗಬಹುದಾದ ನಷ್ಟಕ್ಕೆ ಅವರನ್ನೇ ಗುರಿಪಡಿಸಿ ಅವರಿಂದ ವಸೂಲಿ ಮಾಡಲಾಗುವುದು 6.ಫುಡ್‌ಕೋರ್ಟ್‌ನಿಂದ ಬರುವಂತಹ ತ್ಯಾಜ್ಯವನ್ನು ಹಸಿಕಸ - ಒಣಕಸಗಳನ್ನಾಗಿ ಬೇರ್ಪಡಿಸಿ ಪ್ರತ್ಯೇಕ ಆಟೋ ಟಿಪ್ಪರ್‌ನಲ್ಲಿ ವಿಲೇವಾರಿ ಮಾಡುವುದು ಹಾಗೂ ಸ್ವಚ್ಚತೆ ಕಾಪಾಡುವುದು ಟೆಂಡರ್‌ದಾರರ ಜವಾಬ್ದಾರಿಯಾಗಿರುತ್ತದೆ. 7.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಮಹಾನಗರ ಪಾಲಿಕೆ ಇಸ್ತಿಹಾರ್ ಚಾಪ್ಟರ್ 12 ರಲ್ಲಿ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 8.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಪುರಸಭಾ ಕಾಯ್ದೆ 1964ರ ಅನುಸೂಚಿ 10 ಮತ್ತು 11 ರ ಪ್ರಕರಣ 142 ಮತ್ತು 143ರಂತೆ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 9.ಗುತ್ತಿಗೆದಾರನಾಗಲಿ, ಆತನ ನೌಕರನಾಗಲಿ ಹರಾಜು ಇಸ್ತಿಹಾರ್ ಷರತ್ತು ಅಥವಾ ಹುಕುಂ ಉಲ್ಲಂಘಿಸಿದಲ್ಲಿ ಆತನ ಗುತ್ತಿಗೆ ತಪ್ಪಿಸಿ ಸೂಕ್ತ ರೀತಿ ವಿಲೇವಾರಿ ಮಾಡಲು ಆಯುಕ್ತರಿಗೆ ಅಧಿಕಾರವಿರುತ್ತದೆ. 10.ಚಾಲ್ತಿ ಸಾಲಿನಲ್ಲಿ ಹಿಂದಿನ ಸಾಲಿನಲ್ಲಿ ಸುಸ್ತಿದಾರರಾಗಿರುವ ಗುತ್ತಿಗೆದಾರರು (ಕಂಟ್ರಾಕ್ಟರ್) ತಮ್ಮ ಖಾತೆಯನ್ನು ಬೇಬಾಕಿ ಮಾಡದ ಹೊರತ್ತು ಹರಾಜಿನಲ್ಲಿ ಸವಾಲು ಮಾಡಲು ಅಧಿಕಾರವಿರುವುದಿಲ್ಲ. 11.ಗುತ್ತಿಗೆದಾರರು ಆಂಗಿದ್ದಾಂಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡತಕ್ಕ ಹುಕುಂಗಳಿಗೆ ಬದ್ಧರಾಗಿರತಕ್ಕದ್ದು. 12.ಬಿಡ್‌ದಾರರು ಯಾವ ಕಾರಣದಿಂದಲೂ ಖಿಸ್ತು ಮೊಬಲಗನ್ನು ರೆಮೀಷನ್ ಮಾಡುವುದಾಗಲೀ ಪರಿಹಾರ ದ್ರವ್ಯವನ್ನು ಕೇಳಲು ಅವಕಾಶವಿರುವುದಿಲ್ಲ. 13.ಬಿಡ್‌ದಾರರು ಸರ್ಕಾರದಿಂದ ಮುಂದೆ ಬರುವ ಕಾನೂನು ಪ್ರಕಾರ ನಡೆದುಕೊಳ್ಳುವುದಕ್ಕು ಸಂದರ್ಭಾನುಸಾರ ಮಹಾನಗರ ಪಾಲಿಕೆಯವರು ಮಾಡಬಹುದಾದ ಬದಲಾವಣೆಗೆ ಒಳಪಟ್ಟಿರತಕ್ಕದ್ದು. 14.ಬಿಡ್‌ದಾರರು ತಾನು ವಸೂಲು ಮಾಡುವ ಬಗ್ಗೆ ಲೆಕ್ಕವನ್ನು ಇಡುವುದಲ್ಲದೇ, ತನಿಖೆಗೆ ಬಂದಾಗ ಅಧಿಕಾರಿಗಳು ಅಪೇಕ್ಷಿಸಿದಲ್ಲಿ ಹಾಜರುಪಡಿಸಬೇಕು. 15.ಕಂಟ್ರಾಕ್ಟರ್‌ದಾರರು ಪ್ರತಿ ಬಾಬಿಗೂ ಮಹಾನಗರ ಪಾಲಿಕೆಯಿಂದ ನಿಗದಿಪಡಿಸಿರುವ ಧರದಂತೆ ಅಚ್ಚಾದ ರಶೀದಿಯನ್ನು ಪಾರ್ಟಿಗೆ ಕೊಡಬೇಕು ಹಾಗೂ ನಿಗದಿಪಡಿಸಿದ್ದಕ್ಕಿಂತ ಹೆಚ್ಚನ ಹಣವನ್ನು ವಸೂಲಿ ಮಾಡತಕ್ಕದ್ದಲ್ಲ. 16.ಷೆಡ್ಯೂಲ್ ದರದ ವಿಚಾರದಲ್ಲಿ ಏನಾದರೂ ತಕರಾರು ಬಂದರೆ ಮಹಾನಗರ ಪಾಲಿಕೆಯಿಂದ ಅಧಿಕಾರ ಹೊಂದಿರುವವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. 17.ಒಂದು ಅಂಗಡಿಯಲ್ಲಿರತಕ್ಕ ವಿವಿಧ ಸಾಮಾನುಗಳನ್ನು ಬೇರೆ ಬೇರೆಯೆಂದು ಪರಿಗಣಿಸದೆ ಒಂದು ಅಂಗಡಿಯನ್ನು ಮಾಡಬೇಕು. ಷರಾ:- ಇಸ್ತಿಹಾರ್ ಒಳಗೊಂಡ ಷರತ್ತುಗಳಿಗೆ ಬದಲಾವಣೆ ಮಾಡಲು ಹರಾಜು ವೇಳೆಯಲ್ಲಿ ಅವಶ್ಯಕತೆ ಕಂಡು ಬಂದಲ್ಲಿ ನಿಭಂದನೆಗಳನ್ನು ಸೇರಿಸಲು ಆಡಳಿತಾಧಿಕಾರಿಗಳು/ಆಯುಕ್ತರಿಗೆ ಅಧಿಕಾರ ಇರುತ್ತದೆ.

ಸಹಿ/-ಆಯುಕ್ತರು, ಹಾಸನ ಮಹಾನಗರ ಪಾಲಿಕೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/16/ಕೆಎಸ್‌ಎಂಸಿಎ/2026-27

ದ.ಕ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ | ಸ್ಪೀಕರ್ ಖಾದರ್ ಸೂಚನೆ

ನೀರು ಕೊರತೆಯಾಗದಂತೆ ಮುನ್ನೆಚ್ಚರಿಕೆ



ಮಂಗಳೂರು: ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಅಧಿಕಾರಿಗಳಿಗೆ ವಿಧಾನಸಭೆ ಸ್ಪೀಕರ್ ಯು.ಟಿ ಖಾದರ್ ಸೂಚಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಕುಡಿಯುವ ನೀರಿನ ಪರಿಸ್ಥಿತಿ ಕುರಿತಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಗ್ರಾಮ ಪಂಚಾಯತ್‌ಗಳು, ನಗರ ಸ್ಥಳೀಯ ಸಂಸ್ಥೆಗಳು, ಬೇಸಿಗೆಯಲ್ಲಿ ಕುಡಿಯುವ ನೀರಿನ ಪೂರೈಕೆಗೆ ಹೆಚ್ಚಿನ ಒತ್ತು ನೀಡಬೇಕು. ಯಾವುದೇ ಅಡೆತಡೆ ಇಲ್ಲದೆ ನೀರು ಪೂರೈಸಲು ಅಗತ್ಯ ಸಿದ್ಧತೆ ಮಾಡಬೇಕು ಎಂದು ಸ್ಪಷ್ಟ ಸೂಚನೆ ನೀಡಿದರು.

ಸ್ಥಳೀಯವಾದ ಸಮಸ್ಯೆಗಳನ್ನು ತಮ್ಮ ಹಂತದಲ್ಲಿ ಪರಿಹರಿಸಿ ಗ್ರಾಮ ಪಂಚಾಯತ್‌ಗಳು ಮತ್ತು ಸ್ಥಳೀಯ ಸಂಸ್ಥೆಗಳ ಅನುದಾನ ಬಳಸಿಕೊಂಡು ಕಾಮಗಾರಿ ನಡೆಸಬೇಕು. ಸಾರ್ವಜನಿಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಜಲಜೀವನ್ ಮಿಷನ್ ಯೋಜನೆಯಲ್ಲಿ ಎಲ್ಲ ಮನೆಗಳಿಗೆ ಸಂಪರ್ಕ ಒದಗಿಸಬೇಕು. ಈ ಯೋಜನೆಯಡಿ ನಿರ್ಮಿಸಲಾಗಿರುವ ಟ್ಯಾಂಕ್‌ಗಳಿಗೆ ಸಂಬಂಧಪಟ್ಟ ನೀರಿನ ಮೂಲಗಳಿಂದ ನೀರು ತಲುಪಿಸಿ ಜನವಸತಿ ಪ್ರದೇಶಗಳಿಗೆ ನಿರಂತರ ನೀರು ಪೂರೈಕೆಯಾಗುವಂತೆ ಗಮನಹರಿಸಬೇಕು. ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಬೇಕು ಎಂದು ಅವರು ತಿಳಿಸಿದರು.

ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ವಿಳಂಬ ಮಾಡಬಾರದು. ಪೈಪ್ ಅಳವಡಿಕೆಗೆ ರಸ್ತೆ ಅಗೆದಿರುವ ಕಡೆಗಳಲ್ಲಿ ವಿಳಂಬವಿಲ್ಲದೆ ರಸ್ತೆಯನ್ನು ಪುನಃಸ್ಥಾಪನೆ ಮಾಡಬೇಕು. ಕುಡಿಯುವ ನೀರಿಗೆ ಸಂಬಂಧಿಸಿದ ಇಲಾಖೆಗಳು ನಿಗಮಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸ್ಪೀಕರ್ ತಿಳಿಸಿದರು.

ಜಲಜೀವನ್ ಮಿಷನ್ ಯೋಜನೆಯಡಿ ನೀರಿನ ಸಂಪರ್ಕ ಒದಗಿಸದ ಎಲ್ಲಾ ಮನೆಗಳಿಗೆ ನೀರಿನ ಮೀಟರ್ ಅಳವಡಿಸಬೇಕು. ಮೀಟರ್ ಅಳವಡಿಸಲು ಬಾಕಿ ಇರುವ ಮನೆಗಳ ಸಮರ್ಪಕ ಮಾಹಿತಿಯನ್ನು ಪಡೆದು ಕ್ರೋಢೀಕರಿಸಿ ಸರಕಾರಕ್ಕೆ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲು ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕಾರ್ಬಾರಿ ಮಾತನಾಡಿ, ಕುಡಿಯುವ ನೀರಿನ ಯೋಜನೆಗಳ ಕಾಮಗಾರಿ ಸಂಪೂರ್ಣಗೊಂಡ ನಂತರವೇ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಬೇಕು. ಕಾಮಗಾರಿ ಪೂರ್ಣಗೊಳ್ಳದೆ ಹಸ್ತಾಂತರಕ್ಕೆ ಒತ್ತಡ ಹೇರುವಂತಿಲ್ಲ. ಸಂಬಂಧಿಸಿದ ಗುತ್ತಿಗೆದಾರರೇ ಒಂದು ವರ್ಷದವರೆಗೆ ಕಾಮಗಾರಿ ನಿರ್ವಹಣೆ ಮಾಡಬೇಕಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿಧಾನಸಭಾಧ್ಯಕ್ಷರು, ಉಳ್ಳಾಲ ತಾಲೂಕಿನ ಗ್ರಾಮೀಣ ಪ್ರದೇಶ ಹಾಗೂ ಕೋಟೆಕಾರ್, ಸೋಮೇಶ್ವರ ಉಳ್ಳಾಲ ಪಟ್ಟಣಗಳ ಕುಡಿಯುವ ನೀರಿನ ಪರಿಸ್ಥಿತಿ ಪರಿಶೀಲನೆ ನಡೆಸಿದರು.

ಸಭೆಯಲ್ಲಿ ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ, ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಡಾ. ಜಿ. ಸಂತೋಷ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮಂಗಳೂರಿನಲ್ಲಿ ರೆಡ್‌ಕ್ರಾಸ್‌ನಿಂದ ವಿಶ್ವ ಆರೋಗ್ಯ ದಿನಾಚರಣೆ

ಆರೋಗ್ಯ ರಕ್ಷಣೆ ಅರಿವು ಮೂಡಿಸುವುದು ಅಗತ್ಯ



ಮಂಗಳೂರು: ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ವತಿಯಿಂದ ಯೂತ್ ರೆಡ್‌ಕ್ರಾಸ್ ಮಂಗಳೂರು ವಿ.ವಿ. ಮತ್ತು ನಿಟ್ಟೆ ಪರಿಗಣಿತ ವಿ.ವಿ. ಸಹಯೋಗದಲ್ಲಿ ನಗರದ ರೆಡ್‌ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ಮಂಗಳವಾರ ವಿಶ್ವ ಆರೋಗ್ಯ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕೆಎಂಸಿ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀ ರೋಗಶಾಸ್ತ್ರ ತಜ್ಞೆ ಡಾ.ಶ್ರದ್ಧಾ ಶೆಟ್ಟಿ ಮಾತನಾಡಿ, ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆ ಕೂಡಾ ಆರಂಭಿಕ ಹಂತದಲ್ಲಿಯೇ ಪತ್ತೆಯಾದರೆ ಪರಿಣಾಮಕಾರಿ ಚಿಕಿತ್ಸೆ ನೀಡಿ ಜೀವ ಉಳಿಸಬಹುದು. ಮುಂಜಾಗ್ರತಾ ಕ್ರಮ ಹಾಗೂ ನಿಯಮಿತ ತಪಾಸಣೆ ರೋಗ ತಡೆಗಟ್ಟುವ ಅತ್ಯುತ್ತಮ ಮಾರ್ಗವಾಗಿದೆ ಎಂದರು.

ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ರೆಡ್‌ಕ್ರಾಸ್ ಜಿಲ್ಲಾ ಘಟಕದ ಉಪಾಧ್ಯಕ್ಷ ಡಾ. ಬಿ.ಸಚ್ಚಿದಾನಂದ ರೈ, ಖಜಾಂಜಿ ಗುರುದತ್ ನಾಯಕ್, ನಿರ್ದೇಶಕರಾದ ಡಾ.ಸತೀಶ್ ರಾವ್, ಪಿ.ಬಿ.ಹರೀಶ್ ರೈ, ರಾಘವೇಂದ್ರ ರಾವ್, ನಿಟ್ಟೆ ಪರಿಗಣಿತ ವಿ.ವಿ.ಯ ನೋಡಲ್ ಅಧಿಕಾರಿ ಡಾ.ಶಂತನು ಸಹ ಮುಖ್ಯ ಅತಿಥಿಗಳಾಗಿದ್ದರು.

ಯೂತ್ ರೆಡ್‌ಕ್ರಾಸ್ ಯೋಜನಾಧಿಕಾರಿಗಳಾದ ಸೈಂಟ್ ಅಲೋಶಿಯಸ್ ಕಾಲೇಜಿನ ಇಮ್ತಿಯಾಜ್ ಆಲಿ, ಬೆಸೆಂಟ್ ಮಹಿಳಾ ಕಾಲೇಜಿನ ದೀಕ್ಷಿತಾ, ಸೈಂಟ್ ಆಗ್ನೆಸ್ ಕಾಲೇಜಿನ ನಿಮಿತಾ ಕೆ. ಮತ್ತು ತೃಷಾ ಕಾಲೇಜಿನ ಶಿಲ್ಪಾ ಶೆಟ್ಟಿ ಉಪಸ್ಥಿತರಿದ್ದರು. ಮಂಗಳೂರು ವಿ.ವಿ.ಯ ಯೂತ್ ರೆಡ್‌ಕ್ರಾಸ್ ನೋಡಲ್ ಅಧಿಕಾರಿ ಡಾ.ಗಾಯತ್ರಿ ಎನ್. ಸ್ವಾಗತಿಸಿ, ರೆಡ್‌ಕ್ರಾಸ್ ಕಾರ್ಯದರ್ಶಿ ಕಿಶೋರ್ ಚಂದ್ರ ಹೆಗ್ಡೆ ವಂದಿಸಿದರು. ಯೂತ್ ರೆಡ್‌ಕ್ರಾಸ್ ಉಪ ಸಮಿತಿ ನಿರ್ದೇಶಕಿ ಡಾ.ಸುಮನಾ ಬಿ. ಕಾರ್ಯಕ್ರಮ ನಿರೂಪಿಸಿದರು.

ಸ್ಪರ್ಧಾ ವಿಜೇತರು

ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಏರ್ಪಡಿಸಿದ ರೀಲ್ಸ್ ಸ್ಪರ್ಧೆಯಲ್ಲಿ ನಿಟ್ಟೆ ಉಷಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ತಂಡ ಪ್ರಥಮ, ಕಣಚೂರು ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ತಂಡ ದ್ವಿತೀಯ ಹಾಗೂ ಮಿಲಾಗ್ರಿಸ್ ಪದವಿ ಕಾಲೇಜು ತಂಡ ತೃತೀಯ ಸ್ಥಾನ ಪಡೆಯಿತು. ಪೋಸ್ಟರ್ ತಯಾರಿ ಸ್ಪರ್ಧೆಯಲ್ಲಿ ಹಿಬಾ ಪರ್ವಿನ್, ಯೇನೆಪೋಯ ಮೆಡಿಕಲ್ ಕಾಲೇಜು (ಪ್ರಥಮ), ಆಯಿಶಾ ಸಫಾ ಯೇನೆಪೋಯ ಮೆಡಿಕಲ್ ಕಾಲೇಜು (ದ್ವಿತೀಯ) ಹಾಗೂ ಮೈನಾ ಸಮಂತ ನಿಟ್ಟೆ ಉಷಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ (ತೃತೀಯ) ಸ್ಥಾನ ಪಡೆದರು.

ಭರವಸೆ ಈಡೇರಿಸದ ನಾಯಕರು: ಮುಸ್ಲಿಂಲೀಗ್ ವಿರುದ್ಧ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕಣ್ಣೂರು ಅಬ್ದುಲ್ಲ ಮಾಸ್ತರ್

ಕುಂಬಳೆ: ಮುಸ್ಲಿಂಲೀಗ್ ನಾಯಕರು ಭರವಸೆ ನೀಡಿದ ಮಾತನ್ನು ಉಳಿಸಿಕೊಂಡಿಲ್ಲ ಎಂದು ಆರೋಪಿಸಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ಸಕ್ರಿಯ ಮುಸ್ಲಿಂಲೀಗ್ ಕಾರ್ಯಕರ್ತ ಕಣ್ಣೂರು ಅಬ್ದುಲ್ಲ ಮಾಸ್ತರ್ ಪ್ರಚಾರ ಕಾರ್ಯದಲ್ಲಿ ಸಕ್ರಿಯರಾಗಿದ್ದಾರೆ. ಮುಸ್ಲಿಂಲೀಗ್‌ನ ರಾಷ್ಟ್ರ ಮಟ್ಟದ ನಾಯಕರ ಸಹಿತ ಎಲ್ಲಾ ನೇತಾರರ ಅಪ್ರಬುದ್ಧತೆ ಮತ್ತು ಆಷಾಢಭೂತಿತನವನ್ನು ಬಹಿರಂಗಗೊಳಿಸಲು ಸ್ವತಂತ್ರ ಅಭ್ಯರ್ಥಿಯಾಗಿ ಕಣದಲ್ಲಿರುವುದಾಗಿ ಕುಂಬಳೆಯಲ್ಲಿ ಸೋಮವಾರ ನಡೆಸಿದ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

14 ವರ್ಷಗಳ ಹಿಂದೆ ಕತಾರ್‌ನಲ್ಲಿರುವ ಮುಸ್ಲಿಂಲೀಗ್ ನಾಯಕ ಪರಕ್ಕಲ್ ಅಬ್ದುಲ್ಲ ಎಂಬವರ ಸಂಬಂಧಿಕರು ತಮ್ಮ ಪುತ್ರ ಮುಹಮ್ಮದ್ ಇರ್ಷಾದ್ ಅವರಿಂದ ವ್ಯವಹಾರಕ್ಕಾಗಿ 1.18 ಕೋಟಿ ರೂ.ಗಳನ್ನು ಪಡೆದಿದ್ದರು. ಬಳಿಕ ಹಿಂತಿರುಗಿಸದ ಕಾರಣ ಉನ್ನತ ನಾಯಕರಿಗೆ ದೂರು ನೀಡಲಾಗಿತ್ತು. ಆ ಸಮಯದಲ್ಲಿ ಮುಸ್ಲಿಂಲೀಗ್ ಮುಖಂಡ ಪಿ.ಕೆ.ಕುಂಞಾಲಿಕುಟ್ಟಿ ಸೇರಿದಂತೆ ನಾಯಕರು ಹಣವನ್ನು ಮರಳಿ ಲಭಿಸುವಂತೆ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದರು. ಇದನ್ನು ನಂಬಿದ ಅಬ್ದುಲ್ಲ ಮಾಸ್ತರ್ ಮತ್ತು ಅವರ ಕುಟುಂಬ ನಂತರ ಪಿ.ಕೆ.ಕುಂಞಾಲಿಕುಟ್ಟಿ ಮತ್ತು ಇತರ ನಾಯಕರನ್ನು ಸಂಪರ್ಕಿಸಲು ಹಲವಾರು ಬಾರಿ ಪ್ರಯತ್ನಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಬಳಿಕ ಅಬ್ದುಲ್ಲ ಮಾಸ್ತರ್ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ನಾಮಪತ್ರಗಳನ್ನು ಸಲ್ಲಿಸಲು ಮುಂದಾದರು. ಉಪಚುನಾವಣೆ ಸೇರಿದಂತೆ ವಿವಿಧ ಚುನಾವಣೆಗಳಲ್ಲಿ ನಾಯಕರು ಮಧ್ಯಪ್ರವೇಶಿಸಿದ್ದರಿಂದ ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಂಡಿದ್ದರೂ ಪ್ರಸ್ತುತ ಶಾಸಕರು ಮತ್ತು ಮುಸ್ಲಿಂಲೀಗ್ ಮಂಡಲ ಕಾರ್ಯದರ್ಶಿ ಈ ಚುನಾವಣೆಯಲ್ಲಿ ಬೇಜವಾಬ್ದಾರಿಯುತ ಧೋರಣೆಯನ್ನು ಅನುಸರಿಸುತ್ತಿದ್ದಾರೆ ಎಂದು ಅಬ್ದುಲ್ಲ ಮಾಸ್ತರ್ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಅವರ ಪುತ್ರ ಮುಹಮ್ಮದ್ ಇರ್ಷಾದ್, ಜಮಾಲ್ ಪುತ್ತಿಗೆ, ಸಿರಾಜ್ ಕಣ್ಣೂರು ಮತ್ತು ಸಫ್ವಾನ್ ಮೊಗ್ರಾಲ್ ಸುದ್ದಿಗೋಷ್ಠಿಯಲ್ಲಿ ಜೊತೆಗಿದ್ದರು.

ಎಸ್.ಕೆ. ಗೋಲ್ಡ್‌ಸ್ಮಿತ್ಸ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ

ರೂ. 8.06 ಕೋಟಿ ದಾಖಲೆಯ ಲಾಭ ಗಳಿಕೆ

ಮಂಗಳೂರು: ಸದಸ್ಯ-ಗ್ರಾಹಕರ ಪ್ರೋತ್ಸಾಹ-ಸಹಕಾರ, ಆಡಳಿತ ಮಂಡಳಿಯ ಮಾರ್ಗದರ್ಶನ ಹಾಗೂ ಕಾರ್ಯಪರತೆ, ಮತ್ತು ಸಿಬ್ಬಂದಿಗಳ ಸೇವಾನಿಷ್ಠೆಯಿಂದ 2025-26ನೇ ಸಾಲಿನಲ್ಲಿ ಎಸ್.ಕೆ. ಗೋಲ್ಡ್‌ಸ್ಮಿತ್ಸ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ದಾಖಲೆಯ ರೂ. 8.06 ಕೋಟಿ ಲಾಭ ಗಳಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಪಿ. ಉಪೇಂದ್ರ ಆಚಾರ್ಯ ಹರ್ಷ ವ್ಯಕ್ತಪಡಿಸಿದ್ದಾರೆ.



ದಕ್ಷಿಣ ಕನ್ನಡ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಂದು ಕೈಗಾರಿಕಾ ಶಾಖೆ ಸಹಿತ 17 ಬ್ಯಾಂಕಿಂಗ್ ಶಾಖೆಗಳನ್ನು ಮಂಗಳೂರು, ಪುತ್ತೂರು, ಕೋಟೇಶ್ವರ, ಕಿನ್ನಿಗೋಳಿ, ಬೆಳ್ಳಂಪಳ್ಳಿ, ಕುಂದಾಪುರ, ಉಡುಪಿ, ಪಡುಬಿದ್ರಿ, ಕುಳಾಯಿ, ಪೆರ್ಡೂರು, ಸಂತೆಕಟ್ಟೆ-ಕಲ್ಯಾಣಪುರ, ಕೊಟ್ಟಾರಚೌಕಿ, ಶಿರ್ವ-ಮಂಚಕಲ್, ಗುರುವಾಯನಕೆರೆ, ಮುಡಿಪು, ಮೂಡುಬಿದಿರೆ ಮತ್ತು ಹಿರಿಯಡ್ಕದಲ್ಲಿ ಸದಸ್ಯ-ಗ್ರಾಹಕರ ಅಭ್ಯುದಯಕ್ಕಾಗಿ ಶಾಖೆಗಳನ್ನು ತೆರೆದು ನುರಿತ ಸಿಬ್ಬಂದಿಗಳು ಸೇವೆಯಲ್ಲಿ ಸದಾ ನಿರತರಾಗಿರುತ್ತಾರೆ.

31.03.2026ರ ಅಂತ್ಯಕ್ಕೆ 23529 ಸದಸ್ಯರಿದ್ದು ರೂ.7.34ಕೋಟಿ ಪಾಲು ಬಂಡವಾಳವಿದೆ. ನಿಧಿಗಳು ರೂ.29.82ಕೋಟಿ, ಧನವಿನಿಯೋಗಗಳು ರೂ.65.56ಕೋಟಿ ಇದ್ದು ದುಡಿಯುವ ಬಂಡವಾಳ ರೂ.355.16 ಕೋಟಿಯಿರುತ್ತದೆ. ಸಾಲದ ಹೊರಬಾಕಿ ಮೊತ್ತ ರೂ.288.86 ಕೋಟಿ ಇದ್ದು, ಕಳೆದ ಸಾಲಿಗಿಂತ ರೂ.48.54 ಕೋಟಿ ಹೊರಬಾಕಿ ಸಾಲ ಹೆಚ್ಚಳಗೊಂಡಿದ್ದು ಶೇಕಡಾ 20.19ರಷ್ಟು ಪ್ರಗತಿಯನ್ನು ಸಾಧಿಸಿದೆ. ರೂ.317.01 ಕೋಟಿ ಠೇವಣಿ ಇದ್ದು, ಕಳೆದ ಸಾಲಿಗಿಂತ ರೂ.63.15 ಕೋಟಿ ಠೇವಣಿ ಹೆಚ್ಚಳಗೊಂಡಿದ್ದು, ಶೇಕಡಾ 24.88ರಷ್ಟು ವೃದ್ಧಿಯಾಗಿದೆ. ಸಾಲಗಳನ್ನು ಸಕಾಲದಲ್ಲಿ ಮರುಪಾವತಿಸಿದ ಕಾರಣದಿಂದಾಗಿ ಕಳೆದ ವರ್ಷ ಇದ್ದ ಶೇಕಡಾ 2.75 ಸುಸ್ತಿ ಸಾಲ ಪ್ರಮಾಣವು ಕಡಿಮೆಯಾಗಿ ಈ ವರ್ಷ ಕೇವಲ ಶೇಕಡಾ 1.60ರಷ್ಟಿರುತ್ತದೆ. ವರದಿ ಸಾಲಿನಲ್ಲಿ ದಾಖಲೆಯ ರೂ.8.06ಕೋಟಿ ಲಾಭಗಳಿಸಿದೆ ಎಂದರು.

ಸ್ವಂತ ಕಟ್ಟಡ

ಕೊಟ್ಟಾರಚೌಕಿಯಲ್ಲಿ ತನ್ನದೇ ಆದ ಸ್ವಂತಕಟ್ಟಡ 'ವಿಶ್ವಸೌಧ'ದಲ್ಲಿ ಆಡಳಿತ ಕಚೇರಿ, ಕೊಟ್ಟಾರಚೌಕಿ ಶಾಖೆ, ಕೈಗಾರಿಕಾ ಮಾರಾಟ ಮಳಿಗೆ ಹೊಂದಿರುವ ಸೊಸೈಟಿಯ ಕಿನ್ನಿಗೋಳಿ, ಉಡುಪಿ, ಪಡುಬಿದ್ರಿ, ಕುಳಾಯಿ ಶಾಖೆ ಹಾಗೂ ಬೈಕಂಪಾಡಿಯ ಉದ್ದಿಮೆ ಘಟಕಗಳು ಸ್ವಂತ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿದೆ. ಪ್ರಸ್ತುತ ಕೊಟ್ಟಾರಚೌಕಿಯ ವಿಶ್ವಸೌಧ ಕಟ್ಟಡ ನವೀಕರಣಗೊಂಡಿದೆ.

ಸದಸ್ಯರಿಗೆ ಕಳೆದ 34 ವರ್ಷಗಳಿಂದ ಶೇಕಡಾ 18 ಡಿವಿಡೆಂಡು ನೀಡುತ್ತಿದ್ದೇವೆ, 2024 ಮತ್ತು 2025 ರಲ್ಲಿ ವಜ್ರಮಹೋತ್ಸವ ಪ್ರಯುಕ್ತ 20% ಡಿವಿಡೆಂಡ್ ನೀಡಲಾಗಿದೆ. ಪ್ರತೀ ವರ್ಷ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಸದಸ್ಯರಿಗೆ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಆರ್ಥಿಕ ಸಹಾಯ ನೀಡುವುದಲ್ಲದೇ, ಅಶಕ್ತರಿಗೆ, ಅನಾರೋಗ್ಯ ಹೊಂದಿದವರಿಗೆ ಸಂಘದ ವತಿಯಿಂದ ಆರ್ಥಿಕ ಸಹಾಯ ನೀಡುತ್ತಿದ್ದೇವೆ. ಪಂಚಕಸುಬುಗಳಲ್ಲಿ ವಿಶಿಷ್ಟ ಸಾಧನೆ ಗೈದವರಿಗೆ (ಚಿನ್ನದ ಕೆಲಸ, ಕಾಷ್ಠ ಶಿಲ್ಪ, ಕಬ್ಬಿಣದ ಕೆಲಸ, ಎರಕ ಶಿಲ್ಪ, ಶಿಲಾ ಶಿಲ್ಪ) ಪ್ರತೀ ವರ್ಷ ವಾರ್ಷಿಕ ಮಹಾಸಭೆಯಲ್ಲಿ 'ಎಸ್.ಕೆ.ಜಿ.ಐ. ಪಾಲ್ಕೆ ಪ್ರಶಸ್ತಿ' ನೀಡಿ ಗೌರವಿಸಿ ಪ್ರೋತ್ಸಾಹಿಸುತ್ತಿದ್ದೇವೆ. 2009-10 ನೇ ಸಾಲಿನಿಂದ ಎ ಮತ್ತು ಸಿ ವರ್ಗದ ಸದಸ್ಯರ ಮತ್ತು ಸಿಬ್ಬಂದಿಗಳ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ಯಲ್ಲಿ ಶೇ.75 ಕ್ಕಿಂತ ಹೆಚ್ಚು ಅಂಕಗಳಿಸಿದ ಮಕ್ಕಳಿಗೆ ಈ ವರೆಗೆ ಒಟ್ಟು 2735 ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ರೂ. 68,05,000 ವಿದ್ಯಾರ್ಥಿ ವೇತನವನ್ನು ಪಾವತಿಸಲಾಗಿದೆ ಎಂದವರು ವಿವರಿಸಿದರು.

2024-25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಯ 201 ಹಾಗೂ ಪಿ.ಯು.ಸಿ.ಯ 162 ಅರ್ಜಿಗಳು ಬಂದಿದ್ದು ಒಟ್ಟು 363 ವಿದ್ಯಾರ್ಥಿಗಳಿಗೆ ರೂ.11,70,000 ವಿದ್ಯಾರ್ಥಿ ವೇತನ ನೀಡಲಾಗಿದೆ. ಸದಸ್ಯರಿಗೆ 2025 ರಿಂದ ಸಂಸ್ಥೆಯ ವತಿಯಿಂದ ಉಚಿತ ಅಪಘಾತ ವಿಮೆ ಜ್ಯಾರಿಗೊಳಿಸಿದ್ದು ಇತ್ತೀಚಿಗೆ ಮೃತರಾದ ಅಶೋಕ್ ಅವರ ಪತ್ನಿಗೆ ರೂ.2 ಲಕ್ಷದ ವಿಮಾ ಮೊತ್ತ ವಿತರಿಸಲಾಗಿದೆ ಎಂದರು.

ವಿವಿಧ ಪ್ರಶಸ್ತಿಗಳನ್ನು ಪಡೆದುಕೊಂಡಿರುವ ಸೊಸೈಟಿಯ ಪ್ರಸ್ತುತ ಆಡಳಿತ ಮಂಡಳಿಯಲ್ಲಿ ಉಪಾಧ್ಯಕ್ಷರಾಗಿ ಎ. ಆನಂದ ಆಚಾರ್ಯ, ಪ್ರಧಾನವ್ಯವಸ್ಥಾಕರಾಗಿ ಯಜ್ಞೇಶ್ವರ ಹಾಗೂ ನಿರ್ದೇಶಕರುಗಳಾಗಿ ಕೆ. ಯಜ್ಞೇಶ್ವರ ಆಚಾರ್ಯ, ವೈ.ವಿ. ವಿಶ್ವಜ್ಞಮೂರ್ತಿ, ವಿ. ಜಯ ಆಚಾರ್, ಕೆ. ಶಶಿಕಾಂತ್ ಆಚಾರ್ಯ, ಮಲ್ಲಪ್ಪ ಎನ್. ಪತ್ತಾರ್, ರೋಹಿಣಿ ಎಂ.ಪಿ., ಜ್ಯೋತಿ ಎಂ.ವಿ. ರಮೇಶ್ ರಾವ್ ಯು, ಕೆ. ಪ್ರಕಾಶ್ ಆಚಾರ್ಯ, ಮಂಜುನಾಥ ಆಚಾರ್ಯ, ಚಂದ್ರಶೇಖರ್ ಎ.ಎಸ್. ರನ್ನೊಳಗೊಂಡು ಹಾಗೂ ಅಧ್ಯಕ್ಷರಾದ ಪಿ. ಉಪೇಂದ್ರ ಆಚಾರ್ಯರ ನಾಯಕತ್ವದಲ್ಲಿ ಹಾಗೂ ಮುಂದಾಳುತ್ವದಲ್ಲಿ ಸ್ಥಾಪಕಾಧ್ಯಕ್ಷರಾದ ದೇವಮಾನವ ಪಾಲ್ಕೆ ಬಾಬುರಾಯ ಆಚಾರ್ಯರ ಕನಸಿನಕೂಸು ಪ್ರಗತಿ ಪಥದಲ್ಲಿ ಸಾಗುತ್ತಿದೆ.

IN THE COURT OF THE IV ADDL. DISTRICTS AND SESSIONS JUDGE, AND COMMERCIAL COURT MANGALORE D.K.

F.D.P 1/2026
(In Com. O.S.No. 21/2023)

Between :
Sri. Dayananda Rai M--Petitioner
And
Mr. Biju T.J --Respondent

TO WHOMSOEVER IT MAY CONCERN

NOTICE
Mr. Biju T.J
Aged about 45 years,
S/o Mr. Joseph T.V,
R/at Sowmya Wood, Naguri
Manngalore-575002

Take notice that the petitioner named above, has filed above petition, seeking relief recovery of the mense property as per decree dated 14.08.2025 passed in Com.O.S No. 21/2023 before this Honible court and such other relief.

Notice is hereby given to you to appear before this Court on 27.04.2026 at 11.00 a.m. either in person or through your pleader. If you fail to appear, the suit will be heard in your absence.

Given under my hand and seal of the court on this 04th day of April 2026.

(By order of the Court)
Sd/-
Advocate for Petitioner
M Chidananda Kedilaya
Mangalore

Sd/-
Chief Administrative Officer, District & Sessions Court Mangalore

---

IN THE COURT OF PRL FAMILY COURT MANGALURU, D.K.
M.C. No. 514/2025

Between:
Sri Shekar ...Petitioner/ Applicant
AND
Smt. Shobha ...Respondent/ Opponent

NOTICE TO RESPONDENT

Smt. Shobha, D/o. Revathi,
Aged about 54 years,
Residing at Arekare Tailory Road, Mulihithlu, Bolar,
Mangaluru-575003.

Take notice that the above case is now posted to **23.04.2026** for your appearance. You are hereby called upon to appear before the Court on that day at **11.00 a.m.,** either personally or through pleader, failing which the matter will be decided in your absence, placing you exparte.

Given under my hand and seal of the court this the 1st day of April 2026.

(BY ORDER OF THE COURT)
Sd/- Chief Ministerial Officer
Principal Family Court,
Mangaluru, D.K.

Sd/- (S.K. Ullal)
Advocate for Petitioner
Mangaluru, D.K.
Date:01.04.2026

IN THE COURT OF THE ADDITIONAL CIVIL JUDGE AND JUDICIAL MAGISTRATE FIRST CLASS AT MADIKERI
Cr.M.C.No.74/2026

Petitioners:
Sri.I.C.Kaverappa
V/s
Respondent:
The Tahasildar and The Registrar of Births and Deaths, Madikeri Taluk, Kodagu District

PUBLIC NOTICE

TAKE NOTICE, that the petitioner has filed the above petition under section 13(3) of the Registration of Births and Deaths Act, 1969 seeking direction to register the death of **late I.M.Chinnappa** of K.Badaga Village, Madikeri Taluk, on **02.06.1989** at his residence at K.Badaga Village, Madikeri Taluk, in the Register of Deaths maintained by the respondent. Any person/s having any interest in supporting or opposing the said petition may do so at **11.00 a.m.** on **27-04-2026,** the date fixed for hearing.

If no objection is received, the Court will proceed in the above case, in accordance with law.

Given under my hand and seal on this 12th day of the March 2026 at Madikeri.

(BY THE ORDER OF THE COURT)
Sd/- Chief Ministrial Officer
Civil Judge & JMFC
Court, Madikeri, Kodagu

Sd/- M.S. BIDDAPPA
Advocate, 18/29
Sudarshan Extension
MADIKERI, 9243393279

ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ, ಕೊಡಗು ಜಿಲ್ಲೆ.
ಸಿ.ಆರ್.ಎಂ.ಸಿ. ನಂ.:93/2026

ಅರ್ಜಿದಾರರು:
ಶ್ರೀ ಪೊನ್ನಯ್ಯ ಬಿ.ಎನ್.ಮತ್ತು ಇನ್ನೊಬ್ಬರು
ವಿರುದ್ಧ
ಎದುರುದಾರರು:
ತಹಶೀಲ್ದಾರರು ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲಿನ ಕೇಸಿನ 1ನೇ ಅರ್ಜಿದಾರರ ಹೆಂಡತಿಯಾದ ಬಿ.ಎನ್. ಸುನಿತ, 2ನೇ ಅರ್ಜಿದಾರರಾದ ತಾಯಿಯವರಾದ ಬಿ.ಎನ್. ಸುನಿತ ರವರು **ದಿನಾಂಕ 04.09.2001** ರಂದು ಕೊಡಗು ಜಿಲ್ಲೆ, ಮಡಿಕೇರಿ ತಾಲೂಕಿನ ಬೇತು ಗ್ರಾಮದಲ್ಲಿ ಮರಣ ಹೊಂದಿದ್ದು. ಅವರ ಮರಣ ಪ್ರಮಾಣಪತ್ರವನ್ನು ಪಡೆಯಲು ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ **ದಿನಾಂಕ 25.06.2026** ರಂದು ಬೆಳಿಗ್ಗೆ **11.00** ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಮಾನ್ಯ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯ, ಮಡಿಕೇರಿ ಕೊಡಗು ಜಿಲ್ಲೆ

ಸಹಿ/- ಕೆ.ಎಸ್. ಚಂದ್ರಶೇಖರ್
ಅರ್ಜಿದಾರರ ಪರ ವಕೀಲರು

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-514th) ಡ್ರಾ ಏಪ್ರಿಲ್ 7ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SJ 293778 (KANHANGAD)

Cons Prize-Rs: 5000/-
SA 293778 SB 293778 SC 293778 SD 293778
SE 293778 SF 293778 SG 293778 SH 293778
SK 293778 SL 293778 SM 293778

2nd Prize Rs: 30,00,000/- [30 Lakhs]
SH 402878 (KANNUR)

3d Prize Rs: 5,00,000/- [5 Lakhs]
SB 800774 (IDUKKI

FOR THE TICKETS ENDING WITH THE FOLLOWING NUMBERS

4th Prize Rs.5,000/-
1563 1795 2215 3019 3133 3207 4204 4523 4725 4848 5167 5539 6534 6535 7102 7129 8270 8822 9341

5th Prize Rs.2,000/-
0878 3178 4042 4213 5601 6963

6th Prize Rs.1,000/-
0791 0980 1192 1747 2042 2488 2612 3102 3313 3342 3434 4641 4658 4864 5057 5444 5951 6153 7428 8449 8705 8729 9429 9682 9814

7th Prize Rs.500/-
0163 0364 0577 0754 0823 0827 0894 1000 1106 1182 1621 1787 1816 1890 2013 2249 2283 2524 2643 2675 2729 2857 3161 3213 3272 3324 3410 3537 3665 3720 3745 3818 3835 3839 3877 3937 3952 4137 4212 4409 4610 4643 4823 4891 5047 5141 5251 5446 5695 5776 6007 6032 6566 6588 6593 6712 6808 6821 6899 7377 7382 7442 7483 7507 7563 7738 7790 8078 8601 8604 8908 9098 9209 9561 9914 9926

8th Prize Rs.200/-
0036 0227 0574 0724 0974 0994 1065 1249 1593 1675 1687 1783 1877 2119 2135 2213 2305 2314 2388 2493 2500 2505 2521 2576 2624 2669 2699 2907 3080 3117 3215 3217 3241 3242 3467 3725 3980 4083 4314 4375 4460 4691 4699 4700 4765 4939 5111 5195 5200 5263 5396 5652 5829 6195 6328 6374 6386 6404 6429 6542 6785 6798 6846 7232 7233 7523 7583 7589 7762 8066 8117 8219 8236 8561 8613 8639 8641 8849 9052 9132 9143 9216 9309 9405 9449 9452 9557 9633 9700 9961

9th Prize Rs.100/-
0025 0410 0572 0590 0608 0666 0757 0829 0841 0923 0987 1068 1133 1189 1257 1284 1320 1411 1421 1454 1656 1684 1698 1771 1818 1869 1885 1916 1977 2005 2044 2116 2168 2231 2271 2433 2462 2563 2629 2644 2722 2760 2767 2806 3034 3056 3123 3208 3325 3412 3444 3493 3559 3563 3679 3846 4080 4316 4440 4483 4540 4562 4692 4810 4821 4857 4888 4924 4965 4986 5005 5117 5397 5416 5421 5442 5494 5511 5551 5718 5752 5885 6022 6024 6046 6227 6238 6266 6312 6430 6654 6663 6669 6719 6769 6771 6787 6832 6877 6891 6948 7005 7168 7203 7226 7392 7425 7561 7608 7617 7642 7696 7769 7807 8055 8085 8095 8141 8185 8337 8410 8414 8510 8596 8696 8798 8910 8975 8981 8999 9092 9111 9224 9277 9322 9329 9337 9426 9465 9476 9495 9592 9621 9628 9638 9709 9729 9767 9778 9798

ಪುತ್ತೂರು ಮಾರುಕಟ್ಟೆ ಧಾರಣೆ

07-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	460 - 500
ಚೋಲ್ ಅಡಿಕೆ	:	530 - 555
ಡಬಲ್ ಚೋಲ್	:	530 - 555
ಹೊಸ ಪಠೋರ	:	350 - 400
ಹಳೆ ಪಠೋರ	:	380 - 410
ಹೊಸ ಉಳ್ಳಿ	:	120 - 290
ಕರಿಗೋಟು	:	235 - 265
ಕೋಕಾ	:	325 - 345
ಹಸಿ ಕೊಕ್ಕೋ	:	70 - 100
ಒಣ ಕೊಕ್ಕೋ	:	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 665

ರಬ್ಬರ್ ಧಾರಣೆ : ಗ್ರೇಡ್

ರಬ್ಬರ್ ಗ್ರೇಡ್	-	196-227
ರಬ್ಬರ್‌ಸ್ಕ್ರಾಪ್	-	125-138

(ಕಂದಾಯ ಇಲಾಖೆ)
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ
ಉಡುಪಿ ಜಿಲ್ಲೆ, "ರಜತಾದ್ರಿ" ಮಣಿಪಾಲ, ಉಡುಪಿ - 576104, Email: udupidc@gmail.com

ನಂ.ಇಎಸ್‌ಟಿ ಸಿಆರ್ 66/2026 ಇ-260791 ದಿನಾಂಕ : 06-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಡುಪಿ ಜಿಲ್ಲಾ ಕಂದಾಯ ಘಟಕಕ್ಕೆ ಬಾಹ್ಯ ಮೂಲದಿಂದ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಒದಗಿಸುವ ಬಗ್ಗೆ ಒಂದು ವರ್ಷದ ಅವಧಿಗೆ ಅಂಗೀಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) ಆಕ್ಟ್-2000ರ ಪ್ರಕಾರ ಟೆಂಡರ್ ಅನ್ನು ಆಹ್ವಾನಿಸಿದೆ.

ಆಸಕ್ತ ಟೆಂಡರ್‌ದಾರರು ಅನುಬಂಧ 1 ರಲ್ಲಿ ಸೂಚಿಸಿರುವಂತೆ, ತಮ್ಮ ಅಲ್ಪಾವಧಿ ಟೆಂಡರ್ ಸೇವಾ ವೆಚ್ಚದ ಕುರಿತು ದರಗಳ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಸಲ್ಲಿಸಬಹುದಾಗಿರುತ್ತದೆ.

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: 08-04-2026 ರಿಂದ ದಿನಾಂಕ: 14-04-2026 ರ ಸಾಯಂಕಾಲ 5.00 ಘಂಟೆಯೊಳಗೆ ಟೆಂಡರನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ, ಜಿಲ್ಲಾಧಿಕಾರಿಗಳ ಕಛೇರಿ, ಉಡುಪಿಯ ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು.

1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ : 08-04-2026 ರಿಂದ 14-04-2026 ರ ಸಾಯಂಕಾಲ 5.00 ಘಂಟೆಯೊಳಗೆ ಟೆಂಡರನ್ನು ಸಲ್ಲಿಸುವುದು.
2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14-04-2026 ರ ಸಾಯಂಕಾಲ 5.00 ಘಂಟೆ
3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15-04-2026 ರಂದು ಅಪರಾಹ್ನ 3.00 ಗಂಟೆ
4) ಟೆಂಡರ್ ನ ಆರ್ಥಿಕ ಬಿಡ್ ತೆರೆಯುವ ದಿನಾಂಕ:17-04-2026 ರಂದು ಅಪರಾಹ್ನ 3.00 ಘಂಟೆ
5) ಇ.ಎಂ.ಡಿ. ಮೊತ್ತ ರೂ. 2,50,000.00

ಸಹಿ/- ಅಪರ ಜಿಲ್ಲಾಧಿಕಾರಿ ಉಡುಪಿ ಜಿಲ್ಲೆ, ಉಡುಪಿ

ಕರ್ನಾಟಕ ಸರಕಾರ
(ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ)
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ. 574238

ಇ-ಮೈಲ್: eokukkesubrahmanya@gmail.com ವೆಬ್‌ಸೈಟ್: https://temples.karnataka.gov.in
Phone: STD: 08257 - 236200, 281224, 281423, 295400, 281700, 281265, 295300
ಕೆ.ಎಸ್.ಎಸ್.ಟಿ. ನಂ: ಸೇವಾ: 04/ಪಂಚಾಮೃತ ಮಹಾಭಿಷೇಕ ಬಾಟ್ಲಿ/2025-26
ದಿನಾಂಕ: 29-03-2026

ಟೆಂಡರ್ ಪ್ರಕಟಣೆ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಅಗತ್ಯವಿರುವ ಪಂಚಾಮೃತ ಮಹಾಭಿಷೇಕ ಬಾಟ್ಲಿಗಳನ್ನು ತಯಾರಿಸಿ ಕೊಡುವ ಬಗ್ಗೆ ಲೈಸನ್ಸುದಾರ ಪ್ಲಾಸ್ಟಿಕ್ ಐಟಂಗಳ ತಯಾರಕ / ಮಾರಾಟಗಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27-04-2026 ಮಧ್ಯಾಹ್ನ 12.00 ಗಂಟೆಯವರೇಗೆ. ಅದೇ ದಿನ ಸಾಯಂಕಾಲ 4.00 ಗಂಟೆಗೆ ತೆರೆಯಲಾಗುವುದು.

ವಿವರ: 01) ಪಂಚಾಮೃತ ಮಹಾಭಿಷೇಕ ಪ್ರಸಾದ ಬಾಟ್ಲಿ – ಬಿಳಿ ಬಣ್ಣ (ತಿರುಗಣೆಯ ಮುಚ್ಚಳ ಮತ್ತು ಒಳಗಡೆ ಪ್ಲಗ್) ತುಂಬುವ ಸಾಮರ್ಥ್ಯ – 2 ಕೆಜಿ – (ಬಾಟ್ಲಿ 1 ರ ತೂಕ – 95 ಗ್ರಾಂ)

ಶರ್ತಗಳು: ಸೂಚಿಸುವ ದರವು ಎಲ್ಲಾ ತೆರಿಗೆಗಳು, ಸಾಗಾಟ ಖರ್ಚು ವಗೈರೆ ಸೇರಿರತಕ್ಕದ್ದು. ಇ.ಎಂ.ಡಿ ಮೊತ್ತ ರೂ. 10,000.00 ವನ್ನು ಕಾರ್ಯನಿರ್ವಹಣಾಧಿಕಾರಿ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಇವರ ಹೆಸರಿಗೆ ಪಡೆದ ಡಿಡಿ ಅಥವಾ ನಗದು ಮೂಲಕ ಪಾವತಿಸತಕ್ಕದ್ದು. ಹಿಂದೂಯೇತರರಿಗೆ ಭಾಗವಹಿಸಲು ಅವಕಾಶವಿರುವುದಿಲ್ಲ. ಯಾವುದೇ ಕಾರಣ ನೀಡದೇ ಟೆಂಡರ್ ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕು ಈ ಕೆಳಗೆ ಸಹಿ ಮಾಡಿದವರಿಗೆ ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ದೇವಳದ ಪ್ರಕಟಣಾ ಫಲಕದಿಂದ ತಿಳಿದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಹಿಂದೂ ಧಾರ್ಮಿಕ ದತ್ತಿ ಇಲಾಖೆ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

DIPR/DK/KSMCA/35/ 26-27 dt. 07.04.2026

ಸಾರ್ವಜನಿಕ ಪ್ರಕಟಣೆ

ದ.ಕ. ಜಿಲ್ಲಾ, ಪುತ್ತೂರು ತಾಲೂಕು, ಆರ್ಯಾಪು ಗ್ರಾಮದ, ನೀರ್ಕಜೆಯ ದಿ. ಶಿವಾನಂದಪ್ಪ ಬಿ ಬಂಕೊಳ್ಳಿಯವರ ಮಗ, ಸುಮಾರು 46 ವರ್ಷ ಪ್ರಾಯದ, ಪ್ರಭು ಕುಮಾರ್ ಎಸ್ ಬಿ (ಆಧಾರ್ ನಂಬ್ರ: 896252965676) ಮೊ. 8618405121 ಇವರಿಗೆ ಪುತ್ತೂರು ಸ.ರಿ. ಆಫೀಸಿನ ರಿ.ದ.ನಂಬ್ರ PUT-1-02249/2024-25ದಿನಾಂಕ:12-07-2024 ರಂದು ವಿದ್ಯುನ್ಮಾನ ಮಾದರಿಯಲ್ಲಿ ಕೇಂದ್ರಿತ ದತ್ತಾಂಶ ಕೋಶದಲ್ಲಿ ಶೇಖರಿಸಲಾದ ದಾನಪತ್ರ ಪ್ರಕಾರ ಆರ್ಯಾಪು ಗ್ರಾಮದ ಸ.ನಂಬ್ರ 37/1ಬಿ4 ಭೂ. ಪ. 0.11 ಎಕ್ರೆ ಅಂದರೆ ಆರ್ಯಾಪು ಗ್ರಾ. ಪಂ. ಸ್ವತ್ತಿನ ಸಂಖ್ಯೆ 151 100401200222692-ನಿವೇಶನ-445.31 ಚ.ಮೀ ಖಾಲಿ ಜಮೀನು ಅವರ ತಂದೆ ದಿ. ಶಿವಾನಂದಪ್ಪ ಬಿ ಬಂಕೊಳ್ಳಿಯವರಿಂದ ಹಕ್ಕುಸ್ಥಾಪಿತವಾಗಿ ಬಂದಿದ್ದು ಸದ್ರಿ ಪ್ರಭು ಕುಮಾರ್ ಎಸ್ ಬಿ ಯವರ ಮಾತ್ರ ಸ್ವಂತ ಹಕ್ಕಿನದ್ದಾಗಿರುತ್ತದೆ ಮತ್ತು ಇಚ್ಛಾನುಸಾರ ಅನುಭವಿಸಿಕೊಂಡು ಬರಲು ಮತ್ತು ಪರಭಾರೆ, ವಿಕ್ರಯ ಮಾಡಲು ಸಂಪೂರ್ಣ ಹಕ್ಕುದಾರರು. ಇದಾಗಿಯೂ ಈ ಆಸ್ತಿ ಬಗ್ಗೆ ಯಾವುದಾದರೂ ಆಕ್ಷೇಪ, ತಕರಾರು, ಹಕ್ಕಿನ ಬಗ್ಗೆ ಕ್ಲೈಮ್ ಇತ್ಯಾದಿ ಇದ್ದಲ್ಲಿ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ನನ್ನನ್ನು ದಾಖಲೆ ಸಹಿತ ಸಂಪರ್ಕಿಸಬೇಕಾಗುತ್ತದೆ ಹೊರತು ನಂತರ ಬಂದ ಯಾವುದೇ ಆಕ್ಷೇಪ, ತಕರಾರು, ಕ್ಲೈಮ್ ಇತ್ಯಾದಿಗಳನ್ನು ಪರಿಗಣಿಸಲಾಗುವುದಿಲ್ಲ ಎಂತ ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಸಹಿ/- ಉದಯರವಿ ಕೋಂಬ್ರಾಜೆ BA,LLB ವಕೀಲರು,
1ನೇ ಮಹಡಿ, ಕುಲಾಲ ಸಹಕಾರ ಭವನ,
ಬಿ.ಇ.ಒ. ಕಚೇರಿಯ ಎದುರುಗಡೆ, ಪುತ್ತೂರು ದ.ಕ. -574201,
ಮೊ.: 9900223201

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಟೆಂ:KW-1, 3 & 4:2026-27:63 ದಿನಾಂಕ : 07-04-2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

2025-26ನೇ ಸಾಲಿನ ಲೆಕ್ಕ ಶೀರ್ಷಿಕೆ: 4059-80-051-0-60-132 ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಯೋಜನೆ (ಸಿಎಂಐಡಿಪಿ) ಮತ್ತು 2216-07-053-00-01-200 (ಯೋಜನೇತರ) ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000ರ ನಿಯಮದಂತೆ, ಸ್ಟ್ಯಾಂಡರ್ಡ್ ಬಿಡ್ ಡಾಕೂಮೆಂಟ್ KW-1, 3 & 4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 3 ಕಾಮಗಾರಿಗಳಿಗೆ **(ವರ್ಕ ಇಂಡೆಂಟ್ ಸಂಖ್ಯೆ: 32306/ CALL-2, 32128 & 34079)** ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 17-04-2026 ಸಮಯ 13.00 ಗಂಟೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 18-04-2026 ಸಮಯ 13.30 ಗಂಟೆ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 21-04-2026 ಸಮಯ 11.00 ಗಂಟೆ.** ಕನಿಷ್ಠ ಅಂದಾಜು ಮೊತ್ತ **ರೂ. 5.00 ಲಕ್ಷ**ಗಳು ಹಾಗೂ ಗರಿಷ್ಠ ಅಂದಾಜು ಮೊತ್ತ **ರೂ. 480.00 ಲಕ್ಷ**ಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು, ಸದರಿ ವೆಬ್‌ಸೈಟ್‌ನಲ್ಲಿಯು ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು, ಕೆಲಸದ ವೇಳೆಯಲ್ಲಿ ಈ ಕಚೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ

ವಾ.ಸಾ.ಸಂ.ಇ/ಕೊಪ್ಪಳ/10/ದೇಶಪಾಂಡೆಪಬ್ಲಿಸಿಟಿ/2026-27



ಕಿರು ಸುದ್ದಿ

ದಲಿತ ಸಮಾಜದ ಬೆಂಬಲ ಎನ್‌ಡಿಎಗೆ

ಕಾಸರಗೋಡು: ಕಾಸರಗೋಡು ಜಿಲ್ಲೆಯಲ್ಲಿರುವ ದಲಿತ ಸಮಾಜವು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿರುವ ಎಂ.ಎಲ್.ಅಶ್ವಿನಿ ಹಾಗೂ ಕೆ.ಸುರೇಂದ್ರನ್ ಅವರಿಗೆ ಬೆಂಬಲ ನೀಡುವುದಾಗಿ ಪದಾಧಿಕಾರಿಗಳು ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಲಿತ ವೇದಿಕೆಯ ಆದಿ ದ್ರಾವಿಡ, ನಲಿಕೆ ಅವರ ಸಮಾಜ, ಚೆಕ್ಲಿಯನ್ ಸೇರಿದಂತೆ ಎಲ್ಲಾ ಸಮುದಾಯಗಳಿಗೆ ಸರಕಾರದಿಂದ ಲಭಿಸಬೇಕಾದ ಸೌಲಭ್ಯಗಳು, ಜಾತಿಯ ಹೆಸರುಗಳನ್ನು ಸರಿಯಾದ ರೀತಿಯಲ್ಲಿ ಕೇರಳ ಗಜೆಟ್‌ನಲ್ಲಿ ದಾಖಲಿಸದಿರುವುದು ಭಾರೀ ಸಮಸ್ಯೆಯನ್ನು ಉಂಟು ಮಾಡಿದೆ. ಇದರಿಂದ ಸರಿಯಾದ ಜಾತಿ ಪ್ರಮಾಣ ಪತ್ರ ಲಭಿಸುವುದಿಲ್ಲ. ಇದರಿಂದ ಮಕ್ಕಳಿಗೆ ಶಿಕ್ಷಣ ಸಹಾಯ, ಉದ್ಯೋಗ ಸೇರಿದಂತೆ ದಲಿತ ಸಮುದಾಯಕ್ಕೆ ಲಭಿಸಬೇಕಾದ ಅನುಕೂಲತೆಗಳಿಂದ ವಂಚಿತರಾಗಿದ್ದೇವೆ. ಇಂತಹ ಸಮಸ್ಯೆ ಬಗೆಹರಿಸುವಲ್ಲಿ ಎನ್‌ಡಿಎ ಸಹಕರಿಸುವ ಹಿನ್ನೆಲೆ ಸಂಪೂರ್ಣ ಬೆಂಬಲ ನೀಡುವುದಾಗಿ ಪದಾಧಿಕಾರಿಗಳು ತಿಳಿಸಿದರು. ಗೋಷ್ಠಿಯಲ್ಲಿ ಗುಣಪಾಲ ಬಿ., ಶ್ರೀರಾಮ ಪ್ರಸಾದ, ರಾಜು ಚೆಕ್ಲಿ, ಅರುಣ್ ಕುಮಾರ್, ರಾಜೇಶ್ ಗುಣಪಾಲ ಭಾಗವಹಿಸಿದ್ದರು.




ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎಡರಂಗದ ಅಭ್ಯರ್ಥಿ ಕೆ.ಆರ್.ಜಯಾನಂದ ಅವರ ಚುನಾವಣಾ ಪ್ರಚಾರದ ನಿಮಿತ್ತ ಸೋಮವಾರ ಸಂಜೆ ವಾಹನ ಜಾಥಾ ನಡೆಯಿತು. ಗಡಿ ಪ್ರದೇಶ ತಲಪಾಡಿಯಿಂದ ನೂರಾರು ಮಂದಿ ಕಾರ್ಯಕರ್ತರ ಜೊತೆ ವಾಹನದಲ್ಲಿ ಅಭ್ಯರ್ಥಿ ಕೆ.ಆರ್.ಜಯಾನಂದ ಅವರು ಹೊರಟು ಸೀತಾಗೋಳಿಯಲ್ಲಿ ಮುಕ್ತಾಯಗೊಳಿಸಿದರು.

ನಿಧನ ಸುದ್ದಿ

ಎಂ. ಜಗದೀಶ ಅವಭೃತ


ಬೈಂದೂರು: ಮರವಂತೆಯ ದುರ್ಗಾ ಯಕ್ಷೇಶ್ವರಿ ದೇವಸ್ಥಾನದ ಆಡಳಿತ ಧರ್ಮದರ್ಶಿ ಜಗದೀಶ ಅವಭೃತ (85) ಅವರು ಅಲ್ಪಕಾಲದ ಅನಾರೋಗ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮರವಂತೆ ಬಡಾಕೆರೆ ವ್ಯವಸಾಯ ಸೇವಾ ಸಹಕಾರಿ ಸಂಘದ ಕಾರ್ಯದರ್ಶಿಯಾಗಿ ಸುದೀರ್ಘ ಅವಧಿ ಸೇವೆ ಸಲ್ಲಿಸಿದ್ದ ಅವರು ಮರವಂತೆ ಪಂಚಾಯತ್ ಅಧ್ಯಕ್ಷರಾಗಿಯೂ ಹೊಣೆ ನಿರ್ವಹಿಸಿದ್ದರು. ಪತ್ನಿ, ಈರ್ವರು ಪುತ್ರರು, ಈರ್ವರು ಪುತ್ರಿಯರನ್ನು ಅಗಲಿದ್ದಾರೆ.



ರೂಪಾ ಸಾಯಿನಾರಯಣ

ಸುಳ್ಯ: ಕಲ್ಲಡ್ಕ ಗ್ರಾ.ಪಂ. ಮಾಜಿ ಅಧ್ಯಕ್ಷ ಹಾಗೂ ಕೃಷಿಕ ಸಾಯಿನಾರಾಯಣ ಕಲ್ಲಡ್ಕರ ಪತ್ನಿ ರೂಪಾ ಸಾಯಿನಾರಾಯಣ (41) ಬಹುಅಂಗಾಂಗ ವೈಫಲ್ಯದಿಂದ ಮಂಗಳವಾರ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ವೈದೇಹಿ ಮಹಿಳಾ ಮಂಡಲದ ಅಧ್ಯಕ್ಷೆಯಾಗಿ ಸಕ್ರಿಯರಾಗಿ ತೊಡಗಿದಿಕೊಂಡು ಮಹಿಳಾ ಮಂಡಲದ ಮೂಲಕ ಶಾರದೋತ್ಸವ ಆಚರಣೆಯಲ್ಲು ಪ್ರಮುಖ ಪಾತ್ರ ವಹಿಸಿದ್ದರು. ಚೆಂಡೆ ವಾದನ ಕಲಿತು ಇತರರಿಗೆ ತರಬೇತಿ ನೀಡಿ ತಾನೇ ಒಂದು ಸಂಘ ಕಟ್ಟಿದ್ದರು. ಕಲ್ಲಡ್ಕ ಪರಿಸರದಲ್ಲಿ ಕ್ರಿಯಾಶೀಲರಾಗಿ ಜನರೊಂದಿಗೆ ಬೆರೆಯುತ್ತಿದ್ದರು. ಮೃತರು ಪತಿ, ಮಕ್ಕಳಾದ ಪ್ರಧಾನ್ ಮತ್ತು ಪ್ರಜ್ಞಾನ್ ಹಾಗೂ ಕುಟುಂಬಸ್ಥರು, ಬಂಧು ಮಿತ್ರರನ್ನು ಅಗಲಿದ್ದಾರೆ.





ಕಾಸರಗೋಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಏತಡ್ಕದಲ್ಲಿ 20ರಷ್ಟು ಮಂದಿ ಸಿಪಿಎಂ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಚುನಾವಣಾ ಪ್ರಚಾರ ಸಭೆಯ ಸಂದರ್ಭದಲ್ಲಿ ಅವರನ್ನು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಹಾಗೂ ಬಿಜೆಪಿ ಕಾಸರಗೋಡು ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಪಕ್ಷಕ್ಕೆ ಬರಮಾಡಿಕೊಂಡರು. ಅವರನ್ನು ಶಾಲು ಹೊದೆಸಿ ಅಭಿನಂದಿಸಲಾಯಿತು.

ಪರಿವಾರ ಬಂಟರ ಸಂಘದ ಮತ ಎನ್‌ಡಿಎ ಅಭ್ಯರ್ಥಿಗೆ

ಕಾಸರಗೋಡು: ಕಾಸರಗೋಡು ಜಿಲ್ಲೆಯ ಪರಿವಾರ ಬಂಟರಿಗೆ ಕಳೆದ ಕೆಲವು ವರ್ಷಗಳಿಂದ ಸರಿಯಾದ ಜಾತಿ ಸರ್ಟಿಫಿಕೇಟ್ ಲಭಿಸುತ್ತಿಲ್ಲ. ಪರಿವಾರ ಬಂಟರಿಗೆ ಸಂಬಂಧಿಸಿ ಜಿಲ್ಲೆಯಲ್ಲಿ ಮೂರು ಸಾವಿರ ಕುಟುಂಬಗಳಿವೆ. ಸರ್ಟಿಫಿಕೇಟ್ ಲಭಿಸದಿರುವುದರಿಂದ ನಮಗೆ ನಮ್ಮ ಮಕ್ಕಳನ್ನು ಶಾಲೆಗಳಿಗೆ ಸೇರ್ಪಡೆಗೊಳಿಸಲು ಕಷ್ಟ ಸಾಧ್ಯವಾಗುತ್ತಿದೆ. ಈ ಬಗ್ಗೆ ಕಳೆದ ಹಲವಾರು ವರ್ಷಗಳಿಂದ ಜಿಲ್ಲೆಯಲ್ಲಿ ಆದಲು ಬದಲಾಗಿ ಆಯ್ಕೆಯಾದ ಶಾಸಕರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದ್ದರೂ ಇದುವರೆಗೆ ಯಾವುದೇ ಪ್ರಯೋಜನ ದೊರೆಯಲಿಲ್ಲ. ಆದರಂತೆ ಇತ್ತೀಚೆಗೆ ನಾವು ಈ ಬಗ್ಗೆ ಭೇಟಿಯಾದ ಕಾಸರಗೋಡು ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಎಲ್. ಅಶ್ವಿನಿಯವರು ತಾವು ಗೆದ್ದರೆ ತಮ್ಮ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ತಮಗೆ ಅರ್ಹವಾದ ಸರ್ಟಿಫಿಕೇಟ್‌ಗಳನ್ನು ಒದಗಿಸಿ ಕೊಡುವುದಾಗಿ ಭರವಸೆ ನೀಡಿದ್ದಾರೆ. ಆದ್ದರಿಂದ ಜಿಲ್ಲೆಯ ಪರಿವಾರ ಬಂಟ ಸಂಘದ ಸದಸ್ಯರು ಈ ಬಾರಿ ಎಂ.ಎಲ್.ಅಶ್ವಿನಿಯವರಿಗೆ ಮತ ನೀಡಲು ನಿರ್ಧರಿಸಿದ್ದಾರೆಂದು ಸಂಘದ ಪದಾಧಿಕಾರಿಗಳು ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

2014ರ ತನಕ ಯಾವುದೇ ತೊಂದರೆಯಿಲ್ಲದೆ ನಮಗೆ ಪರಿವಾರ ಬಂಟರ ಹೆಸರಲ್ಲಿ ಜಾತಿ ಸರ್ಟಿಫಿಕೇಟ್ ಲಭಿಸುತ್ತಿತ್ತು. ಆದರೆ ಆ ಬಳಿಕ ನಾವು ನಮ್ಮ ಮಕ್ಕಳನ್ನು ಶಾಲೆಗಳಿಗೆ ಸೇರ್ಪಡೆಗೊಳಿಸಲು ಗ್ರಾಮ ಕಚೇರಿಗೆ ತೆರಳಿದಾಗ ಅರ್ಹ ಸರ್ಟಿಫಿಕೇಟ್ ಲಭಿಸುತ್ತಿಲ್ಲ. 2019ರಲ್ಲಿ ನಾವು ಈ ಬಗ್ಗೆ ಸರಕಾರಕ್ಕೆ ಮನವಿ ನೀಡಿದ್ದೆವು. 2022ರಲ್ಲಿ ಇದಕ್ಕೆ ಸಂಬಂಧಿಸಿ ತಿರುವನಂತಪುರದಲ್ಲಿ ಅದಾಲತ್ ಕೂಡಾ ನಡೆದಿದೆ. ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾವು ಅದಾಲತ್‌ನಲ್ಲಿ ನೀಡಿದ್ದರೂ ಇದುವರೆಗೆ ಯಾವುದೇ ಪರಿಹಾರ ಉಂಟಾಗಿಲ್ಲ. ಅಲ್ಲದೆ ಜಿಲ್ಲೆಯ ಶಾಸಕರನ್ನು ನೇರವಾಗಿ ಕಂಡು ಮನವಿಯನ್ನು ನೀಡಿದ್ದೇವೆ. ಆದರೆ ಇದುವರೆಗೆ ಯಾವುದೇ ಪರಿಹಾರ ಲಭಿಸಿಲ್ಲ. ಆದ್ದರಿಂದ ಈ ಬಾರಿ ಎಂ.ಎಲ್.ಅಶ್ವಿನಿಯವರಿಗೆ ಮತ ನೀಡಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶರತ್ ಅಮ್ಮೆ, ಎಂ.ಪುರುಷೋತ್ತಮ ನಾಯ್ಕ್, ಕೆ.ಸುರೇಂದ್ರ ನಾಯ್ಕ್, ಡಾ.ಜಯಪ್ರಕಾಶ್ ನಾಯ್ಕ್ ಉಪಸ್ಥಿತರಿದ್ದರು.

ಕೆ.ಸುರೇಂದ್ರನ್ ಪರ ಪೆರ್ಲದಲ್ಲಿ ಅದ್ದೂರಿಯ ರೋಡ್ ಶೋ | 'ಸಿಂಗಂ' ಅಣ್ಣಾಮಲೈ ಸಾಥ್

ಅಭಿವೃದ್ಧಿಯೇ ಬಿಜೆಪಿಯ ಏಕೈಕ ಘೋಷಣೆ

ಪೆರ್ಲ: ವಿಧಾನಸಭಾ ಚುನಾವಣಾ ಬಹಿರಂಗ ಪ್ರಚಾರದ ಅಂತಿಮ ದಿನವಾದ ಮಂಗಳವಾರ ಪೆರ್ಲ ಪೇಟೆಯಲ್ಲಿ ನಡೆದ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಮತ್ತು ಬಿಜೆಪಿ ಮುಖಂಡ ಕೆ.ಅಣ್ಣಾಮಲೈ ಅವರ ರೋಡ್ ಶೋ ಕಾರ್ಯಕ್ರಮವು ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಮೂಡಿಸಿತು.

ವಾದ್ಯಘೋಷಗಳು ಮತ್ತು ಮುತ್ತುಕೊಡೆಗಳೊಂದಿಗೆ ನೂರಾರು ಮಂದಿ ಕಾರ್ಯಕರ್ತರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಬೆಳಗೆ ಪೆರ್ಲ ಚೆಕ್‌ಪೋಸ್ಟ್‌ನಿಂದ ಆರಂಭವಾದ ರೋಡ್ ಶೋ ಮಧ್ಯಾಹ್ನ ಪೆರ್ಲ ಪೇಟೆಯಲ್ಲಿ ಮುಕ್ತಾಯಗೊಂಡಿತು. ಅಸಂಖ್ಯಾತ ಮಂದಿ ಕಾರ್ಯಕರ್ತರು ಹಾಗೂ ಪದಾಧಿಕಾರಿಗಳು ರೋಡ್ ಶೋ ಕಾರ್ಯಕ್ರಮದ ಸಂಪೂರ್ಣ ಯಶಸ್ವಿಗೆ ಸಹಕರಿಸಿದರು.

ಅಭಿವೃದ್ಧಿಯೇ ಬಿಜೆಪಿಯ ಏಕೈಕ ಘೋಷಣೆ: ಕೆ.ಅಣ್ಣಾಮಲೈ

ರೋಡ್ ಶೋ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬಿಜೆಪಿ ಮುಂದಾಳು ಕೆ.ಅಣ್ಣಾಮಲೈ ಮಾತನಾಡಿ, ಅಭಿವೃದ್ಧಿಯೇ ಬಿಜೆಪಿಯ ಏಕೈಕಘೋಷಣೆಎಂದರು. ಕೆ.ಸುರೇಂದ್ರನ್ ಅವರು ಕೇರಳ ವಿಧಾನಸಭೆಯಲ್ಲಿ ಇಲ್ಲದಿದ್ದರೆ ರಾಜ್ಯಕ್ಕೆ ಬಹುದೊಡ್ಡ ನಷ್ಟವಾಗಲಿದೆ. ಮಂಜೇಶ್ವರದ ಸಮಗ್ರ ಅಭಿವೃದ್ಧಿ ಕೆ.ಸುರೇಂದ್ರನ್ ಅವರಿಂದ ಮಾತ್ರ ಸಾಧ್ಯ ಎಂದರು.



ಪ್ರಗತಿಗಾಗಿ ನನ್ನ ಸ್ಪರ್ಧೆ: ಕೆ.ಸುರೇಂದ್ರನ್

ಮಂಜೇಶ್ವರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಮಾತನಾಡಿ, ನಾನು ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದು ಮಂಜೇಶ್ವರದಲ್ಲಿ ಗೆಲುವು ಸಾಧಿಸಲೆಂದೇ. ಗೆದ್ದ ನಂತರ ಕ್ಷೇತ್ರದ ಸರ್ವತೋಮುಖ ಪ್ರಗತಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು. ಮಂಜೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ಗ್ರಾಮ ಪಂಚಾಯತ್‌ಗಳ ಸಮಗ್ರ ಅಭಿವೃದ್ಧಿ ನನ್ನ ಧ್ಯೇಯವಾಗಿದೆ ಎಂದು ನುಡಿದರು.

ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರ ಚುನಾವಣಾ ಪ್ರಚಾರಾರ್ಥ

ಆಕರ್ಷಕ ಡಂಗುರ ಮೆರವಣಿಗೆ-ಬೈಕ್ ರ‍್ಯಾಲಿ

ಕಾಸರಗೋಡು: ವಿಧಾನಸಭಾ ಚುನಾವಣೆಯ ಬಹಿರಂಗ ಪ್ರಚಾರದ ಕೊನೆಯ ದಿನವಾದ ಮಂಗಳವಾರ ಸಂಜೆ ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಅವರ ಚುನಾವಣಾ ಪ್ರಚಾರಾರ್ಥ ತಾಳಿಪಡ್ಪುವಿನಿಂದ ಹೊರಟ ಬೃಹತ್ ಮತ್ತು ಆಕರ್ಷಕ ಡಂಗುರ ಮೆರವಣಿಗೆ ಮತ್ತು ಬೈಕ್ ರ‍್ಯಾಲಿಯು ಕರಂದಕ್ಕಾಡು ಜಂಕ್ಷನ್‌ನಲ್ಲಿ ಅದ್ದೂರಿಯಾಗಿ ಸಮಾಪ್ತಿಗೊಂಡಿತು.

ಬೈಕ್ ರ‍್ಯಾಲಿಯಲ್ಲಿ ಹಿರಿಯ ನಾಗರಿಕರು, ಯುವಕರು, ಯುವತಿಯರು ಸಹಿತ ಅಸಂಖ್ಯಾತ ಮಂದಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಮಾತ್ರವಲ್ಲದೆ ಈ ಬಾರಿಯ ಚುನಾವಣೆಯಲ್ಲಿ ಕಾಸರಗೋಡಿನಿಂದ ಎನ್‌ಡಿಎ ಅಭ್ಯರ್ಥಿ ಜಯ ಗಳಿಸಲೇ ಬೇಕು ಎಂಬ ಘೋಷಣೆಗಳನ್ನು ಮೊಳಗಿಸಿದರು.

ಈ ಆಕರ್ಷಕ ಮೆರವಣಿಗೆಯಲ್ಲಿ ಎನ್‌ಡಿಎ ಕಾಸರಗೋಡು ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಎಲ್.ಅಶ್ವಿನಿ, ಬೆಳ್ತಂಗಡಿ ಶಾಸಕ ಹರೀಶ್ ಪೂಂಜ, ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ, ಪನ್ವೇಲ್ ಶಾಸಕ ಪ್ರಶಾಂತ್ ಠಾಕೂರ್, ಪನ್ವೇಲ್ ಕಾರ್ಪೋರೇಶನ್ ಕಾರ್ಪರೇಟರ್ ಸಂತೋಷ್ ಶೆಟ್ಟಿ, ಚಲನಚಿತ್ರ ಮತ್ತು ಸೀರಿಯಲ್ ನಟಿ ಲಕ್ಷ್ಮಿಪ್ರಿಯಾ, ಜಿಲ್ಲಾ ಪಂಚಾಯತ್ ಸದಸ್ಯ ರಾಮಪ್ಪ ಮಂಜೇಶ್ವರ, ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಡಿ.ಶಂಕರ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್. ಸುನೀಲ್, ಕಾಸರಗೋಡು ಮಂಡಲಾಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು, ಬದಿಯಡ್ಕ ಮಂಡಲಾಧ್ಯಕ್ಷ ಗೋಪಾಲಕೃಷ್ಣ ಮುಂಡೋಳುಮೂಲೆ ಮತ್ತಿತರರಿದ್ದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಬಿರುಸಿನ ಚುನಾವಣಾ ಪ್ರಚಾರ

ಉಪ್ಪಳ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್‌ರವರ ಚುನಾವಣಾ ಪ್ರಚಾರದ ಹಿನ್ನೆಲೆಯಲ್ಲಿ ಸುಳ್ಯ ಶಾಸಕಿ ಭಾಗೀರಥಿ ಮುರಳ್ಯ ಅವರು ಸೋಮವಾರ ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿಯ ವಿವಿಧೆಡೆ ಹಮ್ಮಿಕೊಳ್ಳಲಾದ ಕುಟುಂಬ ಸಭೆಯಲ್ಲಿ ಭಾಗವಹಿಸಿ ಮತ ಯಾಚನೆ ನಡೆಸಿದರು.

ಸಂಜೆ ಪುಳಿಕುತ್ತಿ ಐಲ ಬ್ರಹ್ಮಶ್ರೀ ಮೊಗೇರ ದೈವಸ್ಥಾನ, ಪ್ರತಾಪನಗರ ಸಹಿತ ವಿವಿಧೆಡೆ ಸಭೆಗಳಲ್ಲಿ ಪಾಲ್ಗೊಂಡಿದ್ದರು. ಕುಟುಂಬ ಸಭೆಗಳಲ್ಲಿ ಭಾಗವಹಿಸಿ ಮಾತನಾಡಿದ ಭಾಗೀರಥಿ ಮುರಳ್ಯ ಅವರು ಈ ಬಾರಿಯ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಬದಲಾವಣೆ ಕಂಡುಬರುತ್ತಿದೆ ಎಂದರು. ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಜಯ ಗಳಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ತಿಳಿಸಿದರು.

ಶಾಸಕಿಯ ಜೊತೆ ಬಿಜೆಪಿ ಮುಖಂಡರಾದ ಜಯರಾಮ ರೈ ಜಾಲ್ಸೂರು, ಶಂಕರ ಸುಳ್ಯ, ಮಾಧವ ಜಾಲ್ಸೂರು ಮೊದಲಾದವರಿದ್ದರು.



ಕಾಸರಗೋಡು ಕನ್ನಡ ಪತ್ರಕರ್ತರಿಂದ ಎನ್‌ಡಿಎ ಅಭ್ಯರ್ಥಿಗೆ ಪೂರ್ಣ ಬೆಂಬಲ

ಕಾಸರಗೋಡು: ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಕಾಸರಗೋಡು ವಿಧಾನಸಭಾ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸುವ ಎಂ.ಎಲ್.ಅಶ್ವಿನಿ ಅವರಿಗೆ ಕಾಸರಗೋಡು ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ಪೂರ್ಣ ಬೆಂಬಲ ಘೋಷಿಸಿದೆ.

ಈ ಬಗ್ಗೆ ಬದಿಯಡ್ಕದ ಮನುಕುಲ ಅಪಾರ್ಟ್‌ಮೆಂಟ್‌ನ ಸಭಾಂಗಣದಲ್ಲಿ ನಡೆದ ಅಭ್ಯರ್ಥಿಯೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಂ.ಎಲ್.ಅಶ್ವಿನಿ ಮಾತನಾಡಿ, ಶಾಸಕಿಯಾಗಿ ಆಯ್ಕೆಯಾದರೆ ಜಿಲ್ಲೆಯ ಭಾಷಾ ಅಲ್ಪಸಂಖ್ಯಾತರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದರು. ಅಲ್ಲದೇ ಕನ್ನಡಕ್ಕಾಗಿ ಸದಾ ದುಡಿಯುವ ಕಾಸರಗೋಡಿನ ಕನ್ನಡ ಪತ್ರಕರ್ತರ ಕ್ಷೇಮಕ್ಕಾಗಿ ಸಮಗ್ರ ಯೋಜನೆಗಳನ್ನು ರೂಪಿಸುವುದಾಗಿ ಎಂ.ಎಲ್.ಅಶ್ವಿನಿ ಹೇಳಿದರು.

ಈ ಸಂದರ್ಭದಲ್ಲಿ ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಗಂಗಾಧರ್ ಅವರು ಅಭ್ಯರ್ಥಿಯನ್ನು ಶಾಲು ಹೊದೆಸಿ ಗೌರವಿಸಿದರು. ಪತ್ರಕರ್ತರ ಸಂಘದ ಸದಸ್ಯರು ಭಾಗವಹಿಸಿದ್ದರು.



ಆರ್ತಿವೊಡಲು ದೇವಳ ಬ್ರಹ್ಮಕಲಶ | ಡಾ. ಧರ್ಮಪಾಲನಾಥ ಶ್ರೀ ಆಶೀರ್ವಚನ

ಕ್ಷೇತ್ರದ ಅಭಿವೃದ್ಧಿಯಿಂದ ಊರಿನ ಅಭಿವೃದ್ಧಿ



ಮಂಗಳೂರು: ಒಂದು ಕ್ಷೇತ್ರ ಅಭಿವೃದ್ಧಿಯಾಗುತ್ತಿದೆ ಎಂದರೆ ಆ ಊರು ಅಭಿವೃದ್ಧಿ ಆಗುತ್ತಿದೆ ಎಂದರ್ಥ ಎಂದು ಶ್ರೀ ಆದಿಚುಂಚನಗಿರಿ ಕಾವೂರು ಶಾಖಾಮಠದ ಶ್ರೀ ಧರ್ಮಪಾಲನಾಥ ಸ್ವಾಮೀಜಿ ಹೇಳಿದರು.

ಇಲ್ಲಿನ ಕುಂಜತ್ತಬೈಲ್ ಕೊಂಗ್ರಿಬೈಲ್ ಆರ್ತಿವೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯುತ್ತಿರುವ ಅಷ್ಟಬಂಧ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, ವಿಷ್ಣುಮೂರ್ತಿ ಕ್ಷೇತ್ರ ಪ್ರಕೃತಿ ರಮಣೀಯ ಜಾಗದಲ್ಲಿದೆ. ದೇವರನ್ನು ಏಕಾಗ್ರಚಿತ್ತದಿಂದ ನೋಡಿದರೆ ಮಾತ್ರ ದರ್ಶನವಾಗುತ್ತದೆ. ಬ್ರಹ್ಮಕಳಶ ಎಂದರೆ ಕ್ಷೀಣವಾಗುತ್ತಿರುವ ದೈವೀಶಕ್ತಿಯನ್ನು ಮರಳಿ ಪಡೆಯುವ ವಿಧಾನ ಎಂದರು.

ಮನಸ್ಸು ಏಕಾಗ್ರತೆಯಿಂದ ಇದ್ದರೆ ಮಾತ್ರ ದೇವರ ದರ್ಶನ ಸಾಧ್ಯ. ದೇವರ ದರ್ಶನ ಮಾಡುವಾಗ ಕಾಯ ಶುದ್ಧಿ, ಮನ ಶುದ್ಧಿ ಇರಬೇಕು. ಅವರವರ ಭಾವಕ್ಕೆ ತಕ್ಕಂತೆ ದೇವರು ಫಲ ಕೊಡುತ್ತಾನೆ ಎಂದು ಸ್ವಾಮೀಜಿ ಹೇಳಿದರು.

ಕ್ಷೇತ್ರದ ಆಡಳಿತ ಮೊಕ್ತೇಸರ ಡಾ.ನರೇಶ್ ರೈ ದೆಪ್ಪುಣಿಗುತ್ತು ಅಧ್ಯಕ್ಷತೆ ವಹಿಸಿದ್ದರು.

ಕದ್ರಿ ಮಂಜುನಾಥೇಶ್ವರ ದೇವಸ್ಥಾನದ ಅರ್ಚಕರಾದ ಕೃಷ್ಣ ಅಡಿಗ ಕದ್ರಿ, ಅಸ್ತ ಗ್ರೂಪ್ ಸಿಇಒ ಲಂಚುಲಾಲ್ ಕೆ. ಎಸ್, ಸಾರ್ವಜನಿಕ ಮೊಸರು ಕುಡಿಕೆ ಉತ್ಸವ ಸಮಿತಿ ಕಾವೂರ್ ಇದರ ಅಧ್ಯಕ್ಷ ಕಿಶೋರ್ ಸುವರ್ಣ, ಕಾವೂರ್ ವ್ಯವಸಾಯ ಸೇವಾ ಸಹಕಾರ ಸಂಘದ ಉಪಾಧ್ಯಕ್ಷ ಧನಂಜಯ ಬಂಗೇರ, ವಿಷ್ಣುಮೂರ್ತಿ ದೇವಸ್ಥಾನದ ಆನುವಂಶಿಕ ಮೊಕ್ತೇಸರ ಕೆ. ನಾರಾಯಣ ಮಯ್ಯ, ಪ್ರಮುಖರಾದ ರಮಾನಂದ ಭಂಡಾರಿ, ಪ್ರತೀಕ್ ಪೂಜಾರಿ, ರಾಜೇಶ್ ಶೆಟ್ಟಿ ಮಡಕಣ ಗುತ್ತು, ಹರ್ಷಿತ ಕೇಟರಿಂಗ್ ಮಾಲೀಕ ಹರೀಶ್ ಶೆಟ್ಟಿ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಿಠಲ ಆಳ್ವ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ದೀಪಕ್ ಪೂಜಾರಿ, ಮಾಜಿ ಮೇಯರ್ ಕವಿತಾ ಸನಿಲ್ ಮೊದಲಾದವರು ಉಪಸ್ಥಿತರಿದ್ದರು.

ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಶರತ್ ಕುಮಾರ್ ಸ್ವಾಗತಿಸಿದರು. ಕ್ಷೇತ್ರದ ಮೊಕ್ತೇಸರ ಜಗದೀಶ್ ಶೆಟ್ಟಿ ಮುರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಹಿರಿಯಡ್ಕದಲ್ಲಿ ಶ್ಯಾಮಿಲಿ ಸ್ಪ್ರಿಂಗ್ಸ್ ಲಕ್ಸುರಿ ರೆಸಾರ್ಟ್ ಲೋಕಾರ್ಪಣೆ | ಜಿ. ಶಂಕರ್ ಘೋಷಣೆ

ಆದಾಯದ ಒಂದಂಶ ಸಮಾಜಕ್ಕೆ ಅರ್ಪಣೆ

ಉಡುಪಿ: ಶ್ಯಾಮಿಲಿ ಸ್ಪ್ರಿಂಗ್ಸ್‌ನಿಂದ ಬರುವ ಆದಾಯದ ಒಂದು ಅಂಶವನ್ನು ಸಮಾಜಮುಖಿ ಕೆಲಸಕ್ಕೆ ಬಳಸಿಕೊಳ್ಳಲಾಗುವುದು. ಈ ಭಾಗದ ಅರ್ಹರ ಆರೋಗ್ಯ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಶ್ಯಾಮಿಲಿ ಸಮೂಹ ಸಂಸ್ಥೆಗಳ ಆಡಳಿತ ನಿರ್ದೇಶಕ ಜಿ. ಶಂಕರ್ ತಿಳಿಸಿದರು.

ಹಿರಿಯಡ್ಕದಲ್ಲಿ ಸುಮಾರು 5 ಎಕರೆ ವಿಶಾಲ ಪ್ರದೇಶದಲ್ಲಿ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ನಿರ್ಮಾಣಗೊಂಡಿರುವ ಉಡುಪಿ ಶ್ಯಾಮಿಲಿ ಸಮೂಹ ಸಂಸ್ಥೆಗಳ ಸಹಸಂಸ್ಥೆ ಶ್ಯಾಮಿಲಿ ಸ್ಪ್ರಿಂಗ್ಸ್ ಲಕ್ಸುರಿ ರೆಸಾರ್ಟ್ ಮಂಗಳವಾರ ಲೋಕಾರ್ಪಣೆಗೊಳಿಸಿದ ಬಳಿಕ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

ಸ್ವಿಮ್ಮಿಂಗ್ ಪೂಲ್, ರಿಕ್ರಿಯೇಶನ್ ಕ್ಲಬ್, ಜಿಮ್ ಮತ್ತು ಮಕ್ಕಳ ಆಟದ ಮೈದಾನ ಇದೆ. ಕಾರ್ಪೋರೇಟ್ ಸಂಸ್ಥೆಯ ಸಭೆ, ಸಮಾರಂಭಗಳಿಗೆ ಅನುಕೂಲ ವಾಗುವಂತಹ ಬೋರ್ಡ್ ರೂಮ್/ಕಾನರೆನ್ಸ್ ಹಾಲ್‌ಗಳಿವೆ. ಈಗಾಗಲೇ ಬುಕ್ಕಿಂಗ್ ಆರಂಭ ಗೊಂಡಿದ್ದು, ಮೊ–9448930820 ಸಂಪರ್ಕಿಸಬಹುದು. ಆನ್‌ಲೈನ್ ಬುಕ್ಕಿಂಗ್‌ಗೂ ಅವಕಾಶ ಕಲ್ಪಿಸಲಾಗಿದೆ ಎಂದು ಡಾ.ಜಿ. ಶಂಕರ್ ತಿಳಿಸಿದರು.

ಶ್ಯಾಮಿಲಿ ಸ್ಪ್ರಿಂಗ್ಸ್ ಲಕ್ಸುರಿ ರೆಸಾರ್ಟ್‌ನ ಶಾಸ್ವಿಕ ಕನ್ವೆನ್ಷನ್ ಸೆಂಟರ್, ಶನಾಯ ಗ್ರಾಂಡ್ ಡೈನಿಂಗ್ ಹಾಲ್, ಶ್ಯಾಮಿಲಿ ಗ್ರೀನ್ಸ್ ಓಪನ್ ಗಾರ್ಡನ್, ಸ್ಪ್ರಿಂಗ್ಸ್ ಪ್ರೀಮಿಯಂ ರೂಮ್‌ಗಳನ್ನು ಒಳಗೊಂಡಿದೆ.

ಸುಸಜ್ಜಿತ ಹಾಗೂ ಸಂಪೂರ್ಣ ಹವಾನಿಯಂತ್ರಿತ ಶ್ಯಾಮಿಲಿ ಸ್ಪ್ರಿಂಗ್ಸ್ ಲಕ್ಸುರಿ ರೆಸಾರ್ಟ್ ಸಾಕಷ್ಟು ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಕನ್ವೆನ್ಷನ್ ಸೆಂಟರ್‌ನ್ನು ಜನ ಸಾಮಾನ್ಯರಿಗೂ ಕೈಗೆಟುಕುವ ದರದಲ್ಲಿ ಲಭ್ಯವಾಗಬೇಕೆನ್ನುವ ನಿಟ್ಟಿನಲ್ಲಿ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಮದುವೆ, ಸೀಮಂತ, ಸಭೆ, ಸಮಾರಂಭ, ಕಾರ್ಪೋರೇಟ್ ವಲಯದ ಬೋರ್ಡ್ ರೂಮ್, ಪಾರ್ಟಿಗೂ ಅನುಕೂಲ ವಾಗುವ ನಿಟ್ಟಿನಲ್ಲಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿದೆ. ವಿಶಾಲ ಭೂ ಪ್ರದೇಶದಲ್ಲಿ ಪಾರ್ಕಿಂಗ್, ಮಕ್ಕಳ ಆಟದ ಮೈದಾನ, ತೆರೆದ ಸಭಾಂಗಣಗಳನ್ನು ಹೊಂದಿದೆ ಎಂದರು.

ಸಂಪೂರ್ಣ ಹವಾನಿಯಂತ್ರಿತ 1000 ಮಂದಿ ಆಸೀನರಾಗುವುದಕ್ಕೆ ಬೇಕಾದ ವ್ಯವಸ್ಥೆವುಳ್ಳ ಶಾಸ್ವಿಕ ಕನ್ವೆನ್ಷನ್ ಸೆಂಟರ್, ಊಟಕ್ಕೆ ಪ್ರತ್ಯೇಕವಾಗಿರುವ ಶನಾಯ ಗ್ರಾಂಡ್ ಹಾಲ್‌ಗಳಿವೆ. ವೆಜ್ ಹಾಗೂ ನಾನ್‌ವೆಜ್‌ಗೆ ಪ್ರತ್ಯೇಕ ಅಡುಗೆ ಕೋಣೆಯ ವ್ಯವಸ್ಥೆ ಇದೆ. ಸಭಾಂಗಣದ ಸನಿಹದಲ್ಲೇ ಅನುಗ್ರಹದಾತ ಶ್ರೀಪ್ರಸನ್ನ ಗಣಪತಿ ಮಂದಿರವನ್ನು ನಿರ್ಮಿಸಲಾಗಿದೆ. ಅದೇ ರೀತಿ ಆಕರ್ಷಣೀಯವಾಗಿರುವ ಹಚ್ಚಹಸುರಿನ ಶ್ಯಾಮಿಲಿ ಗ್ರೀನ್ಸ್ ಓಪನ್ ಗಾರ್ಡನ್ ಕೂಡ ಇದೆ ಎಂದರು. ಉದ್ಘಾಟನೆ ವೇಳೆ ಶಾಸಕ ಯಶಪಾಲ್ ಎ.ಸುವರ್ಣ, ಶಾಲಿನಿ ಜಿ. ಶಂಕರ್, ಶ್ಯಾಮಿಲಿ ನವೀನ್, ನವೀನ್, ಎಸ್.ಕೆ.ಆನಂದ್, ಶಿವ ಎಸ್. ಕರ್ಕೇರ, ಜಗದೀಶ್ ಕಾಂಚನ್, ಗುರುಪ್ರಸಾದ್, ರಾಘವೇಂದ್ರ ಉಪಾಧ್ಯಾಯ, ನಿತಿನ್, ವಿಕಾಸ್, ಶನಾಯ, ಶಾಸ್ವಿಕ, ಜ್ಯೋತಿಷ್ಯ ವಿದ್ವಾನ್ ಕಬ್ಯಾಡಿ ಜಯರಾಮ ಆಚಾರ್ಯ, ದ.ಕ. ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಜಯ ಸಿ. ಕೋಟ್ಯಾನ್ ಉಪಸ್ಥಿತರಿದ್ದರು.



ಮೊದಲ 25 ಜೋಡಿಗೆ ಉಡುಗೊರೆ: ಜಿ.ಶಂಕರ್

ಶ್ಯಾಮಿಲಿ ಸ್ಪ್ರಿಂಗ್ಸ್‌ನಲ್ಲಿ ಮದುವೆಗೆ ಈಗಾಗಲೇ ಬುಕ್ಕಿಂಗ್ ಆರಂಭ ಗೊಂಡಿದ್ದು, ಉದ್ಘಾಟನಾ ಸಮಾರಂಭದ ಪ್ರಯುಕ್ತ ನಮ್ಮಲ್ಲಿ ನಡೆಯುವ ಮೊದಲ 25 ಜೋಡಿಗಳಿಗೆ ವಿಶೇಷ ಗಿಫ್ಟ್ ನೀಡಲಾಗುವುದೆಂದು ಜಿ.ಶಂಕರ್ ತಿಳಿಸಿದರು.

ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ

ಶ್ಯಾಮಿಲಿ ಸ್ಪ್ರಿಂಗ್ಸ್‌ನಲ್ಲಿ 28 ಎಸಿ ಡಿಲಕ್ಸ್ ರೂಮ್, 2 ಪ್ರತ್ಯೇಕ ವಿಲ್ಲಾಗಳನ್ನು ನಿರ್ಮಿಸಲಾಗಿದೆ. 300ಕ್ಕೂ ಅಧಿಕ ಕಾರುಗಳು/ದ್ವಿಚಕ್ರ ವಾಹನಗಳಿಗೆ ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ ಇದೆ. ಸ್ವಿಮ್ಮಿಂಗ್ ಪೂಲ್, ರಿಕ್ರಿಯೇಶನ್ ಕ್ಲಬ್, ಜಿಮ್ ಮತ್ತು ಮಕ್ಕಳ ಆಟದ ಮೈದಾನ ಇದೆ. ಕಾರ್ಪೋರೇಟ್ ಸಂಸ್ಥೆಯ ಸಭೆ, ಸಮಾರಂಭಗಳಿಗೆ ಅನುಕೂಲವಾಗುವಂತಹ ರೂಮ್/ಕಾನ್ಫರೆನ್ಸ್ ಹಾಲ್‌ಗಳಿವೆ. ಈಗಾಗಲೇ ಬುಕ್ಕಿಂಗ್ ಆರಂಭ ಗೊಂಡಿದ್ದು ಮೊ–9448930820 ಸಂಪರ್ಕಿಸಬಹುದು. ಆನ್‌ಲೈನ್ ಬುಕ್ಕಿಂಗ್‌ಗೂ ಅವಕಾಶ ಕಲ್ಪಿಸಲಾಗಿದೆ ಎಂದು ಡಾ.ಜಿ. ಶಂಕರ್ ತಿಳಿಸಿದರು.

ಕಿರುಸುದ್ದಿ



ಜೈಲಿಗೆ ಡೆವಿಡ್ ವಾರ್ನರ್!

ಸಿಡ್ನಿ(ಆಸ್ಟ್ರೇಲಿಯಾ): ಆಸ್ಟ್ರೇಲಿಯಾ ತಂಡದ ದಿಗ್ಗಜ ಆಟಗಾರ ಡೆವಿಡ್ ವಾರ್ನರ್ ಪಾನಮತ್ತ ಚಾಲನೆ ಮಾಡಿರುವ ಆರೋಪದಲ್ಲಿ ಜೈಲು ಪಾಲಾಗಿದ್ದಾರೆ. ಪಾಕಿಸ್ತಾನದಲ್ಲಿ ನಡೆಯುತ್ತಿರುವ ಪಿಎಸ್‌ಎಲ್‌ನಲ್ಲಿ ಕರಾಚಿ ತಂಡದ ಭಾಗವಾಗಿರುವ ವಾರ್ನರ್ ಆಸ್ಟ್ರೇಲಿಯಾದ ಸಿಡ್ನಿಯಲ್ಲೇ ಜೈಲು ಪಾಲಾಗಿದ್ದಾರೆ. ಮಾರೌಬ್ರಾದಲ್ಲಿ ತಮ್ಮ ವಾಹನದಲ್ಲಿ ಹೊರಟಿದ್ದ ವಾರ್ನರ್ ಅವರನ್ನು ಪೊಲೀಸರು ಪರಿಶೀಲಿಸಿದ್ದಾರೆ. ಮಶೀನಿನಲ್ಲಿ ಅವರು ಮಧ್ಯಪಾನ ಸೇವನೆ ಮಾಡಿ ಚಾಲನೆ ಮಾಡುತ್ತಿರುವುದು ಗೊತ್ತಾಗಿದೆ. ಸ್ಥಳೀಯ ನ್ಯೂ ಸೌಥ್ ವೇಲ್ಸ್ ಪೊಲೀಸ್ ನಿಲ್ದಾಣಕ್ಕೆ ಅವರನ್ನು ಕೊಂಡೊಯ್ಯಲಾಗಿತ್ತು ಎಂದು ವರದಿಯಾಗಿದೆ. ಪಾನಮತ್ತ ಚಾಲನೆ ಮಾಡಿರುವ ಬಗ್ಗೆ ರಕ್ತ ತಪಾಸಣೆ ಮಾಡಿದಾಗ 0.104 ದಾಟಿದೆ. ಇದು ಆಸ್ಟ್ರೇಲಿಯಾ ಮಾನದಂಡದ ಬಹುತೇಕ ದ್ವಿಗುಣವಾಗಿದೆ. ಕೇಸು ದಾಖಲಿಸಿದ್ದಲ್ಲದೆ ಮುಂದಿನ ತಿಂಗಳು ನ್ಯಾಯಾಲಯಕ್ಕೆ ಹಾಜರಾಗಲು ಸೂಚಿಸಲಾಗಿದೆ.

ಕುಸ್ತಿ: ಭಾರತ ಮೂಲದ ಇಬ್ಬರಿಗೆ ಪದಕ

ಹೊಸದಿಲ್ಲಿ: ಕಿರ್ಗಿಸ್ತಾನ್‌ನ ಬಿಷ್ಕೆಕ್‌ನಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಗ್ರೀಕೋ ರೋಮನ್ ಕುಸ್ತಿಪಟುಗಳು ಎರಡು ಪದಕಗಳನ್ನು ಗೆದ್ದು ಮತ್ತೊಂದು ಪದಕವನ್ನು ಖಚಿತಪಡಿಸಿದರು. ಲಲಿತ್ 55 ಕೆಜಿ ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಇಖ್ತಿಯೋರ್ ಬೊಟಿರೋವ್ ವಿರುದ್ಧ 0–9 ಅಂತರದಿಂದ ಸೋತು ಬೆಳ್ಳಿಗೆ ತೃಪ್ತಿಪಟ್ಟರೆ, ಅನುಭವಿ ಸುನಿಲ್ ಕುಮಾರ್ 87 ಕೆಜಿ ಕಂಚಿನ ಪದಕದ ಪಂದ್ಯದಲ್ಲಿ ಮತ್ತೊಬ್ಬ ಉಜ್ಬೇಕಿಸ್ತಾನದ ಮುಖಮ್ಮದ್ಕೋದಿರ್ ರಸುಲೋವ್ ಅವರನ್ನು 5–4 ಅಂತರದಿಂದ ಸೋಲಿಸಿ ಕಂಚು ಗೆದ್ದರು. ನಿತೇಶ್ 97 ಕೆಜಿ ಫೈನಲ್‌ಗೆ ಪ್ರವೇಶಿಸಿ ಭಾರತಕ್ಕೆ ಮತ್ತೊಂದು ಪದಕವನ್ನು ಖಚಿತಪಡಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಕಿರ್ಗಿಸ್ತಾನ್‌ನ ಮೆಲಿಸ್ ಐಟ್ಬೆಕೊವ್ ಅವರನ್ನು 8–0 ಅಂತರದಿಂದ ಮತ್ತು ಸೆಮಿಫೈನಲ್‌ನಲ್ಲಿ ಚೀನಾದ ಜೆಗಾಂಗ್ ವಾಂಗ್ ಅವರನ್ನು 7–2 ಅಂತರದಿಂದ ಸೋಲಿಸಿದ ಭಾರತೀಯ ಕುಸ್ತಿಪಟು ಚಿನ್ನದ ಪದಕ ಸ್ಪರ್ಧೆಯಲ್ಲಿ ಇರಾನ್‌ನ ಅಬ್ದುಲ್ಲಾ ಸರವಿ ಅವರನ್ನು ಎದುರಿಸಲಿದ್ದಾರೆ. ಅಮಾನ್ (77 ಕೆಜಿ) ಕಂಚಿನ ಪದಕಕ್ಕಾಗಿ ನಡೆದ ಮತ್ತೊಂದು ಹೋರಾಟದಲ್ಲಿ ಕೊರಿಯಾದ ಯೆಯೊಂಗ್‌ಹುನ್ ನೋಹ್ ವಿರುದ್ಧ 14–15 ಅಂತರದಿಂದ ಸೋತರು. ಪ್ರಿನ್ಸ್ (82 ಕೆಜಿ) ಕಂಚಿನ ಪದಕದ ಪಂದ್ಯವನ್ನು ತಲುಪಿ ತನ್ನ ಭರವಸೆಯನ್ನು ಜೀವಂತವಾಗಿರಿಸಿಕೊಂಡರು.

ಮುಂದಿನ ವಾರ ಅರ್ಜೆಂಟಿನಾ ಪ್ರವಾಸ

ಹೊಸದಿಲ್ಲಿ: ಭಾರತೀಯ ಮಹಿಳಾ ಹಾಕಿ ತಂಡವು ಮುಂದಿನ ವಾರ ನಾಲ್ಕು ಪಂದ್ಯಗಳಿಗಾಗಿ ಅರ್ಜೆಂಟಿನಾಗೆ ಪ್ರವಾಸ ಮಾಡಲಿದೆ. ಬ್ಯೂನೋಸ್ ಐರಿಸ್‌ನ ಸೆನಾಡ್‌ನಲ್ಲಿ ಏಪ್ರಿಲ್ 13ರಿಂದ17ರ ವರೆಗೆ ನಾಲ್ಕು ಪಂದ್ಯಗಳು ನಡೆಯಲಿವೆ ಎಂದು ಸಂಸ್ಥೆ ತಿಳಿಸಿದೆ. ಕಳೆದ ಎಫ್‌ಐಎಚ್ ಪ್ರೋ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ 2–2ಡ್ರಾ ನಂತರ ಶೂಟೌಟ್‌ನಲ್ಲಿ ಮುಕ್ತಾಯಗೊಂಡ ನಂತರ ಮೊದಲ ಬಾರಿಗೆ ಉಭಯ ತಂಡಗಳು ಮುಖಾಮುಖಿಯಾಗಲಿದ್ದು, ಎಲ್ಲಾ ಪಂದ್ಯಗಳು ಬೆಳಗ್ಗೆ 11ಕ್ಕೆ ಶುರುವಾಗಲಿವೆ.

ವರ್ಷದಲ್ಲಿ ನಡೆಯಲಿರುವ ಎಫ್‌ಐಎಚ್ ವಿಶ್ವಕಪ್ ಪಂದ್ಯಾವಳಿಯ ತಯಾರಿಗಾಗಿ ಇದು ಪ್ರಮುಖ ಪಾತ್ರ ವಹಿಸಲಿದೆ. ಭಾರತ ಮಹಿಳಾ ತಂಡವು ಏಷ್ಯನ್ ಗೇಮ್ಸ್ ನಲ್ಲೂ ಆಡಬೇಕಿರುವುದರಿಂದ ಇಲ್ಲಿ ನಡೆಯಲಿರುವ ಈ ಸರಣಿ ಅಭ್ಯಾಸದ ದೃಷ್ಟಿಯಿಂದ ಪ್ರಮುಖ ಪಾತ್ರ ವಹಿಸಲಿದೆ. ಈ ಬಗ್ಗೆ ಮಾತನಾಡಿರುವ ತಂಡದ ಮುಖ್ಯ ತರಬೇತುದಾರ ಸ್ಜೋರ್ಡ್ ಮರಿಜ್ನೆ ನಾವು 24 ಜನರ ತಂಡದೊಂದಿಗೆ ಅರ್ಜೆಂಟಿನಾಗೆ ಹೋಗಲಿದ್ದೇವೆ. ವಿವಿಧ ಆಟಗಾರರಿಗೆ ಅವಕಾಶ ಸಿಗಲಿರುವುದು ವಿಶೇಷ. ದೊಡ್ಡ ಪಂದ್ಯಾವಳಿಗೂ ಮುನ್ನ ಅಂತಾರಾಷ್ಟ್ರೀಯ ತಂಡಗಳೊಂದಿಗೆ ಪಂದ್ಯಗಳನ್ನಾಡುವುದು ತಂಡಕ್ಕೆ ಲಾಭ ನೀಡುತ್ತದೆ. ಅರ್ಜೆಂಟಿನಾ ನಮ್ಮ ತಂಡಕ್ಕೆ ಉತ್ತಮ ಅಭ್ಯಾಸದ ಜೊತೆಗೆ ನಮ್ಮ ತಂಡಕ್ಕೆ ಸ್ಪರ್ಧಾತ್ಮಕ ವಾತಾವರಣ ನೀಡುತ್ತದೆ ಎಂದಿದ್ದಾರೆ.

- ಹಾಕಿ ಮಹಿಳಾ ತಂಡದ 3 ಪಂದ್ಯಗಳ ಸರಣಿ
- ವಿಶ್ವಕಪ್ ಅಭ್ಯಾಸ ಭಾಗವಾಗಿ ಪಂದ್ಯ
- 4 ಪಂದ್ಯಗಳ ಸರಣಿಗೆ ಪ್ರವಾಸ

ಬದಲಾದ ಆರ್‌ಸಿಬಿ ಬ್ಯಾಟಿಂಗ್ ಅಪ್ರೋಚ್!

▸ ಪೃಥ್ವಿರಾಜ್ ಕುಲಕರ್ಣಿ

ಅದೊಂದು ಕಾಲ. ಟಿ20ಯಲ್ಲಿ ದೊಡ್ಡ ಸ್ಕೋರ್ ಅಂದರೆ 180–190! ಮುಂದೊಂದು ದಿನ ಅಂಥದ್ದೇ ಸ್ಕೋರ್ ಸಾಮಾನ್ಯವಾಯಿತು. ಡಿಫೆಂಡ್ ಮಾಡಿಕೊಳ್ಳುವ ತಂಡಕ್ಕೆ 200 ದಾಟಿದಾಗಲೇ ವಿಶ್ವಾಸ ಹೆಚ್ಚು. ಆದರೆ ಇತ್ತೀಚಿನ ಕ್ರಿಕೆಟ್‌ನಲ್ಲಿ ಅದೂ ಕೂಡ ಕಡಿಮೆ ಸ್ಕೋರ್ ಎಂಬ ಲೆಕ್ಕಾಚಾರಗಳು ಹುಟ್ಟುತ್ತಿವೆ. ಅಂತಾರಾಷ್ಟ್ರೀಯ ಕ್ರಿಕೆಟ್ ಬಿಟ್ಟರೂ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ 200 ರನ್ ಸಾಕಾಗುವುದಿಲ್ಲ ಎಂಬ ಮಾತುಗಳು, ಲೆಕ್ಕಾಚಾರಗಳು ಮತ್ತು ಎಕ್ಸ್ ಪರ್ಟ್‌ಗಳ ಅಭಿಪ್ರಾಯ ನಮ್ಮ ಮುಂದಿವೆ. ಬದಲಾದ ಕ್ರಿಕೆಟ್‌ನ್ನು ಅಳವಡಿಸಿಕೊಳ್ಳುವ ತಂಡವೇ ಚಾಂಪಿಯನ್ ಎಂಬ ಮಾತು ಆರ್‌ಸಿಬಿ ತಂಡ ನೋಡಿದಾಗ ಸತ್ಯವೆನ್ನಿಸುತ್ತದೆ. ಆರ್‌ಸಿಬಿ ಈಗ ತನ್ನ ಬ್ಯಾಟಿಂಗ್ ನಡೆಯನ್ನೇ ಬದಲಾಯಿಸಿಕೊಂಡಿದೆ.

17 ಆವೃತ್ತಿಯವರೆಗೂ ರಾಯಲ್ ಚಾಲೆಂಜರ್ಸ್ ತಂಡದಲ್ಲಿ ದೊಡ್ಡ ದೊಡ್ಡ ಆಟಗಾರರು ಆಡಿದ್ದಾರೆ. ಆರ್‌ಸಿಬಿ ಮಾಡದ ದಾಖಲೆ ಇರಲಿಲ್ಲ. ಆದರೆ ಕಪ್ ಗೆಲ್ಲುವ ವಿಚಾರದಲ್ಲಿ ಆರ್‌ಸಿಬಿ ಹಿಂದಿತ್ತು. ಈಗ ಅದೂ ಬದಲಾಗಿದೆ. ಅದಕ್ಕೆ ಕಾರಣ ಹುಡುಕಿದಾಗ ಬೆಂಗಳೂರು ತಂಡದ ಅಪ್ರೋಚ್ ಮುನ್ನೆಲೆಗೆ ಬರುತ್ತದೆ. ಬೆಂಗಳೂರು ತಂಡ ಈಗ ಅತಿ ಹೆಚ್ಚು ಸ್ಕೋರ್ ಮಾಡಬಲ್ಲದು. ದೊಡ್ಡ ದೊಡ್ಡ ಸ್ಕೋರ್ ಪೇರಿಸಬಹುದು. ಅದಕ್ಕೆ ಮುಖ್ಯ ಕಾರಣವೇ ಆರ್‌ಸಿಬಿಯ ಅಪ್ರೋಚ್ ಅಂದರೆ ತಪ್ಪಾಗಲಿಕ್ಕಿಲ್ಲ.

2025ರ ಮೆಗಾ ಹರಾಜಿನಲ್ಲಿ ಆರ್‌ಸಿಬಿ ಸಮತೋಲಿತ ತಂಡವನ್ನು ಆಯ್ಕೆ ಮಾಡಿಕೊಂಡಿತು. ಮುಖ್ಯವಾಗಿ ದೊಡ್ಡ ದೊಡ್ಡ ಸ್ಟಾರ್ ಆಟಗಾರರ ಮೊರೆಗಿಂತಲೂ ಯುವಕರು, ಪ್ರಭಾವಿಶಾಲಿಗಳು ಮತ್ತು ಅಗ್ರೆಸ್ಸಿವ್ ಆಟಕ್ಕೆ ಒತ್ತು ನೀಡುವ ತಂಡವನ್ನು ಆಯ್ಕೆ ಮಾಡಿಕೊಂಡಿತ್ತಲ್ಲದೆ ತನ್ನ ಆಟದ ಶೈಲಿಯನ್ನೇ ಬದಲಾಯಿಸಿದೆ. ಇದು ಮೊದಲಿನ ರನ್ ದಾಹ, ಅಪ್ರೋಚ್ ಮತ್ತು ವೈಖರಿಯನ್ನು ಈಗಿನದಕ್ಕೆ ಹೋಲಿಸಿದಾಗ ಗೊತ್ತಾಗುತ್ತದೆ.

ಬದಲಾದ ಇರಾದೆ: ಆರ್‌ಸಿಬಿ ತಂಡದ ಎಲ್ಲಾ ಬ್ಯಾಟಿಗರು ಇರಾದೆ ಬದಲಾಯಿಸಿದ್ದಾರೆ. ಮೊದಲನೇ ವಿಕೆಟ್‌ನಿಂದ ಹಿಡಿದು ಕೆಳಕ್ರಮಾಂಕದ ಬ್ಯಾಟರ್‌ಗಳವರೆಗೂ ಯಾವುದೇ ಬ್ಯಾಟರ್ ಈಗ ಸೆಟ್ ಆಗುವ ಮುಲಾಜಿಗೆ ಬೀಳುವುದಿಲ್ಲ. ಸ್ಟ್ರೈಕ್‌ಗೆ ಬಂದವರೆಲ್ಲಾ ದಂಡಿಸಲು ಪ್ರಯತ್ನಿಸುತ್ತಾರೆ. ಇದು ಮೊದಲಿನ ಇರಾದೆಯನ್ನೇ ಬದಲಾಯಿಸಿದೆ. ರನ್‌ರೇಟ್ ವಿಚಾರ ನೋಡಿದಾಗ ಇದು ಬಯಲಾಗುತ್ತದೆ. ಮೊದಲಿನ ಪಂದ್ಯಗಳಲ್ಲಿ ಸಾಮಾನ್ಯ ರನ್‌ರೇಟ್ 8.5–9.5 ಆಗಿರುತ್ತಿತ್ತು. ಈಗ ಅದು 9.5–10.5ಗೆ ಬದಲಾಗಿದೆ.

ಸ್ಟ್ರೈಕ್‌ರೇಟ್‌ನಲ್ಲಿ ದೊಡ್ಡ ಬದಲಾವಣೆ: ಮುಖ್ಯವಾಗಿ ಆರ್‌ಸಿಬಿಯ ಎಲ್ಲಾ ಬ್ಯಾಟರ್‌ಗಳ ಸ್ಟ್ರೈಕ್‌ರೇಟ್ ಬದಲಾಗಿದೆ. ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ದೇವದತ್ತ ಪಡಿಕ್ಕಲ್ ಅವರ ಬ್ಯಾಟಿಂಗ್ ಶೈಲಿಯೇ ಬದಲಾಗಿದೆ. ಹಳೆಯದಕ್ಕೂ ಈಗಿನದಕ್ಕೂ ಸ್ಟ್ರೈಕ್‌ರೇಟ್ ವಿಚಾರದಲ್ಲಿ ಹೋಲಿಸಿದಾಗ ದೊಡ್ಡ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಮಧ್ಯಮ ಕ್ರಮಾಂಕದಲ್ಲಿ ಬ್ಯಾಟರ್‌ಗಳ ಸ್ಟ್ರೈಕ್‌ರೇಟ್ 130–135ರವರೆಗೆ ಇರುತ್ತಿತ್ತು. ಅದು ಈಗ 145–155ಗೆ ಬದಲಾಗಿದೆ.

ಡೆತ್ ಓವರ್‌ಗಳಲ್ಲಿ ರನ್ ಹೊಳೆ: ಡೆತ್ ಓವರ್‌ಗಳಲ್ಲಿ ರನ್ ಹೊಳೆ ಹರಿಯುತ್ತಿದೆ. ಚೆನ್ನೈ ವಿರುದ್ಧದ ಪಂದ್ಯದಲ್ಲಿ ಕೊನೆಯ 5 ಓವರ್‌ಗಳಲ್ಲಿ 97 ರನ್‌ಗಳು ಬಂದಿದ್ದವು. ಎಲ್ಲಾ ಪಂದ್ಯಗಳಲ್ಲಿ ನೋಡಿದಾಗ ಇದು ಮೊದಲಿನ ಆಟಕ್ಕಿಂತಲೂ ಪರಿಣಾಮಕಾರಿ ಬದಲಾವಣೆ ಹೊಂದಿದೆ. ಡಾಟ್ ಬಾಲ್‌ಗಳ ಅಂಕಿ ಅಂಶವೂ ಬದಲಾಗಿದೆ.



ಅಂಕಿ ಅಂಶ

2024ರ ಹಿಂದೆ	ಅಪ್ರೋಚ್	2025ರಿಂದ
ಆರಂಭಿಕರಿಂದ ಶೇ. 65-75ರಷ್ಟು ರನ್		ಆರಂಭಿಕರಿಂದ ಶೇ. 50-60 ರನ್
ಮಧ್ಯಮ ಕ್ರಮಾಂಕದ ಬ್ಯಾಟಿಗರ ಸ್ಟ್ರೈಕ್ ರೇಟ್: 130-135		ಮಧ್ಯಮ ಕ್ರಮಾಂಕಿತ ಬ್ಯಾಟಿಗರ ಸ್ಟ್ರೈಕ್ ರೇಟ್ 145 ರಿಂದ 160ಕ್ಕೇರಿಕೆ
ತಂಡದ ರನ್‌ರೇಟ್- 8.5-9.5		ತಂಡದ ರನ್‌ರೇಟ್: 10-10.8ಕ್ಕೇರಿಕೆ
ಡಾಟ್‌ಬಾಲ್ ಶೇ.- 38-42 ಶೇ.		ಡಾಟ್‌ಬಾಲ್‌ಗಳು: 30-34ಶೇ. ಅತಿ ಕಡಿಮೆ
ಡೆತ್ ಓವರ್‌ನಲ್ಲಿ ರನ್‌ರೇಟ್: 9.5-10.5		ಡೆತ್ ಓವರ್‌ನಲ್ಲಿ ರನ್‌ರೇಟ್: 11.5-13.5

(ಮೊದಲು)	ರನ್ ಕ್ರಮ	(2025ರ ನಂತರ)
ಪವರ್‌ಪ್ಲೇ (1-6 ಓವರ್ಸ್) ರನ್‌ರೇಟ್ (ಸಾಮಾನ್ಯ): 8.5-9.5		ಪವರ್‌ಪ್ಲೇ (1-6 ಓವರ್ಸ್) ರನ್‌ರೇಟ್(ಸಾಮಾನ್ಯ): 9.5-10-5
ಮಧ್ಯಮ ಓವರ್ಸ್ (7-15) ರನ್‌ರೇಟ್: ಕನಿಷ್ಠ 7-7.5		ಮಧ್ಯಮ ಓವರ್ಸ್(7-15) ರನ್‌ರೇಟ್: ಕನಿಷ್ಠ 8-9
ಡೆತ್ ಓವರ್‌ಗಳಲ್ಲಿ ರನ್‌ರೇಟ್: 10.5-11		ಡೆತ್ ಓವರ್‌ಗಳಲ್ಲಿ ರನ್‌ರೇಟ್: 12-13

ರನ್ ಪ್ಯಾಟರ್ನ್

ಮೊದಲು	ನಂತರ
ಸಾಮಾನ್ಯ: 150-170	ಸಾಮಾನ್ಯ: 180-200
ಉತ್ತಮ: 175-195	ಉತ್ತಮ: 200-220
ಅತ್ಯುತ್ತಮ: 200-210	ಅತ್ಯುತ್ತಮ: 220-240

ಚಾಂಪಿಯನ್‌ಶಿಪ್‌ಗಿಲ್ಲ ಸಾ–ಚಿ

ಹೊಸದಿಲ್ಲಿ: ವಾರಾಂತ್ಯದಲ್ಲಿ ನಡೆಯಲಿರುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಭಾರತದ ಅಗ್ರ ಜೋಡಿಯಾದ ಸಾತ್ವಿಕ್ ಹಾಗೂ ಚಿರಾಗ್ ಜೋಡಿ ಭಾಗವಹಿಸುತ್ತಿಲ್ಲ ಎಂದು ಜೋಡಿಯ ತರಬೇತುದಾರ ಟ್ಯಾನ್ ಕಿಮ್ ಹರ್ ತಿಳಿಸಿದ್ದಾರೆ.

ಬ್ಯಾಡ್ಮಿಂಟನ್ ಕ್ಷೇತ್ರದ ಮುಖ್ಯ ಪಂದ್ಯಾಗವಳಿಗಳಲ್ಲಿ ಒಂದಾದ ಏಷ್ಯನ್ ಬ್ಯಾಡ್ಮಿಂಟನ್ ಪಂದ್ಯಾವಳಿ ಶುರುವಾಗಲಿದೆ. ಈಗಾಗಲೇ ಅರ್ಹತಾ ಸುತ್ತಿನ ಪಂದ್ಯಗಳು ನಡೆಯುತ್ತಿವೆ. ಸಿಂಗಲ್ಸ್ ವಿಭಾಗದಲ್ಲಿ ಪ್ರಮುಖ ಆಟಗಾರರು ಆಡುತ್ತಿದ್ದಾರೆ. ಕಳೆದ ಬಾರಿ ಪ್ರಮುಖ ಪಂದ್ಯಾವಳಿಗಳಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಸಾತ್ವಿಕ್ ಹಾಗೂ ಚಿರಾಗ್ ಜೋಡಿ ಕೂಡ ನಿರೀಕ್ಷೆಯಲ್ಲಿತ್ತು. ಹೀಗಿರುವಾಗ ಪಂದ್ಯಾವಳಿಯಲ್ಲಿ ಅವರಿಬ್ಬರು ಆಡುತ್ತಿಲ್ಲ ಎಂದು ಕೋಚ್ ಸ್ಪಷ್ಟ ಪಡಿಸಿದ್ದಾರೆ. ಸ್ವಿಸ್ ಓಪನ್ ಪಂದ್ಯಾವಳಿಯ ಕ್ವಾರ್ಟರ್ ಫೈನಲ್ ಪಂದ್ಯದ ವೇಳೆ ಈ ಇಬ್ಬರೂ ಗಾಯದಿಂದ ಹೊರಬಿದ್ದಿದ್ದರು. ಸಾತ್ವಿಕ್ ಭುಜದ ಗಾಯದಿಂದ ಚೇತರಿಸಿಕೊಂಡರೂ ಪಂದ್ಯಾವಳಿಯಲ್ಲಿ ಆಡಲು ಸಜ್ಜಾಗಿಲ್ಲ. ಇದರೊಂದಿಗೆ ಹರಿಹರನ್ ಮತ್ತು ಅರ್ಜುನ್ ಮಾತ್ರ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವ ಜೋಡಿಯಾಗಿದ್ದಾರೆ. ಮಹಿಳೆಯರ ವಿಭಾಗದಲ್ಲೂ ತ್ರಿಶಾ ಮತ್ತು ಗಾಯತ್ರಿ ಜೋಡಿ ಕೂಡ ಕೂಟದಲ್ಲಿ ಭಾಗವಹಿಸುತ್ತಿಲ್ಲ.



ಬಾಕ್ಸಿಂಗ್: ಫೈನಲ್‌ಗೆ ಭಾರತೀಯರು

ಹೊಸದಿಲ್ಲಿ: ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ಸ್‌ನಲ್ಲಿ ಭಾರತದ ಮಹಿಳಾ ಬಾಕ್ಸರ್‌ಗಳು ಭರ್ಜರಿ ಪ್ರದರ್ಶನ ನೀಡುತ್ತಾ ಫೈನಲ್ ಪ್ರವೇಶಿಸಿದ್ದಾರೆ.

ಮಹಿಳೆಯರ 54 ಕೆಜಿ ವಿಭಾಗದಲ್ಲಿ ಪ್ರೀತಿ ಪವಾರ್ ದಕ್ಷಿಣ ಕೊರಿಯಾದ ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಇಮ್ ಏಜಿ ವಿರುದ್ಧ 5–0 ಅಂತರದಲ್ಲಿ ಭರ್ಜರಿ ಗೆಲುವು ಸಾಧಿಸಿ ಫೈನಲ್‌ಗೆ ಪ್ರವೇಶಿಸಿದರು. ಅವರು ಈಗ ತೈವಾನ್‌ನ ಹುವಾಂಗ್ ಹ್ಸಿಯಾವ್-ವೆನ್ ವಿರುದ್ಧ ಚಿನ್ನದ ಪದಕಕ್ಕಾಗಿ ಸೆಣಸಲಿದ್ದಾರೆ. ಮಹಿಳೆಯರ 60 ಕೆಜಿ ವಿಭಾಗದಲ್ಲಿ ಕ್ಷಜಿಥಾಚ ಮಂಗೋಲಿಯಾದ ನಮೂನ್ ಮೋನ್ಖೋರ್ ವಿರುದ್ಧ 5–0 ಅಂತರದಲ್ಲಿ ಜಯ ಸಾಧಿಸಿ ಫೈನಲ್‌ಗೆ ಪ್ರವೇಶಿಸಿದರು. ಅವರು ಉತ್ತರ ಕೊರಿಯಾದ ಉನ್ ಗ್ಯಾಂಗ್ ವೋನ್ ವಿರುದ್ಧ ಮುಂದಿನ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ.

ಪ್ರಮುಖರು ಹೊರಕ್ಕೆ: ಮಹಿಳೆಯರ 70 ಕೆಜಿ ವಿಭಾಗದಲ್ಲಿ ಅರುಂಧತಿ ಚೌಧ್ರಿ ಉಜ್ಬೇಕಿಸ್ತಾನದ ಒಯ್ಯಾ ತೊಯಿರೋವಾ ವಿರುದ್ಧ 4–1 ಅಂತರದಲ್ಲಿ ಗೆದ್ದು ಫೈನಲ್‌ಗೆ ಅರ್ಹತೆ ಪಡೆದರು. ಅವರು ಕಜಕಿಸ್ತಾನದ ಬಕೀತ್ ಸೈದಿಶ್ ವಿರುದ್ಧ ಸೆಣಸಲಿದ್ದಾರೆ. ಇನ್ನೊಂದೆಡೆ, ಮಹಿಳೆಯರ 65 ಕೆಜಿ ವಿಭಾಗದಲ್ಲಿ ಅಂಕುಶಿತಾ ಬೋರೊ ತೈವಾನ್‌ನ ನಿಯೆನ್-ಚಿನ್ ಚೆನ್ ವಿರುದ್ಧ 0–3 ಅಂತರದಲ್ಲಿ ಸೋತು ಸೆಮಿಫೈನಲ್‌ನಲ್ಲೇ ಹೊರಬಂದರು. ಮಹಿಳೆಯರ 51 ಕೆಜಿ ವಿಭಾಗದಲ್ಲಿ ನಿಖತ್ ಝರೀನ್ ಚೀನಾದ ವು ಯು ವಿರುದ್ಧ 0–5 ಅಂತರದಲ್ಲಿ ಸೋತರು. ಇದೇ ರೀತಿ, ಲವ್ಲೀನಾ ಬೊರ್ಗೊಹೈನ್ (75 ಕೆಜಿ) ಮತ್ತು ಪೂಜಾ ರಾಣಿ (80 ಕೆಜಿ) ತಮ್ಮ ತಮ್ಮ ಸೆಮಿಫೈನಲ್ ಪಂದ್ಯಗಳಲ್ಲಿ ಸೋತು ಹೊರಬಂದರು. ಒಟ್ಟಿನಲ್ಲಿ, ನಾಲ್ವರು ಭಾರತೀಯ ಬಾಕ್ಸರ್‌ಗಳು ಈಗಾಗಲೇ ಫೈನಲ್ ಪ್ರವೇಶಿಸಿದ್ದು, ಇನ್ನೂ ಎರಡು ವಿಭಾಗಗಳ ಸೆಮಿಫೈನಲ್ ಪಂದ್ಯಗಳು ಏಪ್ರಿಲ್ 7ರಂದು ನಡೆಯಲಿವೆ. ಭಾರತಕ್ಕೆ ಹೆಚ್ಚಿನ ಪದಕಗಳ ನಿರೀಕ್ಷೆ ಹೆಚ್ಚಾಗಿದೆ.

ಒಟ್ಟು ನಾಲ್ಕು ಜನರು ಫೈನಲ್‌ಗೆ



ಮುಂಬೈ ದಂಡಿಸಿದ ಜೈಸ್ವಾಲ್–ವೈಭವ್

ಗುವಾಹಟಿ: ಬೂಮ್ರಾ, ಬೋಲ್ಟ್, ಪಾಂಡ್ಯ ಹೀಗೆ ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಮೆರೆದ ಯಶಸ್ವಿ ಜೈಸ್ವಾಲ್–ವೈಭವ್ ಸೂರ್ಯವಂಶಿ, ಮುಂಬೈ ವಿರುದ್ಧದ ಕಡಿಮೆ ಓವರ್ ಪಂದ್ಯದಲ್ಲಿ ದೊಡ್ಡ ಸ್ಕೋರ್‌ನತ್ತ ಕೊಂಡೊಯ್ದರು.

ಮಳೆಯಿಂದಾಗಿ 11 ಓವರ್‌ಗೆ ಇಳಿಸಲಾದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ಐದೇ ಓವರ್‌ಗಳಲ್ಲಿ 80 ರನ್ ಚಚ್ಚಿತು. ಟಾಸ್ ಸೋತ ನಂತರ ಮೊದಲು ಬ್ಯಾಟಿಂಗ್‌ಗಿಳಿದ ರಾಜಸ್ಥಾನಕ್ಕೆ ಜೈಸ್ವಾಲ್ ಬಿರುಸಿನ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭ ನೀಡಿದರು. ಅವರಿಗೆ ಎಂದಿನಂತೆ ವೈಭವ್ ಸೂರ್ಯವಂಶಿ ಸಾಥ್ ನೀಡಿದರು. ಇವರಿಬ್ಬರ ಬ್ಯಾಟಿಂಗ್ ಅಬ್ಬರಕ್ಕೆ ಮುಂಬೈನ ದಿಗ್ಗಜ ಬೌಲರ್‌ಗಳೆಲ್ಲಾ ತತ್ತರಿಸಿದರು. ಜೈಸ್ವಾಲ್ ತಮ್ಮ ಅಬ್ಬರದ ಬ್ಯಾಟಿಂಗ್‌ನೊಂದಿಗೆ 23 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದರು. ಆರ್‌ಆರ್ 11 ಓವರ್‌ಗಳಲ್ಲಿ 150 ರನ್ ಗಳಿಸಿತು.ಜೈಸ್ವಾಲ್ 77 ರನ್ ಗಳಿಸಿದರು.

ತಡವಾಗಿ ಶುರುವಾದ ಪಂದ್ಯ: ಮಂಗಳವಾರ ನಡೆಯಬೇಕಿದ್ದ ಮುಂಬೈ ಇಂಡಿಯನ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ನಡುವಿನ ಪಂದ್ಯಕ್ಕೂ ಮಳೆ ಅಡ್ಡಿಯಾಯಿತು. ಟಾಸ್‌ಗೂ ಅವಕಾಶ ಸಿಗಲಿಲ್ಲ. ಗುವಾಹಟಿಯಲ್ಲಿ ಸಂಜೆ 7 ಗಂಟೆ ಸುಮಾರಿಗೆ ಮಳೆ ಶುರುವಾಯಿತು. ಬಿಟ್ಟುಬಿಡದ ಮಳೆಯಿಂದಾಗಿ ಟಾಸ್ ವಿಳಂಬಗೊಂಡಿತು. ಮುಂದೂಡಲಾದ ಸಮಯಕ್ಕೆ ಟಾಸ್ ನಡೆಸುವುದಾಗಿ ಘೋಷಿಸಿದರೂ, ಮಳೆ ದಾಹ ಕಮ್ಮಿಯಾಗಲಿಲ್ಲ. 8 ಗಂಟೆಗೆ ಮಳೆ ತೀವ್ರಗೊಂಡಿತು. ನಿರ್ಣಾಯಕರು 8:40ಕ್ಕೆ ಓವರ್ ಕಡಿತ ಶುರು ಮಾಡಿದರು. 9:45ರ ಸುಮಾರಿಗೆ ಮಳೆ ನಿಂತಿತು. 10:10ಕ್ಕೆ ಪಂದ್ಯ ಶುರು ಮಾಡಲು ನಿರ್ಧರಿಸಿದರು. ತಂಡಕ್ಕೆ 11 ಓವರ್ ನಿಗಧಿ ಮಾಡಲಾಯಿತು. ಟಾಸ್ 10:55ಕ್ಕೆ ನಡೆಯಿತು.



ಕೆಕೆಆರ್–ಪಂಜಾಬ್ ಪಂದ್ಯ ರದ್ದು

ಕೋಲ್ಕತ್ತಾ: ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಪಂಜಾಬ್ ಕಿಂಗ್ಸ್ ವಿರುದ್ಧ ನಡೆಯಬೇಕಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 12 ಪಂದ್ಯ ಮಳೆಯಿಂದ ರದ್ದಾಯಿತು. ಸೋಮವಾರದಂದು ಈಡನ್ ಗಾರ್ಡನ್ಸ್ ಸಜ್ಜಾಗಿತ್ತು. ಸತತ ಎರಡು ಪಂದ್ಯಗಳಲ್ಲಿ ಗೆದ್ದು ಹ್ಯಾಟ್ರಿಕ್ ಹಂಬಲದಲ್ಲಿದ್ದ ಪಂಜಾಬ್ ಕಿಂಗ್ಸ್ ಮೊದಲ ಗೆಲುವಿನ ಹುಡುಕಾಟದಲ್ಲಿದ್ದ ಕೆಕೆಆರ್ ತಂಡವನ್ನು ಎದುರಿಸಬೇಕಿತ್ತು. ಯಥಾವತ್ತಾಗಿ ಟಾಸ್ ಸಂಭವಿಸಿತು. ಮೊದಲು ಫೀಲ್ಡಿಂಗ್ ಆಯ್ದುಕೊಂಡಿದ್ದ ಪಂಜಾಬ್ 3.4 ಓವರ್‌ಗಳಲ್ಲಿ 2 ವಿಕೆಟ್ ಪಡೆದಿತ್ತು. ಕೆಕೆಆರ್ 25 ರನ್ ಗಳಿಸಿತ್ತು. ಅಲ್ಲಿಂದ ಶುರುವಾದ ಮಳೆ ಮುಂದಿನ ಪಂದ್ಯಕ್ಕೆ ಭಾರೀ ಅಡ್ಡಪಡಿಸಿತು. ಮುಂದೆ ಒಂದೂ ಬಾಲ್ ಕೂಡ ಆಗಲು ಬಿಡಲೇ ಇಲ್ಲ. 5 ಓವರ್‌ಗಳ ಪಂದ್ಯಕ್ಕಾಗಿ ನಿಗದಿತ ಸಮಯ ಸೂಚಿಸಲಾಗಿತ್ತು. ಅಲ್ಲಿಯವರೆಗೂ ಮಳೆ ಬಿಡದ ಕಾರಣ ಪಂದ್ಯವನ್ನು ರದ್ದುಗೊಳಿಸಲಾಯಿತು. ಈ ರದ್ದಿನೊಂದಿಗೆ ಕೆಕೆಆರ್ ಪಂದ್ಯಾವಳಿಯಲ್ಲಿ ಮೊದಲ ಅಂಕ ಗಳಿಸಿದೆ. ಪಂಜಾಬ್ ಮೊದಲ ಅಂಕ ಕಳೆದುಕೊಂಡಿದೆ.

ಇಂದು ದಿಲ್ಲಿ–ಗುಜರಾತ್ ಪಂದ್ಯ

ಹೊಸದಿಲ್ಲಿ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯಾವಳಿಯ 14ನೇ ಪಂದ್ಯ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಗುಜರಾತ್ ಟೈಟಾನ್ಸ್ ನಡುವೆ ಬುಧವಾರದಂದು ನಡೆಯಲಿದೆ.

ಎರಡು ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿರುವ ಶುಭಮನ್ ಗಿಲ್ ನೇತೃತ್ವದ ಟೈಟಾನ್ಸ್, ಎರಡು ಪಂದ್ಯಗಳಲ್ಲಿ ಸತತ ಗೆಲುವುಗಳನ್ನು ದಾಖಲಿಸಿರುವ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಹಿಂದಿನ ಪಂದ್ಯಗಳಲ್ಲಿ ದಿಲ್ಲಿ ಸಮೀರ್ ರಿಜ್ವಿ ಅವರ ಸ್ಫೋಟಕ ಬ್ಯಾಟಿಂಗ್ ಬಲದೊಂದಿಗೆ ಎರಡೂ ಪಂದ್ಯಗಳಲ್ಲಿ ಗೆದ್ದಿದೆ. ಇತ್ತ ಹರಸಾಹಸ ಪಟ್ಟರೂ ಎರಡೂ ಪಂದ್ಯಗಳಲ್ಲಿ ಗುಜರಾತ್ ನಿರಾಸೆ ಮೂಡಿಸಿದೆ. ಗೆಲುವಿನ ಲಯ ಮುಂದುವರಿಸುವ ತವಕದಲ್ಲಿ ದಿಲ್ಲಿ ಇದ್ದರೆ ಸೋಲಿನಿಂದ ಹೊರಬರಲು ಗುಜರಾತ್ ಯತ್ನಿಸಲಿದೆ.

ಪುಟಿದೇಳುವ ತವಕದಲ್ಲಿ ಗುಜರಾತ್: ಇನ್ನು ಗುಜರಾತ್ ಟೈಟಾನ್ಸ್ ಪಡೆಯಲ್ಲಿ ಗೆಲುವಿನ ತವಕ ಕಾಣಿಸಿಕೊಂಡಿದೆ. ಗೆಲುವಿನ ಹುಡುಕಾಟವೂ ಹೆಚ್ಚಿದೆ. ಮೊದಲೆರಡು ಪಂದ್ಯಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಗೆಲುವಿನ ಇನ್ನಿಂಗ್ಸ್ ಕಟ್ಟಲಾಗಲಿಲ್ಲ. ಬ್ಯಾಟಿಂಗ್‌ನಲ್ಲಿ ಸಾಯಿ ಸುದರ್ಶನ್ ಲಯಕ್ಕೆ ಬಂದಿದ್ದಾರೆ. ಶುಭಮನ್ ಗಿಲ್ ಬ್ಯಾಟ್‌ನಿಂದ ರನ್ ಬರಬೇಕಿದೆ. ಜಾಸ್ ಬಟ್ಲರ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಬೇಕಿದೆ. ಮುಖ್ಯವಾಗಿ ತಂಡದಲ್ಲಿ ಫಿನಿಶಿಂಗ್ ವಿಚಾರದಲ್ಲಿ ಬ್ಯಾಟರ್‌ಗಳು ಜವಾಬ್ದಾರಿ ತೆಗೆದುಕೊಳ್ಳಬೇಕಿದೆ. ಬೌಲಿಂಗ್‌ನಲ್ಲಿ ಸಿರಾಜ್ ದಂಡಿಸಿಕೊಂಡಿದ್ದಾರೆ. ರಬಾಡ ಕೂಡ ದುಬಾರಿ, ಇತ್ತ ಸ್ಪಿನ್ ವಿಭಾಗದಲ್ಲಿ ರಶೀದ್ ಖಾನ್ ಕೂಡ ದುಬಾರಿಯಾಗಿದ್ದಾರೆ.

ಗಿಲ್ ಲಭ್ಯ: ಗಾಯದಿಂದ ಕಳೆದ ಪಂದ್ಯಕ್ಕೆ ಅಲಭ್ಯರಾಗಿದ್ದ ಗುಜರಾತ್ ತಂಡದ ನಾಯಕ ಶುಭಮನ್ ಗಿಲ್ ಅವರು ತಂಡಕ್ಕೆ ಮರಳಿದ್ದಾರೆ. ಈಗಾಗಲೇ ಚೇತರಿಸಿಕೊಂಡಿರುವ ಅವರು ಪಂದ್ಯಕ್ಕೆ ಲಭ್ಯವಿರುವುದು ಕೋಚ್ ಖಚಿತಪಡಿಸಿದ್ದಾರೆ.



ದಿಲ್ಲಿ ತಂಡಕ್ಕೆ ಯುವಕರ ಬಲ

ದಿಲ್ಲಿ ಕ್ಯಾಪಿಟಲ್ಸ್ ದೊಡ್ಡ ಆಟಗಾರರಗಿಂತಲೂ ಯುವ ಸ್ಟಾರ್‌ಗಳ ಮೊರೆ ಹೋಗಿತ್ತು. ಅದೇ ಈ ಸಮಯದಲ್ಲಿ ದಿಲ್ಲಿ ತಂಡಕ್ಕೆ ಬಲವಾಗಿ ನಿಂತಿದೆ. ಕಳೆದ ಎರಡು ಪಂದ್ಯಗಳಲ್ಲಿ ದಿಲ್ಲಿ ತಂಡದ ಸಮೀರ್ ರಿಜ್ವಿ ಗೆಲ್ಲಿಸಿದ ಪ್ರಮುಖ ಆಟಗಾರ ಅನ್ನಿಸಿಕೊಂಡಿದ್ದಾರೆ. ತಂಡಕ್ಕೆ ಬ್ಯಾಟಿಂಗ್ ಬಲ ತಂದಿದ್ದಾರೆ. ಸ್ಫೋಟಕ ಬ್ಯಾಟಿಂಗ್ ಜೊತೆಗೆ ಸಮಯೋಚಿತ ಬ್ಯಾಟಿಂಗ್ ಮಾಡುವುದು ವಿಶೇಷ. ರಾಹುಲ್, ನಿಸ್ಸಂಕಾ, ನಿತಿಶ್ ರಾಣಾ, ಅಕ್ಷರ್ ಪಟೇಲ್ ಲಯಕ್ಕೆ ಬರಬೇಕಿದೆ. ಬೌಲಿಂಗ್‌ನಲ್ಲೂ ಮುಖೇಶ್ ಕುಮಾರ್ ವಿಕೆಟ್ ಪಡೆದಿದ್ದಾರೆ. ಆದರೆ ಉಳಿದ ಬೌಲರ್‌ಗಳು ಅಲ್ಪ ದುಬಾರಿಯಾಗಿದ್ದಾರೆ.

ಐಎಸ್ಸಿಎಫ್ ಶೂಟಿಂಗ್ ವಿಶ್ವಕಪ್ | ವಿಶ್ವದಾಖಲೆ ನಿರ್ಮಾಣ

ಪಲಕ್–ಮುಖೇಷ್ ಜೋಡಿಗೆ ಚಿನ್ನ

ಹೊಸದಿಲ್ಲಿ:ಗ್ರಾನಾಡಾದಲ್ಲಿ ನಡೆದ ಐಎಸ್ಸಿಎಫ್ ವಿಶ್ವಕಪ್‌ನಲ್ಲಿ ಭಾರತದ ಶೂಟರ್ ಜೋಡಿ ಪಲಕ್ ಮತ್ತು ಮುಖೇಷ್ ಅದ್ಭುತ ಪ್ರದರ್ಶನ ನೀಡಿ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ವಿಶ್ವ ದಾಖಲೆ ಸೃಷ್ಟಿಸಿ ಚಿನ್ನದ ಪದಕ ಜಯಿಸಿದರು.


ಫೈನಲ್‌ನಲ್ಲಿ ಈ ಭಾರತೀಯ ಜೋಡಿ ಒಟ್ಟು 487.7 ಅಂಕಗಳನ್ನು ಪಡೆದು ಜೂನಿಯರ್ ವಿಶ್ವ ದಾಖಲೆ ಸ್ಥಾಪಿಸಿತು. ಪಲಕ್ 243.0 ಅಂಕ ಗಳಿಸಿದರೆ, ಮುಕೇಶ್ 244.7 ಅಂಕಗಳನ್ನು ಕಲೆಹಾಕಿ ತಂಡದ ಗೆಲುವಿಗೆ ಮಹತ್ವದ ಕೊಡುಗೆ ನೀಡಿದರು. ಅರ್ಹತಾ ಸುತ್ತಿನಲ್ಲಿ ಕೂಡ ಈ ಜೋಡಿ ಉತ್ತಮ ಪ್ರದರ್ಶನ ನೀಡಿ 581–17ಎಕ್ಸ್ ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿತ್ತು. ಚೀನಾದ ಜೋಡಿ ಅಗ್ರಸ್ಥಾನದಲ್ಲಿದ್ದರೂ, ಫೈನಲ್‌ನಲ್ಲಿ ಭಾರತೀಯರು ಅದ್ಭುತ ಆಟವಾಡಿ ಮುನ್ನಡೆ ಸಾಧಿಸಿದರು. ಚೀನಾದ ಕಿಯನ್ ಶುನ್ ಯಾವೋ ಮತ್ತು ಕೈ ಹು ಜೋಡಿ 484.8 ಅಂಕಗಳೊಂದಿಗೆ ಬೆಳ್ಳಿ ಪದಕ ಪಡೆದುಕೊಂಡರೆ, ಹಂಗೇರಿಯ ವೆರೋನಿಕಾ ಮಜೋರ್ ಮತ್ತು ಅಕೋಸ್ ಕಾರೋಲಿ ನಾಗ್ಯ ಜೋಡಿ ಕಂಚಿನ ಪದಕಕ್ಕೆ ತೃಪ್ತಿಪಟ್ಟಿತು.

ಭರವಸೆ ಮೂಡಿಸಿದ ಪಲಕ್: 18 ವರ್ಷದ ಪಲಕ್ ಈಗಾಗಲೇ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದು ತನ್ನ ಪ್ರತಿಭೆಯನ್ನು ಸಾಬೀತುಪಡಿಸಿದ್ದಾರೆ. ಮುಕೇಶ್ ಕೂಡ ಜೂನಿಯರ್ ವಿಶ್ವ ಚಾಂಪಿಯನ್ ಆಗಿದ್ದು ಭರವಸೆಯ ಶೂಟರ್ ಆಗಿ ಹೊರಹೊಮ್ಮಿದ್ದಾರೆ. ಈ ಸಾಧನೆ ಭಾರತ ಶೂಟಿಂಗ್ ಕ್ಷೇತ್ರದಲ್ಲಿ ಮತ್ತೊಮ್ಮೆ ತನ್ನ ಸಾಮರ್ಥ್ಯವನ್ನು ತೋರಿಸಿದ್ದು, ಭವಿಷ್ಯದ ಅಂತರರಾಷ್ಟ್ರೀಯ ಸ್ಪರ್ಧೆಗಳಿಗಾಗಿ ದೊಡ್ಡ ಆತ್ಮವಿಶ್ವಾಸವನ್ನು ನೀಡಿದೆ.



ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5947

ಎಡದಿಂದ ಬಲಕ್ಕೆ

1.ಈ ಶಬ್ದಾಲಂಕಾರದ ಮೊದಲು ನರಕಾಧಿಪತಿಯಿದ್ದಾನೆ (3)
3.ಗಾಯ ಮಾಡಿಕೊಳ್ಳದೆ ಹಾಡುವುದು (3)
5.ಕಾವಲುಪಡೆ–ಕಾಪಿನ ಸೈನ್ಯವಿದು (5)
6.ಸರಗಳೊಂದಿಗೆ ಖರೀದಿಸಿದ ರಂಪ (4)
8.ಗಣಿ ಕಡೆಯಲ್ಲಿ ತಿರುಗಿಸಿಟ್ಟುಕೊಂಡ ಬಾಣಸಿಗ (4)
9.ಗಟ್ಟಿಮುಟ್ಟಾದ ದೇಹವುಳ್ಳವನು (4)
10.ವಸ್ತುಗಳನ್ನು ಆಯುಧದಿಂದ ತುಂಡುಮಾಡು (4)
12.ಉತ್ತರಪತ್ರಿಕೆ ಪರಿಶೀಲಿಸಿ ಅಂಕ ನೀಡುವಿಕೆ (5)
14.ಅಡುಗೆಗೆ ಬಳಸುವ ಬೆಳ್ಳುಳ್ಳಿ (3)
15.ಸಂಖ್ಯೆ–ಆಕಾರ–ಪ್ರಮಾಣಗಳ ಅಧ್ಯಯನ ಶಾಸ್ತ್ರ (3)

ಮೇಲಿನಿಂದ ಕೆಳಕ್ಕೆ

1.ತಾರುಣ್ಯವುಳ್ಳವನು (4)
2.ಶಂಕರನು ಕಟ್ಟಿದ ತೆರಿಗೆ (2)
3.ಮೀನಿಗಾಗಿ ಬೀಸಿದ ಬಲೆ (2)
4.ದೇವಾಲಯದ ಸಭಾಮಂಟಪ (4)
7.ಹಾಸ ಮೊದಲು ತಿರುಗಿ ನೆರವಾಯ್ತು (3)
8.ಸಸ್ಯಗಳ ಬೆಳವಣಿಗೆಗೆ ಬೇಕಾಗುವ ರಸಗೊಬ್ಬರ (3)
9.ಕಣ್ಣೀರು–ಕಂಬನಿಯಿದು (4)
11.ತಲ–ಸುಲಿ ಒಳಗೊಂಡ ಸುಲಭವಾದುದು (4)
12.ಮಾತನಾಡದಿರುವಿಕೆ–ನೀರವತೆ (2)
13.ಬೆಟ್ಟವೂ ಹೌದು–ಆಭರಣವೂ ಹೌದು (2)

5946 ಉತ್ತರ

ಎಡದಿಂದ ಬಲಕ್ಕೆ:
1.ಸಾಯಂಕಾಲ
3.ದೂದಪೇಡಾ
5.ಆವೇಶ 7.ಭರವಸೆ
9.ಕಸರತ್ತು 11.ಕಂದಹಾರ
14.ಗೋಣಿತಾಟು
16.ಸರಳು 17.ಯೋಗ ಕ್ಷೇಮ 18.ಕರ್ನಾಟಕ

ಮೇಲಿನಿಂದ ಕೆಳಕ್ಕೆ:
2.ಯಂತ್ರಾಗಾರ
4.ಪೇಶಾವರ 5.ಆಸೆ
6.ಶಕ 8.ವರದ 10.ಸರಣಿ
12.ಹಾವಾಡಿಗ 13.ಕಂಸ
14.ಗೋಳು 15.ತಾಕಲಾಟ

ಕಿರುಸುದ್ದಿ

ಯುವತಿ ಆತ್ಮಹತ್ಯೆ: ಪ್ರಿಯಕರನ ವಿರುದ್ಧ ದೂರು

ಕುಂದಾಪುರ: ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ ಶಶಿಕಲಾ ಎಂಬವರ ಸಾವಿಗೆ ಆಕೆಯ ಪ್ರಿಯಕರ ಮಂಜುನಾಥ ಅವರ ಪ್ರಚೋಚನೆ ಕಾರಣ ಎಂದು ಕುಂದಾಪುರ ಠಾಣೆಯಲ್ಲಿ ರಮ್ಯಾ ಎಂಬುವರು ದೂರು ದಾಖಲಿಸಿದ್ದಾರೆ. ಕುಂದಾಪುರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಕ್ಲೀನಿಂಗ್ ಕೆಲಸ ಮಾಡಿಕೊಂಡಿದ್ದ ಶಶಿಕಲಾ ಏ.3ರಂದು ಮನೆಯ ಸಮೀಪದ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಬಗ್ಗೆ ಕುಂದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಶಶಿಕಲಾ ಅವಳು ಮಂಜುನಾಥ (19) ಎಂಬವನನ್ನು ಪ್ರೀತಿಸುತ್ತಿದ್ದು ಆತನು ಅವಳಲ್ಲಿ ಹಣ ಹೊಂದಿಸಿ ಕೊಡುವಂತೆ ಪೀಡಿಸುತ್ತಿದ್ದು ಅದಕ್ಕೆ ಆಕೆ ನನ್ನಲ್ಲಿ ಹಣ ಇಲ್ಲ ಎಂದು ಹೇಳಿದಕ್ಕೆ ಹಣ ಹೊಂದಿಸಲು ಆಗದಿದ್ದಲ್ಲಿ ನೀನು ನನಗೆ ಬೇಡ, ನೀನು ಎಲ್ಲಿಯಾದರೂ ಬಿದ್ದು ಸತ್ತು ಹೋಗು, ಮುಂದೆ ನಾನು ನಿನ್ನೊಂದಿಗೆ ಮಾತನಾಡುವುದಿಲ್ಲ ಎಂದು ಹೇಳಿ ಆಕೆಗೆ ಸಾಯುವಂತೆ ಪ್ರಚೋದನೆ ನೀಡಿದ್ದರಿಂದಲೇ ಆಕೆಯು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಗಂಗೊಳ್ಳಿ: ಮೀನುಗಾರಿಕಾ ಕಾರ್ಮಿಕ ಆತ್ಮಹತ್ಯೆ

ಗಂಗೊಳ್ಳಿ: ಗುಜ್ಜಾಡಿ ಗ್ರಾಮದ ನಾಯಕವಾಡಿ ಜನತಾ ಕಾಲೋನಿ ನಿವಾಸಿ ಉಮೇಶ ಖಾರ್ವಿ (59) ಎಂಬವರು ಮನೆಯ ಜಗುಲಿಯ ಬಳಿಯ ಕಿಟಕಿಗೆ ಶಾಲನ್ನು ಕಟ್ಟಿ ಕುತ್ತಿಗೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೀನುಗಾರಿಕೆ ವೃತ್ತಿ ಮಾಡಿಕೊಂಡಿದ್ದ ಉಮೇಶ್ ವಿಪರೀತ ಮದ್ಯ ಸೇವನೆ ಮಾಡುತ್ತಿದ್ದು ಲಿವರ್ ಸಮಸ್ಯೆಯಿಂದ ಬಳಲುತ್ತಿದ್ದರು. ಸೋಮವಾರ ರಾತ್ರಿ ಮನೆಯಲ್ಲಿ ಊಟ ಮಾಡದೇ ಮನೆಯ ಹೊರಗಡೆ ಜಗುಲಿಯಲ್ಲಿ ಇದ್ದಿದ್ದು, ಮನೆಯ ಜಗುಲಿಯ ಬಳಿಯ ಕಿಟಕಿಗೆ ಶಾಲನ್ನು ಕಟ್ಟಿ ಕುತ್ತಿಗೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದವರನ್ನು ಕುಂದಾಪುರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರನ್ನು ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ. ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಟೋರಿಕ್ಷಾದಲ್ಲಿ ಅಕ್ರಮ ಮದ್ಯ ಸಾಗಾಟ ಪತ್ತೆ

ಬಂಟ್ವಾಳ: ಉಳ್ಳಾಲ ತಾಲೂಕಿನ ಸಜೀಪನಡು ಗ್ರಾಮದ ಕುಕ್ಕಾಜೆ ಯಿಂದ ಕಂಚಿನಡ್ಕಪದವು ರಸ್ತೆಯಲ್ಲಿ ಆಟೋರಿಕ್ಷಾವೊಂದರಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿರುವುದನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಪತ್ತೆ ಹಚ್ಚಿದ್ದಾರೆ. ಖಚಿತ ವರ್ತಮಾನದ ಮೇರೆಗೆ ಬಂಟ್ವಾಳ ಗ್ರಾಮಾಂತರ ಠಾಣಾ ಉಪನಿರೀಕ್ಷಕರಾದ ರನ್ನಗೌಡಮತ್ತವರ ಸಿಬ್ಬಂದಿಗಳು ಕಂಚಿನಡ್ಕ ಪದವು ಜಂಕ್ಷನ್ ನಲ್ಲಿ ಹೊಂಚು ಹಾಕಿ ನಿಂತಿದ್ದಾಗ ಅನುಮಾನಸ್ಪದವಾಗಿ ಬಂದ ರಿಕ್ಷಾದ ಚಾಲಕ ಪೊಲೀಸರನ್ನು ಕಂಡು ಅಲ್ಲೇ ರಿಕ್ಷಾ ತೊರೆದು ಕತ್ತಲಲ್ಲಿ ಮರೆಯಾಗಿದ್ದಾನೆನ್ನಲಾಗಿದೆ.ಪರಾರಿಯಾದವನನ್ನು ದೀಪದ ಸಹಾಯದಿಂದ ಗುರುತಿಸಲಾಗಿದ್ದು ಪಾಣೆ ಮಂಗಳೂರಿನ ಬಾಲಕೃಷ್ಣ ಎಂದು ಹೆಸರಿಸಲಾಗಿದೆ. ಬಳಿಕ ಆಟೋರಿಕ್ಷವನ್ನು ಶೋಧಿಸಿದಾಗ ವಿವಿಧ ಮಾದರಿಯ ಮದ್ಯಪತ್ತೆಯಾಗಿದೆ. ತಕ್ಷಣ ಆಟೋರಿಕ್ಷಾ ಸಹಿತ ಮದ್ಯವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೇನ್ ಡಿಕ್ಕಿ ಹೊಡೆದು ಪಾದಚಾರಿ ಸಾವು

ಉಪ್ಪಿನಂಗಡಿ: ಇಲ್ಲಿಗೆ ಸಮೀಪದ ಕಣಿಯೂರು ಗ್ರಾಮದ ಪಿಲಿಗೂಡು ಎಂಬಲ್ಲಿ ಎ. 7ರಂದು ಬೆಳಿಗ್ಗೆ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿ ವ್ಯಕ್ತಿಯೋರ್ವರಿಗೆ ಕ್ರೇನ್ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಪಾದಚಾರಿ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟ ಘಟನೆ ಸಂಭವಿಸಿದೆ. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯನ್ನು ತಮಿಳುನಾಡು ಮೂಲದ ಮಹಾಲಿಂಗಂ (53) ಎಂದು ಗುರುತಿಸಲಾಗಿದೆ. ಇವರು ಪ್ರಸ್ತುತ ಪುತ್ತೂರು ತಾಲೂಕಿನ ಕೊಳ್ತಿಗೆ ಎಂಬಲ್ಲಿ ವಾಸವಾಗಿದ್ದಾರೆ ಎಂದು ತಿಳಿದು ಬಂದಿದೆ. ಮಹಾಲಿಂಗಂ ಅವರು ಕಾರ್ಯನಿಮಿತ್ತ ಈ ಭಾಗಕ್ಕೆ ಬಂದವರು ಪಿಲಿಗೂಡು ಎಂಬಲ್ಲಿ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೇಳೆ, ಗುರುವಾಯನಕೆರೆಯಿಂದ ಉಪ್ಪಿನಂಗಡಿ ಕಡೆಗೆ ಬರುತ್ತಿದ್ದ ಕ್ರೇನ್ ಡಿಕ್ಕಿ ಹೊಡೆದು ಈ ಅವಘಢ ಸಂಭವಿಸಿದೆ. ಡಿಕ್ಕಿಯ ತೀವ್ರತೆಗೆ ಮಹಾಲಿಂಗಂ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ಬಗ್ಗೆ ಮೃತರ ಪುತ್ರ ಸುದಿನ್ ಎಂಬವರು ನೀಡಿದ ದೂರಿನ ಮೇರೆಗೆ ಪುತ್ತೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಹೆಚ್ಚುತ್ತಿರುವ ತಾಪಮಾನ | ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ

ನಾಗರಿಕರ ಆರೋಗ್ಯ ಸುರಕ್ಷತೆಗೆ ಒತ್ತು

ಉಡುಪಿ: ಪ್ರಸ್ತುತ ಬೇಸಿಗೆಯ ಹಿನ್ನೆಲೆ, ಬಿಸಿಲಿನ ಪ್ರಖರತೆ ದಿನೇ ದಿನೇ ಹೆಚ್ಚುತ್ತಿದ್ದು, ಶಾಖದ ಹೊಡೆತದಿಂದ ಮಾನವನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡುವ ಸಾಧ್ಯತೆ ಇರುತ್ತದೆ. ಸಾರ್ವಜನಿಕರು ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಹೊರಡಿಸಲಾದ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವಂತೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ ನೀಡಿದರು.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಅತೀ ಹೆಚ್ಚು ತಾಪಮಾನದದಿಂದ ಮಾನವನ ಮೇಲೆ ಸಾಮಾನ್ಯವಾಗಿ ನಿರ್ಜಲೀಕರಣ, ಶಾಖ ಸೆಳೆತ, ಶಾಖದ ಬಳಲಿಕೆ ಮತ್ತು ಶಾಖದ ಆಘಾತದಂತಹ ದುಷ್ಪರಿಣಾಮಗಳು ಉಂಟಾಗುವ ಸಾಧ್ಯತೆ ಇದ್ದು, ಈ ಬಗ್ಗೆ ರಕ್ಷಣೆ ಪಡೆಯಲು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ನಗರ ಹಾಗೂ ಗ್ರಾಮೀಣ ಭಾಗದ ಜನರಿಗೆ ಪೋಸ್ಟರ್, ಬ್ಯಾನರ್, ಜಿಂಗಲ್ಸ್‌ಗಳ ಮೂಲಕ ಮಾಹಿತಿ ನೀಡುವುದರೊಂದಿಗೆ, ಅರಿವು ಮೂಡಿಸಿ ಜನಸಾಮಾನ್ಯರ ಆರೋಗ್ಯ ರಕ್ಷಣೆಗೆ ಮುಂದಾಗಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅತೀ ಹೆಚ್ಚು ತಾಪಮಾನಕ್ಕೆ ಸಂಬಂಧಿಸಿದ ಅನಾರೋಗ್ಯವನ್ನು ತಡೆಗಟ್ಟಲು ಜಿಲ್ಲೆಯ ಎಲ್ಲಾ



ಆರೋಗ್ಯ ಕೇಂದ್ರಗಳಲ್ಲಿ ಓ.ಆರ್.ಎಸ್ ಸೇರಿದಂತೆ ಇತರೆ ಔಷಧಿಗಳನ್ನು ಹೆಚ್ಚಾಗಿ ದಾಸ್ತಾನು ಇರಿಸಿಕೊಂಡಿರಬೇಕು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಮಾರುಕಟ್ಟೆ, ಬಸ್ ನಿಲ್ದಾಣ, ರೈಲು ನಿಲ್ದಾಣ ಸೇರಿದಂತೆ ಜನಸಂದಣಿ ಹೆಚ್ಚಿರುವ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವಂತೆ ತಿಳಿಸಿದರು.

ಬೇಸಿಗೆ ದಿನಗಳಲ್ಲಿ ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುವ ಕಡೆಗಳಲ್ಲಿ ಅವಶ್ಯವಿರುವ ಮುಂಜಾಗ್ರತಾ ಕ್ರಮಗಳನ್ನು ಈಗಿನಿಂದಲೇ ಕೈಗೊಳ್ಳಬೇಕು ಎಂದ ಅವರು, ಪ್ರಸ್ತುತ ಜಿಲ್ಲೆಯಲ್ಲಿ ದನಕಾರುಗಳಿಗೆ ಮೇವಿನ ಕೊರತೆ ಕಂಡು ಬಂದಿಲ್ಲ. ಎಲ್ಲಾ ತಾಲೂಕುಗಳಲ್ಲಿ ಮುಂದಿನ 39 ವಾರಗಳಿಗೆ ಆಗುವಷ್ಟು ಮೇವು ದಾಸ್ತಾನಿರುವುದಾಗಿ

- ನಗರ ಹಾಗೂ ಗ್ರಾಮೀಣ ಭಾಗದ ಜನರಿಗೆ ಪೋಸ್ಟರ್, ಬ್ಯಾನರ್, ಜಿಂಗಲ್ಸ್ ಗಳ ಮೂಲಕ ಮಾಹಿತಿ ನೀಡಿ ಅರಿವು ಮೂಡಿಸಿ ಜನಸಾಮಾನ್ಯರ ಆರೋಗ್ಯ ರಕ್ಷಣೆಗೆ ಮುಂದಾಗಬೇಕು
- ಅನಾರೋಗ್ಯವನ್ನು ತಡೆಗಟ್ಟಲು ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಓ.ಆರ್.ಎಸ್ ಸೇರಿದಂತೆ ಇತರೆ ಔಷಧಿಗಳನ್ನು ಹೆಚ್ಚಾಗಿ ದಾಸ್ತಾನು ಇರಿಸಿಕೊಂಡಿರಬೇಕು
- ಎಲ್ಲಾ ತಾಲೂಕುಗಳಲ್ಲಿ ಮುಂದಿನ 39 ವಾರಗಳಿಗೆ ಆಗುವಷ್ಟು ಮೇವು ದಾಸ್ತಾನಿರುವುದಾಗಿ

ತಿಳಿಸಿದರು.

ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಗಳು ನಿರಂತರವಾಗಿ ಸಭೆ ಕರೆದು ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಎಚ್ಚರ ವಹಿಸಬೇಕು. ಜಿಲ್ಲೆಯಲ್ಲಿ ತೈಲ ಸೋರಿಕೆ ಪ್ರಕರಣಗಳಾದಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಸಮಿತಿಯ ಸದಸ್ಯರುಗಳು ತುರ್ತು ಸಂದರ್ಭವನ್ನು ಎದುರಿಸುವ ಕ್ರಿಯಾ ಯೋಜನೆಗಳ ಬಗ್ಗೆ ಮಾಹಿತಿಯನ್ನು ಹೊಂದಿರಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಎಎಸ್‌ಪಿ ಸುಧಾಕರ್ ನಾಯಕ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಎಸ್. ಎಸ್ ಕಾದ್ರೊಳ್ಳಿ, ಸಹಾಯಕ ಕಮಿಷನರ್ ರಶ್ಮಿ, ಪೌರಾಯುಕ್ತ ಮಹಾಂತೇಶ್ ಹಂಗರಗಿ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಶೀಲ್ದಾರ್‌ಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಅಗ್ನಿ ಸುರಕ್ಷತಾ ಆಡಿಟ್ ನಡೆಸಿ ವರದಿ ನೀಡಿ: ಜಿಲ್ಲಾಧಿಕಾರಿ

ಬೇಸಿಗೆ ದಿನಗಳಲ್ಲಿ ಅಗ್ನಿ ಅವಘಡಗಳು ಸಂಭವಿಸುವ ಸಾಧ್ಯತೆಗಳು ಹೆಚ್ಚು ಇರುತ್ತವೆ. ಆಸ್ಪತ್ರೆಗಳು, ಕೈಗಾರಿಕೆಗಳು, ಜನಸಂದಣಿ ಸ್ಥಳಗಳಲ್ಲಿ ಅಗ್ನಿ ಸುರಕ್ಷತೆಯ ವಿವಿಧ ಅಂಶಗಳ ಮೇಲೆ ಆಗಿಂದಾಗ್ಗೆ ತಪಾಸಣೆ ಕೈಗೊಳ್ಳಬೇಕು. ಅಗ್ನಿ ಅನಾಹುತಗಳು ಉಂಟಾದಲ್ಲಿ ಕೂಡಲೇ ಸ್ಪಂದಿಸಲು ಸನ್ನದ್ಧರಾಗಿರಬೇಕು ಎಂದ ಅವರು, ಕಳೆದ ಸಭೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಅಗ್ನಿ ಸುರಕ್ಷತಾ ಆಡಿಟ್‌ಗಳನ್ನು ನಡೆಸಿ, ವರದಿ ನೀಡುವಂತೆ ತಿಳಿಸಿದ್ದರೂ ಸಹ ಇದುವರೆಗೂ ಆಡಿಟ್ ಅನ್ನು ಪೂರ್ತಿಯಾಗಿ ನಡೆಸಿ ವರದಿ ನೀಡದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಕೂಡಲೆ ಅಗ್ನಿ ಸುರಕ್ಷತಾ ಆಡಿಟ್ ಗಳನ್ನು ನಡೆಸಿ ವರದಿ ನೀಡುವಂತೆ ಅಗ್ನಿ ಶಾಮಕ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸರ್ವೆ ಕಾರ್ಯದ ಮೂಲಕ ಪತ್ತೆ ಹಚ್ಚಿದ ಇಲಾಖೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾರೆ 96 ಮಂದಿ ಲಿಂಗತ್ವ ಅಲ್ಪಸಂಖ್ಯಾತರು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 96 ಮಂದಿ ಲಿಂಗತ್ವ ಅಲ್ಪಸಂಖ್ಯಾತರು ಇರುವುದನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪತ್ತೆ ಹಚ್ಚಿದೆ.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಆಯ್ಕೆ ಹಾಗೂ ಸಮನ್ವಯ ಸಮಿತಿ ಸಭೆಯಲ್ಲಿ ಇಲಾಖೆಯ ಅಭಿವೃದ್ಧಿ ನಿರೀಕ್ಷಕಿ ಚಂದ್ರಿಕಾ ಅವರು ಸಭೆಗೆ ಈ ಮಾಹಿತಿ ನೀಡಿದರು.

15 ಮಂದಿ ನಿವೇಶನ ರಹಿತ ಲಿಂಗತ್ವ ಅಲ್ಪಸಂಖ್ಯಾತರ ಪಟ್ಟಿಯನ್ನು ಮಹಾನಗರಪಾಲಿಕೆಗೆ ಒದಗಿಸಲಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ ನೋಂದಾಯಿಸಿದ ಒಟ್ಟು 45 ಮಂದಿಗೆ ತಿಂಗಳಿಗೆ ತಲಾ 2000 ಮೊತ್ತವನ್ನು ನೀಡಲಾಗುತ್ತಿದೆ. ಇತ್ತೀಚಿಗೆ ನಡೆದ ಸರ್ವೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 96 ಮಂದಿ ಲಿಂಗತ್ವ ಅಲ್ಪಸಂ ಖ್ಯಾತರು ಇರುವುದು ಪತ್ತೆಯಾಗಿದೆ ಎಂದು ಅವರು ಮಾಹಿತಿ ನೀಡಿದರು.

ಟ್ರಾನ್ಸ್‌ಜೆಂಡರ್ಸ್ ವ್ಯಕ್ತಿಗಳು ನೊಂದಾಯಿಸಿರುತ್ತಾರೆ. ಟ್ರಾನ್ಸ್ ಜೆಂಡರ್ ಪುನರ್ವಸತಿ ಯೋಜನೆಯಡಿ 18 ರಿಂದ 60 ವರ್ಷ ವಯೋಮಿತಿ ವ್ಯಕ್ತಿಗಳು ಸ್ವ-ಉದ್ಯೋಗ ಕೈಗೊಳ್ಳಲು ರೂ.30 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ. ಟ್ರಾನ್ಸ್ ಜೆಂಡರ್ಸ್ ಪುನರ್ವಸತಿ ಯೋಜನೆಯಡಿ ಒಟ್ಟು 16 ಅರ್ಜಿಗಳು ಸ್ವೀಕೃತವಾಗಿದ್ದು, 1 ಅರ್ಜಿಯು ಯಾವುದೇ ದಾಖಲೆಗಳು ಇಲ್ಲದೆ ತಿರಸ್ಕೃತಗೊಂಡಿರುತ್ತದೆ ಎಂದವರು ತಿಳಿಸಿದರು.



ದೂರು ಸಮಿತಿ ಅಗತ್ಯ

ಜಿಲ್ಲಾ ಮಟ್ಟದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಕಾಯ್ದೆಯ ಬಗ್ಗೆ ಐ.ಇ.ಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. 10 ಅಥವಾ 10ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಆಂತರಿಕ ದೂರುಗಳ ಸಮಿತಿ ರಚಿಸಿ, ಜಿಲ್ಲಾ ಮಟ್ಟದಲ್ಲಿ ಆಂತರಿಕ ಮತ್ತು ಸ್ಥಳೀಯ ದೂರು ಸಮಿತಿಯ ವಿಚಾರಣಾ ವರದಿಯಂತೆ ನಿಯಮಾನುಸಾರ ಕ್ರಮ ವಹಿಸಬೇಕು. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆಯನ್ನು ಸಮಗ್ರವಾಗಿ ಅನುಷ್ಠಾನ ಮಾಡಬೇಕು. ಶಿ ಬಾಕ್ಸ್ ಪೋರ್ಟಲ್‌ನಲ್ಲಿ ನಿಖರವಾಗಿ ಮಾಹಿತಿಯನ್ನು ಪರಿಶೀಲಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಗುರುತು ಚೀಟಿ ನೀಡಲು ಸಮುದಾಯ ಆಧಾರಿತ ಸಂಸ್ಥೆಗಳು ಸಹಕರಿಸಬೇಕು. ಲಿಂಗತ್ವ ಅಲ್ಪಸಂಖ್ಯಾತರಿಗೆ ನಿವೇಶನವನ್ನು ಮಂಜೂರು ಮಾಡುವ ಕುರಿತು ಸಂಬಂಧಪಟ್ಟ ಇಲಾಖೆಗಳು ಕ್ರಮವಹಿಸಬೇಕು ಎಂದರು.

ಧನಶ್ರೀ ಯೋಜನೆಯಡಿ ಎಚ್.ಐ.ವಿ ಸೋಂಕಿತ ಮಹಿಳೆಯರಿಗೆ ಹಾಗೂ ಚೇತನ ಯೋಜನೆಯಡಿ ದಮನಿತ ಮಹಿಳೆಯರಿಗೆ ಸ್ವ ಉದ್ಯೋಗಕ್ಕೆ ಪ್ರೋತ್ಸಾಹಧನ ಪಾವತಿಗೆ ಕ್ರಮ ಕೈಗೊಳ್ಳಬೇಕು. ಫಲಾನುಭವಿಗಳಿಗೆ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಆಧಾರ್ ಕಾರ್ಡ್ ಅಥವಾ ಇನ್ನಿತರೆ ದಾಖಲೆಗಳ ಸಮಸ್ಯೆಯಾದಲ್ಲಿ ಶೀಘ್ರ ಪರಿಹರಿಸಲು ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶೆ ಜೈಬುನ್ನೀಸಾ, ಅಪರ ಜಿಲ್ಲಾಧಿಕಾರಿ ರಾಜು ಕೆ, ಸಹಾಯಕ ಪೊಲೀಸ್ ಆಯುಕ್ತೆ ಗೀತಾ ಕುಲಕರ್ಣಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ತಿಮ್ಮಯ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಉಸ್ಮಾನ್ ಎ, ಹಾಗೂ ವಿವಿಧ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.

ಲೋಕಾಯುಕ್ತ ಬಲೆಗೆ ಬಿದ್ದ ಸಹಾಯಕ ಔಷಧ ನಿಯಂತ್ರಕ

ಕೋಟ್ಯಂತರ ಮೊತ್ತದ ಸೊತ್ತು ಜಪ್ತಿ

ಮಂಗಳೂರು: ಸೇವಾವಧಿಯಲ್ಲಿ ನ್ಯಾಯಬದ್ಧ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಸಂಪಾದಿಸಿದ ಸಹಾಯಕ ಔಷಧ ನಿಯಂತ್ರಕನ ಮನೆಗಳಿಗೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಕೋಟ್ಯಂತರ ಮೊತ್ತದ ಆಸ್ತಿಯನ್ನು ಪತ್ತೆಹಚ್ಚಿದ್ದಾರೆ.

ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ ಮಂಗಳೂರು ವ್ಯಾಪ್ತಿಯ ಪ್ರಾದೇಶಿಕ ಉಪ ಔಷಧ ನಿಯಂತ್ರಕರ ಕಚೇರಿಯಲ್ಲಿ ಸಹಾಯಕ ಔಷಧ ನಿಯಂತ್ರಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಾಬು ಬಿ.ಎನ್. ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಬಾಬು ಬಿ.ಎನ್. ತನ್ನ ಸೇವಾವಧಿಯಲ್ಲಿ ನ್ಯಾಯಬದ್ಧ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಸಂಪಾದಿಸಿರುವ ಬಗ್ಗೆ ಪೊಲೀಸ್ ನಿರೀಕ್ಷಕ ಚಂದ್ರಶೇಖರ್ ಕೆ.ಎನ್. ನೀಡಿದ ಸೋರ್ಸ್ ವರದಿ ಆಧಾರದ ಮೇರೆಗೆ ಏ.6ರಂದು ಮಂಗಳೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಅದರಂತೆ ಲೋಕಾಯುಕ್ತ ಮಂಗಳೂರು ವಿಭಾಗ ಪೊಲೀಸ್ ಅಧೀಕ್ಷಕ ಬಿ.ಪಿ. ದಿನೇಶ್ ಕುಮಾರ್ ಮಾರ್ಗದರ್ಶನದಲ್ಲಿ ಒಟ್ಟು 6 ತಂಡಗಳು ಬಾಬು ಬಿ.ಎನ್. ಅವರಿಗೆ ಸಂಬಂಧಿಸಿದ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಟೌನ್‌ನಲ್ಲಿರುವ ವಾಸದ ಮನೆಗಳು, ವಾಣಿಜ್ಯ ಮಳಿಗೆಗಳು, ಬೆಂಗಳೂರು ನಗರದಲ್ಲಿನ ಫ್ಲಾಟ್ ಮತ್ತು ವಾಸದ ಮನೆಗಳು, ಮಂಗಳೂರಿನಲ್ಲಿರುವ ವಾಸ್ತವ್ಯದ ಮನೆ ಹಾಗೂ ಕರ್ತವ್ಯ ನಿರ್ವಹಿಸುವ ಕಚೇರಿಗಳ ಮೇಲೆ ದಾಳಿ ನಡೆಸಿವೆ.

ಈ ಸಂದರ್ಭ ಬಾಬು ಬಿ.ಎನ್. ಅವರಿಗೆ ಸಂಬಂಧಿಸಿದ ಒಟ್ಟು 3,37,04,000 ರು. ಮೌಲ್ಯದ ಸ್ಥಿರ ಮತ್ತು ಚರಾಸ್ತಿಗಳನ್ನು ಪತ್ತೆ ಮಾಡಲಾಗಿದೆ.

ಬಾಬು ಬಿ.ಎನ್. ಅವರಿಗೆ ಸಂಬಂಧಿಸಿದ ಬೆಂಗಳೂರಿನ ವಾಸದ ಮನೆಯಲ್ಲಿ 23,64,000 ರೂ. ನಗದು ಹಾಗೂ ಬೆಲೆಬಾಳುವ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಪತ್ತೆಯಾಗಿವೆ.

ಕಾರ್ಯಾಚರಣೆಯಲ್ಲಿ ಮಂಗಳೂರು ಲೋಕಾಯುಕ್ತ ವಿಭಾಗದ ಡಿವೈಎಸ್ಪಿ ಡಾ. ಗಾನ ಪಿ. ಕುಮಾರ್ ಮತ್ತು ಸುರೇಶ್ ಕುಮಾರ್, ಪೊಲೀಸ್ ಇನ್‌ಸ್ಪೆಕ್ಟರ್‌ಗಳಾದ ಮಂಜುನಾಥ, ಭಾರತಿ, ಶಿವರಾಜ್ ಕುಮಾರ್, ರಾಜೇಂದ್ರ ಹಾಗೂ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಬಳ್ಳಾಪುರ ಜಿಲ್ಲೆಯ ಲೋಕಾಯುಕ್ತ ಘಟಕಗಳ ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು.

ಹಾರಂಗಿ ಪ್ರಭಾರ ಇಇ ಕಚೇರಿ-ನಿವಾಸಗಳಿಗೆ ಲೋಕಾಯುಕ್ತ ದಾಳಿ

ಕುಶಾಲನಗರ: ಹಾರಂಗಿ ಜಲಾಶಯದ ಪ್ರಭಾರ ಕಾರ್ಯಪಾಲಕ ಅಭಿಯಂತರರ ಕಚೇರಿ ಹಾಗೂ ನಿವಾಸಗಳಿಗೆ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿದ್ದಾರೆ. ಹಾರಂಗಿಯ ಪ್ರಭಾರ ಕಾರ್ಯಪಾಲಕ ಅಭಿಯಂತರ ಐ.ಕೆ.ಪುಟ್ಟಸ್ವಾಮಿ ಅವರು ಆದಾಯಕ್ಕಿಂತ ಹೆಚ್ಚಿನ ಆಸ್ತಿ ಸಂಪಾದನೆ ಆರೋಪದ ಹಿನ್ನೆಲೆಯಲ್ಲಿ ಈ ದಾಳಿ ನಡೆದಿರುವುದಾಗಿ ಹೇಳಲಾಗಿದೆ ಮಂಗಳವಾರ ಬೆಳಗ್ಗೆ ಹಾಸನದ ವಿದ್ಯಾನಗರದಲ್ಲಿರುವ ಪುಟ್ಟಸ್ವಾಮಿ ಅವರ ಸ್ವಂತ ಮನೆ, ಮೈಸೂರಿನ ತಿಲಕ ನಗರದಲ್ಲಿರುವ ಬಾಡಿಗೆ ಮನೆ, ಹಾರಂಗಿಯ ಅಣೆಕಟ್ಟೆ ಕಚೇರಿ, ಕುಶಾಲನಗರದ ವಿಭಾಗೀಯ ಕಚೇರಿಗೆ ದಾಳಿ ನಡೆಸಿರುವ ಲೋಕಾಯುಕ್ತ ಅಧಿಕಾರಿಗಳು ಶೋಧ ನಡೆಸಿದ್ದಾರೆ.



ಬೈಂದೂರು: ನೇಣಿಗೆ ಶರಣಾದ ಯುವತಿ

ಬೈಂದೂರು: ತಾಲೂಕಿನ ತಗ್ಗರ್ಸೆ ಗ್ರಾಮದ ಭೂಸಕ್ರಡಿ ಹಾಲಂಬೇರು ಪ್ರದೇಶದಲ್ಲಿ ಯುವತಿಯೊಬ್ಬಳು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಂಭವಿಸಿದೆ. ಭಾಗ್ಯಶ್ರೀ ಗಾಣಿಗ (23) ಮೃತ ಯುವತಿ ಎಂದು ಗುರುತಿಸಲಾಗಿದೆ. ತಮ್ಮ ಮನೆಯಲ್ಲಿ ಕೋಣೆಯ ಫ್ಯಾನ್‌ಗೆ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.



ಗುಡ್ಡೆಅಂಗಡಿಯ ಇಂಟರ್‌ಲಾಕ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಭಾಗ್ಯಶ್ರೀ ಅವರು ಏ. 3ರಂದು ರಾತ್ರಿ 10 ಗಂಟೆಗೆ ಮನೆಯವರೊಂದಿಗೆ ಊಟ ಮುಗಿಸಿ ಮೇಲ್ಮಹಡಿಯ ತಮ್ಮ ಕೋಣೆಗೆ ಮಲಗಲು ತೆರಳಿದ್ದರು. ಸುಮಾರು 10.15ರ ಸುಮಾರಿಗೆ ಅಕ್ಕ ಜಯಶ್ರೀ ಅವರು ಹಾಲು ನೀಡಲು ಕೋಣೆಗೆ ಹೋದಾಗ ಘಟನೆ ಬೆಳಕಿಗೆ ಬಂದಿದೆ. ತಕ್ಷಣವೇ ಅವರನ್ನು ಕೆಳಗಿಳಿಸಿ ಬೈಂದೂರು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಅಷ್ಟರಲ್ಲೇ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಮೃತರ ಅಕ್ಕ ಜಯಶ್ರೀ ನೀಡಿದ ದೂರಿನ ಮೇರೆಗೆ ಬೈಂದೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

- ತಮ್ಮ ಮನೆಯಲ್ಲಿ ಕೋಣೆಯ ಫ್ಯಾನ್‌ಗೆ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ
- ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ.

ಇಕ್ಕಟ್ಟು ತಂದ ಅಮೆರಿಕಾ-ಇರಾನ್ ಯುದ್ಧ ಬಿಕ್ಕಟ್ಟು

ಕೊಡಗಿನಲ್ಲೇ ಸಿಲುಕಿಕೊಂಡ ಇರಾನ್ ಮೂಲದ ದಂಪತಿ

ಮಡಿಕೇರಿ: ತಮ್ಮ ಮಕ್ಕಳನ್ನು ಬಿಟ್ಟು ಇರಾನ್‌ನಿಂದ ಕೊಡಗಿಗೆ ಬಂದಿದ್ದ ದಂಪತಿ ಯುದ್ಧದ ಪರಿಣಾಮವಾಗಿ ಇಲ್ಲಿಯೇ ಸಿಲುಕಿಕೊಂಡಿದ್ದಾರೆ.



ಅಮೇರಿಕಾ-ಇರಾನ್ ನಡುವಿನ ಯುದ್ಧದ ಪರಿಣಾಮವಾಗಿ ವಿಮಾನ ಸೇವೆ ರದ್ದಾಗಿದ್ದು, ಇದರಿಂದಾಗಿ ದಂಪತಿ ತಮ್ಮ ಊರಿಗೆ ಮರಳಲಾಗದೆ ಕೊಡಗಿನಲ್ಲೇ ಉಳಿಯುವಂತಾಗಿದೆ. ಯುದ್ಧ ಪರಿಸ್ಥಿತಿಯಿಂದಾಗಿ ಇರಾನ್‌ನಲ್ಲಿ ಇಂಟರ್ನೆಟ್ ಸೇವೆಗಳು ಬಹುತೇಕ ಸ್ಥಗಿತಗೊಂಡಿದ್ದು, ಇದರಿಂದಾಗಿ ತಮ್ಮ ಮಕ್ಕಳನ್ನೂ ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ಯುದ್ಧದಿಂದಾಗಿ ಬದುಕು ಅತಂತ್ರವಾಗಿದೆ. ಈ ಯುದ್ಧ ಆದಷ್ಟು ಬೇಗ ಮುಗಿಯುವಂತಾಗಲಿ ಎಂದು ಈ ದಂಪತಿ ದೇವರಲ್ಲಿ ಪ್ರಾರ್ಥಿಸುತ್ತಿದ್ದಾರೆ.

ಮಡಿಕೇರಿ ತಾಲೂಕಿನ ಮೂರ್ನಾಡು ಸಮೀಪದ ಕಾಂತೂರಿನವರಾದ ನವೀನಾ ಅವರು 40 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದರು. ಈ ವೇಳೆ ಇರಾನ್‌ನ ನಾದರ್ ಅವರೊಂದಿಗೆ ಪರಿಚಯವಾಗಿ, ಬಳಿಕ ಪ್ರೀತಿಸಿ ವಿವಾಹವಾದರು.

ಮದುವೆಯ ನಂತರ ದಂಪತಿ ಇರಾನ್‌ನ ಬೋಜ್ ನೂರ್ ಪ್ರದೇಶದಲ್ಲಿ ನೆಲೆಸಿದ್ದು, ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಒಬ್ಬರು ಸಿವಿಲ್ ಇಂಜಿನಿಯರ್ ಮತ್ತು ಮತ್ತೊಬ್ಬರು ಆರ್ಕಿಟೆಕ್ಟ್ (ವಾಸ್ತುಶಿಲ್ಪಿ) ಆಗಿದ್ದಾರೆ. ಈ ಕುಟುಂಬ ಇರಾನಿನಲ್ಲಿ ದಾಳಿಂಬೆ, ದ್ರಾಕ್ಷಿ, ಸೇಬು, ಬ್ಲೂಬೆರಿ, ಬಾದಾಮಿ, ಖರ್ಜೂರ, ಪಿಸ್ತಾ ಸೇರಿದಂತೆ ಹಣ್ಣುಗಳ ಫಾರಮ್ ಗಳನ್ನು ಹೊಂದಿದ್ದು, ಜೊತೆಗೆ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದಾರೆನ್ನಲಾಗಿದೆ.

ಡಿಸೆಂಬರ್‌ನಲ್ಲಿ ಬರುತ್ತಿದ್ದರು

ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಕೊಡಗಿಗೆ ಬರುತ್ತಿದ್ದ ದಂಪತಿ ಮಾರ್ಚ್‌ನಲ್ಲಿ ಇರಾನ್‌ಗೆ ಮರಳುತ್ತಿದ್ದರು. ಈ ಬಾರಿಯೂ ಡಿಸೆಂಬರ್‌ನಲ್ಲಿ ಕೊಡಗಿಗೆ ಬಂದಿದ್ದ ಇವರು ಮಾ.16ರಂದು ಬೆಂಗಳೂರಿನಿಂದ ಶಾರ್ಜಾ ಮೂಲಕ ಇರಾನ್‌ನ ಬೋಜ್‌ನೂರ್‌ಗೆ ತೆರಳಲು ವಿಮಾನ ಟಿಕೆಟ್ ಬುಕ್ ಮಾಡಿದ್ದರು. ಆದರೆ ಅಮೆರಿಕ-ಇರಾನ್ ಯುದ್ಧದ ಪರಿಣಾಮವಾಗಿ ವಿಮಾನ ರದ್ದಾಯಿತು. ನಂತರ ಏ. 15ಕ್ಕೆ ಮತ್ತೊಮ್ಮೆ ಪ್ರಯಾಣ ಬುಕ್ ಮಾಡಿದ್ದರು. ಆ ವಿಮಾನವೂ ರದ್ದಾಗಿದ್ದು, ಯುದ್ಧ ಇನ್ನಷ್ಟು ಮುಂದುವರಿದರೆ ಅವರು ಕೊಡಗಿನಲ್ಲೇ ಇನ್ನಷ್ಟು ದಿನ ಉಳಿಯಬೇಕಾಗುತ್ತದೆ. ಇದರೊಂದಿಗೆ ಅವರ ಪಾಸ್‌ಪೋರ್ಟ್ ಅವಧಿ ಮೇ ತಿಂಗಳಲ್ಲಿ ಮುಕ್ತಾಯಗೊಳ್ಳಲಿದ್ದು, ಇದರಿಂದಾಗಿ ದಂಪತಿ ಆತಂಕಕ್ಕೆ ಒಳಗಾಗಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಬುಧವಾರ 08, ಏಪ್ರಿಲ್ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಹೊಸ ದಿಗಂತ ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ವಿಧಾನಸಭಾ ಚುನಾವಣಾ ಬಹಿರಂಗ ಪ್ರಚಾರದ ಅಂತಿಮ ದಿನವಾದ ಮಂಗಳವಾರ ವರ್ಲ ಪೇಟೆಯಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್, ಬಿಜೆಪಿ ಮುಖಂಡ ಕೆ.ಅಣ್ಣಾಮಲೈ ರೋಡ್ ಶೋ ನಡೆಸಿ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಮೂಡಿಸಿದರು. ವಾದ್ಯಘೋಷ, ಮುತ್ತುಕೊಡೆಗಳೊಂದಿಗೆ ನೂರಾರು ಮಂದಿ ಕಾರ್ಯಕರ್ತರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಇಂದಿನ ಹವಾಮಾನ



ದಕ್ಷಿಣ ಕನ್ನಡ	ಉಡುಪಿ
34^0 25^0	32^0 26^0

ಗಲ್ಫ್ ರಾಷ್ಟ್ರಗಳಿಗೆ ವಿಮಾನ ಸೇವೆ ಆರಂಭ

ಫಲಿಸಿತು ಪ್ರಾರ್ಥನೆ

ಯುದ್ಧ ನಡುವೆ ಹುಟ್ಟೂರ ಕಾಣುವ ಭಾಗ್ಯ

ಮಂಗಳೂರು: ಮಧ್ಯಪ್ರಾಚ್ಯ ರಾಷ್ಟ್ರಗಳ ಯುದ್ಧದ ನಡುವೆಯೇ ಮಂಗಳೂರು -ದುಬೈ ಮತ್ತು ಅಬುದಾಬಿ ನಡುವೆ ವಿಮಾನ ಸಂಚಾರ ಆರಂಭವಾಗಿದೆ.

ಈ ಬೆಳವಣಿಗೆಯಿಂದಾಗಿ ಈ ಭಾಗದಲ್ಲಿ ಉದ್ಯೋಗ ಕಂಡುಕೊಂಡಿರುವ ಮಂದಿ ನಿಟ್ಟುಸಿರು ಬಿಡುವಂತಾಗಿದೆ.

ಹುಟ್ಟೂರಿಗೆ ಮರಳುವ ತರಾತುರಿ

ಸದ್ಯಕ್ಕೀಗ ದುಬೈ, ಅಬುದಾಬಿಯಿಂದ ಮಂಗಳೂರಿಗೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ತನ್ನ ವಿಮಾನ ಹಾರಾಟ ಆರಂಭಿಸಿದೆ. ಇದರ ನಿರೀಕ್ಷೆಯಲ್ಲಿಯೇ ಇದ್ದ ಮಂದಿ ಇದೀಗ ಮರಳಿ ತಮ್ಮೂರಿಗೆ ಹೊರಡುವ ತರಾತುರಿಯಲ್ಲಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಸಾವಿರಾರು ಮಂದಿ ತಮ್ಮೂರಿಗೆ ವಾಪಸಾಗುವ ಸಾಧ್ಯತೆ ಇದೆ.

ಮನೆ ಮಂದಿ ಆತಂಕದಲ್ಲಿದ್ದರು

ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧ ಆರಂಭವಾದಾಗ ಕರಾವಳಿ ಭಾಗದಲ್ಲಿ ಹೆಚ್ಚಿನ ಆತಂಕ ಸೃಷ್ಟಿಯಾಗಿತ್ತು. ಇಲ್ಲಿ ಮನೆ ಮಂದಿಯೂ ಸಹಜವಾಗಿ ಆತಂಕಕ್ಕೊಳಗಾಗಿದ್ದರು. ಒಮ್ಮೆ ಹೇಗಾದರೂ ತಮ್ಮವರು ವಾಪಾಸು ಬಂದರೆ ಸಾಕು ಎಂದು ದೇವರಿಗೆ ಮೊರೆ ಇಟ್ಟಿದ್ದರು. ಇದೀಗ ಅವರ ಪ್ರಾರ್ಥನೆಯ ಫಲವೋ ಎಂಬಂತೆ ವಿಮಾನ ಹಾರಾಟ ಆರಂಭವಾಗಿದೆ.

ಈ ನಡುವೆ ಮಂಗಳೂರು ಹಾಗೂ ಕುವೈಟ್ ನಡುವೆ ಜರ್ಝೀರಾ ಏರ್‌ವೇಸ್ ಇದೇ ಏಪ್ರಿಲ್ 8ರಿಂದ ಬೈ-ವೀಕ್ಲಿ ಚಾರ್ಟರ್ ವಿಮಾನ ಸಂಚಾರ ಕೂಡಾ ಆರಂಭಿಸಲಿದೆ. ಈ ವಿಮಾನ ಬುಧವಾರ, ಭಾನುವಾರ ಸಂಚಾರ ನಡೆಸಲಿವೆ.



ಯಾವೆಲ್ಲ ವಿಮಾನ ಸೇವೆ ಪುನರಾರಂಭ?

ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದುಬೈ ಮತ್ತು ಅಬುಧಾಬಿಗೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಮಂಗಳವಾರ ವಿಮಾನ ಸಂಚಾರ ಆರಂಭಿಸಿದೆ. ಮಂಗಳೂರು- ದುಬೈ- ಮಂಗಳೂರು (ಐಎಕ್ಸ್ 6040 / 6041) ಮತ್ತು ಮಂಗಳೂರು- ಅಬುಧಾಬಿ- ಮಂಗಳೂರು (ಐಎಕ್ಸ್ 6083 / 6084) ವಿಮಾನ ಸಂಚಾರ ಆರಂಭವಾಗಿದೆ.

ಕರಾವಳಿ ಭಾಗದ ಸಾವಿರಾರು ಮಂದಿ

ಕರಾವಳಿಯ ಸಾವಿರಾರು ಮಂದಿ ದುಬೈ, ಅಬುದಾಬಿ, ಕುವೈಟ್ ಮುಂತಾದೆಡೆ ಉದ್ಯೋಗದಲ್ಲಿದ್ದಾರೆ. ವಿಮಾನ ಸಂಚಾರ ಆರಂಭ ಆಗಿರುವುದರಿಂದ ಇವರೆಲ್ಲ ಮರಳಿ ತಮ್ಮೂರಿಗೆ ಬರಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಹೆಚ್ಚುತ್ತಿದೆ ಧಗೆ । ತಗ್ಗುತ್ತಿದೆ ಉತ್ಪಾದನೆ

ಈಗ ರಬ್ಬರ್ ಕೃಷಿಗೆ ತಟ್ಟಿದೆ ಬಿಸಿಲ ಬಾಧೆ

ಸಮಸ್ಯೆಯ ಸುಳಿಯಲ್ಲಿ ಬೆಳೆಗಾರ


ಕಾಸರಗೋಡು: ರಬ್ಬರ್ ಬೆಳೆಗೆ ಆಕರ್ಷಕ ಬೆಲೆ ಲಭಿಸುತ್ತಿರುವ ಸಂದರ್ಭ ಬೇಸಿಗೆಯ ಉಷ್ಣಾಂಶ ಹೆಚ್ಚಳಗೊಂಡು ವಾತಾವರಣದ ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯ ರಬ್ಬರ್ ಕೃಷಿಕರು ಸಮಸ್ಯೆಯ ಸುಳಿಯಲ್ಲಿ ಸಿಲುಕುವಂತಾಗಿದೆ.

ತೂಕದಲ್ಲಿ ಗಣನೀಯವಾದ ಇಳಿಕೆ

ಚಿಗುರೆಲೆಗಳ ನಡುವಿನಿಂದ ಸೂರ್ಯಪ್ರಕಾಶ ನೇರವಾಗಿ ಬೀಳುತ್ತಿರುವ ಹಿನ್ನೆಲೆಯಲ್ಲಿ ಮರಗಳನ್ನು ಕೆತ್ತಿ ಹಾಲು ತೆಗೆಯುವ ಸಂದರ್ಭ ಮರಗಳು ಒಣಗುತ್ತವೆ. ಪ್ರಾಯವಾದ ಮರಗಳನ್ನು ಮತ್ತು ಸಣ್ಣ ಮರಗಳನ್ನು ಈ ಸಮಸ್ಯೆಯು ಸಮಾನವಾಗಿ ಬಾಧಿಸುತ್ತದೆ.

ಈ ವರ್ಷ ಪರಿಸ್ಥಿತಿ ಮತ್ತಷ್ಟು ಕಠಿಣ

ಇದೇ ವೇಳೆ ವಿಪರೀತ ಉಷ್ಣಾಂಶದಿಂದಾಗಿ ಲಭಿಸಿದ ರಬ್ಬರ್ ಹಾಲನ್ನು ಶೀಟ್ ಮಾಡಿ ಒಣಗಿಸುವಾಗಲೂ ತೂಕದಲ್ಲಿ ಗಣನೀಯ ಇಳಿಕೆ ಕಂಡುಬರುತ್ತಿದೆ. ಬೇಸಿಗೆಯಲ್ಲಿ ಇಂತಹ ಸಮಸ್ಯೆಗಳು ಸಾಮಾನ್ಯವಾಗಿದ್ದರೂ ಈ ವರ್ಷ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ ಎಂದು ಈ ಭಾಗದ ಕೃಷಿಕರು ಹೇಳುತ್ತಿದ್ದಾರೆ. ⋙ಪುಟ 5



ಹಲವೆಡೆ ಟ್ಯಾಪಿಂಗ್ ನಿಲ್ಲಿಸಿದ್ದಾರೆ ಕೃಷಿಕರು

ರಬ್ಬರ್ ಹಾಲಿನ ಉತ್ಪಾದನೆ ದಿಢೀರನೆ ಕುಸಿದಿದ್ದು, ಹಲವೆಡೆ ರಬ್ಬರ್ ಕೃಷಿಕರು ಟ್ಯಾಪಿಂಗ್ ನಿಲ್ಲಿಸಿದ್ದಾರೆ. ಸಹಜವಾದ ಎಲೆ ಉದುರುವಿಕೆ ಬಳಿಕ ಹೊಸ ಎಲೆಗಳು ಚಿಗುರುವ ಸಮಯವಾಗಿರುವುದರಿಂದ ಟ್ಯಾಪಿಂಗ್ ನಡೆಸಿದರೂ ಹೇಳಿಕೊಳ್ಳುವಷ್ಟು ರಬ್ಬರ್ ಹಾಲು ದೊರಕದೆ ಜಿಲ್ಲೆಯ ಕೃಷಿಕರು ಕಂಗಾಲಾಗಿದ್ದಾರೆ.

ಸುತ್ತಮುತ್ತ

ಕರಾವಳಿ ಭಾಗದಲ್ಲಿ ಶೀಘ್ರ ಮತ್ತೆ ಮಳೆಯ ಸಾಧ್ಯತೆ?

ಮಂಗಳೂರು: ದಕ್ಷಿಣ ಕನ್ನಡ ಸಹಿತ ಕರಾವಳಿ ಜಿಲ್ಲೆಗಳಲ್ಲಿ ಏ.11 ಹಾಗೂ 12 ರಂದು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅಲ್ಲಿಯ ತನಕ ಇದೇ ಮಾದರಿಯ ಹವಾಮಾನ ಮುಂದುವರಿಯಲಿದೆ ಎಂದು ಇಲಾಖೆ ಹೇಳಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ತುಸು ಇಳಿಕೆ

ಮಂಗಳೂರು: ಕಳೆದ ಕೆಲವು ದಿನಗಳಿಂದ ಸತತ ಏರಿಕೆ ಕಾಣುತ್ತಿದ್ದ ಉಷ್ಣಾಂಶ ಮಂಗಳವಾರ ತುಸು ಇಳಿಕೆ ಕಂಡಿದೆ. ಜಿಲ್ಲೆಯಲ್ಲಿ ಗರಿಷ್ಠ ತಾಪಮಾನ 30 ಡಿಗ್ರಿ ಸೆಲ್ಸಿಯೆಸ್ ಇತ್ತು. ಸಂಜೆಯ ಬಳಿಕ ಗ್ರಾಮೀಣ ಭಾಗಗಳಲ್ಲಿ ತಾಪಮಾನ ಇಳಿಕೆಯಾಗುತ್ತಿದ್ದು, ಚಳಿಯ ಅನುಭವವಾಗುತ್ತಿದೆ.

ಬೇಸಿಗೆ ಮುಗೀತಾ ಬಂದರೂ ರಿಪೇರಿಯಾಗದ ಮಿನಿ ವಿಧಾನ ಸೌಧ, ಪಡಸಾಲೆ

ಆಡಳಿತ ವೈಖರಿ ಅಣಕಿಸುತ್ತಿದೆ ನೀಲಿ ಟರ್ಪಾಲು!

ಸುಳ್ಯ: ಹಿಂದಿನ ಮಳೆಗಾಲದಲ್ಲಿ ಮರದ ಬೃಹತ್ ರೆಂಬೆ ಮುರಿದು ಬಿದ್ದು ಹಾನಿಯಾಗಿದ್ದ ಇಲ್ಲಿನ ಸಕಾಲ ಅರ್ಜಿ ಸ್ವೀಕಾರ ಪಡಸಾಲೆ ಹಾಗೂ ತಾಲೂಕು ಆಡಳಿತ ಸೌಧ ಮೇಲ್ಛಾವಣಿ ಈಗ ಬೇಸಗೆ ಮುಗಿಯುತ್ತಾ ಬಂದರೂ ಇನ್ನೂ ದುರಸ್ತಿಯಾಗಿಲ್ಲ.

ಆ ಸಂದರ್ಭದಲ್ಲಿ ಹಾನಿಗೊಂಡಿರುವ ಪಡಸಾಲೆ ಮೇಲ್ಛಾವಣಿ ಮರು ನಿರ್ಮಾಣ ಸಾಧ್ಯವಾಗದೆ ಟರ್ಪಲ್ ಹೊದಿಕೆ ಮೂಲಕ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಆದರೆ ಇದೀಗ ಈ ಟಾರ್ಪಲ್ ಕೂಡಾ ಗಾಳಿಗೆ ಅಸ್ತವ್ಯಸ್ತವಾಗಿದ್ದು ಇದನ್ನು ಶೀಘ್ರ ದುರಸ್ತಿಪಡಿಸಿ ಮಳೆಗಾಲ ಪೂರ್ವ ತಯಾರಿ ನಡೆಸಬೇಕಿದೆ. ಟಾರ್ಪಲ್ ಅರೆಬರೆ ತೆರೆದುಕೊಂಡ ಕಾರಣ ಕೆಲದಿನಗಳ ಹಿಂದೆ ಸುರಿದ ಬೇಸಗೆ ಮಳೆ ಸಂದರ್ಭ ತಾಲೂಕು ಆಢಳಿತ ಸೌಧದ ಪಡಸಾಲೆ ಹಾಗೂ ಮಿನಿ ವಿಧಾನ ಸೌಧ ಕಚೇರಿಯ ಮೇಲಿನ ಮಹಡಿಯು ಸೋರಿಕೆಯಾಗಿ ಸಂಕಷ್ಟದ ಸ್ಥಿತಿ ಎದುರಾಗಿತ್ತು. ಇಲ್ಲಿ ಕಾರ್ಯನಿರ್ವಹಿಸುವ ಸರ್ವೆ ಇಲಾಖೆ ಕಚೇರಿಗಳಲ್ಲಿನ ಕಡತಗಳಿಗೂ ಸಮಸ್ಯೆ ಉಂಟಾಗಿತ್ತು.

ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ

ಕಳೆದ ಬಾರಿ ಇದೇ ಮಾದರಿಯ ಸಮಸ್ಯೆ ಉದ್ಭವಿಸಿದ್ದರಿಂದ ದುರಸ್ತಿಗೆ ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆ ಕೂಡಾ ಸಲ್ಲಿಸಲಾಗಿತ್ತು. ಈ ಬಾರಿಯ ಮಳೆಗಾಲಕ್ಕೆ ಮುಂಚಿತವಾಗಿ ಸೋರುವಿಕೆಯ ಸಮಸ್ಯೆಗೆ ಸಂಬಂಧಪಟ್ಟವರು ಮುಕ್ತಿ ಕಾಣಿಸಬೇಕಿದೆ.





> **ಸೂಕ್ತ ಕ್ರಮ ವಹಿಸಲಾಗಿದೆ**
>
> ಸಮಸ್ಯೆ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದು ಅವರ ಮೂಲಕ ಸರಕಾರಕ್ಕೆ ಸಲ್ಲಿಸಿ ಇದೀಗ ಸುಮಾರು 21 ಲಕ್ಷ ರೂಪಾಯಿಗಳ ಅನುದಾನ ಲೋಕೋಪಯೋಗಿ ಇಲಾಖೆಯ ಮೂಲಕ ಬಿಡುಗಡೆ ಗೊಂಡಿದ್ದು ಸೂರುವಿಕೆ ತಡೆಗಟ್ಟಲು ಈ ಮೂಲಕ ಕ್ರಮ ವಹಿಸಲಾಗಿದೆ.
>
> ● ಚಂದ್ರಶೇಖರ, ಉಪ ತಹಶೀಲ್ದಾರ್

ಬಿಸಿಲನ್ನೂ ಲೆಕ್ಕಿಸದೆ ಬಿರುಸಿನ ಪ್ರಚಾರ



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಅಶ್ವಿನಿ ಎಂ.ಎಲ್ ಅವರು ಮಂಗಳವಾರ ತಮ್ಮ ಕ್ಷೇತ್ರದ ವಿವಿಧ ಕಡೆಗಳಲ್ಲಿ ಬಿರುಸಿನ ಚುನಾವಣಾ ಪ್ರಚಾರ ಕೈಗೊಂಡರು.

ಕಾಯಕಲ್ಪದ ನಿರೀಕ್ಷೆಯಲ್ಲಿದೆ ಬರೋಬ್ಬರಿ 1.6 ಎಕ್ರೆ ವಿಸ್ತೀರ್ಣದ ಬಾಡ ಬಿಯಾರದ ಬೃಹತ್ ಸರ್ಕಾರಿ ಕೆರೆ

ವರ್ಷ ಪೂರ್ತಿ ನೀರುಣಿಸುವ ಜಲಭಂಡಾರಕ್ಕೆ ಇದೆಂಥಾ ಸ್ಥಿತಿ?

ಬೈಂದೂರು: ಹಿಂದೊಂದು ಕಾಲದಲ್ಲಿ ಸುತ್ತದ ಹಲವು ಹಳ್ಳಿಗಳ ಜನ, ಜಾನುವಾರುಗಳಿಗೆ ನೀರಿನ ಆಶ್ರಯವಾಗಿ, ಇಲ್ಲಿನ ಪಟ್ಟಣ ಪಂಚಾಯತ್ ವ್ಯಾಪ್ತಿಯ ಬಹು ವಿಸ್ತಾರದ ಕೆರೆಗಳ ಪೈಕಿ ಒಂದಾಗಿ ಗುರುತಿಸಿಕೊಂಡಿರುವ ಬಾಡ ಬಿಯಾರದ ಐತಿಹಾಸಿಕ ಕೆರೆ ಇತ್ತೀಚಿನ ವರ್ಷಗಳಲ್ಲಿ ನಿರ್ವಹಣೆಯ ಕೊರತೆಯಿಂದ ಸೊರಗಿದೆ.

ಮನವಿಗೆ ಕವಡೆ ಕಿಮ್ಮತ್ತು ಸಿಕ್ಕಿಲ್ಲ

ಇದನ್ನು ಹೂಳೆತ್ತಿ, ಸುತ್ತಲೂ ಶಾಶ್ವತ ತಡೆಗೋಡೆ ಒಂದನ್ನು ನಿರ್ಮಾಣ ಮಾಡುವಂತೆ ಸ್ಥಳೀಯರು ಹಲವು ಬಾರಿ ಸಂಬಂಧಪಟ್ಟವರ ಗಮನಕ್ಕೆ ತರುತ್ತಿದ್ದರೂ, ಯಾರೂ ಕ್ಯಾರೇ ಎನ್ನಲಿಲ್ಲ ಎಂದು ಸ್ಥಳೀಯರು ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಈ ಜಲಮೂಲ ಕೃಷಿಕರ ಜೀವನಾಡಿ

ಐತಿಹಾಸಿಕ ಬಿಯಾರ ಕೆರೆ ಮೂಲಕ ಹಲವಾರು ವರ್ಷ ಹಿಂದೆ ಕೃಷಿಕರು ಈ ಭಾಗ ದಲ್ಲಿ ನೂರಾರು ಎಕ್ರೆ ಕೃಷಿಭೂಮಿಯಲ್ಲಿ ಮಳೆಗಾಲ ಬಳಿಕ ಎರಡನೆ ಬೆಳೆ ಬೆಳೆಯುತ್ತಿದ್ದು, ಅದಕ್ಕಾಗಿ ಈ ಕೆರೆಯ ನೀರನ್ನು ನೆಚ್ಚಿಕೊಂಡಿದ್ದರು. ಜಾನುವಾರು ಮೈತೊಳೆಯಲು ಕೂಡಾ ಈ ನೀರನ್ನೇ ಬಳಸಿಕೊಳ್ಳುತ್ತಿದ್ದರು. ⋙ಪುಟ 5



ಸಂಗಮ ವಿಶೇಷ

> **ಕೆರೆ ನಿರ್ವಹಣೆಗೆ ಶೀಘ್ರ ಕ್ರಮವಾಗಲಿ**
>
> ಕೆರೆ ರಸ್ತೆಗೆ ಹೊಂದಿಕೊಂಡು ಅಪಾಯ ಆಹ್ವಾನಿಸುತ್ತಿದೆ. ಆದಷ್ಟು ಶೀಘ್ರ ಆಡಳಿತ ವ್ಯವಸ್ಥೆ ಇದರ ನಿರ್ವಹಣೆಗಾಗಿ ಕ್ರಮ ಕೈಗೊಂಡರೆ ಈ ಭಾಗದ ಜನ ಜಾನುವಾರುಗಳಿಗೆ ಸಾಕಷ್ಟು ಅನುಕೂಲವಾಗುತ್ತದೆ.
>
> ● ಶಂಕರ ದೇವಾಡಿಗ ಸ್ಥಳೀಯ ನಿವಾಸಿ

- ಕೆರೆಯಲ್ಲಿ ಮಳೆಗಾಲದಲ್ಲಿ ಕಾಣಸಿಗುತ್ತದೆ ಸುಮಾರು 12 ಅಡಿಗೂ ಅಧಿಕ ನೀರು ಸಂಗ್ರಹ
- ಬೇಸಿಗೆಯಲ್ಲಿ ನೀರಿನ ಸಂಗ್ರಹ ಕಡಿಮೆಯಾದರೂ ಮಳೆಗಾಲದ ಆರಂಭದವರೆಗೂ ನೀರಿನ ಒರತೆ
- ನೂರಾರು ಮನೆಗಳ ಬಾವಿಗಳಲ್ಲಿ ಅಂತರ್ಜಲಮಟ್ಟ ಹೆಚ್ಚಳಕ್ಕೆ ಕಾರಣವಾಗಿದೆ ಈ ಜಲಮೂಲ

ನಿರ್ವಹಣೆ ಮಾಡಿದರೆ ಇಲ್ಲಿ ವರ್ಷವಿಡೀ ನೀರು

ಸುಮಾರು 1.6 ಎಕ್ರೆ ವಿಸ್ತೀರ್ಣ ಹೊಂದಿರುವ ಬಾಡ ಬಿಯಾರದ ಬೃಹತ್ ಸರ್ಕಾರಿ ಕೆರೆಯಿಂದ ಈ ಭಾಗದಲ್ಲಿ ಅಂತರ್ಜಲ ವೃದ್ಧಿಯಾಗಿ ಬಿರು ಬೇಸಿಗೆಯಲ್ಲಿಯೂ ನೀರಿನ ಸಮಸ್ಯೆ ಕಾಡಿಲ್ಲ. ಸುಮಾರು 15 ವರ್ಷ ಹಿಂದೆ ಹೂಳೆತ್ತಲಾಗಿದೆ. ಆದರೆ ಈಗ ಮತ್ತೆ ಹೂಳು ಶೇಖರಣೆಗೊಂಡಿದೆ. ಸಮರ್ಪಕ ನಿರ್ವಹಣೆ ಮಾಡಿದರೆ ಮುಂಗಾರು ಆರಂಭ ತನಕವೂ ಇದರಲ್ಲಿ ನೀರು ತುಂಬಿರುತ್ತದೆ ಎನ್ನುತ್ತಾರೆ ಸ್ಥಳೀಯರು.

ಸುತ್ತ ಮುತ್ತ

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಬಿಕರ್ನಕಟ್ಟೆ, ತಾತಾವು, ಜಯಶ್ರೀಗೇಟ್, ತಾರೆತೋಟ, ಬಜ್ಜೋಡಿ, ಸಂದೇಶ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.8ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ನಾಳೆ ಸಾನಿಧ್ಯಕ್ಕೆ ರಾಜ್ಯ ನಿರ್ದೇಶಕರ ಭೇಟಿ

ಮಂಗಳೂರು: ಕರ್ನಾಟಕ ಸರಕಾರದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕ ಅಶೋಕ್ ಡಿ.ಆರ್ ಅವರು ಏ.9ರಂದು ಬೆಳಗ್ಗೆ 9.30ಕ್ಕೆ ಮಂಗಳೂರಿನ ಶಕ್ತಿನಗರದಲ್ಲಿರುವ 'ಸಾನಿಧ್ಯ' ವಸತಿ ಶಾಲೆಗೆ ಭೇಟಿ ನೀಡಲಿದ್ದಾರೆ. ಸಾನಿಧ್ಯದ ಚಟುವಟಿಕೆಗಳನ್ನು ವೀಕ್ಷಿಸಿದ ಬಳಿಕ ಬೆಳಗ್ಗೆ 11ಕ್ಕೆ ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರ ಜೊತೆ ಸಾನಿಧ್ಯದಲ್ಲಿ ಸಭೆ ನಡೆಸಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಉಸ್ಮಾನ್ ಹಾಗೂ ವಿಕಲಚೇತನರ ಸಬಲೀಕರಣ ಅಧಿಕಾರಿ ಮನೀಷ್ ನಾಯಕ್ ಭಾಗವಹಿಸಲಿದ್ದಾರೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

ಏ.9ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಬೋಳೂರು, ಮಠದಕಣಿ, ತಿಲಕನಗರ, ಹಿಂದೂಸ್ತಾನ್ ಲಿವರ್ ಹಿಂದುಗಡೆ, ಅಮೃತಾನಂದಮಯಿ ಶಾಲೆ, ಎಸ್.ಬಿ ರೋಡ್, ಜಾರಂದಾಯ ದೈವಸ್ಥಾನ, ಪ್ರಭು ಸ್ಟ್ರೀಟ್, ಉರ್ವ ಚರ್ಚ್ ರೋಡ್, ಪಂಚಲಿಂಗೇಶ್ವರ ದೇವಸ್ಥಾನ, ಸಾಯಿಬಾಬ ದೇವಸ್ಥಾನ, ದೇಸಾಯಿ ಬೀಡಿ ರೋಡ್, ಮಲರಾಯ ದ್ವಾರ, ಸ್ಪಿಂಗ್ ಫೀಲ್ಡ್ ಲೇಔಟ್, ಮಲರಾಯ ದೈವಸ್ಥಾನ, ಉರ್ವಸ್ಟೋರ್, ಅಯ್ಯಪ್ಪಗುಡಿ, ಇನ್ಫೋಸಿಸ್, ಎಂ.ಆರ್ ಇಂಜಿನಿಯರಿಂಗ್ ರೋಡ್, ಸಾಗರ್ ಕೋರ್ಟ್, ಕೋಡಿಕಲ್, ಗಣೇಶ ಭಜನಾ ಮಂದಿರ, ಬಲ್ಲಿ ಕಂಪೌಂಡ್, ಜಿ.ಎಸ್.ಬಿ ಸರಾ ರೋಡ್, ಕೋಡಿಕಲ್ ಕಟ್ಟೆ, ಎಸ್.ಎನ್.ಡಿ.ಪಿ, ಕಂಚಿಗಾರಗುತ್ತು, ನಾಗಬ್ರಹ್ಮ ಸನ್ನಿಧಿ ರೋಡ್, ಫಾರ್ಮ್ ಫೀಲ್ಡ್ ಲೇಔಟ್, ಕುರುಅಂಬಾ ಟೆಂಪಲ್ ರೋಡ್, ಹೆಗ್ಡೆ ಜನರಲ್ ಸ್ಟೋರ್, ಜೆ.ಬಿ ಲೋಬೋ ರೋಡ್, ಕೊಟ್ಟಾರ ಚೌಕಿ, ವಿವೇಕಾನಂದ ನಗರ, ಆಲಗುಡ್ಡ ರೋಡ್, ಬೊಕ್ಕಪಟ್ನ, ಬರ್ಕೆ, ಮಣ್ಣಗುಡ್ಡ, ದಂಬೇಲ್, ಫಲ್ಗುಣಿ ನಗರ, ಯೆನಪೋಯ ಸ್ಟಾಮಿಲ್ ರೋಡ್, ದಂಬೆಲ್ ರಿವರ್ ಸೈಟ್, ಅಶೋಕನಗರ ಯುವಕ ಸಂಘ ರೋಡ್, ಸುಲ್ತಾನ್ ಬತ್ತೇರಿ, ಬೋಳೂರು ವೆಟ್‌ವೆಲ್ ಏರಿಯ, ಬೋಳೂರು, ಉರ್ವ ಮಾರಿಗುಡಿ ದೇವಸ್ಥಾನ ರಸ್ತೆ, ಯಶಸ್ವಿನಗರ, ಮಲರಾಯ ಲೇಔಟ್, ಅನ್ವಿತ ಅಪಾರ್ಟ್‌ಮೆಂಟ್, ಜೇಪ್ಸವುಡ್, ಗೋಕುಲ್ ಹಾಲ್, ಅಶೋಕ ನಗರ ಜಂಕ್ಷನ್, ಸೈಂಟ್ ಆಂಟೋನಿ ಕಾಲನಿ, ಕ್ಯಾನೋಪಿ ಅಪಾರ್ಟ್‌ಮೆಂಟ್, ಬಾಪೂಜಿನಗರ, ಸುಂಕದಕಟ್ಟೆ, ಕವಿತಾ ರೆಸಿಡೆನ್ಸಿ, ರಘು ಬಿಲ್ಡಿಂಗ್ ರೋಡ್, ಕುಕ್ಕಾಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.9ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ

ಪೂಂಜ ಕ್ಷೇತ್ರದಲ್ಲಿ ಜಾತ್ರೆ: ಮಹಾರಥೋತ್ಸವ

ಬಂಟ್ವಾಳ: ಸಿದ್ಧಕಟ್ಟೆ ಸಮೀಪದ ಪ್ರಸಿದ್ಧ ಪೂಂಜ ಕ್ಷೇತ್ರದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ಸಮಾಪನಗೊಂಡಿತು. ಕ್ಷೇತ್ರದ ತಂತ್ರಿ ಬಾಲಕೃಷ್ಣ ಪಾಂಗಣ್ಣಾಯರ ಮಾರ್ಗದರ್ಶನದಲ್ಲಿ ಏ.2ರಿಂದ



ಧ್ವಜಾರೋಹಣ ಮೂಲಕ ಆರಂಭಗೊಂಡು ಬಳಿಕ ಚಂಡಿಕಾಯಾಗ, ಚೆಂಡು ಉತ್ಸವ, ದೀಪದ ಬಲಿ, ದರ್ಶನ ಬಲಿ, ಸವಾರಿ ಬಲಿ, ನಡುಬಲಿ, ಮಹಾರಥೋತ್ಸವ ನಡೆಯಿತು. ಸೋಮವಾರ ರಾತ್ರಿ ಕೊಡಮಣಿತ್ತಾಯ ದೈವದ ನೇಮ ನಡೆಯಿತು. ಕ್ಷೇತ್ರದ ಪಿ.ಕೃಷ್ಣಪ್ರಸಾದ್ ಅಸ್ರಣ್ಣ ಪ್ರಧಾನ ಅರ್ಚಕ ಪಿ.ಪ್ರಕಾಶ್ ಆಚಾರ್ಯ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸುದರ್ಶನ್ ಶೆಟ್ಟಿ ಹಕ್ಕೇರಿ, ಸದಸ್ಯರಾದ ಉಮೇಶ ಶೆಟ್ಟಿ ಕೊನೆರೊಟ್ಟುಗುತ್ತು, ಸುಧೀಂದ್ರ ಶೆಟ್ಟಿ ಕಲಾಯಿದಡ್ಡ, ಅಶೋಕ್ ಆಚಾರ್ಯ ಸಿದ್ದಕಟ್ಟೆ, ಸುರೇಶ ನೀರಪಲ್ಕೆ, ರಂಜಿನಿ ದಿವಾಕರ ಮಾದಾಯಿ, ಗೀತಾ ವಿಶ್ವನಾಥ ಉಮನೊಟ್ಟು ಮತ್ತಿತರರು ಇದ್ದರು.

ಪುಣ್ಯಕ್ಷಣಗಳನ್ನು ಕಣ್ತುಂಬಿಕೊಂಡ ಭಕ್ತರು | ಇಂದು ಬ್ರಹ್ಮರಥೋತ್ಸವ, ಭಕ್ತರಿಗೆ ಮಲ್ಲಿಗೆ ಪ್ರಸಾದ ವಿತರಣೆ

ಬಪ್ಪನಾಡು ದೇವಸ್ಥಾನದಲ್ಲಿ ಹಗಲು ರಥೋತ್ಸವದ ಸಂಭ್ರಮ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಕ್ಷೇತ್ರದ ತಂತ್ರಿ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕ ನರಸಿಂಹ ಭಟ್ ಹಾಗೂ ಶ್ರೀಪತಿ ಉಪಾಧ್ಯಾಯ, ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಶ್ರೀ ದೇವರ ಹಗಲು ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಮಧ್ಯಾಹ್ನ ಪಲ್ಲಪೂಜೆ ಮಹಾ ಅನ್ನಸಂತರ್ಪಣೆ



ನಡೆಯಿತು. ರಾತ್ರಿ ಶ್ರೀ ದೇವರ ಬಲಿ ಉತ್ಸವ, ಚಂದ್ರಮಂಡಲ ರಥೋತ್ಸವ, ಪಲ್ಲಕ್ಕಿ ಉತ್ಸವ, ಮಲ್ಲಿಗೆ ಪ್ರಿಯೆ ಬಪ್ಪನಾಡು ಶ್ರೀ ದೇವಿಗೆ ಶಯನೋತ್ಸವ ನಡೆಯಿತು. ಶ್ರೀ ಕ್ಷೇತ್ರದಲ್ಲಿ ಏ.8ರಂದು ಬೆಳಿಗ್ಗೆ ಕವಾಟೋದ್ಘಾಟನೆ, ಭಕ್ತರಿಗೆ ಮಲ್ಲಿಗೆ ಪ್ರಸಾದ ವಿತರಣೆ, ತುಲಾಭಾರ ಸೇವೆ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ರಾತ್ರಿ ಬ್ರಹ್ಮರಥೋತ್ಸವ ನಡೆಯಲಿದೆ.



ಕೆರೆ ದೀಪೋತ್ಸವ, ಶ್ರೀದೇವರ ಉತ್ಸವ ಬಲಿ

ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ರಾತ್ರಿ ಒಡೆಯರಬೆಟ್ಟು ಕೇತು ಮರಕಾಲರ ಕುಟುಂಬಸ್ಥರ ಮೌಲ್ಯದ ಬಲಿ ಉತ್ಸವ ಬೊಂಬೆ ರಥೋತ್ಸವ, ಪಲ್ಲಕ್ಕಿ ಉತ್ಸವ, ಕೆರೆ ದೀಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಪ್ರಮುಖರು ಭಾಗಿ

ದೇವಸ್ಥಾನದ ತಂತ್ರಿ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕರಾದ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್ , ಗೋಪಾಲಕೃಷ್ಣ ಭಟ್, ಪ್ರಸಾದ್ ಭಟ್,ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣಸಾವಂತ ಅರಸರು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಡಾ. ಹರಿಕೃಷ್ಣ ಪುನರೂರು, ಕ್ಷೇತ್ರದ ಅಭಿವೃದ್ಧಿ ಸಮಿತಿಯ ಅತುಲ್ ಕುಡ್ವ ಸತೀಶ್ ಭಂಡಾರಿ, ಚಂದ್ರಶೇಖರ ಕಾಸಪ್ಪಯ್ಯನವರ ಮನೆ, ಉದ್ಯಮಿ ಶರತ್ ಸಾಲ್ಯಾನ್, ಸುನೀಲ್ ಆಳ್ವ ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು, ಅಶ್ವಿನ್ ಆಳ್ವ ಕುಬೆವೂರು,ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್, ಸತೀಶ್ ಅಂಚನ್, ಸಂಜೀವ ದೇವಾಡಿಗ, ಮಹೀಮ್ ಹೆಗ್ಡೆ ಸುಜಿತ್ ಸಾಲ್ಯಾನ್, ಚಂದ್ರಶೇಖರ ಸುವರ್ಣ, ರಮೇಶ್ ಅಮೀನ್ ಕೊಕ್ಕರಕಲ್, ದಿನೇಶ್ ಹೆಗ್ಡೆ ಮಾನಂಪಾಡಿ , ಸತೀಶ್ ಶೆಟ್ಟಿ ಪೇಟೆ ಮನೆ, ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್, ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು.

5,000 ಮಂದಿಗೆ ಮಜ್ಜಿಗೆ ವಿತರಣೆ

ಬಪ್ಪನಾಡು ಜಾತ್ರಾ ಮಹೋತ್ಸವದ ಹಗಲು ರಥೋತ್ಸವದ ಸಂದರ್ಭ ಬೆಂಗಳೂರಿನ ಉದ್ಯಮಿ ಶರತ್ ಸಾಲ್ಯಾನ್ ಅವರಿಂದ ಸುಮಾರು 5,000 ಮಂದಿ ಭಕ್ತಾದಿಗಳಿಗೆ ಮಜ್ಜಿಗೆ ವಿತರಿಸಲಾಯಿತು. ಈ ಸಂದರ್ಭ ವಿನೋದ್ ಸಾಲ್ಯಾನ್ ಬೆಳ್ಳಾಯರು, ಮಹೀಮ್ ಹೆಗ್ಡೆ ಮಾಜಿ ತಾಲೂಕು ಪಂಚಾಯತ್ ಸದಸ್ಯೆ ಸಾವಿತ್ರಿ, ಹಳೆಯಂಗಡಿ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷೆ ಚಂದ್ರಿಕಾ ಸಿ. ಕೋಟ್ಯಾನ್, ನವೀನ್ ರಾಜ್, ನಾಗರಾಜ್ ಬಪ್ಪನಾಡು ಮತ್ತಿತರರು ಉಪಸ್ಥಿತರಿದ್ದು ಸ್ವಯಂ ಸೇವಕರಾಗಿ ಮಜ್ಜಿಗೆ ವಿತರಿಸಿದರು. ಮಧ್ಯಾಹ್ನದ ಬಿಸಿಲ ತಾಪದ ನಡುವೆ ತಂಪಾದ ಮಜ್ಜಿಗೆ ವ್ಯವಸ್ಥೆ ಭಕ್ತಾದಿಗಳಿಗೆ ಖುಷಿ ನೀಡಿತು.

ಆಳ್ವಾಸ್ ಶಾಲೆಯಲ್ಲಿ 'ಖಗೋಳ ಶಾಸ್ತ್ರ ಬೇಸಿಗೆ ಶಿಬಿರ' ಉದ್ಘಾಟನೆ | ವಿಶೇಷ ಚಟುವಟಿಕೆ

ಅನ್ವೇಷಣೆ ಕಾರ್ಯ ಉತ್ತಮವಾದ ಹವ್ಯಾಸ: ವಿವೇಕ್ ಆಳ್ವ

ಮೂಡುಬಿದಿರೆ: ಇಂದಿನ ದಿನಗಳಲ್ಲಿ ನಮ್ಮ ಸುತ್ತಲಿನ ಪರಿಸರದಲ್ಲೇ ಅಪಾರ ಮಾಹಿತಿಯಿದ್ದು, ಅದನ್ನು ಅರಿಯಲು ಸದಾ ಮೊಬೈಲ್ ಅಥವಾ ಇಂಟರ್‌ನೆಟ್ ಅವಶ್ಯಕವಿಲ್ಲ, ವಿದ್ಯಾರ್ಥಿಗಳು ತಮ್ಮ ಸುತ್ತಲಿನ ವಸ್ತುಗಳನ್ನು ಗಮನಿಸುವ ಮೂಲಕವೇ ಬಹಳಷ್ಟು ಕಲಿಯಬಹುದು ಎಂದು ಮಾಹೆಯ ಸೌರ ಭೌತಶಾಸ್ತ್ರ ಸಂಶೋಧಕ ಅತುಲ್ ಭಟ್ ಹೇಳಿದರು



ಆಳ್ವಾಸ್ ಶಾಲೆಯಲ್ಲಿ ಆಯೋಜಿಸಿದ್ದ 'ಖಗೋಳ ಶಾಸ್ತ್ರ ಬೇಸಿಗೆ ಶಿಬಿರ 2026' ಉದ್ಘಾಟಿಸಿ, ತಂತ್ರಜ್ಞಾನವನ್ನು ಬಳಸುವ ವೇಳೆ ವಿದ್ಯಾರ್ಥಿಗಳು ತಮ್ಮ ಚಿಂತನಾ ಶಕ್ತಿ ಮತ್ತು ನೆನಪಿನ ಸಾಮರ್ಥ್ಯವನ್ನು ಕಳೆದುಕೊಳ್ಳಬಾರದು ಎಂದು ತಿಳಿಸಿದರು.

ಹಿಂದಿನ ದಿನಗಳಲ್ಲಿ ಮೊಬೈಲ್‌ಗಳಿಲ್ಲದೇ ಅನೇಕ ದೂರವಾಣಿ ಸಂಖ್ಯೆಗಳನ್ನೇ ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದೆವು. ಆದರೆ ಈಗ ತಂತ್ರಜ್ಞಾನಕ್ಕೆ ಅತಿಯಾಗಿ ಅವಲಂಬಿತರಾಗಿರುವುದರಿಂದ ನೆನಪಿನ ಶಕ್ತಿ ಕುಂದುತ್ತಿದೆ ಎಂದರು.

ಬಾಲ್ಯದ ನೆನಪಿನ ಮೆಲುಕು

ತಮ್ಮ ಬಾಲ್ಯದ ಅನುಭವವನ್ನು ಹಂಚಿಕೊಂಡ ಅವರು, ಖಗೋಳಶಾಸ್ತ್ರ ಕಲಿಯಲು ಸೌಲಭ್ಯಗಳಿಲ್ಲದ ಸಂದರ್ಭದಲ್ಲೂ ಪರಿಶ್ರಮದಿಂದ ನಕ್ಷತ್ರಗಳನ್ನು ಗುರುತಿಸಿ ಕಲಿತಿದ್ದೇವೆ. ಆ ರೀತಿಯ ಪ್ರಯತ್ನವೇ ನಿಜವಾದ ಜ್ಞಾನವನ್ನು ನೀಡುತ್ತದೆ. ಇಂದಿನ ಕಾಲದಲ್ಲಿ ಮೊಬೈಲ್ ಆ್ಯಪ್‌ಗಳ ಮೂಲಕ ನಕ್ಷತ್ರಗಳನ್ನು ಸುಲಭವಾಗಿ ಗುರುತಿಸಬಹುದು. ಆದರೆ ಅದರಿಂದ ವಿಷಯವನ್ನು ಆಳವಾಗಿ ಅರಿಯುವ ಮನೋಭಾವ ಕಡಿಮೆಯಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸ್ವತಃ ಆಕಾಶ ಗಮನಿಸಿ ನಕ್ಷತ್ರಗುಚ್ಛಗಳನ್ನು ಗುರುತಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಶಿಬಿರದಲ್ಲಿ ವಿವಿಧ ಚಟುವಟಿಕೆಗಳು ನಡೆಯಲಿದ್ದು, ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ಜ್ಞಾನ ವಿಸ್ತರಿಸಿಕೊಳ್ಳಬೇಕು ಎಂದು ಹೇಳಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ಆಕಾಶವನ್ನು ಒಂದು ಮಟ್ಟಿಗೆ ಅರ್ಥಮಾಡಿಕೊಂಡಿದ್ದರೂ, ಸಹ ಚಿಕ್ಕ ವಯಸ್ಸಿನಿಂದಲೇ ಅನ್ವೇಷಿಸುವುದು ಒಳ್ಳೆಯ ಹವ್ಯಾಸ. ಆಕಾಶ ಮತ್ತು ಸಮುದ್ರದಲ್ಲಿ ಅನ್ವೇಷಿಸಲು ಇನ್ನೂ ಅನೇಕ ವಿಷಯಗಳಿವೆ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಭೂ ಭಾಗದಲ್ಲಿಯೂ ಈಗಾಗಲೇ ಅನೇಕ ವಿಷಯಗಳನ್ನು ಅನ್ವೇಷಿಸಲಾಗಿದೆ. ಆದರೂ ಪ್ರತಿಯೊಬ್ಬರಿಗೂ ಅಪಾರ ಅವಕಾಶಗಳಿವೆ. ಆ ಅವಕಾಶಗಳನ್ನು ಬಳಸಿಕೊಳ್ಳುವುದು ನಮ್ಮ ಕೈಯಲ್ಲಿದೆ ಎಂದು ಹೇಳಿದರು.

ಗೌರವ ಅತಿಥಿ ನಾಸಾ ವಿಜ್ಞಾನಿ ಪ್ರಕೃತಿ ಪ್ರಕಾಶ್, ಶಾಲಾ ಪ್ರಾಂಶುಪಾಲ ಶೈಲಜಾ ಬೋಳ ಹೆಗ್ಡೆ, ಶಾಲಾ ಆಡಳಿತ ಅಧಿಕಾರಿ ನಿತೇಶ್ ಮಾರ್ನಾಡ್ ಸಹಾಯಕ ಆಡಳಿತ ಅಧಿಕಾರಿ ರಾಜೇಶ್, ಕಾರ್ಯಕ್ರಮ ಸಂಯೋಜಕ ಸೌಮ್ಯ ಆದಿತ್ಯ, ಅಶ್ವಿನಿ ಪ್ರಭು ಇದ್ದರು. ನಿಶಾ ರೋಡ್ರಿಗ್ಸ್ ನಿರೂಪಿಸಿದರು.

> ಇಂದಿನ ಯುವ ಪೀಳಿಗೆ ಸಂಶೋಧನೆ ಹಾಗೂ ಅಧ್ಯಯನಗಳಿಗೆ ಹೆಚ್ಚು ಗಮನ ಹರಿಸಬೇಕು. ಇದರಿಂದ ಅನೇಕ ಜ್ಞಾನ ಲಭಿಸಲಿದೆ. ಅಲ್ಲದೇ ಕೌಶಲ್ಯಗಳು ಕೂಡ ವೃದ್ಧಿಯಾಗಲಿದೆ.
> ● ವಿವೇಕ್ ಆಳ್ವ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ

ಅಂಬಿಕಾ ಪಿಯು ವಿದ್ಯಾಲಯ: ನಿವೃತ್ತ ವೀರ ಯೋಧರಿಬ್ಬರಿಗೆ ಸನ್ಮಾನ



ಪುತ್ತೂರು: ಸೈನಿಕರು ತಾಯಿ ಭಾರತಿಯ ಸೇವೆಯನ್ನು ಹಗಲಿರುಳು ಮಾಡುತ್ತಿದ್ದಾರೆ. ಇಂತಹ ಸೈನಿಕರಿಗೆ ಪ್ರತಿನಿತ್ಯ ಗೌರವ ಸಲ್ಲಿಸಬೇಕು. ಸೈನಿಕರು ಸದಾ ಪ್ರಾತಃ ಸ್ಮರಣೀಯರು ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಹೇಳಿದರು.

ಅವರು ಪುತ್ತೂರು ಮಾಜಿ ಸೈನಿಕರ ಸಂಘ ಹಾಗೂ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ನೆಲ್ಲಿಕಟ್ಟೆ ಅಂಬಿಕಾ ಪದವಿ ಪೂರ್ವ ವಿದ್ಯಾಲಯದಲ್ಲಿ ನಿವೃತ್ತ ಸೈನಿಕರ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸೈನಿಕರು ದೇಹದ ರಕ್ತವನ್ನು ದೇಶಕ್ಕೋಸ್ಕರ ಸಮರ್ಪಣೆ ಮಾಡುತ್ತಾರೆ. ಪ್ರತಿಯೊಬ್ಬ ನಾಗರಿಕ ದೇಶಕ್ಕೆ ಮೊದಲು ಗೌರವ ಸಲ್ಲಿಸಬೇಕು. ಸೈನಿಕರು ವಿದ್ಯಾರ್ಥಿಗಳ ಪಾಲಿಗೆ ನಿಜವಾದ ಹೀರೋಗಳು. ಅಂಬಿಕಾದ ಪ್ರತೀ ವಿದ್ಯಾರ್ಥಿಗಳೂ ದೇಶ ರಕ್ಷಣೆಗೆ ಕಂಕಣ ಬದ್ಧರಾಗಿ ದುಡಿಯಬೇಕು ಎಂದರು.

ಭಾರತೀಯ ಸೇನೆಯಲ್ಲಿ 24 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ವೀರ ಯೋಧ ಹವಾಲ್ದಾರ್ ವಿಶ್ವನಾಥ್ ಹಾಗೂ ಹವಾಲ್ದಾರ್ ಅಶೋಕ್ ನೆಲಪ್ಪಾಲ್ ಅವರನ್ನು ಪುತ್ತೂರು ಕಿಲ್ಲೆ ಮೈದಾನದ ಬಳಿಯಿಂದ ವಿದ್ಯಾರ್ಥಿಗಳ ಜೊತೆ ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ಕಾಲೇಜಿಗೆ ಕರೆತರಲಾಯಿತು. ವಿದ್ಯಾಲಯದಲ್ಲಿ ಆರತಿ ಬೆಳಗಿ ತಿಲಕ ಇಟ್ಟು ವೇದಿಕೆಗೆ ಸ್ವಾಗತಿಸಲಾಯಿತು. ಇಬ್ಬರೂ ಸೈನಿಕರನ್ನು ಶಾಲು, ಪೇಟ, ಫಲ- ಪುಷ್ಪ ಸ್ಮರಣಿಕೆಗಳೊಂದಿಗೆ ಗೌರವ ಸನ್ಮಾನ ಮಾಡಲಾಯಿತು. ಸನ್ಮಾನ ಸ್ವೀಕರಿಸಿದ ಹವಾಲ್ದಾರ್ ವಿಶ್ವನಾಥ್ ಹಾಗೂ ಹವಾಲ್ದಾರ್ ಅಶೋಕ್ ನೆಲಪ್ಪಾಲ್ ತಮ್ಮ ಅನುಭವ ಹಾಗೂ ಅನಿಸಿಕೆಗಳನ್ನು ಹಂಚಿಕೊಂಡರು. ಪುತ್ತೂರು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಸಾರ್ಜೆಂಟ್ ವಸಂತ ಕುಮಾರ್ ಮಾತನಾಡಿದರು. ನಿವೃತ್ತ ಸೇನಾನಿ ಪೆಟ್ಟಿ ಆಫೀಸರ್ ನಾರಾಯಣ ಭಟ್ ಎನ್. ಕೆ. ಉಪಸ್ಥಿತರಿದ್ದರು. ವಿದ್ಯಾಲಯದ ಪ್ರಾಂಶುಪಾಲ ಸತ್ಯಜಿತ್ ಉಪಾಧ್ಯಾಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿದ್ಯಾರ್ಥಿ ಜಿ. ವೈಷ್ಣವಿ ಪೈ ಹಾಗೂ ಶರಣ್ಯಾ ಎಸ್. ನಿವೃತ್ತ ಯೋಧರ ಪರಿಚಯ ಮಾಡಿದರು. ವಿದ್ಯಾಲಯದ ಕನ್ನಡ ಉಪನ್ಯಾಸಕ ಸತೀಶ್ ಇರ್ದೆ ನಿರ್ವಹಿಸಿದರು.

ಕಲ್ಲಡ್ಕ ಕಲಾನಿಕೇತನ ಸಂಸ್ಥೆಯ ವಿದ್ಯಾರ್ಥಿನಿ ಆತ್ಮಿ ಶೆಟ್ಟಿ ರಂಗ ಪ್ರವೇಶ



ಬಂಟ್ವಾಳ: ತಾಲೂಕಿನ ಕಲ್ಲಡ್ಕ ಕಲಾನಿಕೇತನ ಡ್ಯಾನ್ಸ್ ಫೌಂಡೇಶನ್ ಭರತನಾಟ್ಯ ಸಂಸ್ಥೆಯ ವಿದ್ಯಾರ್ಥಿನಿ ಆತ್ಮಿ ಶೆಟ್ಟಿ ಇವರ ಭರತನಾಟ್ಯ 'ರಂಗ ಪ್ರವೇಶ' ಬಿ.ಸಿ.ರೋಡಿನ ಸ್ಪರ್ಶ ಕಲಾಮಂದಿರದಲ್ಲಿ ನಡೆಯಿತು.

ಇದಕ್ಕೂ ಮೊದಲು ಪುತ್ತೂರು ವಿಶ್ವ ಕಲಾನಿಕೇತನ ಸಂಸ್ಥೆಯ ನಿರ್ದೇಶಕಿ, ನೃತ್ಯಗುರು ವಿದುಷಿ ನಯನ ವಿ. ರೈ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಒಂದು ಕಾಲದಲ್ಲಿ ಅಸಡ್ಡೆಯಿಂದ ಕಾಣುತ್ತಿದ್ದ ನೃತ್ಯಕ್ಷೇತ್ರ ಇಂದು ಎಲ್ಲರೂ ಗೌರವಿಸುವ ಕಲೆಯಾಗಿ ಮಾರ್ಪಾಡು ಹೊಂದಿರುವುದು ಅಭಿಮಾನದ ಸಂಗತಿ. ತಾಳ್ಮೆ, ಸಹನೆ ಇದ್ದಾಗ ಮಾತ್ರ ಭರತನಾಟ್ಯದಂತಹ ಕಲೆಯನ್ನು ಒಲಿಸಿಕೊಳ್ಳಲು ಸಾಧ್ಯ ಎಂದರು.

ಮುಖ್ಯ ಅತಿಥಿ ಯಕ್ಷಧ್ರುವ ಪಟ್ಲ ಫೌಂಡೇಶನ್‌ನ ಸ್ಥಾಪಕಾಧ್ಯಕ್ಷರು, ಖ್ಯಾತ ಭಾಗವತ ಪಟ್ಲ ಸತೀಶ್ ಶೆಟ್ಟಿ, ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ವನ್ನು ನೀಡಿದಾಗ ಮಾತ್ರ ಶಿಕ್ಷಣ ಪರಿಪೂರ್ಣವಾಗುತ್ತದೆ. ಹೆತ್ತವರು ತಮ್ಮ ಮಕ್ಕಳನ್ನು ಯಾವುದಾದರೊಂದು ಕಲಾಶಿಕ್ಷಣ ಮೈಗೂಡಿಸಿಕೊಳ್ಳಲು ಪ್ರೇರೇಪಿಸಬೇಕು ಎಂದು ಹೇಳಿದರು.

ಮಕ್ಕಳಿಗೆ ಕಲೆಯನ್ನು ಕಲಿಯುವ ನಿಟ್ಟಿನಲ್ಲಿ ಪೂರಕವಾದ ವಾತಾವರಣ ನಿರ್ಮಿಸುವ ಹೊಣೆಗಾರಿಕೆ ಹೆತ್ತವರ ಮೇಲಿದೆ ಎಂದರು.

ನೃತ್ಯಗುರು ವಿದುಷಿ ವಿದ್ಯಾಮನೋಜ್ ಮಾತನಾಡಿ, ಆತ್ಮಿ ಶೆಟ್ಟಿ ಪ್ರತಿಭಾನ್ವಿತ ವಿದ್ಯಾರ್ಥಿನಿ. ರಂಗಪ್ರವೇಶದ ಮೂಲಕ ನೃತ್ಯಕ್ಷೇತ್ರದ ಅಪೂರ್ವ ಘಟ್ಟ ತಲುಪಿರುವುದು ಸಂತಸ ತಂದಿದೆ ಎಂದರು.

ಹೊಟೇಲ್ ಉದ್ಯಮಿ ಚಂದ್ರಹಾಸ ಡಿ. ಶೆಟ್ಟಿ ನೃತ್ಯಗಿರಿ ಮೈಸೂರು ಭರತನಾಟ್ಯ ಸಂಸ್ಥೆಯ ನಿರ್ದೇಶಕ ಡಾ. ಕೃಪಾ ಫಡಕೆಯವರು ಶುಭ ಹಾರೈಸಿದರು. ಈ ಸಂದರ್ಭ ನೃತ್ಯಗುರು ವಿದುಷಿ ವಿದ್ಯಾಮನೋಜ್ ಅವರನ್ನು ಗೌರವಿಸಲಾಯಿತು. ಆತ್ಮಿ ಶೆಟ್ಟಿಯ ಹೆತ್ತವರಾದ ಉದಯ ಕುಮಾರ್ ಶೆಟ್ಟಿ ಶಾಲಿನಿ ಶೆಟ್ಟಿ ಮಾವ ಸಂತೋಷ್ ಕುಮಾರ್ ಶೆಟ್ಟಿ ಜಿದ್ದರು. ಸುಪ್ರೇಶ್ ಶೆಟ್ಟಿ ವಂದಿಸಿದರು. ದೀಪಕ್ ಕಾರ್ಯಕ್ರಮ ನಿರ್ವಹಿಸಿದರು.

ಸೇವಾ ಭಾರತಿಯಿಂದ ಆಟಿಸಂ ದಿನಾಚರಣೆ: ವಿಶೇಷ ಕಾರ್ಯಾಗಾರ



ಮಂಗಳೂರು: ಮಂಗಳೂರಿನ ಸೇವಾ ಭಾರತಿ ಸಂಸ್ಥೆಯ ಆಶ್ರಯದಲ್ಲಿ ಆಟಿಸಂ (ಸ್ವಲೀನತೆ) ದಿನಾಚರಣೆಯ ಅಂಗವಾಗಿ ವಿಶೇಷ ಮಕ್ಕಳ ಶಿಕ್ಷಕರಿಗಾಗಿ ಕಾರ್ಯಾಗಾರವನ್ನು ವಿ.ಟಿ.ರಸ್ತೆಯ ಚೇತನಾ ಬಾಲವಿಕಾಸ ಕೇಂದ್ರದಲ್ಲಿ ಸೋಮವಾರ ನಡೆಸಲಾಯಿತು.

'ಆಟಿಸಂ ಅನ್ ಕವರ್ಡ್: ಕಾರಣ, ಲಕ್ಷಣಗಳು ಮತ್ತು ಪರಿಹಾರ' ಎಂಬ ವಿಷಯದ ಕುರಿತು ನಡೆದ ಈ ಕಾರ್ಯಾಗಾರವನ್ನು ಸಂಪನ್ಮೂಲ ವ್ಯಕ್ತಿಯಾಗಿದ್ದ ಯೆನೆಪೋಯ ಮೆಡಿಕಲ್ ಕಾಲೇಜು ಮನೋವೈದ್ಯಶಾಸ್ತ್ರ ವಿಭಾಗ ಸಹಾಯಕ ಪ್ರಾಧ್ಯಾಪಕ ಡಾ. ರಾಜೇಶ್ ಉದ್ಘಾಟಿಸಿ, ಆಟಿಸಂ ಒಂದು ರೋಗವಲ್ಲ ಅದು ಒಂದು ಬೆಳವಣಿಗೆಯ ನ್ಯೂನತೆ ಹಾಗೂ ಈಗ ಅದಕ್ಕೆ ಪರಿಣಾಮಕಾರಿಯಾದ ಚಿಕಿತ್ಸೆಗಳಿವೆ. ಪ್ರತಿಯೊಬ್ಬ ಆಟಿಸಂ ವ್ಯಕ್ತಿಯಲ್ಲೂ ಬೇರೆ ಬೇರೆ ಲಕ್ಷಣಗಳಿದ್ದು ಅವುಗಳನ್ನು ಅರ್ಥೈಸುವುದು ಮತ್ತು ಅವರ ಕುಟುಂಬಕ್ಕೆ ಧೈರ್ಯ ತುಂಬುವುದು ಆವಶ್ಯಕ ಎಂದರು.

ಸೇವಾ ಭಾರತಿ ಸಂಸ್ಥೆಯ ಗೌರವ ಕಾರ್ಯದರ್ಶಿ ನಾಗರಾಜ್ ಭಟ್ ಸ್ವಾಗತಿಸಿದರು. ಯೆನೆಪೋಯ ಮೆಡಿಕಲ್ ಕಾಲೇಜು ಮನಃಶಾಸ್ತ್ರಜ್ಞ ವಿಭಾಗದ ಪ್ರಾಧ್ಯಾಪಕಿ ಅಂಜನಾ ಜೋಯ್, ಸಂಯೋಜಕಿ ಶ್ವೇತಾ ಅಶೋಕ್ ಶೆಟ್ಟಿ, ನವಚೇತನಾ ಸಂವಹನ ಕೇಂದ್ರದ ಮುಖ್ಯಸ್ಥೆ ರವಿಕಲಾ ಇದ್ದರು. ಫಿಸಿಯೋಥೆರಪಿಸ್ಟ್ ವರ್ಷಾ ನಿರೂಪಿಸಿದರು. ರಂಜಿತಾ ರಾಕೇಶ್ ವಂದಿಸಿದರು. ಬಳಿಕ ಡಾ. ರಾಜೇಶ್ ಎಂ. ಅವರ ನೇತೃತ್ವದಲ್ಲಿ ಕಾರ್ಯಾಗಾರ ನಡೆಯಿತು. ಅಂಜನಾ ಜೋಯ್, ಶ್ವೇತಾ ಅಶೋಕ್ ಶೆಟ್ಟಿ ಸಹಕರಿಸಿದರು. ಕಾರ್ಯಾಗಾರದಲ್ಲಿ ಎಲ್ಲಾ ಶಿಕ್ಷಕಿಯರು ಭಾಗವಹಿಸಿದ್ದರು. ಸೇವಾಭಾರತಿ ಸಿಬ್ಬಂದಿ, ಚೇತನಾ ಶಾಲೆಯ ಶಿಕ್ಷಕ, ಶಿಕ್ಷಕೇತರರು, ಸೇವಾಭಾರತಿ ಸಂಸ್ಥೆಯ ವಿಶ್ವಸ್ಥರು, ಸ್ವಯಂ ಸೇವಕರು ಸಹಕರಿಸಿದರು. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯ 13 ವಿಶೇಷ ಶಾಲೆಗಳ 52 ಮಂದಿ ವಿಶೇಷ ತರಬೇತಿ ಪಡೆದ ಶಿಕ್ಷಕಿಯರು ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು. ಭಾಗವಹಿಸಿದವರಿಗೆ ಪ್ರಮಾಣಪತ್ರವನ್ನು ನೀಡಲಾಯಿತು.

ಕುಡಿಯುವ ನೀರಿನ ಯೋಜನೆ ಉದ್ಘಾಟನೆ



ಬಂಟ್ವಾಳ: ತಾಲೂಕಿನ ಪಾಲ್ತಾಜೆ, ಸಾಲೆತ್ತೂರು, ಮಾರಿಗುಡಿ ಬಳಿರುವ ಪರಿಶಿಷ್ಟ ಜಾತಿ ಕಾಲನಿಯಲ್ಲಿ ಕೊಳವೆ ಬಾವಿ ಹಾಗೂ ವಿದ್ಯುತ್ ಸಂಪರ್ಕ ಸಹಿತ ಕುಡಿಯುವ ನೀರಿನ ಯೋಜನೆಯನ್ನು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉದ್ಘಾಟಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ವಕ್ತಾರ ಮಾಧವ ಮಾವೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಾಲೆತ್ತೂರು ಬಿಜೆಪಿ ಶಕ್ತಿ ಕೇಂದ್ರದ ಪ್ರಮುಖರಾದ ವಿದ್ಯೇಶ್ ರೈ ಸ್ವಾಗತಿಸಿದರು.

ಪಂಚಾಯತ್ ಸದಸ್ಯ ಕೃಷ್ಣಪ್ರಸಾದ್ ಶೆಟ್ಟಿ ಮಲಾರಬೀಡು, ಆನಂದ ಪೂಜಾರಿ ಮಾವೆ, ಪ್ರಶಾಂತ್ ಶೆಟ್ಟಿ ಆಗರಿ, ಬೂತ್ ಸಮಿತಿ ಅಧ್ಯಕ್ಷ ಸುನೀತಾ ಯು ರೈ, ಕಾರ್ಯದರ್ಶಿ ಸಂದೇಶ್ ಶೆಟ್ಟಿಗಾರ್, ಬಿಎಲ್‌ಎ ನಾಗರಾಜ ಆಳ್ವ ಮೆದು, ಎಸ್ಟಿ ಮೋರ್ಚಾದ ಕಾರ್ಯದರ್ಶಿ ಉದಯ ಕುಮಾರ್ ನಾಯ್ಕ್, ಕುಟುಂಬದ ಹಿರಿಯರಾದ ಶಿವಯ್ಯ ಪಾಲ್ತಾಜೆ, ತರವಾಡು ಮನೆಯ ಹಿರಿಯರಾದ ಸೇಸಪ್ಪ ಪಾಲ್ತಾಜೆ, ರಾಮಣ್ಣ ಶೆಟ್ಟಿ ಕಾಂತು ಮೂಲೆ, ಪ್ರವೀಣ್ ಶೆಟ್ಟಿ ಗೌರಿ ಕೋಡಿ, ವೆಂಕಪ್ಪ ಶೆಟ್ಟಿಗಾರ್, ಬಾಲು ಪಾಲ್ತಾಜೆ, ಸಂತೋಷ್ ಪಾಲ್ತಾಜೆ ಹಾಗೂ ಪಲಾನುಭವಿಗಳು ಇದ್ದರು.

ಶ್ರೀ ವಿಶ್ವವಲ್ಲಭತೀಥ ಶ್ರೀಗಳಿಗೆ ಮಂಗಳೂರಿನಲ್ಲಿ ಗುರುವಂದನೆ | ಡೊಂಗರಕೇರಿ ಕೆನರಾ ಹೈಸ್ಕೂಲ್ ವೃತ್ತದಿಂದ ವೈಭವದ ಶೋಭಾಯಾತ್ರೆ

ಭಗವಂತನಿಗೆ ಶರಣಾದರೆ ಆಪತ್ತಿನಿಂದ ಮುಕ್ತಿ: ವಿಶ್ವವಲ್ಲಭತೀರ್ಥ ಶ್ರೀ ಆಶೀರ್ವಚನ

ಮಂಗಳೂರು: ಸಂಪತ್ತು ಬರುವುದು ಮತ್ತು ಆಪತ್ತು ಬರುವುದು ಹೆಚ್ಚಾಗಿ ಸಜ್ಜನರಿಗೆ. ಸತ್ಕಾರ್ಯಗಳನ್ನು ಮಾಡುವ ಸಜ್ಜನರೂ ಆಪತ್ತಿಗೂ ಸಿಲುಕುತ್ತಾರೆ. ಈ ಆಪತ್ತಿನಿಂದ ದೂರವಾಗಬೇಕಾದರೆ ಪ್ರತಿಯೊಬ್ಬರೂ ಭಗವಂತನನ್ನು ಆಶ್ರಯಿಸಬೇಕು. ಭಗವಂತನಿಗೆ ಶರಣಾದರೆ ಯಾವ ಆಪತ್ತೂ ಬಾರದು ಎಂದು ಸೋದೆ ಮಠಾಧೀಶರಾದ ವಿಶ್ವವಲ್ಲಭತೀರ್ಥ ಶ್ರೀಪಾದರು ಹೇಳಿದರು.

ಸೋದೆ ವಾದಿರಾಜ ಮಠದ ಪ್ರಮುಖ ಶಿಷ್ಯ ಸಮುದಾಯವಾದ ದೈವಜ್ಞ ಬ್ರಾಹ್ಮಣ ಶಿಷ್ಯ ವೃಂದದ ವತಿಯಿಂದ ಸೋದೆ ಮಠಾಧೀಶ ವಿಶ್ವವಲ್ಲಭ ತೀರ್ಥ ಶ್ರೀಪಾದರಿಗೆ ಶರವು ಮಹಾಗಣಪತಿ ದೇವಸ್ಥಾನದ ಸಭಾಭವನದಲ್ಲಿ ಮಂಗಳವಾರ ರಾತ್ರಿ ನಡೆದ ದೈವಜ್ಞ ಗುರುವಂದನಾ ಮಹೋತ್ಸವದಲ್ಲಿ ಅವರು



ಆಶೀರ್ವಚನ ನೀಡಿದರು.

ವಾದಿರಾಜರು ಮಹಾನ್ ಸಾತ್ವಿಕರಾಗಿದ್ದರು ಎಂಬುದಕ್ಕೆ ಅನೇಕ ಘಟನೆಗಳು ಸಾಕ್ಷಿಯಾಗಿವೆ. ಮಾನವೀಯ ಮೌಲ್ಯವನ್ನು ಸಮಾಜಕದಲ್ಲಿ ಬಿತ್ತರಿಸುತ್ತಾ ಅದ್ಭುತ ಸಮಾಜ ಕಟ್ಟಿದವರು ವಾದಿರಾಜು ಶ್ರೀಗಳು. ಎಲ್ಲೆಲ್ಲಿ ಸಾತ್ವಿಕರಿರುತ್ತಾರೋ ಅಲ್ಲಿ ಎಂದೂ ಕೂಡ ದ್ವೇಷ ಭಾವನೆ ಹುಟ್ಟಲು ಸಾಧ್ಯವಿಲ್ಲ ಎಂದು ಸ್ವಾಮೀಜಿ ನುಡಿದರು.

ಪ್ರಾರಂಭದಲ್ಲಿ ಭೂತರಾಜರ ಪೂಜೆ ನಡೆದು, ಬಳಿಕ ನಾನಾ ವಿಧಿವಿಧಾನ ಪೂಜಾ ಕಾರ್ಯಗಳು ನಡೆದವು. ಬಳಿಕ ಮಾಲಾರ್ಪಣೆ, ಸಮಿತಿಯ ವತಿಯಿಂದ ಪಾದಪೂಜೆ ಮಾಡಲಾಯಿತು. ನಂತರ ಪುಷ್ಪಾರ್ಚನೆ, ಕನಕಾಭಿಷೇಕ ನಡೆಸಲಾಯಿತು. ಬಳಿಕ ಭಿನ್ನವತ್ತಳೆ ಪ್ರದಾನ ಮಾಡಲಾಯಿತು. ನಂತರ ಪ್ರಸಾದ ವಿತರಣೆಯಾಗಿ, ಅನ್ನಸಂತರ್ಪಣೆ ಜರುಗಿತು. ಗುರುವಂದನಾ ಸಮಿತಿಯ

ಗುರುವಂದನೆಗೆ ಮುನ್ನ ನಗರದ ಡೊಂಗರಕೇರಿ ಕೆನರಾ ಹೈಸ್ಕೂಲ್ ವೃತ್ತದಿಂದ ಶ್ರೀ ಶರವು ಮಹಾಗಣಪತಿ ದೇವಸ್ಥಾನದವರೆಗೆ ವೈಭವದ ಶೋಭಾಯಾತ್ರೆ ನಡೆಯಿತು. ಶರವು ದೇವಸ್ಥಾನದ ಶಿಲೆ ಶಿಲೆ ಆಡಳಿತ ಮೊಕ್ತೇಸರ ಶರವು ರಾಘವೇಂದ್ರ ಶಾಸ್ತ್ರಿ, ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ್ ಕಲ್ಕೂರ, ಮಾಜಿ ಸಚಿವ ಬಿ.ನಾಗರಾಜ್ ಶೆಟ್ಟಿ ಭಾಗವಹಿಸಿದ್ದರು. ಸಮಿತಿಯ ಕಾರ್ಯದರ್ಶಿ ಎಸ್. ವಿನೋದ್ ಕುಮಾರ್ ಶೇಟ್, ಕೋಶಾಧಿಕಾರಿ ಚಂದ್ರಕಾಂತ ಪಿ. ಸಾನು, ಜತೆ ಕಾರ್ಯದರ್ಶಿ ಅನಿಲ್ ಸದಾನಂದ ಶೇಟ್, ಕಾರ್ಯನಿರ್ವಾಹಕ ಎಂ. ಪ್ರಶಾಂತ್ ಶೇಟ್, ಜತೆ ಕಾರ್ಯನಿರ್ವಾಹಕ ಎಂ. ನಿಶಾಂತ್ ಶೇಟ್, ಜೊತೆ ಕೋಶಾಧಿಕಾರಿ ಗಣೇಶ್ ಕೆ.ಕೆ.ಆರ್. ಶೇಟ್, ಜೊತೆ ಜತೆ ಕಾರ್ಯನಿರ್ವಾಹಕ ಕೆ.ಧೀರಜ್ ಜಿ. ಶೇಟ್ ಮತ್ತಿತರರು ಉಪಸ್ಥಿತರಿದ್ದರು. ದೈವಜ್ಞ ಬ್ರಾಹ್ಮಣ ಶಿಷ್ಯ ವೃಂದದ ಅಧ್ಯಕ್ಷ ರವೀಂದ್ರ ಶೇಟ್ ಸ್ವಾಗತಿಸಿದರು. ಮಾರ್ಗದರ್ಶಕ ಸುಧಾಕರ ರಾವ್ ಪೇಜಾವರ ಕಾರ್ಯಕ್ರಮ ನಿರೂಪಿಸಿದರು.

ಮಂಗಳೂರಿನ ಮೆರವಣಿಗೆ 'ಪರ್ಯಾಯ' ನೆನಪಿಸಿತು

ಉಡುಪಿಯಲ್ಲಿ ನಡೆಯುವ ಪರ್ಯಾಯ ಉತ್ಸವವನ್ನು ನೆನಪಿಸುವಂತೆ ವೈಭವದ ಮೆರವಣಿಗೆಯನ್ನು ಮಂಗಳೂರಿನಲ್ಲಿಂದು ಕಂಡೆ. ದೈವಜ್ಞ ಸಮಿತಿ ಹಾಗು ಸಮಾಜವು ಈ ಮಹತ್ ಕಾರ್ಯವನ್ನು ಮಾಡಿದೆ. ವೈಭವದ ಶೋಭಾಯಾತ್ರೆಯು ಮಂಗಳೂರಿನ ಪರ್ಯಾಯ ಉತ್ಸವವಾಗಿ ಕಂಡಿತು. ಇದನ್ನು ಎಂದೂ ಮರೆಯಲಾಗದು ಎಂದು ಶ್ರೀ ವಿಶ್ವವಲ್ಲಭ ಸ್ವಾಮೀಜಿ ಸಂಘಟಕರನ್ನು ಈ ಸಂದರ್ಭ ವಿಶೇಷವಾಗಿ ಶ್ಲಾಘಿಸಿದರು.

ಕಾಸರಗೋಡು ಜಿಲ್ಲೆ ಮತದಾನಕ್ಕೆ ಸಜ್ಜು | ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಮಾಹಿತಿ

ಏ.9ರಂದು ನಡೆಯುವ ಚುನಾವಣೆಗೆ ಸಕಲ ಸಿದ್ಧತೆ ಪೂರ್ಣ

ಕಾಸರಗೋಡು: ಏಪ್ರಿಲ್ 9ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ಕಾಸರಗೋಡು ಜಿಲ್ಲೆ ಸಜ್ಜುಗೊಂಡಿದ್ದು, ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ಐದು ಚುನಾವಣಾ ಅಧಿಕಾರಿ ಗಳು, ಉಪ ಚುನಾವಣಾಧಿಕಾರಿಗಳು, 23 ವಿವಿಧ ನೋಡಲ್ ಅಧಿಕಾರಿಗಳು ಮುಂತಾದವರು ಚುನಾವಣಾ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಜಿಲ್ಲಾಧಿಕಾರಿ ಕಚೇರಿಯಲ್ಲಿಮಂಗಳವಾರ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಏ.9 ರಂದು ಬೆಳಿಗ್ಗೆ 7ರಿಂದ ಸಂಜೆ 6ರ ವರೆಗೆ ಮತದಾನ ನಡೆಯಲಿದೆ. ಬೆಳಿಗ್ಗೆ 5.30ಕ್ಕೆ ಅಣಕು ಮತದಾನ ಆರಂಭವಾಗಲಿದೆ. ಮತದಾನದ ದಿನದಂದು ಜಿಲ್ಲೆಯ ಎಲ್ಲಾ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳು ಮುಚ್ಚಲ್ಪಟ್ಟಿರುತ್ತವೆ. ಪ್ರಸ್ತುತ ಆರು ವಿಎಫ್‌ಸಿಗಳು ಅಂಚೆ ಮತದಾನಕ್ಕೆ ಲಭ್ಯವಿದೆ. ಚುನಾವಣಾ ಸಾಮಗ್ರಿಗಳ ವಿತರಣೆಯ ದಿನದಂದು ಹೆಚ್ಚಿನ ವಿಎಫ್‌ಸಿಗಳನ್ನು ಸ್ಥಾಪಿಸಲಾಗುವುದು ಮತ್ತು ಜಿಲ್ಲೆಯ ಸಂಪೂರ್ಣ ಜನರು ಚುನಾವಣಾ



ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಮತಗಳನ್ನು ನೋಂದಾಯಿಸಬೇಕೆಂದು ಜಿಲ್ಲಾಧಿಕಾರಿ ಹೇಳಿದರು. ಮತಗಟ್ಟೆಗಳಲ್ಲಿ ಮೊಬೈಲ್ ಫೋನ್‌ಗಳಿಗೆ ಅವಕಾಶ ವಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಮತಗಟ್ಟೆಗಳಲ್ಲಿ ಮೊಬೈಲ್ ಫೋನ್‌ಗಳನ್ನು ಇರಿಸಲು ಪೌಚ್‌ಗಳನ್ನು ವ್ಯವಸ್ಥೆ ಮಾಡಲಾಗುವುದು. ಮತಗಟ್ಟೆ ಒಳಗೆ , ಹೊರಗೆ ಕ್ಯಾಮರಾಗಳೊಂದಿಗೆ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಇರುತ್ತದೆ. ಜಿಲ್ಲೆಯಲ್ಲಿ ಕೇವಲ ಮಹಿಳಾ ಮತಗಟ್ಟೆ ಅಧಿಕಾರಿಗಳನ್ನು ಹೊಂದಿರುವ 5 ಗುಲಾಬಿ ಬಣ್ಣದ ಮತಗಟ್ಟೆಗಳು , ಒಂದು ದಿವ್ಯಾಂಗ ಸ್ನೇಹಿ ಮತಗಟ್ಟೆ ಇರಲಿದೆ. ಶೇ.20 ರಷ್ಟು ಮೀಸಲಾತಿಯೊಂದಿಗೆ 5504 ಮತಗಟ್ಟೆ ಅಧಿಕಾರಿಗಳ ನಿಯೋಜಿಸಲಾಗಿದೆ. ಅವುಗಳಲ್ಲಿ ಶೇ.60ರಷ್ಟು ಮಹಿಳೆಯರು. ಜಿಲ್ಲೆಯಲ್ಲಿ 116 ವಲಯ ಅಧಿಕಾರಿಗಳ ನಿಯೋಜಿಸಲಾಗಿದೆ ಎಂದರು.

> **ಜಿಲ್ಲೆಯಲ್ಲಿ ಒಟ್ಟು 11,03,618 ಮತದಾರರು**
> ಕಾಸರಗೋಡು ಜಿಲ್ಲೆಯ ಐದು ವಿಧಾನ ಸಭಾ ಕ್ಷೇತ್ರಗಳಲ್ಲಾಗಿ ಒಟ್ಟು 11,03,618 ಮಂದಿ ಮತದಾರರಿದ್ದಾರೆ. ಈ ಪೈಕಿ 5,44, 543 ಪುರುಷರು, 5,59,063 ಮಹಿಳೆಯರು, 12 ಟ್ರಾನ್ಸ್‌ಜೆಂಡರ್‌ಗಳು ಸೇರಿದ್ದಾರೆ. ಜಿಲ್ಲೆಯಲ್ಲಿ 1146 ಮತಗಟ್ಟೆಗಳಿವೆ.
> ● ಅರ್ಜುನ್ ಪಾಂಡ್ಯನ್, ಡೀಸಿ

ಜಿಲ್ಲೆಯಾದ್ಯಂತ 1992 ಪೊಲೀಸ್ ಅಧಿಕಾರಿಗಳ ನಿಯೋಜನೆ

ಮತದಾನದ ದಿನದ 72 ಗಂಟೆಗಳ ಮೊದಲು ಪೊಲೀಸ್ ವ್ಯವಸ್ಥೆ ಹೆಚ್ಚಿನ ಎಚ್ಚರಿಕೆಯೊಂದಿಗೆ ಕಾರ್ಯ ನಿರ್ವಹಿಸದೆ. ಯಾವುದೇ ಅಹಿತಕರ ಘಟನೆಗೆ ಸ್ಪಂದಿಸಲು ತ್ವರಿತ ಪ್ರತಿಕ್ರಿಯೆ ಯೋಜನೆ ಜಾರಿಗೆ ತರಲಾಗುತ್ತಿದೆ. ಇಡೀ ಜಿಲ್ಲೆಯಲ್ಲಿ 1992 ಪೊಲೀಸ್ ಸಿಬ್ಬಂದಿಗಳ ನೇಮಿಸಲಾಗಿದೆ. ಕೇಂದ್ರ ಸಶಸ್ತ್ರ ಪಡೆಗಳ ತುಕಡಿಯು ಜಿಲ್ಲೆಗೆ ತಲುಪಿದೆ. ಈ ನಿಟ್ಟಿನಲ್ಲಿ 780 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಲ್ಲದೆ ಕೇಂದ್ರ ಸೇನೆ ಮತ್ತು ಬಿಎಸ್‌ಎಫ್ ತುಕಡಿ ಸೇರಿದಂತೆ 16 ತುಕಡಿಗಳು ಜಿಲ್ಲೆಗೆ ಆಗಮಿಸಿವೆ. ವಿವಿಧ ಪ್ರದೇಶಗಳಲ್ಲಿ ರೂಟ್ ಮಾರ್ಚ್‌ಗಳನ್ನು ಪೂರ್ಣಗೊಳಿಸಿದ್ದಾರೆ ಎಂದು ಡೀಸಿ ಮಾಹಿತಿ ನೀಡಿದರು.

32 ಮಂದಿ ಅಭ್ಯರ್ಥಿಗಳು

ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಾಗಿ 32 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮಂಜೇಶ್ವರ ಕ್ಷೇತ್ರದಲ್ಲಿ ಅತೀ ಹೆಚ್ಚು ಅಭ್ಯರ್ಥಿಗಳಿದ್ದಾರೆ. ಕಾಞಂಗಾಡು ಕ್ಷೇತ್ರದಲ್ಲಿ ಅತೀ ಕಡಿಮೆ ಅಭ್ಯರ್ಥಿಗಳಿದ್ದಾರೆ. ಮಂಜೇಶ್ವರ ಕ್ಷೇತ್ರ ದಲ್ಲಿ 11, ಕಾಸರಗೋಡು ಕ್ಷೇತ್ರದಲ್ಲಿ 5, ಉದುಮ ಕ್ಷೇತ್ರದಲ್ಲಿ 6, ಕಾಞಂಗಾಡು ಕ್ಷೇತ್ರದಲ್ಲಿ 4, ತೃಕ್ಕರೀಪುರ ಕ್ಷೇತ್ರದಲ್ಲಿ 6 ಮಂದಿ ಅಭ್ಯರ್ಥಿಗಳಿದ್ದಾರೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ಸಿ-ವಿಜಿಲ್ ನಿಯಂತ್ರಣ ಕೊಠಡಿಗೆ 1094 ದೂರುಗಳು

ಕಾಸರಗೋಡು ಜಿಲ್ಲೆಯ ಕಲೆಕ್ಟರೇಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿ-ವಿಜಿಲ್ ನಿಯಂತ್ರಣ ಕೊಠಡಿಗೆ 2026ರ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ (ಏಪ್ರಿಲ್ 7 ರಂದು ಬೆಳಗ್ಗೆ 11.30ರ ವರೆಗೆ) 1094 ದೂರುಗಳು ಬಂದಿವೆ. ಎಲ್ಲಾ ದೂರುಗಳನ್ನು ಪರಿಹರಿಸಲಾಗಿದೆ. ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಮತ್ತು ಚುನಾವಣಾ ವೆಚ್ಚಗಳಿಗೆ ಸಂಬಂಧಿಸಿದ ದೂರುಗಳನ್ನು ಸಿ-ವಿಜಿಲ್ ನಿಯಂತ್ರಣ ಕೊಠಡಿ ನಿರ್ವಹಿಸುತ್ತದೆ. ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಅಳವಡಿಸಲಾದ 30 ಕ್ಯಾಮರಾಗಳ ದೃಶ್ಯಾವಳಿಗಳನ್ನು ಸಿ-ವಿಜಿಲ್ ನಿಯಂತ್ರಣ ಕೊಠಡಿ ಹೊಂದಿದೆ ಎಂದು ಜಿಲ್ಲಾ ಕಲೆಕ್ಟರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಸುತ್ತಮುತ್ತ

ಇಂದು ಮತದಾನ ಸಾಮಗ್ರಿಗಳ ವಿತರಣೆ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಏ.8ರಂದು ವಿವಿಧ ಕ್ಷೇತ್ರಗಳ ವಿತರಣಾ ಕೇಂದ್ರಗಳಲ್ಲಿ ಮತದಾನ ಸಾಮಗ್ರಿಗಳ ವಿತರಣೆ ನಡೆಯಲಿದೆ. ಕಾಸರಗೋಡು ಮತ್ತು ಮಂಜೇಶ್ವರ ಕ್ಷೇತ್ರಗಳ ಮತದಾನ ಸಾಮಗ್ರಿಗಳ ವಿತರಣೆ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ, ಉದುಮ ಕ್ಷೇತ್ರದ ಮತದಾನ ಸಾಮಗ್ರಿಗಳ ವಿತರಣೆ ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್‌ನಲ್ಲಿ, ಕಾಞಂಗಾಡು, ಉದುಮ ಕ್ಷೇತ್ರಗಳ ಮತದಾನ ಸಾಮಗ್ರಿಗಳ ವಿತರಣೆ ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆಯಲಿದೆ. ತೃಕ್ಕರೀ ಪುರ ಕ್ಷೇತ್ರದ ಮತದಾನ ಸಾಮಗ್ರಿಗಳ ವಿತರಣೆ ತೃಕ್ಕರೀಪುರ ಸರಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ.

ಕಾಸರಗೋಡು ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಏಪ್ರಿಲ್ 7ರಂದು ಸಂಜೆ 6 ರಿಂದ ಏಪ್ರಿಲ್ 10ರಂದು ಬೆಳಗ್ಗೆ 6 ರವರೆಗೆ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಕೇರಳ ವಿಧಾನಸಭಾ ಚುನಾವಣೆಯನ್ನು ಸುಗಮವಾಗಿ ನಡೆಸಲು ಕಾಸರಗೋಡು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ , ಜಿಲ್ಲಾ ಮೆಜಿಸ್ಟ್ರೇಟ್ ಅರ್ಜುನ್ ಪಾಂಡ್ಯನ್ ನಿಷೇಧಾಜ್ಞೆ ಘೋಷಿಸಿದ್ದಾರೆ. ಭಾರತೀಯ ನಾಗರಿಕ ಭದ್ರತಾ ಸಂಹಿತೆ ಸೆಕ್ಷನ್ 163ರಡಿ ಈ ಆದೇಶ ಹೊರಡಿಸಲಾಗಿದೆ.

ಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಮತದಾನದ ಸಮಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳಲು ಈ ಕಠಿಣ ಕ್ರಮ ಕೈಗೊಳ್ಳಲಾಗಿದೆ.

ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಯಾವುದೇ ಅಕ್ರಮ ಸಭೆಗಳು, ಸಾರ್ವಜನಿಕ ಸಭೆಗಳು ಅಥವಾ ಪ್ರದರ್ಶನಗಳಿಗೆ ಅನುಮತಿ ನೀಡಲಾಗುವುದಿಲ್ಲ. ಮತದಾನ ಮುಗಿಯುವ 48 ಗಂಟೆಗಳ ಮೊದಲು ಕ್ಷೇತ್ರದಲ್ಲಿ ಮತದಾರರಲ್ಲದ ರಾಜಕೀಯ ಕಾರ್ಯಕರ್ತರು ಅಥವಾ ಪ್ರಚಾರಕರು ಕ್ಷೇತ್ರದಲ್ಲಿ ಇರಬಾರದು. ಮತಗಟ್ಟೆಯಿಂದ 100 ಮೀಟರ್ ಒಳಗೆ ಅಭ್ಯರ್ಥಿಗಳು ಚುನಾವಣಾ ಬೂತ್‌ಗಳನ್ನು ಸ್ಥಾಪಿಸುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.

ತೀಯಾ ಸಮಾಜದಿಂದ ಅಭ್ಯರ್ಥಿಗಳಿಗೆ ಬೆಂಬಲ

ಕಾಸರಗೋಡು: ಕೇರಳದಲ್ಲಿ ಈಗಾಗಲೇ ತೀಯಾ ಸಮಾಜ ಆಚಾರ ಸ್ಥಾನಿಕರಿಗೆ ಕನಿಷ್ಠ ಗೌರವಧನ ನೀಡುತ್ತಿದ್ದು, ಇದನ್ನು ಹೆಚ್ಚಿಸುವ ಬೇಡಿಕೆಯಿಟ್ಟರೂ ಈ ತನಕ ಸರಕಾರ ಗಮನ ಹರಿಸಿಲ್ಲ, ಅದೇ ರೀತಿಯಲ್ಲಿ ಒಬಿಸಿ ವಿಭಾಗದಲ್ಲಿ ಹೆಚ್ಚಿನ ಆದ್ಯತೆ ನೀಡಿಲ್ಲ, ಸಮಾಜದ ಅಧೀನದಲ್ಲಿರುವ ಹಲವು ಭಗವತೀ ಕ್ಷೇತ್ರಗಳಿಗೆ ಭೂಮಿಯಿದ್ದರೂ ಅದಕ್ಕೆ ಬೇಕಾದ ದಾಖಲೆಗಳನ್ನು ಈ ತನಕ ಸರಕಾರ ನೀಡಿಲ್ಲ, ನಮ್ಮೆಲ್ಲ ಬೇಡಿಕೆಯನ್ನಿಟ್ಟರೂ ಈ ತನಕ ಪರಿಗಣಿಸಿಲ್ಲ, ಈ ಹಿನ್ನೆಲೆ ಈ ಬಾರಿ ಕಾಸರಗೋಡು , ಮಂಜೇಶ್ವರದಿಂದ ನಮ್ಮ ಸಮುದಾಯದ ಅಭ್ಯರ್ಥಿ ಗಳಾದ ಎಂ.ಎಲ್. ಅಶ್ವಿನಿ , ಕೆ.ಸುರೇಂದ್ರನ್ ಎನ್‌ಡಿಎಯಿಂದ ಸ್ಪರ್ಧಿಸುತ್ತಿದ್ದಾರೆ. ಈ ಇಬ್ಬರು ಅಭ್ಯರ್ಥಿಗಳಿಗೆ ಸಮುದಾಯವರ ಬೆಂಬಲ ನೀಡುವುದಾಗಿ ತೀಯಾ ಏಕೋಪನಾ ಸಮಿತಿ ಅಧ್ಯಕ್ಷ ರಮಣ ಉದಯಗಿರಿ, ಸಂಚಾಲಕ ಉಮೇಶ್ ನೆಲ್ಲಿಕುನ್ನು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

8ನೇ ತರಗತಿ ಪ್ರವೇಶ: ಅರ್ಜಿ ಸಲ್ಲಿಕೆ ದಿನ ವಿಸ್ತರಣೆ

ಕಾಸರಗೋಡು: ಚೆರುವತ್ತೂರು ಸರ್ಕಾರಿ ತಾಂತ್ರಿಕ ಪ್ರೌಢಶಾಲೆಯ 8ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವನ್ನು ಏ.18ರ ವರೆಗೆ ವಿಸ್ತರಿಸಲಾಗಿದೆ. 7ನೇ ತರಗತಿ ಉತ್ತೀರ್ಣರಾದ ಬಾಲಕ ಮತ್ತು ಬಾಲಕಿಯರು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 9400006497 ಕರೆ ಮಾಡಬಹುದು.

ಏ.9ರಿಂದ ಕುದ್ವ ಬಾರಿಕೆ ತರವಾಡು ಮನೆ ಗೃಹ ಪ್ರವೇಶ

ಪೆರ್ಲ: ಕುದ್ವ ಬಾರಿಕೆ ನೂತನ ತರವಾಡು ಮನೆಯ ಗೃಹ ಪ್ರವೇಶ, ದೈವಗಳ ಪ್ರತಿಷ್ಠೆ, ನೇಮ ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿ ಮತ್ತು ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ ನೇತೃತ್ವದಲ್ಲಿ ಏ.9ರಿಂದ 12ರ ವರೆಗೆ ಜರಗಲಿದೆ. ಏ.9ರಂದು ಸಂಜೆ 5.30ಕ್ಕೆ ತಂತ್ರಿವರ್ಯರ ಆಗಮನ, ರಾತ್ರಿ 7ರಿಂದ ವಿವಿಧ ಕಾರ್ಯಕ್ರಮ, ಏ.10ರಂದು ಬೆಳಿಗ್ಗೆ 7ರಿಂದ ಗಣಪತಿ ಹವನ, 11.41ರಿಂದ 12.45ರ ಮಿಥುನ ಲಗ್ನ ಸುಮುಹೂರ್ತದಲ್ಲಿ ಗೃಹ ಪ್ರವೇಶ, ಕೊರತಿ ದೈವದ ಪ್ರತಿಷ್ಠೆ ಏ.11ರಂದು ಬೆಳಿಗ್ಗೆ ಗಣಪತಿ ಹವನ, ಶ್ರೀ ವೆಂಕಟ್ರಮಣ ದೇವರ ಪೂಜೆ, ರಾತ್ರಿ 7ರಿಂದ ಶ್ರೀ ದೈವಗಳಿಗೆ ತಂಬಿಲ, ಪಂಜುರ್ಲಿ ದೈವದ ನೇಮ, ಏ.12ರಂದು ಬೆಳಿಗ್ಗೆ 8ಕ್ಕೆ ಧೂಮಾವತಿ ದೈವದ ನೇಮ, ಧರ್ಮದೈವ ಶ್ರೀ ಪರಪ್ಪಂಕಯರ್ತ್ತಾಯ ದೈವದ ನೇಮ ನಡೆಯಲಿದೆ.

ಕಲಾವಿದ, ಕಲಾ ಸಾಧಕ, ಗುರುವಾಗಿ ಸಮಾಜದಲ್ಲಿ ಬೆರೆದವರು ಕೇಶವ ಭಟ್



ಕುಂಬಳೆ: ಸ್ವಪ್ರತಿಷ್ಠೆ ಜನರಲ್ಲಿ ಸಾಮಾನ್ಯವಾಗಿ ಕಂಡುಬರುವಂಥದ್ದು. ಕಲಾರಂಗದಲ್ಲಿ ಅದು ಸ್ವಲ್ಪ ಹೆಚ್ಚು ಅಂದರೆ ತಪ್ಪಾಗಲಾರದು. ಅದರಲ್ಲೂ ವಿಶಿಷ್ಟವಾದ ಹುದ್ದೆಯಲ್ಲಿದ್ದವರಾದರೆ ಇನ್ನೂ ವಿಭಿನ್ನ. ಆದರೆ ಕೇಶವ ಭಟ್ ಕಂಬಾರು ಅವರು ಬ್ಯಾಂಕ್‌ನ ಹಿರಿಯ ಅಧಿಕಾರಿಯಾಗಿದ್ದು ಅತ್ಯಪೂರ್ವ ಕಲಾವಿದರಾಗಿ, ಕಲಾ ಸಾಧಕರಾಗಿ ಹಾಗೂ ಗುರುವಾಗಿ ಸಮಾಜದಲ್ಲಿ ಬೆರೆದವರು ಎಂದು ಕಾಸರಗೋಡು ನೇಯ್ಗೆ ಕಾರ್ಮಿಕರ ಸಹಕಾರಿ ಸಂಘದ ನಿವೃತ್ತ ಪ್ರಬಂಧಕ ಸದಾಶಿವ ಗಟ್ಟಿ ನಾಯ್ಕಾಪು ನುಡಿದ್ದಾರೆ.

ಕುಂಬಳೆ ಶ್ರೀಧರ ರಾವ್ ಅವರಂತಹ ಮೇರು ಕಲಾವಿದರು ಕಟ್ಟಿಬೆಳೆಸಿ ಒಂದಷ್ಟು ಮಂದಿ ಪ್ರಸಿದ್ಧ ಕಲಾವಿದರನ್ನು ಯಕ್ಷಗಾನ ರಂಗಕ್ಕೆ ಕೊಡುಗೆಯಾಗಿ ನೀಡಿ ಸುವರ್ಣ ಮಹೋತ್ಸವವನ್ನು ದಾಟಿ ಮುಂದುವರಿಯುತ್ತಿರುವ ಶ್ರೀ ವಿಘ್ನೇಶ್ವರ ಯಕ್ಷಗಾನ ಸಂಘದ ಆಶ್ರಯದಾತ ಕಂಬಾರು ಕೇಶವ ಭಟ್ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು. ಇದೀಗ ಅನಿವಾರ್ಯವಾಗಿ ತಮ್ಮ ನಿವಾಸವನ್ನು ಉಡುಪಿ ಜಿಲ್ಲೆಯ ಬಾರ್ಕೂರಿಗೆ ವರ್ಗಾಯಿಸುವ ಸಂದರ್ಭ ಸಂಘದ ಸದಸ್ಯರು , ಅವರ ಅಭಿಮಾನಿಗಳಿಂದ ಸನ್ಮಾನ ಸಮಾರಂಭನಡೆಯಿತು. ಸ್ಮರಣಿಕೆ, ಸನ್ಮಾನಪತ್ರ, ಫಲಪುಷ್ಪ ನೀಡಿ ಸನ್ಮಾನಿಸಲಾಯಿತು. ಡಾ.ಬೇಸೀ ಗೋಪಾಲಕೃಷ್ಣಭಟ್ ಸನ್ಮಾನ ಪತ್ರ ವಾಚಿಸಿದರು. ಸಂಘದ ಅಧ್ಯಕ್ಷ ಗೋಪಾಲ ಕೃಷ್ಣ ನಾಯಕ್ ಸೂರಂಬೈಲು ಸ್ವಾಗತಿಸಿ, ಮುರಳೀಧರ ಯಾದವ್ ವಂದಿಸಿದರು.

ಬಳಿಕ ರಾಜಸೂಯಾಧ್ವರ ಯಕ್ಷಗಾನ ತಾಳಮದ್ದಳೆ ನಡೆಯಿತು. ಗೋವಿಂದ ಭಟ್ ಬೇಂದ್ರೋಡಿ, ಶಿವಶಂಕರ ಭಟ್ ತಲ್ಪಣಾಜೆ, ಕೇಶವ ಭಟ್ ಕಂಬಾರು, ರಾಜೇಂದ್ರ ಪ್ರಸಾದ್ ಪುಂಡಿಕಾಯಿ, ಕೃಷ್ಣಮೂರ್ತಿ ಪಾಡಿ, ಅನಿಕೇತ ಸುಬ್ರಾಯ ಭಟ್, ಅನಘಾ ಲಕ್ಷ್ಮಿ, ಬಾಲಕೃಷ್ಣ ಆಚಾರ್ ನೀರ್ಚಾಲು, ಶಿವಾನಂದ ಕುಂಬಳೆ, ಅಶೋಕ ಶೇಡಿಕಾವು, ಸದಾಶಿವ ಮುಳಿಯಡ್ಕ, ಜನಾರ್ದನ ಆಚಾರ್ ನಾಯ್ಕಾಪು, ಉದಯ ಶಂಕರ ಭಟ್ ಮಜಲು ಮತ್ತಿತರರಿದ್ದರು.

> **ಸಮಾಜಮುಖಿ ಕಾರ್ಯ**
> ಶ್ರೀ ವಿಘ್ನೇಶ್ವರ ಯಕ್ಷಗಾನ ಸಂಘ ಸ್ವಂತ ಕಟ್ಟಡ ಇಲ್ಲದೆ ಮುಂದುವರಿಯುವುದು ಹೇಗೆ ಎಂಬ ಪ್ರಶ್ನೆ ಬಂದಾಗ ತನ್ನ ಮನೆಯನ್ನೇ ಈ ಸಂಘದ ಕಾರ್ಯಾಲಯವಾಗಿ ಮಾಡಿ, ಕಾರ್ಯದರ್ಶಿಯಾಗಿ ನಿರಂತರ ವಾರದ ಕೂಟ ನಡೆಸುತ್ತಾ ಬಂದುದಲ್ಲದೆ ಪ್ರತಿ ಬಾರಿ ಕಲಾವಿದರಿಗೂ ಕಲಾಭಿಮಾನಿಗಳಿಗೆ ಉಪಹಾರದ ವ್ಯವಸ್ಥೆ ಮಾಡಿದವರು ಕಂಬಾರರು.
> ● ಸದಾಶಿವ ಗಟ್ಟಿ

ಏ.9ರಿಂದ 12ರವರೆಗೆ ತುರ್ತಿ ದೈವಸ್ಥಾನದಲ್ಲಿ ವಯನಾಟ್ಟು ಕುಲವನ್ ದೈವಂಕಟ್ಟು ಉತ್ಸವ



ಉಪ್ಪಳ: ತುರ್ತಿ ಶ್ರೀ ವಿಷ್ಣು ಮೂರ್ತಿ ವಯನಾಟ್ಟು ಕುಲವನ್ ಮಹಾ ಮಲರಾಯ ದೈವಸ್ಥಾನ ಪಡಯನ್ ಕುಡಿಯ (ಕೊಟ್ಯಾನ್) ತರವಾಡು ದೈವಸ್ಥಾನದಲ್ಲಿ ಶ್ರೀ ವಯನಾಟ್ಟು ಕುಲವನ್ ದೈವಂಕಟ್ಟು ಮಹೋತ್ಸವ ಏ.9ರಿಂದ 12ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಏ.9ರಂದು ಬೆಳಿಗ್ಗೆ 7ಕ್ಕೆ ನಾಗತಂಬಿಲ, 9.25ರಿಂದ 10.25ರವರೆಗಿನ ಶುಭ ಮುಹೂರ್ತ ಉಗ್ರಾಣ ಮುಹೂರ್ತ, ಶ್ರೀ ಮಲರಾಯ ಸನ್ನಿಧಿಯಲ್ಲಿ ಮಧ್ಯಾಹ್ನ 12ಕ್ಕೆ ಹೂವಿನ ಪೂಜೆ, 1 ಗಂಟೆಗೆ ಅನ್ನಪ್ರಸಾದ, ಸಂಜೆ 4ಕ್ಕೆ ಹಸಿರುವಾಣಿ ಹೊರೆಕಾಣಿಕೆ ಉಪ್ಪಳ ಶ್ರೀ ಭಗವತೀ ಕ್ಷೇತ್ರದಿಂದ ಹೊರಡಲಿದೆ.

ರಾತ್ರಿ 7 ಗಂಟೆಗೆ ತರವಾಡು ದೈವಂಕೂಡಲ್ ನಂತರ ಶ್ರೀ ವಿಷ್ಣುಮೂರ್ತಿ ದೈವದ ತೊಡಂಙಲ್, 8ಕ್ಕೆ ಅನ್ನಪ್ರಸಾದ, 8.30ಕ್ಕೆ ಶ್ರೀ ಮಲರಾಯ ಬಂಟ ನೇಮ, ರಾತ್ರಿ 1ಗಂಟೆಗೆ ಶ್ರೀ ಕೊರತ್ತಿ ಅಮ್ಮನ ಕೋಲ, ಏ.10ರಂದು ಮುಂಜಾನೆ 4ಕ್ಕೆ ಶ್ರೀ ವಿಷ್ಣುಮೂರ್ತಿ ದೈವ, ಶ್ರೀ ಪಡಿಂಜಾರ್ ಚಾಮುಂಡಿ ದೈವದ ಕೋಲ, 5 ಗಂಟೆಗೆ ಶ್ರೀ ಗುಳಿಗನ ಕೋಲ, ಸಂಜೆ ಗಂಟೆ 5ಕ್ಕೆ ದೀಪಾರಾಧನೆ, ರಾತ್ರಿ 7ಕ್ಕೆ ಕೈವೀದ್, ಶ್ರೀ ವಯನಾಟ್ಟು ಕುಲವನ್ ದೈವಂಕೂಡಲ್, 9ಕ್ಕೆ ಅನ್ನಪ್ರಸಾದ, ಏ.11 ರಂದು ಮುಂಜಾನೆ 3 ಗಂಟೆಗೆ ಶ್ರೀ ಕಾರ್ನೋರ್ನ್ ದೈವದ ವೆಳ್ಳಾಟ, ಸಂಜೆ 5ಕ್ಕೆ ಶ್ರೀ ಕೋರಚ್ಚನ್ ದೈವದ ವೆಳ್ಳಾಟ, ರಾತ್ರಿ 8ಕ್ಕೆ ಶ್ರೀ ಕಂಡನಾರ್ ಕೇಳನ್ ದೈವದ ವೆಳ್ಳಾಟ, 'ಬಪ್ಪಿಡಲ್' ಕಾರ್ಯಕ್ರಮ, ಅನ್ನಪ್ರಸಾದ, ರಾತ್ರಿ 12 ಗಂಟೆಗೆ ಶ್ರೀ ವಿಷ್ಣುಮೂರ್ತಿ ದೈವದ ತೊಡಂಙಲ್, 12.30ಕ್ಕೆ ಶ್ರೀ ವಯನಾಟ್ಟು ಕುಲವನ್ ದೈವದ ವೆಳ್ಳಾಟ ನಡೆಯಲಿದೆ. ಎಲ್ಲಾ ದಿನ ಮಧ್ಯಾಹ್ನ ಮತ್ತು ರಾತ್ರಿ ಅನ್ನ ಪ್ರಸಾದ ವಿತರಣೆ ನಡೆಯಲಿದೆ.

> **ಶ್ರೀ ಕಾರ್ನೋರ್ನ್ ದೈವ**
> ಏ.12ರಂದು ಬೆಳಿಗ್ಗೆ 6 ಗಂಟೆಗೆ ಶ್ರೀ ಕಾರ್ನೋರ್ನ್ ದೈವ, 9ಕ್ಕೆ ಶ್ರೀ ಕೋರಚ್ಚನ್ ದೈವ, 11 ಗಂಟೆಗೆ ಶ್ರೀ ಕಂಡನಾರ್ ಕೇಳನ್ ದೈವ, ಸಂಜೆ 4ಕ್ಕೆ ಶ್ರೀ ವಯನಾಟ್ಟು ಕುಲವನ್ ದೈವ, ಚೂಟೊಪ್ಪಿಕಲ್, ಸಂಜೆ 6ಕ್ಕೆ ಶ್ರೀ ವಿಷ್ಣುಮೂರ್ತಿ ದೈವ, ಪ್ರಸಾದ ವಿತರಣೆ, ರಾತ್ರಿ 11ಕ್ಕೆ ಮರಪಿಳರ್ಕಲ್, ಭಂಡಾರ ನಿರ್ಗಮನ, ನಂತರ ಕೈವೀದ್ ಜರಗಲಿದೆ.

ಚಂದ್ರಗಿರಿ ಕೊಪ್ಪಲು ಶ್ರೀ ಮಹಾಮ್ಮಾಯಿ ಅಮ್ಮನವರ ದೇವಳ: ಪ್ರತಿಷ್ಠಾ ಮಹೋತ್ಸವ



ಕಾಸರಗೋಡು: ರಾಮಕ್ಷತ್ರಿಯ – ರಾಮರಾಜ ಕ್ಷತ್ರಿಯ– ಕೋಟೆಯಾರ್ ಸಮಾಜದಪ್ರತಿಷ್ಠಿತ ಚಂದ್ರಗಿರಿ ಕೊಪ್ಪಲು ಶ್ರೀ ಮಹಾಮ್ಮಾಯಿ ಅಮ್ಮನವರ ದೇವಳದ 55ನೇ ಪ್ರತಿಷ್ಠಾ ಮಹೋತ್ಸವ ಬ್ರಹ್ಮಶ್ರೀ ಅರವತ್ ಪದ್ಮನಾಭ ತಂತ್ರಿಗಳ ಉಪಸ್ಥಿತಿಯಲ್ಲಿ ಕೀಕಾಂಗೋಡು ಪನ್ನಿಪಳ್ಳಿ ಬ್ರಹ್ಮಶ್ರೀ ಶ್ರೀಧರ ಕಾಯರ್ತ್ತಾಯರ ನೇತೃತ್ವ ಚಂದ್ರಗಿರಿ ಅವಿನಾಶ್ ಭಟ್ ಸಹಭಾಗಿತ್ವದಲ್ಲಿ ಜರಗಿತು.

ಪ್ರತಿಷ್ಠಾ ವಾರ್ಷಿಕೋತ್ಸವದ ಅಂಗವಾಗಿ ಕುಲ ಪುರೋಹಿತರಾದ ನಾಗೇಶ್ ಭಟ್ ತಲ್ಲಾಣಿ ಅವರ ಪೌರೋಹಿತ್ಯದಲ್ಲಿ ಸ್ವಜಾತಿ ಬಾಂಧವರ ವಟುಗಳಿಗೆ ಸಾಮೂಹಿಕ ಉಚಿತ ಬ್ರಹ್ಮೋಪದೇಶ, ಹರಿಸೇವೆ ಮತ್ತು ಧರ್ಮದೈವಗಳ ಕೋಲವು ಯಶಸ್ವಿಯಾಗಿ ಜರಗಿತು.

ಸಭಾ ಕಾರ್ಯಕ್ರಮ

55ನೇ ವಾರ್ಷಿಕ ಪ್ರತಿಷ್ಠಾ ಮಹೋತ್ಸವದ ಅಂಗವಾಗಿ ನಡೆದ ಸಭಾ ಕಾರ್ಯಕ್ರಮವನ್ನು ಬೆಂಗಳೂರಿನ ದೇವನಹಳ್ಳಿಯ ಆಕಾಶ್ ವೈದ್ಯಕೀಯ ಮೆಡಿಕಲ್ ಕಾಲೇಜಿನ ಮೆಡಿಕಲ್ ಸುಪರಿಂಟೆಂಡೆಂಟ್ ಡಾ.ಬ್ರಿಜೇಶ್ ಕೆ. ಉದ್ಘಾಟಿಸಿದರು.

ದೇವಳ ಸಮಿತಿ ಅಧ್ಯಕ್ಷ ಕೆ. ಲೋಕೇಶ್ ಕೊಪ್ಪಲು ಅಧ್ಯಕ್ಷತೆ ವಹಿಸಿದ್ದರು. ಸುರತ್ಕಲ್‌ನ ಪೊಲೀಸ್ ಇನ್‌ಸ್ಪೆಕ್ಟರ್ ಪ್ರಮೋದ್ ಕುಮಾರ್ ಪಿ., ಮಂಗಳೂರು, ಅಬಕಾರಿ ಅಧೀಕ್ಷಕಿ ಶೋಭಾ ರಾಮಚಂದ್ರ, ಕೇರಳ ತೀಯಾ ಮಹಾಸಭಾದ ರಾಜ್ಯಾಧ್ಯಕ್ಷ ಗಣೇಶ ಅರಮಂಗಾನ, ಕಾಸರಗೋಡು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಶಿವರಾಮ ಕಾಸರಗೋಡು ಅತಿಥಿಗಳಾಗಿದ್ದರು.

ದೇವಳ ಸಮಿತಿ ಗೌರವಾಧ್ಯಕ್ಷ ಪ್ರಭಾಕರ ಕೊಪ್ಪಲು, ಉಪಾಧ್ಯಕ್ಷ ಕರ್ನಾಟಕ ಅಬಕಾರಿ ಇಲಾಖೆ ಜಿಲ್ಲಾ ಕಮಿಷನರ್ ಪ್ರಶಾಂತ್‌ಕುಮಾರ್ ಕೊಪ್ಪಲು, ದೇವಳ ಪ್ರಧಾನ ಕಾರ್ಯದರ್ಶಿ ಸೀತಾರಾಮ ಕೊಪ್ಪಲು ಬೀರಿ ಕೋಟೆಕಾರ್, ಭವಾನಿ ಶಂಕರ ತೋಟ ಬೀರಂತಬೈಲು, ದೇವಳ ಅರ್ಚಕಸಿ.ಎಚ್.ದಯಾನಂದಕೊಪ್ಪಲು ಉಪಸ್ಥಿತರಿದ್ದರು. ಸ್ವಾತಿಕೊಪ್ಪಲು, ಕಿರಣ್ ಪ್ರಸಾದ್ ಕೂಡ್ಲು ನಿರೂಪಿಸಿದರು.

ಸಾಧಕರಿಗೆ ಅಭಿನಂದನೆ

ಈ ಸಂದರ್ಭ ಕುಟುಂಬದಲ್ಲಿ 75 ವರ್ಷ ಪೂರೈಸಿದವರನ್ನು ಸನ್ಮಾನಿಸಲಾಯಿತು. ಅಲ್ಲದೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ, ಗೌರವ ಡಾಕ್ಟರೇಟ್ ಪದವಿ ಪಡೆದವರಿಗೆ ಪ್ರತಿಭಾ ಪುರಸ್ಕಾರ, ಸ್ಮರಣಿಕೆ, ಶಾಲು, ಫಲಪುಷ್ಪ ನಗದು ಗೌರವದೊಂದಿಗೆ ಅಭಿನಂದಿಸಲಾಯಿತು. ರಾಜ್ಯ, ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆ, ಚಲನಚಿತ್ರ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಯಿತು. ದೇವಳದ ಅಭಿವೃದ್ಧಿಗಾಗಿ ದುಡಿದ ಹಲವು ಮಹನೀಯರನ್ನು ಸನ್ಮಾನಿಸಲಾಯಿತು.

ಏ.9-16ರವರೆಗೆ ಕುರುಮುಜ್ಜಿಕಟ್ಟೆ ಭಜನಾ ಮಂದಿರದಲ್ಲಿ ಶ್ರೀಮದ್ ಭಾಗವತ ಸಪ್ತಾಹ



ಬದಿಯಡ್ಕ: ನಾರಂಪಾಡಿ ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಶ್ರೀಮದ್ ಭಾಗವತ ಸಪ್ತಾಹವು ಏ.9ರಿಂದ 16ರ ತನಕ ಜರಗಲಿದೆ.

ಏ.9ರಂದು ಬೆಳಗ್ಗೆ 7 ಗಂಟೆಗೆ ಗಣಪತಿ ಹೋಮ, ಭಜನೆ, ಶ್ರೀ ಮದ್ಭಾಗವತ ಸಪ್ತಾಹದ ಬಾಬ್ತು ಸಾಮೂಹಿಕ ಪ್ರಾರ್ಥನೆ, 9.30ಕ್ಕೆ ಬ್ರಹ್ಮಶ್ರೀ ಶಂಕರನಾರಾಯಣ ಶರ್ಮ ಗೋಸಾಡ ಇವರಿಂದ ಉಗ್ರಾಣ ಮುಹೂರ್ತ, 10 ಗಂಟೆಗೆ ಸ್ವಯಂಸೇವಕರಿಗೆ ಬಾಡ್ಜ್ ವಿತರಣೆ, ಸಂಜೀವ ಶೆಟ್ಟಿ ಮೊಟ್ಟೆಕುಂಜ ಇವರಿಂದ, ಅಪರಾಹ್ನ ಹಸಿರುವಾಣಿ ಶೋಭಾಯಾತ್ರೆ ನಡೆಯಲಿದೆ.

ದೀಪ ಪ್ರತಿಷ್ಠೆ

ಸಂಜೆ 4 ಗಂಟೆಗೆ ಸಾಮೂಹಿಕ ಪ್ರಾರ್ಥನೆ, 5 ಗಂಟೆಗೆ ಭಾಗವತಾಚಾರ್ಯ ಬ್ರಹ್ಮಶ್ರೀ ಶಂಕರನ್ ನಂಬೂದಿರಿ ಚೇದಮಂಗಲಂ ಪಯ್ಯನ್ನೂರು ಇವರ ಆಗಮನ, ಪೂರ್ಣಕುಂಭ ಸ್ವಾಗತ, ದೀಪ ಪ್ರತಿಷ್ಠೆ ಆಚಾರ್ಯವರಣ, 6.30ರಿಂದ ಭಾಗವತಾಚಾರ್ಯರಿಂದ ಮಹಾತ್ಮೆ ಪ್ರವಚನ ನಡೆಯಲಿದೆ.

ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ

ಏ.10ರಿಂದ 16ರ ತನಕ ಪ್ರಾತಃಕಾಲ 5 ಗಂಟೆಗೆ ಗಣಪತಿ ಹೋಮ, 6.30ರಿಂದ ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಶ್ರೀಮದ್ ಭಾಗವತ ಪಾರಾಯಣ, ಪ್ರವಚನ, 7.30ಕ್ಕೆ ಮಹಾಪೂಜೆ, 8 ಗಂಟೆಗೆ ಬೆಳಗ್ಗಿನ ಉಪಾಹಾರ, 9.15ರಿಂದ 12.45ರ ತನಕ ಪಾರಾಯಣ, ಪ್ರವಚನ ಮುಂದುವರಿಕೆ, ಮಧ್ಯಾಹ್ನ 1 ಗಂಟೆಗೆ ಶ್ರೀ ಧರ್ಮಶಾಸ್ತಾ ದೇವರ ಮಹಾಪೂಜೆ, ಮಂಗಳಾರತಿ, ಪ್ರಸಾದ ವಿತರಣೆ, ಭೋಜನ ಪ್ರಸಾದ, ಅಪರಾಹ್ನ 3.15ರಿಂದ 4.30ರ ತನಕ ಪಾರಾಯಣ, ಪ್ರವಚನ ಮುಂದುವರಿಕೆ, ಸಂಜೆ 5ರಿಂದ 6ರ ತನಕ ಪಾರಾಯಣ, ಪ್ರವಚನ ಮುಂದುವರಿಯಲಿದೆ.

ಏ.11ರಿಂದ ಬಜಕೂಡ್ಲು ಸುವರ್ಣ ತರವಾಡು ನೂತನ ಮನೆ ಗೃಹಪ್ರವೇಶ, ದೈವಗಳ ಪ್ರತಿಷ್ಠೆ

ಪೆರ್ಲ: ಬಜಕೂಡ್ಲು ಮುಗೇರುಹಿತ್ತಲು ಸುವರ್ಣ ತರವಾಡು ನೂತನ ಮನೆಯ ಗೃಹಪ್ರವೇಶ, ಶ್ರೀ ಧೂಮಾವತಿ , ಪರಿವಾರ ದೈವಗಳ ಪ್ರತಿಷ್ಠಾ ಮಹೋತ್ಸವ ಮತ್ತು ಧರ್ಮದೈವಗಳ ನೇಮ ಏ.11ರಿಂದ 13ರ ವರೆಗೆ ವಿವಿಧ ವೈದಿಕ, ಧಾಮಿಕ ಕಾರ್ಯಕ್ರಮಗಳೊಂದಿಗೆ ವೇ.ಮೂ. ಚಂದ್ರಶೇಖರನಾವಡ ನೇತೃತ್ವ ಕಾರ್ಯಕ್ರಮ ನಡೆಯಲಿದೆ.

ಏ.11ರಂದು ಸಂಜೆ 4ಕ್ಕೆ ಆಚಾರ್ಯವರ್ಯ ಚಂದ್ರಶೇಖರ ನಾವಡ ಆಗಮನ, 4.30ಕ್ಕೆ ಉಗ್ರಾಣ ಮುಹೂರ್ತ, 5ರಿಂದ ಆಚಾರ್ಯಾದಿ ಋತ್ವಿಗ್ವರಣ, ಸ್ವಸ್ತಿ, ಪುಣ್ಯಾಹ ವಾಚನ, ಸ್ಥಳಶುದ್ಧಿ, ಪ್ರಾಸಾದ ಶುದ್ಧಿ ರಾಕ್ಷೋಘ್ನ ಹವನ, ವಾಸ್ತು ಹವನ, ವಾಸ್ತು ಪೂಜೆ, ದಿಕ್ಪಾಲ ಬಲಿ, ನಾಗಬಿಂಬ ಶುದ್ಧಿ ಆಯುಧಾದಿ ಬಿಂಬ ಶುದ್ಧಿ ಜರಗಲಿದೆ.

ಏ.12ರಂದು ಬೆಳಗ್ಗೆ 6ಕ್ಕೆ ಗಣಪತಿ ಹವನ, ಕಲಶಪೂಜೆ, 8.45ರಿಂದ 10.16ರ ಒಳಗೆ ಒದಗುವ ಶುಭ ಸುಮುಹೂರ್ತದಲ್ಲಿ ನೂತನ ತರವಾಡು ಮನೆಯ ಗೃಹಪ್ರವೇಶ, ನಾಗದೇವರ ಪ್ರತಿಷ್ಠೆ ಧರ್ಮದೈವ ಧೂಮಾವತಿ, ಪಂಜುರ್ಲಿ, ಕಲ್ಲುರ್ಟಿ ಹಾಗೂ ಕೊರತಿ ದೈವಗಳ ಪ್ರತಿಷ್ಠೆ ಕಲಶಾಭಿಷೇಕ, ಶ್ರೀ ದೈವಗಳಿಗೆ ತಂಬಿಲ, 11ರಿಂದ ಶ್ರೀ ವೆಂಕಟ್ರಮಣ ದೇವರ ಹರಿಸೇವೆ ನಂತರ ಭಜನಾ ಸೇವೆ, ಸಂಜೆ 6.30ಕ್ಕೆ ಸಂಧ್ಯಾ ದೀಪ ಕಾರ್ಯಕ್ರಮ, 6.40ಕ್ಕೆ ಧರ್ಮದೈವಗಳ ಭಂಡಾರ ಇಳಿಯುವುದು, ರಾತ್ರಿ 7ಕ್ಕೆ ಬಜಕೂಡ್ಲು ಗುಳಿಗ ಭಂಡಾರಕೊಟ್ಯದಿಂದ ಗುಳಿಗ ಭಂಡಾರದ ಆಗಮನ, 7.30ರಿಂದ ತೊಡಂಜಲ್, 8ರಿಂದ ಗುಳಿಗ ದೈವದ ಕೋಲ, 10.30ರಿಂದ ಪಂಜುರ್ಲಿ, ಕಲ್ಲುರ್ಟಿ ದೈವಗಳ ನೇಮ ಜರಗಲಿದೆ.

ಏ.13ರಂದು ಬೆಳಿಗ್ಗೆ 6ರಿಂದ ಭಜನಾ ಸಂಕೀರ್ತನೆ, 11ರಿಂದ ಶ್ರೀ ಧೂಮಾವತಿ ದೈವದ ನೇಮ, ಅಪರಾಹ್ನ 3ಕ್ಕೆ ಕೊರತಿ ದೈವದ ಕೋಲ, ರಾತ್ರಿ 7ರಿಂದ ಗುರುಹಿರಿಯರಿಗೆ ಬಡಿಸುವ ಕಾರ್ಯಕ್ರಮ ನೆರವೇರಲಿದೆ.



ಪುತ್ತಿಗೆ ಗ್ರಾ.ಪಂ.ಮಟ್ಟದ ವಿರಾಟ್ ಹಿಂದು ಸಂಗಮ ಕಾರ್ಯಕ್ರಮದಲ್ಲಿ ಸಂಗ್ರಹವಾದ ಮೊತ್ತದಲ್ಲಿ ಉಳಿತಾಯವಾದ 9250 ರೂಪಾಯಿ ಹಣವನ್ನು ಕನ್ನೆಪ್ಪಾಡಿ ಆಶ್ರಯ ಆಶ್ರಮಕ್ಕೆ ಹಸ್ತಾಂತರಿಸಲಾಯಿತು. ಈ ಸಂದರ್ಭ ವಿರಾಟ್ ಹಿಂದು ಸಂಗಮ ಕಾರ್ಯಕ್ರಮದ ಅಧ್ಯಕ್ಷ ಡಿ.ದಾಮೋದರ, ರಕ್ಷಾಧಿಕಾರಿಗಳಾದ ಅಶೋಕ ಮಾಸ್ಟರ್ ಬಾಡೂರು, ವಿಘ್ನೇಶ್ವರ ಮಾಸ್ತರ್, ಆಶ್ರಮದ ಟ್ರಸ್ಟ್‌ಗಳಾದ ರಮೇಶ ಕಳೇರಿ, ಬಾಲಕೃಷ್ಣ ಪಣಿಯರ್ಮ, ಆಶ್ರಮದ ಹಿತೈಷಿಗಳಾದ ಗಂಗಾಧರ ಪಳ್ಳತ್ತಡ್ಕ, ಪ್ರೊ.ಎ.ಶ್ರೀನಾಥ್ ಉಪಸ್ಥಿತರಿದ್ದರು.

ಗಡಿನಾಡು ಕಾಸರಗೋಡಿನ ಕನ್ನಡ ಸೇವೆಗೆ ಸಂದ ಗೌರವ

ಡಾ.ವಾಮನ್ ರಾವ್‌ಗೆ 'ಹೊಯ್ಸಳ' ಪ್ರಶಸ್ತಿ ಪ್ರದಾನ

- ಮೈಸೂರಿನಲ್ಲಿ ನಡೆದ ಕಾರ್ಯಕ್ರಮ
- ಡಾ.ವಾಮನ್ ರಾವ್ ಸಹಿತ 15 ಮಂದಿಗೆ ಪ್ರಶಸ್ತಿ ಪ್ರದಾನ

ಕಾಸರಗೋಡು: ಮೈಸೂರಿನ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗವು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ಸಂಸ್ಥೆಯ 26ನೇ ವಾರ್ಷಿಕೋತ್ಸವ, 2025ನೇ ಸಾಲಿನ ಹೊಯ್ಸಳ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಪುಸ್ತಕ ಪ್ರೇಮಿ ಅಂಕೇಗೌಡ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು.



ಈ ಕಾರ್ಯಕ್ರಮದಲ್ಲಿ ಕರ್ನಾಟಕದ ಹಾಗೂ ಗಡಿನಾಡು ಕಾಸರಗೋಡಿನ ಕನ್ನಡ ಭವನ ಸಮೂಹ ಸಂಸ್ಥೆಗಳ ರೂವಾರಿ, ಕೇರಳ ರಾಜ್ಯ ಕನ್ನಡ ಚುಟುಕು ಸಾಹಿತ್ಯ ಪರಿಷತ್ತು ಸಂಸ್ಥಾಪಕರು, ಕರ್ನಾಟಕದ ಸುಮಾರು 18 ಜಿಲ್ಲೆಗಳಲ್ಲಿ ಘಟಕಗಳನ್ನು ಸ್ಥಾಪಿಸಿ ಒಳನಾಡಿನಲ್ಲಿಯೂ ಕನ್ನಡ ಸೇವೆ ಮಾಡುತ್ತಿರುವ ಡಾ.ವಾಮನ್ ರಾವ್ ಬೇಕಲ್ ಸಹಿತ ವಿವಿಧ ಕ್ಷೇತ್ರಗಳಲ್ಲಿ ನಾಡು ನುಡಿಗೆ ಅನುಪಮ ಸೇವೆ ಸಲ್ಲಿಸುತ್ತಿರುವ 15 ಮಂದಿಗೆ ಹೊಯ್ಸಳ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಡಾ.ವಿ.ಲಕ್ಷ್ಮೀನಾರಾಯಣ, ಡಾ.ಕೆ.ಲೀಲಾ ಪ್ರಸಾದ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮೈಸೂರು ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಹಾಗೂ ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ ಪ್ರದಾನ ಮಾಡಿದರು. ವಿಜಯಲಕ್ಷ್ಮಿ ರಂಗನಾಥ್ ಪ್ರಾರ್ಥಿಸಿದರು. ಹೊಯ್ಸಳ ಕನ್ನಡ ಸಂಘ ಅಧ್ಯಕ್ಷ ರಂಗನಾಥ್ ಮೈಸೂರು ಸ್ವಾಗತಿಸಿದರು. ಮಾನುಷ ಕಾರ್ಯಕ್ರಮ ನಿರೂಪಿಸಿದರು.

ಹಸಿರು ವಿಧಾನಸಭಾ ಚುನಾವಣೆ: ಮ್ಯಾಜಿಕ್ ಶೋ

ಕಾಸರಗೋಡು: ಹಸಿರು ನೀತಿ ಸಂಹಿತೆಯನ್ನು ಅನುಸರಿಸಿ ವಿಧಾನಸಭಾ ಚುನಾವಣೆ ನಡೆಯಲಿರುವ ಅಂಗವಾಗಿ ಮುಖ್ಯ ಚುನಾವಣಾ ಅಧಿಕಾರಿ ಸ್ವೀಪ್, ಜಿಲ್ಲಾಡಳಿತ, ಸ್ವಚ್ಛತಾ ಮಿಷನ್ ಕಾಸರಗೋಡು ನೇತೃತ್ವ ಜಿಲ್ಲೆಯಾದ್ಯಂತ ವಿವಿಧ ಜಂಟಿ ಪ್ರಚಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾಸರಗೋಡು ಹೊಸ ಬಸ್ ನಿಲ್ದಾಣ, ಕಾಞಂಗಾಡು ಹೊಸ ಬಸ್ ನಿಲ್ದಾಣ, ನೀಲೇಶ್ವರ ಬಸ್ ನಿಲ್ದಾಣ ಮತ್ತು ಚೆರುವತ್ತೂರು ಬಸ್ ನಿಲ್ದಾಣದಲ್ಲಿ ಕಾಸರಗೋಡು, ಕಾಞಂಗಾಡು ಮತ್ತು ನೀಲೇಶ್ವರ ನಗರಸಭೆಗಳು, ಚೆರುವತ್ತೂರು ಗ್ರಾಮ ಪಂಚಾಯತ್ ಸಹಯೋಗದಲ್ಲಿ ಜಾದೂ ಪ್ರದರ್ಶನವನ್ನು ಜಾದೂಗಾರ ರಾಜೀವ್ ಮೆಮುಂಡ ಮಂಗಳವಾರ ಆಯೋಜಿಸಿದ್ದರು.

ಚುನಾವಣೆಯ ಮಾಹಿತಿ

ಪ್ರತಿಯೊರ್ವರೂ ಮತದಾನ ನಡೆಸಬೇಕೆಂಬ ಉದ್ದೇಶದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಏಕ ಬಳಕೆಯ ಪ್ಲಾಸ್ಟಿಕ್‌ಗಳನ್ನು ತ್ಯಜಿಸುವುದು ಸಹಿತ ಪ್ರಕೃತಿಯನ್ನು ರಕ್ಷಿಸುವುದು, ಹಾನಿಕರವಲ್ಲದ ಮರುಬಳಕೆ ಮಾಡಬಹುದಾದ ಸಾಮಗ್ರಿಗಳ ಬಳಸಿಕೊಂಡು ಚುನಾವಣಾ ಪ್ರಚಾರ ಕಾರ್ಯಕ್ರಮದ ಆಯೋಜನೆ ಬಗ್ಗೆ ಸಮಗ್ರ ಮಾಹಿತಿ ಒದಗಿಸಲಾಯಿತು. ವಿವಿಧ ಸ್ಥಳಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಸ್ವಚ್ಛತಾ ಮಿಷನ್ ನೌಕರರು, ಸ್ಥಳೀಯಾಡಳಿತ ಸಂಸ್ಥೆಗಳ ಕಾರ್ಯದರ್ಶಿಗಳು, ಸಹಾಯಕ ಕಾರ್ಯದರ್ಶಿಗಳು, ಸ್ವಚ್ಛತಾ ನಗರ ವ್ಯವಸ್ಥಾಪಕರು, ನಗರಸಭೆ ಆರೋಗ್ಯ ಇಲಾಖೆ ನೌಕರರು, ನೈರ್ಮಲ್ಯ ಕಾರ್ಮಿಕರು, ಹಸಿರು ಕ್ರಿಯಾ ಸೇನೆ ಸದಸ್ಯರು, ಎನ್‌ಎಸ್‌ಎಸ್ ಸ್ವಯಂ ಸೇವಕರು, ಸಾರ್ವಜನಿಕರು ಭಾಗವಹಿಸಿದ್ದರು.



ಸುತ್ತ ಮುತ್ತ

ಎ.9ರಂದು ಶ್ರೀರಾಮ್ ಸಾರಥಿ ಸಂಗಮ' ಕಾರ್ಯಕ್ರಮ

ಮಂಗಳೂರು: ಶ್ರೀರಾಮ್‌ಫೈನಾನ್ಸ್ ಲಿ.ವತಿಯಿಂದ ಏ.9ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆಯ ವರೆಗೆ ಅಡ್ಯಾರ್ ಗಾರ್ಡನ್‌ನಲ್ಲಿ 'ಶ್ರೀರಾಮ್ ಸಾರಥಿ ಸಂಗಮ' ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಪ್ರಮುಖ ಬ್ರ್ಯಾಂಡ್‌ಗಳ ಹೊಸ ವಾಹನಗಳು ಮತ್ತು ಯಂತ್ರಗಳ ಪ್ರದರ್ಶನ ನಡೆಯಲಿದೆ. ಅಂದು ಬುಕ್ಕಿಂಗ್ ಮಾಡುವ ವಾಹನಗಳ ಮೇಲೆ ವಿಶೇಷ ರಿಯಾಯಿತಿ ಇದೆ. ಕಂಪೆನಿಯ ವತಿಯಿಂದ ಸರ್ವಿಸ್ ಚಾರ್ಜ್ ಮೇಲೆ ಶೇ.50 ರಿಯಾಯಿತಿ ಹಾಗೂ ಬಡ್ಡಿದರದಲ್ಲಿಯೂ ವಿಶೇಷ ಸಡಿಲಿಕೆ ದೊರೆಯಲಿದೆ. ಆರೋಗ್ಯ ತಪಾಸಣೆ ಉಚಿತ ಶಿಬಿರ, ರಕ್ತದಾನ ಶಿಬಿರ, ಕಣ್ಣು ಮತ್ತು ಕಿವಿ ಪರೀಕ್ಷೆ ಹಾಗೂ ಸಾರಿಗೆ ಉದ್ಯಮ ಕ್ಷೇತ್ರಕ್ಕೆ ಸಂಬಂಧಪಟ್ಟ ಕಾರ್ಮಿಕರ ಮತ್ತು ಮಾಲೀಕರ 8ನೇ ತರಗತಿಯಿಂದ 12ನೇ ತರಗತಿವರೆಗೆ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಯೋಜನೆಗಳ ಕುರಿತು ಮಾಹಿತಿ ಮತ್ತು ಅರ್ಜಿ ವಿತರಣೆಯೂ ನಡೆಯಲಿದೆ ಎಂದು ಶ್ರೀರಾಮ್ ಫೈನಾನ್ಸ್ ಲಿ. ಅಧ್ಯಕ್ಷ ಹಾಗೂ ಝೋನಲ್ ಬಿಸಿನೆಸ್ ಹೆಡ್ ಶರಚ್ಚಂದ್ರ ಭಟ್ ಕಾಕುಂಜೆ ಮಂಗಳವಾರ ತಿಳಿಸಿದರು.

ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ವೇದವ್ಯಾಸ ಕಾಮತ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಜೆಸಿಬಿ ಇಂಡಿಯಾ ಸಿಇಒ ಮತ್ತು ಎಂಡಿ ದೀಪಕ್ ಶೆಟ್ಟಿ, ಶ್ರೀರಾಮ್ ಫೈನಾನ್ಸ್ ಎಕ್ಸಿಕ್ಯೂಟಿವ್ ವೈಸ್ ಚೇರ್ಮನ್ ಉಮೇಶ್ ಜಿ. ರೇವಣ್ಕರ್, ಚೀಫ್ ಆಪರೇಟಿಂಗ್ ಆಫೀಸರ್ ಮತ್ತು ಜೆಎಂಡಿ ಸುದರ್ಶನ ಹೊಳ್ಳ ಬಾಳ್ನಾಡ್, ಜೆಎಂಡಿ ಮತ್ತು ಮುಖ್ಯ ಮಾರಾಟ ಅಧಿಕಾರಿ ನಿಲೇಶ್ ಒಡೆದಾರ, ಎಕ್ಸಿಕ್ಯೂಟಿವ್ ಡೈರೆಕ್ಟರ್ ಮತ್ತು ಬಿಸಿನೆಸ್ ಯೂನಿಟ್ ಹೆಡ್ ಶ್ರೀಧರ ಮಠ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು. ಸಂಸ್ಥೆಯ ಅಧಿಕಾರಿ ನಾಗರಾಜ್, ಚೇತನ ಅರಸ್, ಸಚಿನ್ ಇದ್ದರು.

ಮಿತ್ತಮಜಲು ಕ್ಷೇತ್ರದಲ್ಲಿ ಕೋಳಿಗುಂಟ

ಬಂಟ್ವಾಳ: ಸಜೀಪಮಾಗಣೆಯ ಮಿತ್ತಮಜಲು ಶ್ರೀಕ್ಷೇತ್ರದಲ್ಲಿ ನಡೆಯಲಿರುವ ವಾರ್ಷಿಕ ಬಿಸುಜಾತ್ರೆ ಪ್ರಯುಕ್ತ ಕೋಳಿಗುಂಟ ಸಜೀಪ ಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ಸಂಪನ್ನಗೊಂಡಿತು. ಈ ಸಂದರ್ಭ ಕಾಂತಾಡಿಗುತ್ತು ಗಡಿ ಪ್ರದಾನರಾದ ಗಣೇಶ್ ನಾಯಕ್ ಯಾನೆ ಉಗ್ಗ ಶೆಟ್ಟಿ ಬಿಜಂದಾರುಗುತ್ತು ಶಿವರಾಮ ಭಂಡಾರಿ, ಸಜೀಪಗುತ್ತು ಗಡಿ ಪ್ರಧಾನರಾದ ಕಾಳ ಶೆಟ್ಟಿ ಯಾನೆ ಮುತ್ತಣ್ಣ ಶೆಟ್ಟಿ, ನಗ್ರೀಗುತ್ತು ಜಯರಾಮ ಶೆಟ್ಟಿ, ನಗ್ರೀಗುತ್ತು ವಿವೇಕ ಶೆಟ್ಟಿ ಜೀವನ್ ಆಳ್ವ ಹರೀಶ್ ರೈ, ದೇವಿ ಪ್ರಸಾದ್ ಪೂಂಜಾ, ಎಸ್ ಶ್ರೀಕಾಂತ ಶೆಟ್ಟಿ, ಕೊಚ ಪೂಜಾರಿ ಯಾನೆ ಶಂಕರ ಪೂಜಾರಿ, ಕುಂಞ್ಞ ಪೂಜಾರಿ ಯಾನೆ ದಯಾನಂದ ಪೂಜಾರಿ ಗುತ್ತು ಮನೆತನದವರು ಹಾಗೂ ಚಾಕ್ರಿ ವರ್ಗದವರು ಉಪಸ್ಥಿತರಿದ್ದರು. ಏ.12ರಂದು ಕ್ಷೇತ್ರದಲ್ಲಿ ಕೊಡಿ ಚೆಂಡು ಅಗರಿಮಾಡ, ಅಲಾಡಿ ಖಾನ ನೇಮ, ಏ.13 ರಂದು ನಗ್ರೀಮಾಡ ನೇಮ, ಏ.14ರಂದು ಕ್ಷೇತ್ರ ಮಿತ್ತ ಮಜಲು ಕಡೆ ಚೆಂಡು, ಶ್ರೀ ದೈವಂಗಳ ವಲಸಾರಿ, ಶ್ರೀ ನಾಲ್ಕೈತಾಯ ದೈವದ ಮೆಚ್ಚಿ,ಎ.15 ದೈವಂಗಳ ಕೆರೆ ನೇಮ, ಏ.16 ಶ್ರೀ ದೈವಂಗಳ ಉಡುಕು ಬಲಿ, ಅನ್ನದಾನ ರಾತ್ರಿ ಪರಿವಾರ ದೈವಗಳ ನೇಮ ಜರಗಲಿದೆ.

ವಿವಿಧೆಡೆಗೆ ಶ್ರೀರಾಮ ಹನುಮ ಜ್ಯೋತಿ ರಥ ಯಾತ್ರೆ ಆಗಮನ

ನಿಡ್ಪಳ್ಳಿ: ಹನುಮಗಿರಿ ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಏ.9ರಿಂದ 12ರ ತನಕ ನಡೆಯುವ ಅಷ್ಟಬಂದ ಬ್ರಹ್ಮಕಲಶೋತ್ಸವದ ಅಂಗವಾಗಿ ಅಯೋಧ್ಯೆಯಿಂದ ಆಗಮಿಸಿದ ಶ್ರೀರಾಮ ಜ್ಯೋತಿ, ಮೂಲ ಮೃತ್ತಿಕೆ,



ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಿಂದ ಗಂಗಾಜಲ, ಅಂಜನಾದ್ರಿಯಿಂದ ಹನುಮ ಜ್ಯೋತಿ, ಮೃತ್ತಿಕೆ ಹಾಗೂ ಪಂಪ ಸರೋವರದ ಪವಿತ್ರ ಜಲ ಸಂಗ್ರಹಿಸಿಕೊಂಡು ಸಂಚರಿಸುತ್ತಿರುವ ಶ್ರೀರಾಮ ಹನುಮಜ್ಯೋತಿ ರಥಯಾತ್ರೆ ಏ.7ರಂದು ನಿಡ್ಪಳ್ಳಿ ಗ್ರಾಮದ ಶ್ರೀ ಶಾಂತದುರ್ಗಾ ದೇವಸ್ಥಾನಕ್ಕೆ ಆಗಮಿಸಿತು. ಭಜನೆ, ಜಾಗಟೆಯೊಂದಿಗೆ ಶ್ರೀ ರಾಮ ಹನುಮ ಜ್ಯೋತಿ ರಥವನ್ನು ಅದ್ದೂರಿಯಾಗಿ ಬರಮಾಡಿ ಕೊಳ್ಳಲಾಯಿತು. ದೇವಸ್ಥಾನದ ಅರ್ಚಕ ನವೀನ್ ಹೆಬ್ಬಾರ್ ರಥಕ್ಕೆ ಹೂಮಾಲೆ ಹಾಕಿ ಪೂಜೆ ಸಲ್ಲಿಸಿದರು. ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ನಾಗೇಶ ಗೌಡ ಸ್ವಾಗತಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ, ಕೋಟಿ ಶ್ರೀರಾಮ ತಾರಕ ಜಪ ಯಜ್ಞದ ಸಂಚಾಲಕ ಸೀತಾರಾಮ ರೈ ಕೆದಂಬಾಡಿಗುತ್ತು, ಮುರಳೀಕೃಷ್ಣ ಹಸಂತಡ್ಕ ಹಾಗೂ ತಂಡ, ನಿಡ್ಪಳ್ಳಿ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಪಾಲ್ಗೊಂಡರು.

ರಾಮಕುಂಜ ದೇವಸ್ಥಾನದಲ್ಲಿ ಸ್ವಾಗತ

ರಥಯಾತ್ರೆಯನ್ನು ರಾಮಕುಂಜ ಶ್ರೀ ರಾಮಕುಂಜೇಶ್ವರ ದೇವಸ್ಥಾನದಲ್ಲಿ ಸ್ವಾಗತಿಸ ಲಾಯಿತು. ಕಾಜರೊಕ್ಕುವಿನಲ್ಲಿ ರಥಕ್ಕೆ ಸ್ವಾಗತಕೋರಿ ಅಲ್ಲಿಂದ ಭಜನಾ ತಂಡದೊಂದಿಗೆ ಶ್ರೀರಾಮ ಹನುಮ ಜ್ಯೋತಿಯನ್ನು ದೇವಸ್ಥಾನಕ್ಕೆ ಬರಮಾಡಿಕೊಳ್ಳಲಾಯಿತು. ದೇವಸ್ಥಾನದ ಪ್ರಧಾನ ಅರ್ಚಕ ಅನಂತ ಉಡುಪ ಅವರು ರಥಕ್ಕೆ ಪೂಜೆ ಸಲ್ಲಿಸಿದರು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗುರುಪ್ರಸಾದ ಸಹಿತ ವ್ಯವಸ್ಥಾಪನಾ ಸಮಿತಿ ಸದಸ್ಯರು, ಉಪಸ್ಥಿತರಿದ್ದರು. ಬಳಿಕ ರಥಕ್ಕೆ ಪುಷ್ಪಾರ್ಚನೆ ಮಾಡಿದರು. ಶ್ರೀ ರಾಮ ಹನುಮಜ್ಯೋತಿಯನ್ನು ರಾಮಕುಂಜ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗುರುಪ್ರಸಾದ ರಾಮಕುಂಜ ಅವರಿಗೆ ಹಸ್ತಾಂತರಿಸಲಾಯಿತು.

ಏ.9ರಿಂದ 12ರವರೆಗೆ ಕಾರ್ಯಕ್ರಮ | ಇಂದು ಪುತ್ತೂರು ದೇವಸ್ಥಾನದಿಂದ ಹೊರೆಕಾಣಿಕೆ ಮೆರವಣಿಗೆ

ಬ್ರಹ್ಮಕಲಶೋತ್ಸವಕ್ಕೆ ಸಜ್ಜಾಗಿದೆ ಹನುಮಗಿರಿ ಶ್ರೀಕ್ಷೇತ್ರ

ಪುತ್ತೂರು: ಹನುಮಗಿರಿ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವವು ಏ.9ರಿಂದ 12ರವರೆಗೆ ವಿವಿಧ ಧಾರ್ಮಿಕ, ವೈದಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ಮಂಗಳವಾರ ಹನುಮಗಿರಿ ಕ್ಷೇತ್ರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಹನುಮಗರಿ ಕ್ಷೇತ್ರದ ಬ್ರಹ್ಮಕಲಶೋತ್ಸವವು ಸಮಾಜದ ಸೇವೆಯೊಂದಿಗೆ ವಿಶ್ವ ಕಲ್ಯಾಣ, ದೇಶದ ಸುಭಿಕ್ಷೆಯ ಉದ್ದೇಶ ಹೊಂದಿದ್ದು ದ.ಕ., ಮತ್ತು ಕಾಸರಗೋಡು ಜಿಲ್ಲೆಯ ಭಾಗದಿಂದ ಸುಮಾರು ಒಂದು ಲಕ್ಷ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಏ.8ರಂದು ಅಪರಾಹ್ನ 3ಕ್ಕೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಠಾರದಿಂದ ಭವ್ಯ ಹೊರೆಕಾಣಿಕೆ ಮೆರವಣಿಗೆ ನಡೆಯಲಿದೆ. ಇದಕ್ಕೂ ಮೊದಲು ಬೆಳಗ್ಗೆ ಈಶ್ವರಮಂಗಲ ಗ್ರಾಮಸ್ಥರ ಹೊರೆಕಾಣಿಕೆ ಸಮರ್ಪಣೆ ಕ್ಷೇತ್ರಕ್ಕೆ ನಡೆಯಲಿದ್ದು ಉಗ್ರಾಣ ಮುಹೂರ್ತ ನಡೆಯಲಿದೆ. ಸಂಜೆ ಹೊರೆಕಾಣಿಕೆಯು ಮೆರವಣಿಗೆ ಮೂಲಕ ಕ್ಷೇತ್ರಕ್ಕೆ ಸಮರ್ಪಣೆಯಾಗಲಿದೆ ಎಂದರು.

ರಾಮಹನುಮ ಜ್ಯೋತಿ ಆಗಮನ

ಅಯೋಧ್ಯೆ ಮತ್ತು ಅಂಜನಾದ್ರಿ ಬೆಟ್ಟದಿಂದ ಬಂದ ಶ್ರೀ ರಾಮ-ಹನುಮ ಜ್ಯೋತಿಯು ಈಗಾಗಲೇ 60 ಗ್ರಾಮಗಳಲ್ಲಿ ಪರ್ಯಟನೆ ಮಾಡುತ್ತಿದ್ದು ಏ.9ಕ್ಕೆ ಅಪರಾಹ್ನ 3ಕ್ಕೆ ಹನುಮಗಿರಿ ಕ್ಷೇತ್ರಕ್ಕೆ ಆಗಮಿಸಲಿದ್ದು ಭವ್ಯವಾಗಿ ಸ್ವಾಗತಿಸಲಾಗುವುದು ಎಂದರು.

ಶ್ರೀರಾಮ ತಾರಕ ಯಜ್ಞಕ್ಕಾಗಿ 10 ಯಜ್ಞ ಕುಂಡ ರಚಿಸಲಾಗಿದೆ. ಏ.10ಕ್ಕೆ ಬೆಳಗ್ಗೆ ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ



ಯಾಗ ಮಂಟಪ ಉದ್ಘಾಟಿಸಲಿದ್ದಾರೆ. ಇದಾದ ಬಳಿಕ ಶ್ರೀರಾಮ ತಾರಕ ಜಪ ಆರಂಭಗೊಳ್ಳಲಿದೆ. ಈಗಾಗಲೇ ಜಪ ಯಜ್ಞದ ದೀಕ್ಷೆ ಪಡೆದಿರುವ ಸುಮಾರು 13 ಸಾವಿರ ಭಕ್ತರು ದಂಪತಿ ಸಹಿತವಾಗಿ ಯಾಗದಲ್ಲಿ ಭಾಗವಹಿಸಲು ತಿಳಿಸಲಾಗಿದೆ. ಏ.11ರಂದು ಮಧ್ಯಾಹ್ನ ಯಾಗದ ಪೂರ್ಣಾಹುತಿ ನಡೆಯಲಿದೆ. ಈ ಸಂದರ್ಭ ಶಂಕರಾಚಾರ್ಯ ಮಠಗಳಲ್ಲಿ ಒಂದಾದ ಕಂಚಿ ಕಾಮಕೋಟಿ ಮಠದ ಸ್ವಾಮೀಜಿ ಉಪಸ್ಥಿತರಿರುತ್ತಾರೆ ಎಂದು ನಳಿನ್ ಹೇಳಿದರು. ಏ.12ಕ್ಕೆ ಬೆಳಗ್ಗೆ ಶ್ರೀದೇವರಿಗೆ ಏಕಕಾಲದಲ್ಲಿ ಬ್ರಹ್ಮಕಲಶಾಭಿಷೇಕ ನಡೆಯಲಿದೆ.

ವೈದಿಕ ಕಾರ್ಯಕ್ರಮಗಳು

ಬ್ರಹ್ಮಶ್ರೀ ವೇದಮೂರ್ತಿ ವಾಸುದೇವ ತಂತ್ರಿ ಕುಂಟಾರು ಮತ್ತು ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ಆಚಾರ್ಯತ್ವದಲ್ಲಿ ಧಾರ್ಮಿಕ, ವೈದಿಕ ಕಾರ್ಯಕ್ರಮಗಳು ನಡೆಯಲಿವೆ. ಏ.9ರಂದು ಸಂಜೆ 5 ಗಂಟೆಗೆ ತಂತ್ರಿಗಳು ಮತ್ತು ವೈದಿಕರನ್ನು ಕ್ಷೇತ್ರಕ್ಕೆ ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿ ಕೊಳ್ಳಲಾಗುತ್ತದೆ. ಸಂಜೆ 6ರಿಂದ ಸುದರ್ಶನ ಹವನ, ವಾಸ್ತು ಬಲಿ ನಡೆಯಲಿದೆ. ಏ.10ರಂದು ಬೆಳಗ್ಗೆ 8 ಗಂಟೆಗೆ ಅಷ್ಟೋತ್ತರ ಶತ ನಾರಿಕೇಳ ಗಣ ಹವನ, ಮಧ್ಯಾಹ್ನ ಪೂರ್ಣಾಹುತಿ, ಸಂಜೆ ಅಷ್ಟಾವಧಾನ ಸೇವೆ ಮೊದಲಾದವು ನಡೆಯಲಿದೆ. ಏ.11ಕ್ಕೆ ಬೆಳಗ್ಗೆ 6ರಿಂದ ಅರಣೀಮಥನ ಪ್ರಧಾನ ಕುಂಡದಲ್ಲಿ ಅಗ್ನಿ ಸ್ಥಾಪನೆ, ಅಗ್ನಿವಿಹರಣ, ಶ್ರೀರಾಮ ತಾರಕ ಯಾಗ ಆರಂಭಗೊಳ್ಳಲಿದೆ. ಮಧ್ಯಾಹ್ನ, ಪೂರ್ಣಾಹುತಿ ನಡೆಯಲಿದೆ. ಸಂಜೆ ಬ್ರಹ್ಮಕಲಶಪೂಜೆ ನಡೆಯಲಿದೆ.

> **1.5 ಲಕ್ಷ ನಾಳಿಕೇರ ಸಂಗ್ರಹ**
>
> ರಾಮನಿಗೊಂದು ಹನುಮನಿಗೊಂದು ನಾಳಿಕೇರ ಎಂಬಂತೆ ಭಕ್ತರ ಮನೆ ಮನೆಗಳಿಂದ 2 ತೆಂಗಿನಕಾಯಿಗಳನ್ನು ಬ್ರಹ್ಮಕಲಶೋತ್ಸವಕ್ಕೆ ಅಪೇಕ್ಷಿಸಲಾಗಿದೆ. 1 ಲಕ್ಷ ತೆಂಗಿನ ಕಾಯಿಗಳನ್ನು ನಿರೀಕ್ಷಿಸಲಾಗಿತ್ತು. ಅದೀಗ ಒಂದೂವರೆ ಲಕ್ಷ ದಾಟುವ ಸಾಧ್ಯತೆ ಇದೆ. ಉತ್ಸವದ ದಿನಗಳಲ್ಲಿ ನಿರಂತರ ಭಜನಾ ಸಂಕೀರ್ತನೆ ನಡೆಯಲಿದ್ದು, 300 ಭಜನಾ ತಂಡಗಳು ನೋಂದಣಿ ಮಾಡಿಕೊಂಡಿವೆ. ಸುಮಾರು 48 ತಂಡಗಳಿಂದ ಸಾಂಸ್ಕೃತಿಕ ವೈವಿಧ್ಯ ನಡೆಯಲಿದೆ ಎಂದು ನಳಿನ್ ಕುಮಾರ್ ವಿವರಿಸಿದರು.

ಏ.12ರಂದು ಬ್ರಹ್ಮಕಲಶಾಭಿಷೇಕ

ಏ.12ರಂದು ಬೆಳಗ್ಗೆ 5ರಿಂದ ಗಣಪತಿ ಹೋಮ, ಪ್ರತಿಷ್ಠಾಪಾಣಿ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀದೇವರ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ, ಸಂಜೆ ಶ್ರೀ ಕೋದಂಡರಾಮ ದೇವರಿಗೆ ರಂಗಪೂಜೆ, ದೇವರ ಉತ್ಸವ ಬಲಿ ನಡೆಯಲಿದೆ. 4 ದಿನಗಳ ಮಹೋತ್ಸವದಲ್ಲಿ ಅನ್ನಸಂತರ್ಪಣೆ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಹನುಮಗಿರಿಯಲ್ಲಿ ಲವ ವೇದಿಕೆ ಮತ್ತು ಅಮರಗಿರಿಯಲ್ಲಿ ಕುಶ ವೇದಿಕೆ ನಿರ್ಮಿಸಲಾಗಿದೆ. ಏ.9ರಂದು ಸಂಜೆ 5ರಿಂದ ಲವ ವೇದಿಕೆಯಲ್ಲಿ ದಾಸವಾಣಿ ಮತ್ತು ನೃತ್ಯರೂಪಕ ನಡೆಯಲಿದೆ. ರಾತ್ರಿ 8ರಿಂದ ಕುಶ ವೇದಿಕೆಯಲ್ಲಿ ಜೋಡು ಜೀಟಿಗೆ ನಾಟಕ ಪ್ರದರ್ಶನ ನಡೆಯಲಿದೆ. ಏ.10ರಂದು ಬೆಳಗ್ಗೆ 9.39ರಿಂದ ಲವ ವೇದಿಕೆಯಲ್ಲಿ ತಾಳಮದ್ದಳೆ, ನೃತ್ಯಸಂಭ್ರಮ, ಭಕ್ತಿ ಭಾವ ಸಂಗಮ, ಸಂಜೆ ಭರತನಾಟ್ಯ, ಯಕ್ಷಗಾನ ಪ್ರದರ್ಶನ ನಡೆಯಲಿದೆ. ಕುಶ ವೇದಿಕೆಯಲ್ಲಿ ಬೆಳಗ್ಗೆ 10ರಿಂದ ನೃತ್ಯ, ಭಕ್ತಿ ಸಂಗೀತ, ಭರತನಾಟ್ಯ, ಯಕ್ಷಗಾನ ಪ್ರದರ್ಶನ, ಸಂಜೆ ನೃತ್ಯ, ಶಾಸ್ತ್ರೀಯ ಮತ್ತು ಜನಪದ ನೃತ್ಯ ನಡೆಯಲಿದೆ. ಏ.11ರಂದು ಬೆಳಗ್ಗೆ 10ರಿಂದ ಲವ ವೇದಿಕೆಯಲ್ಲಿ ಸಾಂಸ್ಕೃತಿಕ ವೈವಿಧ್ಯ, ಸಂಗೀತ ಗಾನ ಸಂಭ್ರಮ, ಯಕ್ಷಗಾನ, ಸಂಜೆ ಭರತನಾಟ್ಯ, ಭಕ್ತಿಗೀತೆ, ನೃತ್ಯ ರೂಪಕ ನಡೆಯಲಿದೆ. ಕುಶ ವೇದಿಕೆಯಲ್ಲಿ ಬೆಳಗ್ಗೆ 10ರಿಂದ ಯಕ್ಷಗಾನ, ಭರತನಾಟ್ಯ, ಸಂಗೀತ ಕಾರ್ಯಕ್ರಮ, ಸಂಜೆ ಸ್ವರ ಮಾಧುರ್ಯ ಮ್ಯೂಸಿಕ್, ನೃತ್ಯರೂಪಕ, ನೃತ್ಯೋಹಂ ನಡೆಯಲಿದೆ. ಏ.12ರಂದು ಲವ ವೇದಿಕೆಯಲ್ಲಿ ಬೆಳಗ್ಗೆ 10ರಿಂದ ನೃತ್ಯ ವೈಭವ, ಭರತ ನಾಟ್ಯ, ಯಕ್ಷಗಾನಾರ್ಚನೆ, ಗಾನಾರ್ಚನೆ, ಸಂಜೆ 7.30ರಿಂದ ಆಳ್ವಾಸ್ ಸಾಂಸ್ಕೃತಿಕ ವೈಭವ ನಡೆಯಲಿದೆ. ಬೆಳಗ್ಗೆ ಕುಶ ವೇದಿಕೆಯಲ್ಲಿ ಯಕ್ಷಗಾನ ತಾಳಮದ್ದಳೆ ನಡೆಯಲಿದೆ.

ಆಡಳಿತ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ, ಸ್ವಾಗತ ಸಮಿತಿ ಅಧ್ಯಕ್ಷ ಡಾ. ರವೀಶ್ ಪಡುಮಲೆ, ಹೊರೆಕಾಣಿಕೆ ಸಮಿತಿ ಸಂಚಾಲಕ ಶಶಿಕುಮಾರ್ ರೈ ಬಾಲ್ಯೊಟ್ಟು, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಬೂಡಿಯಾರು ರಾಧಾಕೃಷ್ಣ ರೈ, ಸಾಜ ರಾಧಾಕೃಷ್ಣ ಆಳ್ವ, ಶ್ರೀರಾಮ ಪಕ್ಕಳ, ಮುರಳೀಕೃಷ್ಣ ಹಸಂತಡ್ಕ, ರವಿಕಿರಣ ಶೆಟ್ಟಿ ಬೆದ್ರಾಡಿ, ಪ್ರಧಾನ ಕಾರ್ಯದರ್ಶಿಗಳಾದ ಆರ್.ಸಿ. ನಾರಾಯಣ ರೆಂಜ, ನಹುಷ ಪಿ.ವಿ. ಉಪಸ್ಥಿತರಿದ್ದರು.

> **ಪ್ರಮುಖರಿಗೆ ಆಹ್ವಾನ**
>
> ರಾಜ್ಯದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಏ.10 ರಂದು ಹನುಮಗಿರಿ ಕ್ಷೇತ್ರಕ್ಕೆ ಬೆಳಗ್ಗೆ 11ಕ್ಕೆ ಭೇಟಿ ನೀಡಲಿದ್ದಾರೆ. ಕ್ಷೇತ್ರದ ಮುಖ ಮಂಟಪ ಮತ್ತು ಪವಿತ್ರ ವನ ಮರು ನಿರ್ಮಿಸಲಾಗಿದ್ದು, ರಾಜ್ಯಪಾಲರು ಉದ್ಘಾಟಿಸಲಿದ್ದಾರೆ. ಸುಬ್ರಹ್ಮಣ್ಯ ಶ್ರೀ, ಎಡನೀರು ಶ್ರೀ, ಒಡಿಯೂರು ಶ್ರೀ, ಶೃಂಗೇರಿ ಶ್ರೀಗಳ ಸಹಿತ ನಾಡಿನ ಪ್ರಮುಖ ಮಠಗಳ ಸ್ವಾಮಿಗಳು, ಸಂತರು, ಜಗದ್ಗುರುಗಳು, ಅರಸು ವಂಶದವರು, ಬ್ರಹ್ಮಕಲಶೋತ್ಸವದಲ್ಲಿ ಭಾಗವಹಿಲಿದ್ದಾರೆ.
>
> ● ನಳಿನ್ ಕುಮಾರ್ ಕಟೀಲ್

ವಿವೇಕಾನಂದ ಪಿಯು ಕಾಲೇಜಿನಲ್ಲಿ 'ಯುರೇಕಾ' ಪ್ರಥಮ ದಿನದ ಶಿಬಿರ



ಪುತ್ತೂರು: ವಿವೇಕಾನಂದ ಪದವಿಪೂರ್ವ ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ನಡೆಯುತ್ತಿರುವ ವ್ಯಕ್ತಿತ್ವ ವಿಕಸನ ಶಿಬಿರ 'ಯುರೇಕಾ-2026' ರ ಪ್ರಥಮ ದಿನದ ಅವಧಿಗಳು ನಡೆದವು.

ಬೆಂಗಳೂರಿನ ಶೈಕ್ಷಣಿಕ ಸಲಹೆಗಾರ ರಾಜೇಶ್ ಭಟ್ ನಡೆಸಿಕೊಟ್ಟರು. ಪೂರ್ವಾಹ್ನದ ಅವಧಿಯಲ್ಲಿ ಗಣಿತ ಶಾಸ್ತ್ರದ ಹಲವಾರು ವಿಷಯಗಳನ್ನು ಸುಲಭದಲ್ಲಿ ಅರ್ಥಮಾಡಿಕೊಳ್ಳಲು ಸಹಕಾರಿಯಾಗುವಂತಹ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ವಿವಿಧ ಚಟುವಟಿಕೆಗಳ ಮೂಲಕ ನೀಡಿದರು.

ಪ್ರಾತ್ಯಕ್ಷಿಕೆಗಳ ಮೂಲಕ ಮಾಹಿತಿ

ಅಪರಾಹ್ನದ ಬಳಿಕ ಹಲವು ಆಸಕ್ತಿದಾಯಕ ವೈಜ್ಞಾನಿಕ ಪರಿಕಲ್ಪನೆಗಳ ಪರಿಚಯ, ನಿತ್ಯ ಜೀವನದಲ್ಲಿ ಅವುಗಳ ಬಳಕೆ ಮುಂತಾದ ವಿಷಯಗಳ ಮಾಹಿತಿಗಳನ್ನು ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾಲೇಜಿನ ಉಪನ್ಯಾಸಕ ಹಾಗೂ ಉಪನ್ಯಾಸಕೇತರ ವೃಂದದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಯುವ ಸಂಘಟನೆಗಳು ಬಡವರಿಗೆ ನೆರವಾಗಲಿ: ಹರಿನಾರಾಯಣದಾಸ ಆಸ್ರಣ್ಣ



ಕಿನ್ನಿಗೋಳಿ: ಯುವ ಸಂಘಟನೆಗಳು ಸಮಾಜಮುಖಿ ಕಾರ್ಯ ಮಾಡುವ ಮೂಲಕ ಸಮಾಜದ ಬಡ ವರ್ಗಕ್ಕೆ ನೆರವಾಗಬೇಕು ಎಂದು ಕಟೀಲು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಅರ್ಚಕ ಹರಿನಾರಾಯಣದಾಸ ಆಸ್ರಣ್ಣ ಹೇಳಿದರು

ಅವರು ಮಾ.5ರಂದು ಪಕ್ಷಿಕೆರೆ ಶ್ರೀ ವಿನಾಯಕ ಮಿತ್ರ ಮಂಡಳಿ, ಶ್ರೀ ವಿನಾಯಕ ಮಹಿಳಾ ಮಂಡಳಿ ಇವರ ಆಶ್ರಯದಲ್ಲಿ ಸಾಧಕರಿಗೆ ಸನ್ಮಾನ, ಪ್ರತಿಭಾ ಪ್ರದರ್ಶನ, ದತ್ತಿನಿಧಿ, ಆರೋಗ್ಯ ನಿಧಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪಂಜ ಕೊಯಿಕುಡೆ ಶ್ರೀ ಹರಿಪಾದೆ ಜಾರಂದಾಯ ದೈವಸ್ಥಾನದ ಮೊಕ್ತೇಸರ ಪ್ರಕಾಶ್ ಶೆಟ್ಟಿ ನಲ್ಯಗುತ್ತು ಮಾತನಾಡಿದರು. ಸಾಧಕ ಹಿರಿಯ ಕೃಷಿಕ ಜಯಶೆಟ್ಟಿ ತೋಕೂರು, ಅರ್ಪಿತಾ ಉಪಾಧ್ಯಯ, ಸಮೃದ್ಧಿ ಕುಲಾಲ್, ದಿಶಾ ಕುಕ್ಯಾನ್ ಕೊಡೆತ್ತೂರು, ಶ್ರೀ ವಿದ್ಯಾವಿನಾಯಕ ಯುವಕ ಮಂಡಲ ಹಳೆಯಂಗಡಿ ಅವರನ್ನು ಗೌರವಿಸಲಾಯಿತು. ಶಾರದಾ ದೊಡ್ಡಯ್ಯ ಶೆಟ್ಟಿಗಾರ್, ಅಶೋಕ್ , ಮಾಸ್ಟರ್ ಮನೀಶ್ ಅವರಿಗೆ ಆರೋಗ್ಯ ನಿಧಿ ನೀಡಲಾಯಿತು. ಯುಕ್ತಿ ಪಕ್ಷಿಕೆರೆ, ರಶ್ಮಿತಾ ಮುಲ್ಲೊಟ್ಟು ಶಿಕ್ಷಣಕ್ಕೆ ದತ್ತಿ ನಿಧಿ ನೀಡಲಾಯಿತು. ದ.ಕ. ಜಿಲ್ಲಾ ಮೈ ಭಾರತ್ ಸಂಸ್ಥೆಯ ಮುಖ್ಯಸ್ಥ ಉಲ್ಲಾಸ್ ಕೆ.ಟಿ. ಕೆ, ಮೈ ಭಾರತ್ ಸಂಸ್ಥೆಯ ಜಗದೀಶ್ ಕೆ., ಕೆಮ್ರಾಲ್ ಗ್ರಾ.ಪಂ. ಕಾರ್ಯದರ್ಶಿ ಕೇಶವ , ಕಲ್ಲಾವು ಶ್ರೀ ವೀರಭದ್ರ ದೇವಸ್ಥಾನದ ಗುರಿಕಾರ ಮೋಹನ್ ಶೆಟ್ಟಿಗಾರ್ ಕೊಯಿಕುಡೆ, ಕಿನ್ನಿಗೋಳಿ ಇನ್ನರ್ ವೀಲ್ ಅಧ್ಯಕ್ಷೆ ರೇಖಾ ರಘುರಾಮ ಶೆಟ್ಟಿ ಉದ್ಯಮಿ ಅಜಿತ್ ಕೆರೆಕಾಡು, ಗುತ್ತಿಗೆದಾರ ನವೀನ್ ಕುಮಾರ್ ಹರಿಪಾದೆ ಭಂಡಾರ ಮನೆ, ಉದ್ಯಮಿ ಕಿರಣ್ ಕುಮಾರ್, ಪಕ್ಷಿಕೆರೆ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಅಧ್ಯಕ್ಷ ಗಣಪತಿ ಆಚಾರ್ಯ, ಮಂಡಳಿ ಅಧ್ಯಕ್ಷ ಪ್ರವೀಣ್ ಶೆಟ್ಟಿಗಾರ್, ರಾಜೇಶ್ ದಾಸ್, ಪ್ರಶಾಂತ್ ಶೆಟ್ಟಿಗಾರ್ ಮತ್ತಿತರರು ಇದ್ದರು. ಧನಂಜಯ ಶೆಟ್ಟಿಗಾರ್ ಸ್ವಾಗತಿಸಿದರು. ಇದೇ ಸಂದರ್ಭ ಗುತ್ತಕಾಡು ಯುನೈಟೆಡ್, ಪಕ್ಷಿಕೆರೆ ವಿನಾಯಕ ಮಹಿಳಾ ಮಂಡಳಿ, ಹಳೆಯಂಗಡಿ ವಿದ್ಯಾವಿನಾಯಕ ಯುವಕ ಮಂಡಲಕ್ಕೆ ಮೈ ಭಾರತ್ ಸಂಸ್ಥೆಯ ಕ್ರೀಡಾ ಸಲಕರಣೆ ವಿತರಣೆ ಮಾಡಲಾಯಿತು. ಯಜ್ಞೇಶ್ ಕಾರ್ಯಕ್ರಮ ನಿರೂಪಿಸಿದರು.

ಕೆರೆಬೈಲ್ ಹಿಂದೂ ಯುವಸೇನೆ ಬೆಳ್ಳಿಹಬ್ಬ ಸಂಭ್ರಮ, ರಕ್ತದಾನ ಶಿಬಿರ



ಉಳ್ಳಾಲ: ಚೆಂಬುಗುಡ್ಡೆಯ ಹಿಂದೂ ಯುವಸೇನೆ ಕೊರಗಜ್ಜ ಶಾಖೆಯ ಬೆಳ್ಳಿ ಹಬ್ಬ ಹಾಗೂ ಬಿಸು ಪರ್ಬದ ಪ್ರಯುಕ್ತ ಮಂಗಳೂರಿನ ಎ.ಜೆ ಆಸ್ಪತ್ರೆಯ ಸಹಯೋಗದಲ್ಲಿ ಕೆರೆಬೈಲ್‌ನ ನಮ್ಮ ಕ್ಲಿನಿಕ್‌ನಲ್ಲಿ ರಕ್ತದಾನ ಶಿಬಿರ ನಡೆಯಿತು.

ಹಿಂದೂ ಯುವಸೇನೆ ಕೇಂದ್ರೀಯ ಮಂಡಳಿಯ ಅಧ್ಯಕ್ಷ ಯಶೋಧರ ಚೌಟ ಮಾತನಾಡಿ, ಇಂದಿನ ಕಾಲಘಟ್ಟ ದಲ್ಲಿ ಸಂಘಟನೆ ಕಟ್ಟುವುದು ಒಂದು ದೊಡ್ಡ ಸವಾಲಾದರೂ ಸಹ ಹಿಂದೂ ಯುವಸೇನೆ ಕೊರಗಜ್ಜ ಶಾಖೆಯ ನೇತೃತ್ವದಲ್ಲಿ ನಡೆಯುತ್ತಿರುವ ಸಮಾಜಮುಖಿ ಕಾರ್ಯಗಳು ಶ್ಲಾಘನೀಯವಾಗಿವೆ ಎಂದರು.

ಎ.ಜೆ.ಆಸ್ಪತ್ರೆಯ ಬ್ಲಡ್ ಕ್ಯಾಂಪ್ ಮೇಲ್ವಿಚಾರಕ ಗೋಪಾಲ ಕೃಷ್ಣ ಹಿಂದೂ ಯುವಸೇನೆ ಕೊರಗಜ್ಜ ಶಾಖೆಯ ಅಧ್ಯಕ್ಷ ನಾರಾಯಣ ಬಿ., ಗೌರವಾಧ್ಯಕ್ಷ ಲೋಕೇಶ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ ಹಾಗೂ ಸಂಘಟನೆಯ ಪ್ರಮುಖರಾದ ಯಶವಂತ ಶೆಟ್ಟಿ,ಹರೀಶ್ ಕುಂದರ್, ಮನೋಜ್ ಶೆಟ್ಟಿ ಗಣೇಶ್ ಶೆಟ್ಟಿ,ವಿಕ್ರಂ ಶೆಟ್ಟಿ, ಗಣೇಶ್ ಕುಲಾಲ್,ಕಿಶೋರ್ ಕೆರೆಬೈಲ್, ನಾಗೇಶ್ ಕುಮಾರ್, ರಾಜೇಶ್ ಯು.ಬಿ., ಶೈಲೇಶ್, ಸಂತೋಷ್ ಆಚಾರ್,ಯುವರಾಜ್, ಕಿರಣ್ ಪ್ರಕಾಶ್ ನಗರ, ರಾಜ ಮೆಸ್ಕಾಂ, ಅರುಣ್, ಜಯರಾಮ ಚೆಂಬುಗುಡ್ಡೆ, ದಿನೇಶ್ ಚೆಂಬುಗುಡ್ಡೆ,ಮನೋಜ್ ಚೆಂಬುಗುಡ್ಡೆ, ಪ್ರವೀಣ್ ಚೆಂಬುಗುಡ್ಡೆ ಮೊದಲಾದವರು ಉಪಸ್ಥಿತರಿದ್ದರು.

ಹಿರಿಯ ಕಾಯಕಯೋಗಿಗಳಿಗೆ ಸನ್ಮಾನ



ಕೋಟ: ಜೈ ಕುಂದಾಪ್ರ ಸೇವಾ ಟ್ರಸ್ಟ್ ಇವರ ದಶಮಾನೋತ್ಸವ ಸಂಭ್ರಮದ ಪ್ರಯುಕ್ತ ಪೂರ್ವಭಾವಿಯಾಗಿ ಸಮಾಜದಲ್ಲಿ ಅವಿರತವಾಗಿ ಸೇವೆ ಸಲ್ಲಿಸುತ್ತಿರುವ ಸಮಾಜಮುಖಿ ವ್ಯಕ್ತಿಗಳನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮ ಕೋಟ ಹಾಡಿಕೆರೆ ಶ್ರೀ ಶನೀಶ್ವರ ದೇವಸ್ಥಾನದ ಸಭಾಂಗಣದಲ್ಲಿ ಇತ್ತೀಚಿಗೆ ಜರಗಿತು.

ಸಕಡ್ ಫೌಂಡೇಶನ್ ಸಂಸ್ಥೆಯ ಪ್ರವರ್ತಕ ಕೆ. ಶ್ರೀಕಾಂತ ಶೆಣೈ ಕೋಟ ಅಧ್ಯಕ್ಷತೆ ವಹಿಸಿದ್ದರು. ಸಮಾಜದಲ್ಲಿ ವಿವಿಧ ಸ್ತರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಕಾಯಕ ಜೀವಿಗಳಾದ ಸುಬ್ರಹ್ಮಣ್ಯ ಬೀಜಾಡಿ, ಅನಂತ ಪೂಜಾರಿ, ವೆಂಕಟೇಶ್ ಪೂಜಾರಿ, ಟಿ. ಕೃಷ್ಣ ಪೂಜಾರಿ, ಕೆ. ಅಣ್ಣಯ್ಯ ಮರಕಾಲ ರವರನ್ನು ಗುರುತಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕೋಟ ಶನೀಶ್ವರ ದೇಗುಲದ ಧರ್ಮದರ್ಶಿ ಕೆ.ಭಾಸ್ಕರ್ ಸ್ವಾಮಿ, ಪಂಚವರ್ಣದ ಸ್ಥಾಪಕಾಧ್ಯಕ್ಷ ಸುರೇಶ್ ಗಾಣಿಗ, ಸಂಸ್ಥೆಯ ಗೌರವ ಸಲಹೆಗಾರ ತಿಮ್ಮ ಕಾಂಚನ್, ಆದಿತ್ಯ ಸಂಸ್ಥೆಯ ಅಧ್ಯಕ್ಷ ಪುಂಡಲೀಕ ಮೊಗವೀರ ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯದರ್ಶಿ ಜಯರಾಜ್ ಸಾಲ್ಯಾನ್ ಪಡುಕೆರೆ ಕಾರ್ಯಕ್ರಮ ನಿರೂಪಿಸಿದರು. ದಿವ್ಯ ಕುಂದಾಪುರ ವಂದಿಸಿದರು.

ಎಂ. ಪವನ್ ಭಟ್‌ಗೆ ಸ್ವರ್ಣಪದಕ

ಮೂಡುಬಿದಿರೆ: ಎಸ್.ಎಂ.ಎಸ್.ಪಿ. ಸಂಸ್ಕೃತ ಸ್ನಾತಕ-ಸ್ನಾತಕೋತ್ತರ ಅಧ್ಯಯನ ಕೇಂದ್ರದ ವಿದ್ಯಾರ್ಥಿ ಮೂಡುಬಿದಿರೆ ಶ್ರೀ ವೆಂಕಟರಮಣ ಮತ್ತು ಶ್ರೀ ಹನುಮಂತ ದೇವಸ್ಥಾನದ ಪ್ರಧಾನ ಅರ್ಚಕ ವೇ. ಮೂ. ಎಂ. ಹರೀಶ್ ಭಟ್ ಮತ್ತು ಸಹನಾ ಭಟ್ ದಂಪತಿಯ ಪುತ್ರ ವಿದ್ವಾನ್ ಎಂ. ಪವನ್ ಭಟ್ ಅವರಿಗೆ 2024-25ನೇ ಸಾಲಿನ ಆಚಾರ್ಯ (ಎಂ.ಎ) ದ್ವೈತ ವೇದಾಂತದಲ್ಲಿ ಅತೀ ಹೆಚ್ಚು ಅಂಕಗಳೊಂದಿಗೆ ಉತೀರ್ಣ ರಾಗಿ 'ಶ್ರೀ ಸತ್ಯ ಪ್ರಮೋದ ತೀರ್ಥ ಸ್ವಾಮೀಜಿ ಸ್ವರ್ಣಪದಕ' ಮತ್ತು ಶ್ರೀ ರಾಘವೇಂದ್ರ ತೀರ್ಥ ಸ್ವಾಮೀಜಿ ಸ್ವರ್ಣಪದಕ' ಪುರಸ್ಕಾರ ಪಡೆದಿದ್ದಾರೆ.



ಬೆಂಗಳೂರಿನಲ್ಲಿ ಮಂಗಳವಾರ ಕರ್ನಾಟಕದ ರಾಜ್ಯಪಾಲ, ವಿವಿಯ ಕುಲಾಧಿಪತಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಯದ ಕುಲಾಧಿಪತಿಗಳೂ ಆದ ಥಾವರ್ ಚಂದ್ ಗೆಹ್ಲೋತ್ ಅಧ್ಯಕ್ಷತೆಯಲ್ಲಿ ಜರಗಿದ ವಿಶ್ವವಿದ್ಯಾಲಯದ ಹನ್ನೆರಡು ಮತ್ತು ಹದಿಮೂರನೆಯ ದೀಕ್ಷಾಂತ ಘಟಿಕೋತ್ಸವದಲ್ಲಿ ಪವನ್ ಭಟ್ ಅವರು ರಾಜ್ಯಪಾಲರಿಂದ ಈ ಗೌರವ ಸ್ವೀಕರಿಸಿದರು.

ಮುಲ್ಕಿ: ಸಾಧಕರಿಗೆ ಗೌರವಾರ್ಪಣೆ



ಮುಲ್ಕಿ: ಹಳೆಯಂಗಡಿ ಸಮೀಪದ ಕೊಳುವೈಲು ಉಬಾರ ಮಣ್ಣು ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ಸಾಧಕರಿಗೆ ಗೌರವಾರ್ಪಣೆ ಕಾರ್ಯಕ್ರಮ ನಡೆಯಿತು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಜಯಕೃಷ್ಣ ಬಿ. ಕೋಟ್ಯಾನ್, ವೈದ್ಯಕೀಯ ಕ್ಷೇತ್ರದ ಸಾಧಕ ಡಾ. ಗುರುಪ್ರಸಾದ್ ನಾವಡ, ದಾನಿ ನವೀನ್ ಸಾಲ್ಯಾನ್ ಹೊಸಾಗ್ಮೆ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ದೈವಸ್ಥಾನದ ಗೌರವಾಧ್ಯಕ್ಷ ಚಂದ್ರಶೇಖರ್ ಅಮೀನ್, ಎಸ್.ಎಸ್. ಸತೀಶ್ ಭಟ್, ಸುಧಾಕರ ಜೆ. ಸುವರ್ಣ, ರವಿ ದೇವಾಡಿಗ, ಶಂಕರ್ ಸಾಲ್ಯಾನ್, ಪ್ರವೀಣ್ ಕೋಟ್ಯಾನ್, ಉಮೇಶ್ ದೇವಾಡಿಗ, ರತ್ನಾಕರ ಭಟ್, ಅಧ್ಯಕ್ಷ ಷಣ್ಮುಖಾನಂದ ದೇವಾಡಿಗ, ಉಪಾಧ್ಯಕ್ಷ ಯತಿರಾಜ ಎಸ್. ಸುವರ್ಣ, ಕಾರ್ಯದರ್ಶಿ ವಸಂತ ಎನ್ ಕೋಟ್ಯಾನ್, ಜೊತೆ ಕಾರ್ಯದರ್ಶಿ ರಾಮಚಂದ್ರ, ರಂಜಿತ್ ಕೊಳುವೈಲು, ಕೋಶಾಧಿಕಾರಿ ಶರತ್ ಕುಮಾರ್, ಸಂತೋಷ್ ಕುಮಾರ್, ಲೆಕ್ಕಪರಿಶೋಧಕ ವಿನೋದ್ ಕುಮಾರ್ ಕೊಳುವೈಲು, ಜೀವನ್ ಪ್ರಕಾಶ್ ಕಾಮೆರೊಟ್ಟು ಮಹಾಬಲ ಸಾಲ್ಯಾನ್, ಜಗದೀಶ್ ಕುಕ್ಯಾನ್ ಮತ್ತಿತರರು ಈ ಸಂದರ್ಭದಲ್ಲಿ ಇದ್ದರು.

ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ನೇತೃತ್ವದಲ್ಲಿ ವಿವಿಧ ಇಲಾಖೆಗಳೊಂದಿಗೆ ಪೂರ್ವಭಾವಿ ಸಭೆ

ಏ.17: ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನಿರೀಕ್ಷೆಯಲ್ಲಿ ಕೊಡಗು

ಮಡಿಕೇರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏ.17ರಂದು ಕೊಡಗು ಜಿಲ್ಲೆಗೆ ಭೇಟಿ ನೀಡುವ ಸಾಧ್ಯತೆ ಇದ್ದು, ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಲೈನ್‌ಮನೆಗಳಲ್ಲಿ ವಾಸ ಮಾಡುತ್ತಿರುವ ಪರಿಶಿಷ್ಟ ಪಂಗಡದವರಿಗೆ ನಿವೇಶನ ಹಕ್ಕುಪತ್ರ ವಿತರಿಸುವುದರ ಜೊತೆಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಭೂಮಿ ಪೂಜೆ ನೆರವೇರಿಸುವ ಸಾಧ್ಯತೆ ಇದೆ. ಆದ್ದರಿಂದ ವಿವಿಧ



ಇಲಾಖೆಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕೆಂದು ಅವರು ಸೂಚಿಸಿದರು.

ಲೈನ್‌ಮನೆಗಳಲ್ಲಿ ವಾಸಿಸುವ ನಿವೇಶನ ರಹಿತ ಕುಟುಂಬದವರ ಪಟ್ಟಿ ಈಗಾಗಲೇ ಸಿದ್ಧಪಡಿಸಲಾಗಿದೆ. ಆದರೂ ಸಹ ಕೆಲವು ಕುಟುಂಬದವರ ಸಮರ್ಪಕ ಮಾಹಿತಿ ಲಭ್ಯ ಇಲ್ಲದಿರುವ ಹಿನ್ನೆಲೆ ಸಂಬಂಧಪಟ್ಟ ಗ್ರಾಮಕ್ಕೆ ತೆರಳಿ ಆಧಾರ್ ಕಾರ್ಡ್ ಮಾಡಿಸುವುದು ಹಾಗೆಯೇ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸೋಮಶೇಖರ್ ಸ್ಪಷ್ಟ ನಿರ್ದೇಶನ ನೀಡಿದರು.

ಈ ಸಂದರ್ಭ ಮಾತನಾಡಿದ ಸಮಗ್ರ ಗಿರಿಜನ ಕಲ್ಯಾಣ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಎಸ್. ಹೊನ್ನೇಗೌಡ ಅವರು, ವೀರಾಜಪೇಟೆ ತಾಲೂಕಿನ ಕೆದಮುಳ್ಳೂರು ಗ್ರಾ.ಪಂ.ವ್ಯಾಪ್ತಿಯಲ್ಲಿ 124 ನಿವೇಶನ ಗುರುತಿಸಲಾಗಿದ್ದು 116 ಫಲಾನುಭವಿಗಳ ಆಯ್ಕೆ ಮಾಡಲಾಗಿದೆ. ಹಾಗೆಯೇ ಪೊನ್ನಂಪೇಟೆ ತಾಲೂಕಿನ ಬಿಟ್ಟಂಗಾಲ ಗ್ರಾ.ಪಂ. ವ್ಯಾಪ್ತಿಯ ಬಾಳುಗೋಡು ಗ್ರಾಮದಲ್ಲಿ 53 ನಿವೇಶನ ಗುರುತಿಸಲಾಗಿದ್ದು 37 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ವೀರಾಜಪೇಟೆ ತಾಲೂಕಿನ ಹೊಸೂರು ಗ್ರಾ.ಪಂ. ವ್ಯಾಪ್ತಿಯ ಕಳತ್ಮಾಡು ಗ್ರಾಮದಲ್ಲಿ 110 ನಿವೇಶನ ಗುರುತಿಸಲಾಗಿದ್ದು 127 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ.

ಪೊನ್ನಂಪೇಟೆ ತಾಲೂಕಿನ ಬಿರುನಾಣಿ ಗ್ರಾ.ಪಂ. ವ್ಯಾಪ್ತಿಯ ಬಿರುನಾಣಿ ಗ್ರಾಮದಲ್ಲಿ 448 ನಿವೇಶನ ಗುರುತಿಸಲಾಗಿದ್ದು 621 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಶ್ರೀಮಂಗಲ ಗ್ರಾ.ಪಂ. ವ್ಯಾಪ್ತಿಯ ಕುರ್ಚಿ ಗ್ರಾಮದಲ್ಲಿ 190 ನಿವೇಶನ ಗುರುತಿಸಲಾಗಿದ್ದು 224 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಒಟ್ಟಾರೆ ಜಿಲ್ಲೆಯಲ್ಲಿ 38 ಎಕರೆ ಜಾಗ ಗುರುತಿಸಲಾಗಿದ್ದು 925 ನಿವೇಶನದಲ್ಲಿ 1125 ಫಲಾನುಭವಿಗಳಿಗೆ ನಿವೇಶನ ಹಕ್ಕು ಪತ್ರ ವಿತರಿಸಬೇಕಿದೆ ಎಂದು ಎಸ್.ಹೊನ್ನೇಗೌಡ ಅವರು ವಿವರಿಸಿದರು.

ವೀರಾಜಪೇಟೆ-ಪೊನ್ನಂಪೇಟೆ ತಾ.ಪಂ.ಇಒ ಅಪ್ಪಣ್ಣ ಮತ್ತು ತಹಶೀಲ್ದಾರ್ ಪ್ರವೀಣ್ ಕುಮಾರ್ ವಿವಿಧ ಮಾಹಿತಿ ನೀಡಿದರು.ಇದೇ ವೇಳೆ ಕೆದಮುಳ್ಳೂರು, ಬಾಳುಗೋಡು, ಕುರ್ಚಿ, ಬಿರುನಾಣಿ ಗ್ರಾಮಗಳಿಗೆ ಭೇಟಿ ನೀಡಿ ಆಧಾರ್ ಶಿಬಿರ ಏರ್ಪಡಿಸಬೇಕು. ಜೊತೆಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಬೇಕು. ಈ ಕಾರ್ಯ ಒಂದೆರಡು ದಿನದಲ್ಲಿ ಆಗಬೇಕು ಎಂದು ತಾಕೀತು ಮಾಡಿದರು.

ಐಟಿಡಿಪಿ ಇಲಾಖಾ ಅಧಿಕಾರಿ ಎಸ್.ಹೊನ್ನೇಗೌಡ, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಮಾತನಾಡಿದರು. ತಾ.ಪಂ.ಇಒ ಶೇಖರ್, ಜಿ.ಪಂ.ಉಪ ಕಾರ್ಯದರ್ಶಿ ಜೀವನ್ ಕುಮಾರ್, ಪೊನ್ನಂಪೇಟೆ ತಹಶೀಲ್ದಾರ್ ಸಂಜನಾ, ವಸತಿ ನಿಗಮದ ಎಂಜಿನಿಯರ್ ಅಕ್ರಂ ಪಾಷಾ ಮಾತನಾಡಿದರು.

ಸುತ್ತಮುತ್ತ

ಉಡುಪಿಯಲ್ಲಿ ಯಕ್ಷ ಶಿಕ್ಷಣ ಸನಿವಾಸ ಶಿಬಿರ

ಉಡುಪಿ: ಯಕ್ಷಶಿಕ್ಷಣ ಟ್ರಸ್ಟ್ ಉಡುಪಿ ವತಿಯಿಂದ ಭೀಮ ಗೋಲ್ಡ್ ಪ್ರೈ. ಲಿ., ಬೆಂಗಳೂರು ಇದರ ಪ್ರಾಯೋಜಕತ್ವದಲ್ಲಿ ಏ.8ರಿಂದ 14ರ ವರೆಗೆ ಒಂದು ವಾರದ 'ಭೀಮ ಯಕ್ಷಶಿಕ್ಷಣ ಸನಿವಾಸ ಶಿಬಿರ-2026' ಉಡುಪಿಯ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಜರಗಲಿದೆ. ಉದ್ಘಾಟನಾ ಸಮಾರಂಭವು ಏ.8ರಂದು ಬೆಳಿಗ್ಗೆ 10 ಗಂಟೆಗೆ ಜರಗಲಿದೆ. ಗೀತಾನಂದ ಫೌಂಡೇಶನ್ ಅಧ್ಯಕ್ಷ ಆನಂದ ಸಿ. ಕುಂದರ್ ಉದ್ಘಾಟಿಸಲಿರುವರು. ಶಾಸಕ ಯಶ್‌ಪಾಲ್ ಎ. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಲಿದೆ. ಶಾಸಕ ಕಿರಣ್‌ಕುಮಾರ್ ಕೊಡ್ಗಿ ಶುಭಾಶಂಸನೆಗೈಯಲಿರುವರು. ಮನೋವೈದ್ಯ ಡಾ. ಕೆ.ಎಸ್. ಕಾರಂತ್, ಹಿರಿಯಡ್ಕದ ಉದ್ಯಮಿ ಪಿ. ನಟರಾಜ ಹೆಗ್ಡೆ ಬ್ರಹ್ಮಾವರದ ಸಾಮಾಜಿಕ ಕಾರ್ಯಕರ್ತ ಸುಧೀರ್‌ಕುಮಾರ್ ಶೆಟ್ಟಿ ಮಣಿಪಾಲ ಪಶು ವೈದ್ಯಾಧಿಕಾರಿ ಡಾ. ಪ್ರಶಾಂತ್ ಶೆಟ್ಟಿ ಅಭ್ಯಾಗತರಾಗಿ ಭಾಗವಹಿಸಲಿರುವರು. ಗುರು ಬನ್ನಂಜೆ ಸಂಜೀವ ಸುವರ್ಣರ ನಿರ್ದೇಶನದಲ್ಲಿ ಶಿಬಿರ ನಡೆಯಲಿದೆ ಎಂದು ಕಾರ್ಯದರ್ಶಿ ಮುರಲಿ ಕಡೆಕಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.12ರಿಂದ ಬೇಸಿಗೆ ಶಿಬಿರ

ಕೋಟ: ತೆಕ್ಕಟ್ಟೆ ಹಯಗ್ರೀವದ ಸಮೀಪದ ಪರಿಸರದಲ್ಲಿ ಏ.12ರಿಂದ 28ರವರೆಗೆ ಯಶಸ್ವೀ ಕಲಾವೃಂದ ಕೊಮೆ ತೆಕ್ಕಟ್ಟೆ, ಧಮನಿ ಟ್ರಸ್ಟ್ ತೆಕ್ಕಟ್ಟೆ ಹಾಗೂ ಶ್ರೀಪರ್ಣ ಯಕ್ಷ ಬಳಗ ತೆಕ್ಕಟ್ಟೆ ಸಂಯುಕ್ತ ಆಶ್ರಯದಲ್ಲಿ 'ರಜಾ ರಂಗು' ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದ ನಿರ್ದೇಶಕರಾಗಿ ಭುವನ್ ಮಣಿಪಾಲ ಮತ್ತು ರೋಹಿತ್ ತೀರ್ಥಹಳ್ಳಿ ಎಂದು ಯಶಸ್ವೀ ಕಲಾವೃಂದದ ಅಧ್ಯಕ್ಷ ಮಲ್ಯಾಡಿ ಸೀತಾರಾಮ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಬಿಸಿಲ ಬಾಧೆ

ಸಾಮಾನ್ಯವಾಗಿ ದೊಡ್ಡ ರಬ್ಬರ್ ಕೃಷಿ ತೋಟಗಳಲ್ಲಿ ಬೇಸಿಗೆಯಲ್ಲಿ ಟ್ಯಾಪಿಂಗ್ ನಿಲ್ಲಿಸುತ್ತಾರಾದರೂ ದೈನಂದಿನ ಆದಾಯಕ್ಕಾಗಿ ರಬ್ಬರ್ ಕೃಷಿಯನ್ನು ಅವಲಂಬಿಸಿರುವ ಕೃಷಿಕರು ಮಾತ್ರ ಸಮಸ್ಯೆಗೆ ಒಳಗಾಗಿದ್ದಾರೆ. ಹಂಗಾಮಿನ ಸಮಯದಲ್ಲಿ ಹೋಲಿಸಿದರೆ ಅರ್ಧಕ್ಕೂ ಹೆಚ್ಚು ಉತ್ಪಾದನೆ ಕುಸಿದಿದೆ. ರಬ್ಬರ್ ಬೆಲೆ ಕಿಲೋವೊಂದಕ್ಕೆ 200 ರೂ. ಸುಮಾರಿನಲ್ಲಿದ್ದರೂ ಉತ್ಪಾದನೆ ಇಲ್ಲದಿರುವುದು ಕೃಷಿಕರಿಗೆ ತಲೆನೋವಾಗಿ ಪರಿಣಮಿಸಿದೆ. ಪ್ರಸ್ತುತ ಟ್ಯಾಪಿಂಗ್ ಕೂಲಿ ನೀಡಲೂ ಆದಾಯ ಹೊಂದಾಣಿಕೆಯಾಗುತ್ತಿಲ್ಲವೆಂದು ಕೃಷಿಕರು ತಿಳಿಸಿದ್ದಾರೆ.

ರಬ್ಬರ್ ಕೃಷಿಗೆ ಅಪಾರ ಸಮಸ್ಯೆ

ಕಾಸರಗೋಡು ಜಿಲ್ಲೆಯಲ್ಲಿ ವರ್ಷ ಕಳೆದಂತೆ ರಬ್ಬರ್ ಕೃಷಿಯ ವ್ಯಾಪ್ತಿಯು ವಿಸ್ತರಿಸುತ್ತಿದ್ದರೂ ಈ ಕೃಷಿಗೆ ಅಪಾರ ಸಮಸ್ಯೆ ತಲೆದೋರಿದೆ. ಬೇಸಿಗೆ ಕಾಲದಲ್ಲಂತೂ ಸುಡು ಬಿಸಿಲಿನಿಂದಾಗಿ ರಬ್ಬರ್ ಹಾಲಿನ ಉತ್ಪಾದನೆ ಆತಂಕಕಾರಿಯಾಗಿ ಇಳಿಮುಖಗೊಳ್ಳುತ್ತಿದ್ದು ಕೃಷಿಕರ ಆದಾಯಕ್ಕೆ ಬಹುದೊಡ್ಡ ಹೊಡೆತ ನೀಡಿದೆ. ಇದರಿಂದಾಗಿ ರಬ್ಬರ್ ಕೃಷಿಯನ್ನೇ ನೆಚ್ಚಿ ಬದುಕು ಸಾಗಿಸುತ್ತಿರುವ ಕೃಷಿಕರು ಆರ್ಥಿಕ ಹೊಡೆತದಿಂದ ಸಂಕಷ್ಟ ಅನುಭವಿಸುವಂತಾಗಿದೆ.

ಇದೆಂಥಾ ಸ್ಥಿತಿ?

ಬೇಸಿಗೆಯಲ್ಲಿ ಮೇಯಲು ತೆರಳುವ ಜಾನುವಾರುಗಳು ಇಲ್ಲಿನ ನೀರನ್ನು ಕುಡಿದು ದಣಿವಾರಿಸಿಕೊಳ್ಳುತ್ತಿದ್ದುವು ಎಂದು ಸ್ಥಳೀಯ ಕೃಷಿಕರು ಹೇಳುತ್ತಾರೆ. ಇಲ್ಲಿನ ಕೆರೆಯಲ್ಲಿ ಮಳೆಗಾಲದಲ್ಲಿ ಸುಮಾರು 12 ಅಡಿಗೂ ಅಧಿಕ ನೀರು ತುಂಬುತ್ತಿದ್ದು ಬೇಸಿಗೆಯಲ್ಲಿ ನೀರಿನ ಸಂಗ್ರಹ ಕಡಿಮೆಯಾದರೂ ಕೂಡಾ ಮಳೆಗಾಲದ ಆರಂಭದವರೆಗೂ ನೀರಿನ ಒರತೆ ಇರುತ್ತದೆ. ಇದರಿಂದಾಗಿ ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಬಾಡ, ಬಿಯಾರ ಮೊದಲಾದ ಭಾಗದ ನೂರಾರು ಮನೆಗಳ ಬಾವಿಗಳಲ್ಲಿ ಅಂತರ್ಜಲ ಹೆಚ್ಚಳವಾಗಿ, ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಿರಲಿಲ್ಲ. ಇದನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೆ ಇರುವುದರಿಂದ ನಿವಾಸಿಗಳಿಗೆ ಇನ್ನಷ್ಟು ಅನನುಕೂಲವಾಗುತ್ತಿದ್ದು ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ತಡೆಗೋಡೆ ನಿರ್ಮಾಣವಾಗಲಿ

ಸಾರ್ವಜನಿಕ ರಸ್ತೆಗೆ ಹೊಂದಿಕೊಂಡಿರುವ ಈ ಕೆರೆ ಇತ್ತೀಚಿನ ವರ್ಷಗಳವರೆಗೂ ತಡೆಬೇಲಿಯಿಲ್ಲದೆ ಬಾಯ್ತೆರೆದುಕೊಂಡಿದ್ದು ಅಪಾಯಕ್ಕೆ ಆಹ್ವಾನ ನೀಡುವುದಲ್ಲದೇ ಕೆರೆದಂಡೆ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಇದು ಕುಸಿಯದಂತೆ ಕೆರೆಯ ದಂಡೆಯಲ್ಲಿ ಶಾಶ್ವತ ತಡೆಗೋಡೆ ನಿರ್ಮಾಣವಾಗಬೇಕಾಗಿದೆ.

ಸ್ವಾವಲಂಬಿ ಮೂಲಸೌಕರ್ಯ ಹೊಂದಿರುವ ವಿಷಯದಡಿ ಪ್ರಶಸ್ತಿ, 50 ಲಕ್ಷ ರೂ. ನಗದು ಬಹುಮಾನ

ಸಾಣೂರು ಗ್ರಾಮ ಪಂಚಾಯತ್ ರಾಷ್ಟ್ರಮಟ್ಟದಲ್ಲಿ ತೃತೀಯ

ಕಾರ್ಕಳ: ಸವಾಲಿನ ಭೌಗೋಳಿಕತೆ, ಸೀಮಿತ ಅನುದಾನಗಳ ನಡುವೆಯೂ, ಸುಸ್ಥಿರ ಮೂಲ ಸೌಕರ್ಯದ ಮೂಲಕ ಅಭಿವೃದ್ಧಿಯ ಶಕೆ ಬರೆಯುತ್ತಿದೆ ಸಾಣೂರು ಗ್ರಾಮ ಪಂಚಾಯತ್. ಸುಮಾರು 7,371 ಜನಸಂಖ್ಯೆಯನ್ನು ಹೊಂದಿರುವ ಈ ಗ್ರಾ.ಪಂ. ಸ್ವಾವಲಂಬಿ ಮೂಲಸೌಕರ್ಯ ಹೊಂದಿರುವ ಗ್ರಾ.ಪಂ. ವಿಷಯದಡಿ ರಾಷ್ಟ್ರಮಟ್ಟದಲ್ಲಿ ತೃತೀಯ ಸ್ಥಾನ ಗಳಿಸಿದೆ.

ಈ ಮೂಲಕ 50 ಲಕ್ಷ ರೂ. ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕ ಘೋಷಣೆಯಾಗಿದೆ. ಗ್ರಾಮದ ಸ್ವಾವಲಂಬನೆಗೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಲ್ಲಿ ಈ ಪಂಚಾಯತ್ ತೋರಿದ ದಕ್ಷತೆ ಗುರುತಿಸಿ ಕೇಂದ್ರ ಸರಕಾರ ಪುರಸ್ಕಾರ ನೀಡಿದೆ. ಕರಾವಳಿಯ ಅತಿವೃಷ್ಟಿ ರಸ್ತೆಗಳ ನಿರ್ವಹಣೆಗೆ ದೊಡ್ಡ ಅಡ್ಡಿಯಾಗಿದ್ದವು. ಪ್ರತಿ ವರ್ಷ ಮಳೆಗೆ ರಸ್ತೆಗಳು ಹಾಳಾಗುವುದು ಮತ್ತು ಭೂಮಿಯ ಲಭ್ಯತೆಯ ಕೊರತೆಯಿಂದಾಗಿ ಎಸ್‌ಎಲ್‌ಆರ್‌ಎಂ ಘಟಕ ಹಾಗೂ ವಾಣಿಜ್ಯ ಸಂಕೀರ್ಣಗಳ ನಿರ್ಮಾಣಕ್ಕೆ ಹಿನ್ನಡೆಯಾಗಿತ್ತು. ಆದರೆ, ಈ ಸವಾಲುಗಳನ್ನೇ ಅವಕಾಶವನ್ನಾಗಿ ಪರಿವರ್ತಿಸಿದ ಗ್ರಾ.ಪಂ. ಆಡಳಿತ ಮಂಡಳಿ, ಜನಪರ ಮೂಲಸೌಕರ್ಯಗಳನ್ನು ವೈಜ್ಞಾನಿಕ ನೆಲೆಯಲ್ಲಿ ರೂಪಿಸುವಲ್ಲಿ ಯಶಸ್ವಿಯಾಗಿದೆ. ಸುಸಜ್ಜಿತ ಗ್ರಾ.ಪಂ. ಭವನ ಆಧುನಿಕ ಸೌಲಭ್ಯಗಳೊಂದಿಗೆ ಮರು ರೂಪುಗೊಂಡಿರುವ ಗ್ರಾ.ಪಂ. ಭವನವು ಇಂದು ಪಾರದರ್ಶಕ ಆಡಳಿತ ಮತ್ತು ನಾಗರಿಕ ಸೇವೆಗಳ ಕೇಂದ್ರ ಬಿಂದುವಾಗಿ ಗಮನ ಸೆಳೆದಿದೆ. ಹತ್ತಾರು ವಿನೂತನ ಪ್ರಯೋಗಗಳು ಹಾಗೂ ಎಲ್ಲಾ ರೀತಿಯ ಸೌಲಭ್ಯಗಳನ್ನು ಜನತೆಗೆ ಒದಗಿಸುವ ಮೂಲಕ ಪಂಚಾಯತ ರಾಜ್ ವ್ಯವಸ್ಥೆಯಲ್ಲಿ ಸುಲಲಿತ ಸೇವೆ ಲಭಿಸುವಲ್ಲಿ ಪ್ರಯತ್ನಿಸಿರುವುದು ಗಮನಾರ್ಹ. ಈಗಾಗಲೇ ಅಂತಾರಾಷ್ಟ್ರೀಯ ಗೂಗಲ್ ಪ್ರಶಸ್ತಿ ಸಹಿತ ಅನೇಕ ಪ್ರಶಸ್ತಿಗಳನ್ನು ಈ ಗ್ರಾ.ಪಂ. ತನ್ನ ಮುಡಿಗೇರಿಸಿಕೊಂಡಿತ್ತು.



ಗ್ರಾಮಸ್ಥರಿಗೆ ಅಭಿಮಾನದ ಸಂಗತಿ



ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ರಾಷ್ಟ್ರಮಟ್ಟದಲ್ಲಿ 3ನೇ ಸ್ಥಾನದ ಪುರಸ್ಕಾರದ ಜೊತೆಗೆ 50 ಲಕ್ಷ ನಗದು ಬಹುಮಾನ ಸಾಣೂರು ಗ್ರಾಮ ಪಂಚಾಯತ್‌ಗೆ ಸಿಕ್ಕಿರುವುದು ಸಾಣೂರು ಗ್ರಾಮಸ್ಥರೆಲ್ಲರಿಗೂ ಅಭಿಮಾನ ಮತ್ತು ಹೆಮ್ಮೆಯ ಸಂಗತಿ.
● ಸಾಣೂರು ನರಸಿಂಹ ಕಾಮತ್, ಮಾಜಿ ಅಧ್ಯಕ್ಷರು, ಸಾಣೂರು ಗ್ರಾ.ಪಂ.

ಎಲ್ಲರ ಸಹಕಾರದಿಂದ ಗ್ರಾ.ಪಂ. ಸಾಧನೆ



ಲಭ್ಯ ಅನುದಾನದೊಂದಿಗೆ ಇತರ ಅನುದಾನಗಳನ್ನು ಸೇರಿಸಿಕೊಂಡು ಗ್ರಾಮ ಅಭಿವೃದ್ಧಿಗೆ ಶ್ರಮಿಸಲಾಗಿದೆ. ಗ್ರಾ.ಪಂ. ಸದಸ್ಯರ ವರ್ಗ, ಸಿಬಂದಿ, ಜನರ ಸಹಕಾರದೊಂದಿಗೆ ಎಲ್ಲರೂ ತಂಡವಾಗಿ ಕಾರ್ಯನಿರ್ವಹಿಸಿದ ಪ್ರಯತ್ನ ಫಲ ನೀಡಿದೆ.
● ಯುವರಾಜ್ ಜೈನ್, ನಿಕಟಪೂರ್ವ ಅಧ್ಯಕ್ಷ, ಸಾಣೂರು ಗ್ರಾ.ಪಂ.

ಹಲವು ಪ್ರಶಸ್ತಿ ಪಡೆದುಕೊಂಡಿರುವ ಗ್ರಾ.ಪಂ

ಜನರ ಸಹಭಾಗಿತ್ವದೊಂದಿಗೆ ಸ್ಥಳೀಯ ಆಡಳಿತದಲ್ಲಿ ನಾವೀನ್ಯತೆಯನ್ನು ಗುರುತಿಸಿ 'ಅಂತಾರಾಷ್ಟ್ರೀಯ ಗೂಗಲ್ ಗ್ರಾಮ ಪಂಚಾಯತ್ ಪುರಸ್ಕಾರ' ಜೊತೆಗೆ 5 ಲಕ್ಷ ರೂಪಾಯಿ ನಗದು ಬಹುಮಾನ, ಆ ಬಳಿಕ ರಾಷ್ಟ್ರಪತಿಗಳ 'ನಿರ್ಮಲ ಗ್ರಾಮ ಪುರಸ್ಕಾರ', ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ 'ಸ್ವಚ್ಛತಾ ಪುರಸ್ಕಾರ', ರಾಜ್ಯಮಟ್ಟದ ಅತ್ಯುತ್ತಮ ಗ್ರಾಮ ಪಂಚಾಯತ್ ಪುರಸ್ಕಾರ, ಸಾಮಾಜಿಕ ಭದ್ರತಾ ಯೋಜನೆ ಅನುಷ್ಠಾನದಲ್ಲಿ ರಾಷ್ಟ್ರಮಟ್ಟದ ಮನ್ನಣೆ ದೊರೆತಿದೆ.

ರಾಜ್ಯ ಸರ್ಕಾರಕ್ಕೆ ಉಡುಪಿ ಜಿಲ್ಲಾ ಬಿಜೆಪಿಯಿಂದ ಆಗ್ರಹ

ಮೂಲಸೌಕರ್ಯಗಳಿಗೆ ತುರ್ತು ಸ್ಪಂದನೆ ನೀಡಲಿ

ಉಡುಪಿ: ಉಡುಪಿ ಜಿಲ್ಲೆಯ ಅಗತ್ಯ ಮೂಲಸೌಕರ್ಯಗಳಿಗೆ ತುರ್ತು ಸ್ಪಂದನೆ ನೀಡಬೇಕು ಎಂದು ಜಿಲ್ಲಾ ಬಿಜೆಪಿ ರಾಜ್ಯ ಸರಕಾರವನ್ನು ಆಗ್ರಹಿಸಿದೆ ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಹೇಳಿದರು.
ಅವರು ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.



ಕಾಮಗಾರಿ ಪೂರ್ಣಗೊಳ್ಳಲಿ

ಉಡುಪಿ ಜಿಲ್ಲಾಸ್ಪತ್ರೆ ನಿರ್ಮಾಣ ಕಾಮಗಾರಿ ಡಿಸೆಂಬರ್ 2021ರಲ್ಲಿ ಪ್ರಾರಂಭಿಸಲಾಗಿದ್ದು, ಮೂರು ವರ್ಷಗಳ ಹಿಂದೆಯೇ ಶೇ.90ರಷ್ಟು ಪೂರ್ಣಗೊಂಡಿದೆ. ಬಾಕಿ ಕಾಮಗಾರಿ ಪೂರ್ಣಗೊಳಿಸಿ ಶೀಘ್ರ ಲೋಕಾರ್ಪಣೆಗೊಳಿಸುವ ಮೂಲಕ ಜನರ ಸೇವೆಗೆ ಲಭಿಸುವಂತಾಗಲು ಸರಕಾರ ಇನ್ನೂ ಇಚ್ಛಾಶಕ್ತಿ ತೋರಿಸಿರುವುದಿಲ್ಲ. ಜಿಲ್ಲಾಸ್ಪತ್ರೆ ಕೇವಲ 120 ಹಾಸಿಗೆಗಳ ತಾಲೂಕು ಮಟ್ಟದ ಆಸ್ಪತ್ರೆಯಾಗಿ ಇನ್ನೂ ಕಾರ್ಯಾಚರಿಸುತ್ತಿದೆ. ಬಡ ರೋಗಿಗಳು ಹಾಸಿಗೆ, ಐಸಿಯು ಲಭ್ಯವಾಗದೇ ದ.ಕ. ವೆನ್ಲಾಕ್ ಆಸ್ಪತ್ರೆಗೆ ಹೋಗಿ, ಅಲ್ಲಿಯೂ ಸರಿಯಾದ ಬೆಡ್ ವ್ಯವಸ್ಥೆ ದೊರಕದೇ ಚಿಕಿತ್ಸೆಗೆ ಅಲೆದಾಡುವಂತ ಸ್ಥಿತಿ ನಿರ್ಮಾಣವಾಗಿದೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಸಮಸ್ಯೆ

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ ಮೂರು ವರ್ಷಗಳಿಂದ ಅಧಿಕಾರಿಗಳು ಹಾಗೂ ಸಿಬ್ಬಂದಿ ಕೊರತೆಯ ನೆಪವೊಡ್ಡಿ ಜನ ಸಾಮಾನ್ಯರು ಸೇವೆ ಪಡೆಯಲು ಅಸಹಾಯಕರಾಗಿ ತಿಂಗಳುಗಟ್ಟಲೆ ಅಲೆದಾಡುವ ಪರಿಸ್ಥಿತಿ ನಿತ್ಯ ನಿರಂತರವಾಗಿದೆ. ಸರಕಾರಕ್ಕೆ ಎಷ್ಟೇ ಮನವಿ ಸಲ್ಲಿಸಿದರೂ ಯಾವುದೇ ಪರಿಹಾರ ಕಂಡು ಬಂದಿಲ್ಲ ಎಂದು ಆರೋಪಿಸಿದರು.

ಯಾವುದೇ ಸ್ಪಂದನೆಯಿಲ್ಲ

ಶಾಸಕ ಯಶ್‌ಪಾಲ್ ಸುವರ್ಣ ಮಾತನಾಡಿ, ದಾಖಲೆಗಳ ಕೊರತೆ, ಡೀಮ್ಡ್ ಫಾರೆಸ್ಟ್, ಕುಮ್ಕಿ ಮತ್ತಿತರ ಕಾರಣಗಳನ್ನು ನೀಡಿ ಹಕ್ಕು ಪತ್ರಗಳನ್ನು ನೀಡುವ ಕಾರ್ಯಕ್ರಮಗಳನ್ನು ರಾಜ್ಯ ಸರಕಾರ ಸ್ಥಗಿತಗೊಳಿಸಿ, ಬಡ ಕುಟುಂಬಗಳನ್ನು ನಡು ನೀರಿನಲ್ಲಿ ಬಿಟ್ಟಂತಾಗಿದೆ. ಕಳೆದ 3 ವರ್ಷಗಳಿಂದ ಒಂದೇ ಒಂದು ಪಡಿತರ ಕಾರ್ಡು ವಿತರಣೆಯಾಗಿಲ್ಲ, ಯಾವುದೇ ನಿವೇಶನಗಳ ವಿತರಣೆ ಇಲ್ಲ, ಕಾನೂನಿನ ತೊಡಕಿನಿಂದ ಗೃಹ ನಿರ್ಮಾಣಕ್ಕೆ ತಡೆಯಾಗಿದೆ. ವಾಜಪೇಯಿ ವಸತಿ, ಅಂಬೇಡ್ಕರ್ ವಸತಿ, ಬಸವ ವಸತಿ ಯೋಜನೆಗಳಡಿಯಲ್ಲಿ ಉಡುಪಿ ಜಿಲ್ಲೆಗೆ ವಸತಿ ಸೌಲಭ್ಯ ನೀಡದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಜನವಿರೋಧಿ ನಡೆ ಖಂಡನೀಯ ಎಂದರು.
ಈ ಎಲ್ಲಾ ಜ್ವಲಂತ ಸಮಸ್ಯೆಗಳಿಗೆ ಆದ್ಯತೆ ಮೇರೆಗೆ ತುರ್ತು ಪರಿಹಾರ ದೊರೆಯದೇ ಇದ್ದಲ್ಲಿ ಜಿಲ್ಲೆಯ ಸಂಸದರು, ಶಾಸಕರು, ಜನಪ್ರತಿನಿಧಿಗಳು, ಪಕ್ಷದ ಎಲ್ಲಾ ಸ್ತರದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರನ್ನು ಒಗ್ಗೂಡಿಸಿ ರಾಜ್ಯ ಸರ್ಕಾರ ವಿರುದ್ಧ ಸಂಘಟಿತ ಹೋರಾಟ ರೂಪಿಸಲಾಗುವುದು ಎಂದರು.
ಬಿಜೆಪಿ ಜಿಲ್ಲಾ ವಕ್ತಾರ ದಿವಾಕರ ಶೆಟ್ಟಿ ಕಲ್ಯಾ, ಜಿಲ್ಲಾ ಕಾರ್ಯದರ್ಶಿಗಳಾದ ಶಿವಕುಮಾರ್ ಅಂಬಲಪಾಡಿ, ಶ್ರೀನಿಧಿ ಹೆಗ್ಡೆ ಹಿರೇಬೆಟ್ಟು ಉಪಸ್ಥಿತರಿದ್ದರು.

ಕಜ್ಕೆ ಮಠ ಪುರಪ್ರವೇಶ ಮಾಡಿದ ಶ್ರೀ ಜ್ಞಾನಘನವಿದ್ಯಾತೀರ್ಥರ ಆಶೀರ್ವಚನ

ಧರ್ಮ ಕಾರ್ಯದಿಂದ ಜೀವನದಲ್ಲಿ ಪುಣ್ಯ ಪ್ರಾಪ್ತಿ

ಹೆಬ್ರಿ: ನಾವು ಧರ್ಮದ ಕಾರ್ಯವನ್ನು ಮಾಡಿದಾಗ ನಮಗೆ ಜೀವನದಲ್ಲಿ ಪುಣ್ಯ ಪ್ರಾಪ್ತಿಯಾಗುತ್ತದೆ. ಅಂತಹ ಮಹಾನ್ ಕಾರ್ಯವು ಕಜ್ಕೆ ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದಲ್ಲಿ ನಡೆಯುತ್ತಿದೆ. ಕಜ್ಕೆ ಕ್ಷೇತ್ರದ ಪುರಪ್ರವೇಶ ನನಗೆ ಅತ್ಯಂತ ಸಂತೋಷ ನೀಡಿದೆ. ಗುರುಗಳ ಮಾರ್ಗದರ್ಶನದಲ್ಲಿ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗುವುದಾಗಿ ಶ್ರೀ ಜ್ಞಾನಘನವಿದ್ಯಾತೀರ್ಥ ಮಹಾಸ್ವಾಮೀಜಿ ಹೇಳಿದರು.



ಪರಮಪೂಜ್ಯ ಅನಂತಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಮಹಾಸ್ವಾಮಿಗಳವರ ಕರಕಮಲ ಸಂಜಾತ ಪರಮಪೂಜ್ಯ ಅನಂತಶ್ರೀ ವಿಭೂಷಿತ ಜ್ಞಾನ ಘನ ವಿದ್ಯಾತೀರ್ಥ ಮಹಾಸ್ವಾಮೀಜಿ ಸನ್ಯಾಸ ದೀಕ್ಷೆ ಸ್ವೀಕರಿಸಿ ಭಾನುವಾರ ಪ್ರಥಮ ಬಾರಿ ಶ್ರೀ ಕ್ಷೇತ್ರ ಕಜ್ಕೆ ಶಾಖಾ ಮಠಕ್ಕೆ ಪುರಪ್ರವೇಶ ಮಾಡಿ ಕ್ಷೇತ್ರದ ಗೌರವ ಸ್ವೀಕರಿಸಿ ಆಶೀರ್ವಚನ ನೀಡಿದರು.
ಪರಮಪೂಜ್ಯ ಅನಂತಶ್ರೀ ವಿಭೂಷಿತ ಶಿವಸುಜ್ಞಾನತೀರ್ಥ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ನೂತನ ಶ್ರೀಗಳಿಗೆ ನೀಡಿದ ಗೌರವಪೂರ್ಣ ಸ್ವಾಗತದಿಂದ ಮನಸ್ಸು ತುಂಬಿ ಬಂದಿದೆ ಎಂದರು.
ಮುಖ್ಯರಸ್ತೆಯಿಂದ ಇಬ್ಬರು ಶ್ರೀಗಳನ್ನು ಭವ್ಯವಾಗಿ ಸ್ವಾಗತಿಸಿ ಕರೆತರಲಾಯಿತು. ಕ್ಷೇತ್ರದ ಆಡಳಿತ ಮಂಡಳಿಯ ವತಿಯಿಂದ ಗೌರವಿಸಲಾಯಿತು. ಕ್ಷೇತ್ರದ ಸಂತೋಷ್ ಪುರೋಹಿತ್ ಧಾರ್ಮಿಕ ವಿಧಿವಿಧಾನ ನೆರವೇರಿಸಿದರು. ಸ್ಥಳದಾನಿ ಕಜ್ಕೆ ಶ್ರೀಧರ ಕಾಮತ್ ಮಾತನಾಡಿದರು
ಸಭೆಯಲ್ಲಿ ಮೌನೇಶ ಆಚಾರ್ಯ ಪರ್ಕಳ, ಶ್ರೀ ವಿಶ್ವಕರ್ಮ ಸಮಾಜಸೇವಾ ಸಂಘಗಳ ಅಧ್ಯಕ್ಷರಾದ ಹೆಬ್ರಿಯ ಮುದ್ರಾಡಿ ಕೇಶವ ಆಚಾರ್ಯ, ಕೊಕ್ಕರ್ಣೆಯ ವಿಶ್ವನಾಥ ಆಚಾರ್ಯ ಕಲ್ಗೋಳಿ, ರಾಜೇಂದ್ರ ಆಚಾರ್ಯ ಸಾಗರ, ಕೆ.ವಿ.ರಮೇಶ ಆಚಾರ್ಯ ಹರಿಖಂಡಿಗೆ, ಮೋಹನ ಆಚಾರ್ಯ ಪೇತ್ರಿ, ಮಹಿಳಾ ಮಂಡಳಿಯ ಅಧ್ಯಕ್ಷೆ ಜ್ಯೋತಿ ವಿಶ್ವನಾಥ ಆಚಾರ್ಯ ಕಲ್ಗೋಳಿ, ಕಜ್ಕೆ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಆಡಳಿತ ಮಂಡಳಿಯ ಉಪಾಧ್ಯಕ್ಷ ರಾಜೇಶ ಆಚಾರ್ಯ ಹೆಬ್ರಿ, ಸದಸ್ಯರಾದ ಜಯರಾಮ ಆಚಾರ್ಯ ಹೆಬ್ರಿ, ಕೇಶವ ಆಚಾರ್ಯ ಮುದ್ರಾಡಿ, ಕೊಂಜಾಡಿ ನಾರಾಯಣ ಆಚಾರ್ಯ, ಪ್ರಕಾಶ ಆಚಾರ್ಯ ಕುಕ್ಕೆಹಳ್ಳಿ, ರತ್ನಾಕರ ಆಚಾರ್ಯ ಶಿವಪುರ, ರವೀಂದ್ರ ಆಚಾರ್ಯ, ಕಲ್ಪಪ್ರ ಶ್ರೀಕಾಂತ್ ಆಚಾರ್ಯ ಬಾರ್ಕೂರು, ರವೀಂದ್ರ ಆಚಾರ್ಯ ಪಕ್ಕಾಲು, ಮೋಹನ ಆಚಾರ್ಯ ಪೇತ್ರಿ, ನಾಗೇಶ ಆಚಾರ್ಯ ಉಪ್ಪೂರು, ಸುಕನ್ಯಾ ಆಚಾರ್ಯ ವಾಡಿಗಾರ, ಕಲಾವತಿ ಶ್ರೀಧರ ಆಚಾರ್ಯ ಹೆಬ್ರಿ, ಗಣಪತಿ ಆಚಾರ್ಯ ಹೋರ್ಲಾಲಿ, ಸುಕುಮಾರ್ ಮುನಿಯಾಲ್ ಇದ್ದರು. ದೇವಸ್ಥಾನದ ಆಡಳಿತ ಮಂಡಳಿ ಉಪಾಧ್ಯಕ್ಷ ರಾಜೇಶ ಆಚಾರ್ಯ ಹೆಬ್ರಿ ಸ್ವಾಗತಿಸಿ ನಾರಾಯಣ ಆಚಾರ್ಯ ಕೊಂಜಾಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಕಾಶ ಆಚಾರ್ಯ ಕುಕ್ಕೆಹಳ್ಳಿ ವಂದಿಸಿ ಮ್ಯಾನೇಜರ್ ಜಯರಾಮ ಆಚಾರ್ಯ ಸಹಕರಿಸಿದರು. ಮಹೇಂದ್ರ ಆಚಾರ್ಯ ಹೇರಂಜೆ ನಿರೂಪಿಸಿದರು.

ಶಾಸಕರ ಅನುದಾನದಲ್ಲಿ ವಿಶೇಷ ಚೇತನರಿಗೆ ಸೌಲಭ್ಯಗಳ ಹಸ್ತಾಂತರ



ಬೈಂದೂರು: ವಿಕಲಚೇತನರು ಯಾರು ಕೂಡ ಅರ್ಜಿ ಹಾಕಿ ಹುಟ್ಟಿರೋದಿಲ್ಲ, ಅವರಿಗೂ ಇತರರಂತೆ ಈ ಸಮಾಜದಲ್ಲಿ ಬದುಕುವ ಹಕ್ಕಿದೆ. ವಿಕಲಚೇತನರಿಗೆ ಕಡಿಮೆ ಆಗಿರುವುದನ್ನು ನಾವು ತುಂಬಿಸಿ ಕೊಡಬೇಕಾಗುತ್ತದೆ. ಇದು ಸಮಾಜದ ಜವಾಬ್ದಾರಿ ಕೂಡ ಆಗಿದೆ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.
ಬೈಂದೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ಶಾಸಕರ ವಿಶೇಷ ಅನುದಾನದ (ಎಂಎಲ್‌ಎ ಫಂಡ್) ಮೂಲಕ ನಾಲ್ಕು ವಿಶೇಷಚೇತನರಲ್ಲಿ ಇಬ್ಬರಿಗೆ ಸ್ಕೂಟರ್, ಒಬ್ಬರಿಗೆ ಶ್ರವಣ ಸಾಧನ ಹಾಗೂ ಇನ್ನೊಬ್ಬರಿಗೆ ಕ್ಯಾಲಿಬರ್ ಸಾಧನಗಳನ್ನು ಹಸ್ತಾಂತರಿಸಿ ಮಾತನಾಡಿದರು.
ಬೈಂದೂರು ಕ್ಷೇತ್ರದ ವಿಶೇಷಚೇತನರಿಗೆ ಯುಡಿಐಡಿ ಮಾಡಿಕೊಡುವ ಕಾರ್ಯಕ್ರಮ ಮಾಡಲಾಗುತ್ತಿದೆ. ಈ ಕಾರ್ಡ್ ಹೊಂದಿದವರಿಗೆ ಬೇರೆ ಬೇರೆ ಸರ್ಕಾರಿ ಮತ್ತು ಸಿಎಸ್‌ಆರ್ ಫಂಡ್‌ನಿಂದ ವ್ಯವಸ್ಥೆಗಳನ್ನು ಕೊಡುವ ಪ್ರಯತ್ನ ಮಾಡಲಾಗುತ್ತಿದೆ. ಹೆಚ್ಚು ಬೆಲೆಗಳುಳ್ಳ ಸಾಧನಗಳನ್ನು ಖರೀದಿಸಲು ಬಡವರಿಂದ ಸಾಧ್ಯವಾಗದಿರುವುದರಿಂದ ಸರ್ಕಾರ, ದಾನಿಗಳು ಹಾಗೂ ಸಿಎಸ್‌ಆರ್ ವ್ಯವಸ್ಥೆಯ ಮೂಲಕ ವಿಕಲಚೇತನರ ಸಮಸ್ಯೆ ಹಾಗೂ ಬೇಡಿಕೆಗಳನ್ನು ಪರಿಹರಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದ ಶಾಸಕರು, ಏ.13ರಿಂದ 17ರ ತನಕ ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ ಒಂದರ ತನಕ ನಡೆಯುವ ಯುಡಿಐಡಿ ಕಾರ್ಡ್ ಕ್ಯಾಂಪೇನ್‌ನಲ್ಲಿ ಕ್ಷೇತ್ರದ ಎಲ್ಲಾ ವಿಕಲಚೇತನರಿಗೂ ಕಾರ್ಡ್ ಮಾಡಿಕೊಡಲಾಗುತ್ತದೆ ಎಂದರು. ಈ ಸಂದರ್ಭ ಸಂಬಂಧಪಟ್ಟ ಇಲಾಖಾಧಿಕಾರಿಗಳು ಇದ್ದರು.

ಕಾರ್ಕಳ ಸರ್ಕಾರಿ ಬಿಎಸ್‌ಸಿ ನರ್ಸಿಂಗ್ ಕಾಲೇಜಿಗೆ 4 ರ‍್ಯಾಂಕ್

ಕಾರ್ಕಳ: ನಗರದದಲ್ಲಿ 2022ರಲ್ಲಿ ಪ್ರಾರಂಭವಾದ ಸರ್ಕಾರಿ ಬಿಎಸ್‌ಸಿ ನರ್ಸಿಂಗ್ ಕಾಲೇಜಿನ ಮೊದಲ ತಂಡದ 32 ವಿದ್ಯಾರ್ಥಿಗಳು ನಾಲ್ಕು ವರ್ಷದ ನರ್ಸಿಂಗ್ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಅವರಲ್ಲಿ ನಾಲ್ವರು ವಿದ್ಯಾರ್ಥಿಗಳು ರ‍್ಯಾಂಕ್ ಪಡೆದು ವಿಶ್ವವಿದ್ಯಾಲಯದ ಟಾಪರ್ಸ್ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ.
ಮೈಕ್ರೋಬಯಾಲಜಿ ವಿಭಾಗದಲ್ಲಿ ಕೃತಿ ಎ. ಅವರು 5ನೇ ರ‍್ಯಾಂಕ್ ಹಾಗೂ ರಿಸರ್ಚ್ ಅಂಡ್ ಸ್ಟಾಟಿಸ್ಟಿಕ್ಸ್ ವಿಷಯದಲ್ಲಿ 9ನೇ ರ‍್ಯಾಂಕ್ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ.
ಸಮುದಾಯ ಆರೋಗ್ಯ ಶುಶ್ರೂಷಾ ವಿಭಾಗದಲ್ಲಿ ವಸಂತಿ ಬಾಲು ನಾಯಕ್ ಅವರು 7ನೇ ರಾಂಕ್ ಪಡೆದಿದ್ದಾರೆ. ಫಾರ್ಮಕಾಲಜಿ, ಪೆಥಾಲಜಿ ಮತ್ತು ಜೆನೆಟಿಕ್ಸ್ ವಿಷಯಗಳಲ್ಲಿ ನಿಶಾ ಥಾಮಸ್ ಅವರು 8ನೇ ರ‍್ಯಾಂಕ್ ಗಳಿಸಿದ್ದಾರೆ. ನ್ಯೂಟ್ರಿಷನ್ ಮತ್ತು ಬಯೋಕೆಮಿಸ್ಟ್ರಿ ವಿಭಾಗದಲ್ಲಿ ವಿನೋದ್ ಶಿದ್ದಲಿಂಗಪ್ಪ ಶಿವನಗುಟ್ಟಿ ಅವರು 9ನೇ ರ‍್ಯಾಂಕ್ ಪಡೆದು ಮೆಚ್ಚುಗೆಗೆ ಪಾತ್ರರಾಗಿದ್ದಾರೆ.



21 ವಿದ್ಯಾರ್ಥಿಗಳಿಗೆ ವಿಶಿಷ್ಟ ದರ್ಜೆ

ಒಟ್ಟು 32 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 21 ವಿದ್ಯಾರ್ಥಿಗಳು ವಿಶಿಷ್ಟ ದರ್ಜೆಯಲ್ಲಿ ಹಾಗೂ 8 ವಿದ್ಯಾರ್ಥಿಗಳು ಮೊದಲ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಶಾಸಕರ ಅಭಿನಂದನೆ

ಮೊದಲ ಬ್ಯಾಚ್‌ನ 4 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಟಾಪರ್ಸ್ ಪಟ್ಟಿಯಲ್ಲಿ ಸ್ಥಾನ ಪಡೆದಿರುವುದನ್ನು ಶ್ಲಾಘಿಸಿರುವ ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್, 2022ರಲ್ಲಿ ಸ್ಥಾಪಿತವಾದ ಈ ಕಾಲೇಜು ಉಡುಪಿ ಜಿಲ್ಲೆಯ ಮೊದಲ ಸರ್ಕಾರಿ ನರ್ಸಿಂಗ್ ಕಾಲೇಜು ಆಗಿದ್ದು, ಆರಂಭಿಕ ಹಂತದಲ್ಲಿಯೇ ಉತ್ತಮ ಸಾಧನೆ ಮಾಡಿರುವುದು ಅತ್ಯಂತ ಗಮನಾರ್ಹವಾಗಿದೆ. ಕಾಲೇಜಿನ ಆಡಳಿತ ವೈದ್ಯಾಧಿಕಾರಿಗಳು, ಕಾಲೇಜಿನ ಪ್ರಾಂಶುಪಾಲರು, ಬೋಧಕ ವೃಂದ, ಹಾಗೂ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳಿಗೆ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಕೌಶಲ್ಯಾಧಾರಿತ ತರಬೇತಿಯಿಂದ ದೇಶದ ಅಭಿವೃದ್ಧಿ: ಸಂಸದ ಕೋಟ



ಬ್ರಹ್ಮಾವರ: ದೇಶದ ಅಭಿವೃದ್ಧಿಗೆ ಕೌಶಲ್ಯಾಧಾರಿತ ತರಬೇತಿ ಅತಿ ಅಗತ್ಯವಿದ್ದು, ಯುವ ಜನತೆ ತಮ್ಮ ಆಸಕ್ತಿಯ ಕೌಶಲ್ಯ ತರಬೇತಿ ಪಡೆದು ಸ್ವಯಂ ಉದ್ಯೋಗದತ್ತ ಒಲವು ಬೆಳೆಸಿಕೊಳ್ಳಬೇಕು ಎಂದು ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಲೋಕಸಭಾ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.
ಬ್ರಹ್ಮಾವರದ ಕ್ರಾಸ್‌ಲ್ಯಾಂಡ್ ಕಾಲೇಜಿನಲ್ಲಿ 35 ಮಂದಿ ವಿದ್ಯಾರ್ಥಿಗಳಿಗೆ ಇಂದು ಪ್ರಾರಂಭಗೊಂಡ ಉದ್ಯೋಗ ಆಧಾರಿಕ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಪ್ರಶಿಕ್ಷಣಾರ್ಥಿಗಳಿಗೆ ಉಚಿತ ಕಿಟ್ ವಿತರಿಸಿ ಅವರು ಮಾತನಾಡುತಿದ್ದರು.
ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು-ಜಿಜೆವೈ) ಭಾರತ ಸರಕಾರದ ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ಒಂದು ಪ್ರಮುಖ ಉದ್ಯೋಗ ಆಧಾರಿತ ಕೌಶಲ್ಯ ತರಬೇತಿ ಕಾರ್ಯಕ್ರಮವಾಗಿದೆ ಎಂದರು.
ವಿದ್ಯಾರ್ಥಿಗಳಿಗೆ ಮೂರು ತಿಂಗಳ ಉಚಿತ ತರಬೇತಿ ನೀಡಿ, ಮಾಸಿಕವಾಗಿ 3,500ರೂ. ಸ್ಟೈಪೆಂಡ್ ಫಂಡ್ ನೀಡಲಾಗುತ್ತಿದೆ. ಉದ್ಯೋಗ ದೊರೆತ ನಂತರ ಪ್ರತಿ ತಿಂಗಳು 1,200 ರೂ.ನಂತೆ ಒಟ್ಟು 6 ತಿಂಗಳ ಅವಧಿಗೆ 7200 ರೂ.ಗಳನ್ನು ಸಹಾಯಧನವಾಗಿ ವಿದ್ಯಾರ್ಥಿಗಳಿಗೆ ನೇರವಾಗಿ ಡಿಬಿಟಿ ಮೂಲಕ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತದೆ ಎಂದರು.
ಪ್ರಾಂಶುಪಾಲ ಡಾ. ರಾಬರ್ಟ್ ಕ್ಲೈವ್, ತರಬೇತಿಯ ಮುಖ್ಯಸ್ಥ ಗಣೇಶ್ ಪೂಜಾರಿ ಉಪಸ್ಥಿತರಿದ್ದರು. ಜಿ.ಪಂ. ಯೋಜನಾ ನಿರ್ದೇಶಕ ವಿಜಯ್‌ಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ದೀಪಾ ಅನಂತರಾವ್ ಕಿತ್ತೂರು ನಿರೂಪಿಸಿದರು.

'ಕೊರಗರ ಕಟ್ಟುಕಟ್ಲೆಗಳು- ಆರಾಧನೆ ಮತ್ತು ಆಚರಣೆ' ಪುಸ್ತಕ ಬಿಡುಗಡೆ

ಹೊಸ ಪ್ರಯತ್ನ ಇತರ ಸಮುದಾಯಕ್ಕೆ ಮಾದರಿ

ಶಿರ್ವ: ಪಾಂಗಾಳ ಕೊರಗರ ಕೂಡು ಕುಟುಂಬದ ಕಟ್ಟುಕಟ್ಲೆಗಳು-ಆರಾಧನೆ ಮತ್ತು ಆಚರಣೆ ಎಂಬ ಮಾರ್ಗದರ್ಶಕ ಪುಸ್ತಕವನ್ನು ಸೋಮವಾರ ಪಾಂಗಾಳ ಕೊರಗರ ದೈವ ಸಾನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು.
ಕೂಡು ಕುಟುಂಬದ ಹಿರಿಯ ಮಹಿಳೆಯರಾದ ಗುರ್ಬಿ ಮತ್ತು ಅಮಣಿಯವರು ಜಂಟಿಯಾಗಿ ಪುಸ್ತಕ ಬಿಡುಗಡೆಗೊಳಿಸಿದರು. ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಕೊರಗರ ಬಲೆಪಿನ ಗುರಿಕಾರ ಕುಡುಪ ಕೊರಗ ಅವರು ಕೊರಗ ಸಮುದಾಯದಲ್ಲಿ ಇದೊಂದು ಹೊಸ ಪ್ರಯತ್ನವಾಗಿದ್ದು, ಇತರರಿಗೂ ಮಾದರಿಯಾಗಿದೆ ಎಂದರು.
ಸಭೆಯಲ್ಲಿ ಪಾದೆಬೆಟ್ಟು ಬಲೆಪಿನ ಪ್ರತಿನಿಧಿ ಸೋಮಶೇಖರ್, ಮುಂಡ್ಕೂರು ಬಲೆಪಿನ ಗುರಿಕಾರ ಅಣ್ಣು ಸಾಲಿಯಾನ್, ಕುರ್ಕಾಲು ಬಲೆಪಿನ ಗುರಿಕಾರ ಸುರೇಶ್ ಕುಂದರ್ ಸಕಾಲಿಕವಾಗಿ ಮಾತನಾಡಿದರು. ಸಚ್ಚೇರಿಪೇಟೆಯ ಕರ್ಣ ಸಾಲಿಯಾನ್, ಕಬ್ಯಾಡಿ ಬಲೆಪಿನ ಶಂಭು, ಪಾಂಗಾಳ ಕುಟುಂಬದ ಹಿರಿಯರಾದ ಕುಡ್ಡು ಕೊರಗ, ಗುರುವ ಮೂಡುಬೆಳ್ಳೆ, ಅಣ್ಣು ಕಡಂದಲೆ ಇದ್ದರು. ಕುಟುಂಬದ ಗುರಿಕಾರ ವಸಂತ ಪಾಂಬೂರು ಅಧ್ಯಕ್ಷತೆ ವಹಿಸಿದ್ದರು. ಸೌಮ್ಯಾ ಮತ್ತು ತಂಡದವರು ಪ್ರಾರ್ಥನಾ ಗೀತೆ ಹಾಡಿದರು. ಅಣ್ಣು ಪಿಲಾರು ವಂದಿಸಿದರು. ಜ್ಯೋತಿ ಪಾಂಬೂರು ಕಾರ್ಯಕ್ರಮ ನಿರೂಪಿಸಿದರು.



ವಿಚಾರ ಸಂಕಿರಣದಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಆಶಯ

ಸೌಹಾರ್ದ, ಸಹಬಾಳ್ವೆ ನಮಗೆ ಅರ್ಥವಾಗಲಿ

ಕುಂದಾಪುರ: ಸಂವಿಧಾನದಲ್ಲಿ ಹೇಳಿರುವ ಸೌಹಾರ್ದ, ಸಹಬಾಳ್ವೆ ಪದಗಳಿಗೂ ನಮಗೂ ಏನು ಸಂಬಂಧ ಎಂಬುದನ್ನು ಹೆಚ್ಚು ಗಂಭೀರವಾಗಿ ಮತ್ತು ಮಾರ್ಮಿಕವಾಗಿ ಅರ್ಥ ಮಾಡಿಕೊಂಡರೆ ಇದೆಲ್ಲ ಮಾಡುತ್ತಿರುವುದು ನಮ್ಮ ಕಥೆ ಎಂಬುದು ಅರ್ಥವಾಗುತ್ತದೆ. ನಾನು ಮತ್ತು ಅವರು ಎಂಬ ಭಾವ ಬಂದಾಗ ಯೋಚನೆಯಲ್ಲೇ ಸಮಾಜ ಇಬ್ಭಾಗವಾಗುತ್ತದೆ ಮತ್ತು ದ್ವೇಷದ ಮೂಲಕ ಅದು ಮತ್ತಷ್ಟು ಬೆಳೆಯುತ್ತದೆ. ಸೌಹಾರ್ದತೆ ಎಂಬುದು ಭಾರತೀಯ ಸಮಾಜಕ್ಕೆ ಗೊತ್ತೇ ಇರಲಿಲ್ಲ. ಸರ್ವೇ ಜನಾಃ ಸುಖಿನೋ ಭವತುಂ ಎಂಬ ಮಾತನ್ನು ಕೇಳುತ್ತಿದ್ದರೂ, ಆದರೆ ಅದರ ಅನುಷ್ಠಾನಕ್ಕೆ ಬಂದಾಗ ಸರ್ವೇ ಜನಾಃ ಸುಖಿನೋ ಭವತುಂ ಆಗಿಲ್ಲ ಎಂಬುದು ಸ್ಪಷ್ಟ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಹೇಳಿದರು.



ಕುಂದಾಪುರ ತಾಲೂಕು ಸದ್ಭಾವನಾ ವೇದಿಕೆ ಆಶ್ರಯದಲ್ಲಿ ಕುಂದಾಪುರ ಕನ್ಯಾನದ ನಮ್ಮ ಭೂಮಿ ಸಂಸ್ಥೆಯಲ್ಲಿ ಮಂಗಳವಾರ ನಡೆದ 'ಸಂವಿಧಾನದ ಆಶಯಗಳಿಗೆ ಸೌಹಾರ್ದವೇ ಮೆಟ್ಟಿಲು' ಎಂಬ ವಿಷಯದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ಕುಂದಾಪುರ ತಾಲೂಕು ಸದ್ಭಾವನಾ ವೇದಿಕೆ ಸಂಚಾಲಕ ಟಿ.ಬಿ. ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಉದಯ ಗಾಂವ್‌ಕರ್, ನಮ್ಮ ಭೂಮಿ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕಿ ಕವಿತಾ ರತ್ನ ಉಪಸ್ಥಿತರಿದ್ದರು.
ನಮ್ಮ ಭೂಮಿ ಸಂಸ್ಥೆಯ ಶಿವಾನಂದ ಶೆಟ್ಟಿ ಸ್ವಾಗತಿಸಿದರು. ಪತ್ರಕರ್ತ ಸುಬ್ರಹ್ಮಣ್ಯ ಪಡುಕೋಣೆ ಕಾರ್ಯಕ್ರಮ ನಿರ್ವಹಿಸಿದರು.



ಇಂದು ಬಪ್ಪನಾಡು ಜಾತ್ರೆ

ಇಂದು ಪ್ರಾತಃಕಾಲದ ಸುಮುಹೂರ್ತದಲ್ಲಿ ಭಾರೀ ವಿಜೃಂಭಣೆಯಿಂದ ಗರ್ಭಗುಡಿ ಬಾಗಿಲು ತೆರೆಯುವುದು, ಪಂಚಲಿಂಗ ಸ್ವರೂಪಳಾದ ಶ್ರೀ ದೇವಿ ದರ್ಶನ ತುಂಬಾ ಪಾವನ. ಹೂವಿನ ರಾಶಿ ತೆಗೆದು ಶ್ರೀ ದೇವರಿಗೆ ಪಂಚಾಮೃತ ಜರುಗುವುದು. ಸಹಸ್ರಾರು ಸದ್ಭಕ್ತರು ಹಣ್ಣುಕಾಯಿ ಸಮರ್ಪಿಸಿ ತಯನದ ಪ್ರಸಾದ ಸ್ವೀಕರಿಸುವರು. ನಂತರ ಶ್ರೀ ದೇವಿಗೆ ಅತ್ಯಂತ ಪ್ರಿಯ ತುಲಾಭಾರ ಸೇವೆ ಅರ್ಪಿಸಿ ಧನ್ಯರಾಗುವರು.

ಸೂರ್ಯಾಸ್ತವಾದೊಡನೆ ಪ್ರಾರ್ಥನೆ ಸಲ್ಲಿಸಿ ಸ್ಥಿತವದನೆಯಾಗಿ ಶೋಭಿಸುತ್ತಿರುವ ಶ್ರೀ ದೇವಿಯ ಅಲಂಕೃತ ಉತ್ಸವ ಮೂರ್ತಿಯ ಸವಾರಿ ವೈಭವೋಪೇತವಾದ ಓಕುಳಿ ಪೂಜೆಯಾಗಿ ಸರ್ವವಾದ್ಯ ಭಕ್ತಾದಿಗಳಿಂದ ಓಕುಳಿ ಸ್ನಾನ ನಡೆಯುವುದು. ಬಳಿಕ ಶ್ರೀ ದೇವಿಯ ಉತ್ಸವ ಮೆರವಣಿಗೆ



ಮೂಲ್ಕಿ ಪೇಟೆ ಸುತ್ತುವುದು. ದೊಡ್ಡಮನೆ ಬಪ್ಪಬ್ಯಾರಿ ವಂಶಸ್ಥರು ಹೂಹಣ್ಣು ಕಾಣಿಕೆ ನೀಡುವರು. ಅವರಿಗೆ ಮಹೋತ್ಸವದ ಪ್ರಸಾದ ಬ್ರಹ್ಮರಥದ ಬಳಿಗೆ ಬಂದಾಗ ಸಸಿಹಿತ್ಲು ಭಗವತೀ ಪರಿವಾರವೂ, ಸೀಮೆ ಅರಸು ಸಾವಂತರೂ ಅಲ್ಲಿಗೆ ಆಗಮಿಸುವರು. ಶ್ರೀ ದೇವಿಯ ವೈಭವದ ದರ್ಶನ ನಡೆಯುವುದು, ದೇವರು ಬ್ರಹ್ಮರಥ ಏರಿದ ನಂತರ ಮಂಗಳಾರತಿ ನಡೆಯುವುದು. ಬ್ರಹ್ಮರಥವು ಹಿಲಾಲು ಸಾಲುಗಳೊಂದಿಗೆ ಗದ್ದೆ ಸಾಲುಗಳಲ್ಲಿ ಚಲಿಸಿ ದೇವಳಕ್ಕೊಂದು ದೀರ್ಘ ಪ್ರದಕ್ಷಿಣೆ ಬರುವ ನೋಟ ತುಂಬಾ ರಮ್ಯ, ಬಾಕಿಮಾರು ಕಟ್ಟೆಬಳಿ ಬ್ರಹ್ಮರಥದ ತಾತ್ಕಾಲಿಕ ನಿಲುಗಡೆ ಮಂಗಳಾರತಿ, ಸಿಡಿಮದ್ದು, ಬಿರುಸುಬಾಣ, ಖದೋನಿಯ ಸ್ಫೋಟ ಇವು ಭಕ್ತ ಜನ, ರಸಿಕರಿಗೆ ಮನರಂಜನೆ ರಸದೂಟ.





ಬಪ್ಪನಾಡಿನ ದುರ್ಗೆ ಮತ್ತು ಸಸಿಹಿತ್ಲು ಭಗವತಿಯರ ಐತಿಹಾಸಿಕ ಭೇಟಿ

ಇಲ್ಲಿನ ಜಾತ್ರೆ ಧಾರ್ಮಿಕ ವಿಧಿಗಳ ಮಹತ್ವದ ಮತ್ತೊಂದು ಅಂಶ. ಬಪ್ಪನಾಡಿನ ಧ್ವಜಾರೋಹಣದಂದು ಭಗವತಿ ತನ್ನ ಪರಿವಾರ ದೈವಗಳೊಂದಿಗೆ ಕದಿಕೆ ಭಂಡಾರದ ಮಂದಿರದಿಂದ ದೈವಾವೇಶಗೊಂಡು ಬಪ್ಪನಾಡಿಗೆ ಕಾಲ್ನಡಿಗೆಯಲ್ಲಿ ಹೊರಡುತ್ತಾಳೆ. ಒಡ್ರೊಟ್ಟುವಿನಲ್ಲಿ ಬಪ್ಪನಾಡು ಗ್ರಾಮ ಪ್ರವೇಶಿಸಿದಾಗ ಆವೇಶ ತಾರಕಕ್ಕೇರಿ, ಓಡಿಕೊಂಡು ಪ್ರವೇಶ ಮಾಡುವ ಭಗವತಿಯರ ಆಗಮನ. ಗಂಟೆ ಮತ್ತು ಗೆಜ್ಜೆಯ ನಾದದೊಂದಿಗೆ ಜಾತ್ರೆ ಜಾಗೃತಗೊಳ್ಳುತ್ತದೆ. ಬಪ್ಪನಾಡಿನ ದೈಯಂಗಲ ಸಾನಿಧ್ಯದಲ್ಲಿ ಆವೇಶವಿಳಿದು ಬಪ್ಪನಾಡು ಗುತ್ತಿನ ಬಾವಿಯಿಂದ ತಂದ ನೀರಿನಿಂದ ಮಿಂದು ಶುಚಿರ್ಭೂತರಾಗಿ ಮತ್ತೆ ಆವೇಶಭರಿತವಾಗಿ ದೇಗುಲಕ್ಕೆ ಬರುವ ಭಗವತಿಯನ್ನು ಕ್ಷೇತ್ರಪಾಲ ಗುಡಿ ಬಳಿ ಭಗವತಿ ಮಲೆಯಾಳಂ ಭಾಷೆಯಲ್ಲಿ ದುರ್ಗೆ ಮೌನದ ಕೈಸನ್ನೆಯಲ್ಲಿ ನಡೆಸುವ ಸಂವಾದದೊಂದಿಗೆ ಧ್ವಜಾರೋಹಣ ನಡೆಯುತ್ತದೆ. ಆನಂತರ ಪಡುಗೋಪುರದ ಮುಂದೆ ನಿಂತು ಧ್ವಜಸ್ತಂಭಕ್ಕೆ ಎದುರಾಗಿ ನಡೆಯುವ ಭಗವತೀ ಪರಿವಾರ ದೈವಗಳ ನರ್ತನ ಒಂದು ಅಪೂರ್ವ ಸನ್ನಿವೇಶ.



ಪುರವಣಿ ಸಂಯೋಜನೆ : ಪುನೀತ್‌ಕೃಷ್ಣ ಮುಲ್ಕಿ